ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಒಂದು ಅಧ್ಯಯನ

(ಸಮಾಜಕಾರ್ಯ ಶಿಸ್ತನ್ನು ಅನುಲಕ್ಷಿಸಿ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ
ವಸಂತಕುಮಾರಿ ಟಿ.ಎಸ್.

ಮಾರ್ಗದರ್ಶಕರು
ಡಾ. ತಾರಿಹಳ್ಳಿ ಹನುಮಂತಪ್ಪ
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಗೌರಿ ಮಾಣಿಕ್ಯ ಮಾನಸ
ಸಹಾಯಕ ಪ್ರಾಧ್ಯಾಪಕರು
ಸಮಾಜಕಾರ್ಯ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

ಮಾನವಶಾಸ್ತ್ರ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಒಂದು ಅಧ್ಯಯನ

(ಸಮಾಜಕಾರ್ಯಶಿಸ್ತನ್ನು ಅನುಲಕ್ಷಿಸಿ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿ
ವಸಂತಕುಮಾರಿ ಟಿ.ಎಸ್.

ಮಾರ್ಗದರ್ಶಕರು
ಡಾ. ತಾರಿಹಳ್ಳಿ ಹನುಮಂತಪ್ಪ
ಸಹ ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ. ಗೌರಿ ಮಾಣಿಕ್ಯ ಮಾನಸ
ಸಹಾಯಕ ಪ್ರಾಧ್ಯಾಪಕರು
ಸಮಾಜಕಾರ್ಯ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

ಮಾನವಶಾಸ್ತ್ರ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೮

ಸಂಶೋಧಕರ ಪ್ರಮಾಣಪತ್ರ

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಒಂದು ಅಧ್ಯಯನ (ಸಮಾಜ ಕಾರ್ಯ ಶಿಸ್ತನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ತಾರಿಹಳ್ಳಿ ಹನುಮಂತಪ್ಪ**, ಸಹ ಪ್ರಾಧ್ಯಾಪಕರು ಮತ್ತು **ಡಾ. ಗೌರಿ ಮಾಣಿಕ್ಯ ಮಾನಸ**, ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ **ಮಾನವಶಾಸ್ತ್ರ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Vasanthakumari.T.S

(ವಸಂತಕುಮಾರಿ ಟಿ.ಎಸ್.)

ದಿನಾಂಕ: 12.12.2018

ಸ್ಥಳ: ವಿದ್ಯಾರಣ್ಯ

ಸಂಶೋಧನ ವಿದ್ಯಾರ್ಥಿ
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಸಂತಕುಮಾರಿ ಟಿ.ಎಸ್. ಇವರು **ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಒಂದು ಅಧ್ಯಯನ (ಸಮಾಜಕಾರ್ಯ ಶಿಸ್ತನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

T. Hanumanthappa

ಡಾ. ತಾರಿಹಳ್ಳಿ ಹನುಮಂತಪ್ಪ
ಸಹ ಪ್ರಾಧ್ಯಾಪಕರು
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 12-12-2018

ಸ್ಥಳ : ವಿದ್ಯಾರಣ್ಯ

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ವಸಂತಕುಮಾರಿ ಟಿ.ಎಸ್. ಇವರು **ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಒಂದು ಅಧ್ಯಯನ (ಸಮಾಜಕಾರ್ಯ ಶಿಸ್ತನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹ ಮಾರ್ಗದರ್ಶಕರು

ಡಾ. ಗೌರಿ ಮಾಣಿಕ್ಯ ಮಾನಸ
ಸಹಾಯಕ ಪ್ರಾಧ್ಯಾಪಕರು
ಸಮಾಜಕಾರ್ಯ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ
ವಿಶ್ವವಿದ್ಯಾಲಯ, ಬಳ್ಳಾರಿ

ದಿನಾಂಕ : 12-12-2018.

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಆಧುನಿಕ ಮಾನವನು ಎಷ್ಟು ಪ್ರಗತಿಶೀಲನೋ ಅಷ್ಟೇ ದುಃಖಿಯಾಗಿರುತ್ತಾನೆ. ಅವನು ಎಷ್ಟು ಅನುಕೂಲಗಳನ್ನು ಹೊಂದಿದ್ದಾನೋ ಅಷ್ಟೇ ಅನಾನುಕೂಲಗಳೊಂದಿಗೆ ಆಪತ್ತಿನಲ್ಲಿದ್ದಾನೆ. ಎಷ್ಟು ಪರಿಹಾರಗಳನ್ನು ಕಂಡುಹಿಡಿದಿದ್ದಾನೆಯೋ ಅದಕ್ಕಿಂತಲೂ ಹೆಚ್ಚಾದ ಸಮಸ್ಯೆಗಳ ಬಲೆಯಲ್ಲಿ ಸಿಕ್ಕಿಬಿದ್ದಿದ್ದಾನೆ. ಒಂದು ಕ್ರಿಯಾರಂಗದಲ್ಲಿನ ಸಮಸ್ಯೆಗಳು ಇನ್ನೊಂದು ರೀತಿಯ ಸಮಸ್ಯೆಗಳ ಉದ್ಭವಕ್ಕೆ ಕಾರಣಗಳಾಗಿವೆ. ವ್ಯಕ್ತಿ, ಸಮೂಹ, ಸಮುದಾಯ ಎಲ್ಲವೂ ಸಮಸ್ಯೆಗಳಿಗೆ ಕಾರಣವಾಗಿದೆ. ಆಧುನಿಕಯುಗವು ವೈಜ್ಞಾನಿಕ ಯುಗವಾಗಿದ್ದಂತೆಯೇ ಕ್ಲಿಷ್ಟ ಸಾಮಾಜಿಕ ಸಮಸ್ಯೆಗಳ ಯುಗವೂ ಆಗಿದೆ. ಮಾನವನು ಎದುರಿಸುತ್ತಿರುವ ಹಲವು ಸಮಸ್ಯೆಗಳು ಕ್ರಿಯಾಕ್ಷೇತ್ರಗಳ ಆಧಾರಿತದಿಂದ ಅನೇಕ ವಿಭಾಗ ಮಾಡುಬಹುದು ಹೀಗೆ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಇತ್ಯಾದಿ ಸಮಸ್ಯೆಗಳು ಆಯಾಯ ಸ್ಥಳಗಳ ರಚನೆ ಬದಲಾವಣೆಗಳಿಗನುಗುಣವಾಗಿ ವಿಂಗಡಿಸುವುದು ಸಹಜವಾದರೂ ಮಾನವನು ಎದುರಿಸುತ್ತಿರುವ ಸಮಸ್ಯೆಗಳು ಪ್ರಧಾನವಾಗಿ ಸಾಮಾಜಿಕವಾದವುಗಳಾಗಿವೆ. ಸಾಮಾಜಿಕ ಸಂಬಂಧಗಳ ಸರಿಯಾದ ಕ್ರಿಯೆಗೆ ವ್ಯತ್ಯಯ ಬಂದಾಗ ಸಮಸ್ಯೆಗಳು ಉದ್ಭವವಾಗುತ್ತವೆ. ಅಂತಹ ವ್ಯತ್ಯಯಕ್ಕೆ ಅನೇಕ ರಂಗಗಳಲ್ಲಿನ ಸಮಸ್ಯೆಗಳು ಕಾರಣ ವಿಶೇಷಗಳಾಗುತ್ತವೆ. ಆದರೂ ಕೆಲವು ಸಮಸ್ಯೆಗಳನ್ನು ಮಾತ್ರ ಸಾಮಾಜಿಕವಾದವುಗಳೆಂದು ಕರೆಯಲಾಗುತ್ತದೆ. ಆಧುನಿಕ ಸಮಾಜದಲ್ಲಿ ಕಾಣಸಿಗುವ ಕೆಲವು ಪ್ರಮುಖ ಸಮಸ್ಯೆಗಳಲ್ಲಿ ಕೊಳಚೆ ಪ್ರದೇಶಗಳ ಸಮಸ್ಯೆ ಒಂದಾಗಿದೆ. ಇದು ಸೀಮಿತವೂ ಆಗಿದ್ದು ಪಟ್ಟಣ ಮತ್ತು ನಗರ ಸಮುದಾಯವು ಅನೇಕ ರೀತಿಯ ಸಮಸ್ಯೆಗಳಿಂದ ಬಳಲುತ್ತಿದೆ. ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುವಲ್ಲಿ "ನಗರಗಳಲ್ಲಿನ ತೀವ್ರ ಸ್ವರೂಪದ ಸಮಸ್ಯೆಗಳನ್ನು ಪರಿಶೀಲಿಸಿದರೆ ಅವುಗಳಲ್ಲಿ ಕೊಳಗೇರಿ ಒಂದಾಗಿದೆ." ಇಂದಿಗೂ ಇದು ಅನೇಕ ರೀತಿಯ ಸಮಸ್ಯೆಗಳಿಂದ ಬಳಲುತ್ತಿದೆ. ಜನರಿಗೆ ಮೂಲಭೂತ ಸೌಕರ್ಯಗಳನ್ನು

ಒದಗಿಸುವುದಿಲ್ಲ. ಔದ್ಯೋಗಿಕರಣ ಉನ್ನತ ಶಿಖರನವನ್ನೇರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ನಗರಗಳಷ್ಟು ಭಾರತವು ಅಭಿವೃದ್ಧಿ ಹೊಂದಿಲ್ಲ. ಶ್ರೀಘ್ರವಾಗಿ ಮುಂದುವರೆಯುವಷ್ಟು ಅವು ಸಮರ್ಥವೂ ಆಗಿಲ್ಲ. ಇಲ್ಲಿ ಅಲ್ಪ ಆದಾಯದ ಗುಂಪುಗಳು ಮತ್ತು ಗ್ರಾಮೀಣ ವಲಸೆಗಾರರಿಂದ ತುಂಬಲ್ಪಟ್ಟ ಕೊಳಗೇರಿಗಳು ಅನೇಕ ಇವೆ. ಕಿರಿದಾದ ಮತ್ತು ಕೊಳಕು ತುಂಬಿದ ಬೀದಿ, ಗಲ್ಲಿಗಳಿಗೆ ಲೆಕ್ಕವಿಲ್ಲ. ಇವುಗಳಲ್ಲಿ ನೀರಿನ ಸರಬರಾಜು ಸಾಕಷ್ಟಿಲ್ಲ. ಕಾರ್ಖಾನೆಗಳಿಂದ ಬಿಡಲ್ಪಟ್ಟ ದಟ್ಟವಾದ ಹೊಗೆ ವಾಯುಮಾಲಿನ್ಯದ ಮೋಡಗಳಿಂದ ತುಂಬಿ ನಗರದ ಎಲ್ಲಾ ಕಡೆ ಅಶುದ್ಧ ಗಾಳಿ ಬೀಸುತ್ತದೆ. ಕೊಳಚೆ ಪ್ರದೇಶದಲ್ಲಿ ಜೀವನದ ವೆಚ್ಚ ಬಹುಜನರ ದುಡಿಮೆಯ ಶಕ್ತಿಯು ಬಹು ಕಡಿಮೆ. ಅದರಂತೆಯೇ ಮೂಲಭೂತ ಸೌಕರ್ಯಗಳಲ್ಲಿನ ಕಷ್ಟಗಳನ್ನು ಇಂಥ ಪರಿಸ್ಥಿತಿಯೇ ಸಾಮಾಜಿಕ ರೋಗಗಳ ಉಗಮಕ್ಕೆ ಭೂಮಿಕೆಯಾಗಿದೆ ಎಂಬ ಮಾತು ನಿಜ ಎನಿಸುತ್ತದೆ.

ಸಾಮಾಜಿಕ ಅವಸ್ಥೆಯಲ್ಲಿನ ಸಮಸ್ಯೆಗಳು ನಗರ ಸಮುದಾಯಗಳಲ್ಲಿ ಹೆಚ್ಚುತ್ತಿರುವ ವಿವಾಹ ವಿಚ್ಛೇದ ಮತ್ತು ಮುರಿದು ಕುಟುಂಬಗಳು, ವೇಶ್ಯಾವೃತ್ತಿ ಮತ್ತು ಆತ್ಮಹತ್ಯೆ ಪ್ರಕರಣಗಳು, ಭಿಕ್ಷಾಟನೆ ಸಮಸ್ಯೆ ಅನೇಕ ರೀತಿಯ ಅವ್ಯವಹಾರಗಳು, ಕಾರ್ಮಿಕರ ಮುಷ್ಕರಗಳು, ತೀವ್ರ ಸ್ವರೂಪ ಸಮಸ್ಯೆಗಳನ್ನು ಪರಿಶೀಲಿಸಿದರೆ, ಅವುಗಳಲ್ಲಿ ಕೊಳಗೇರಿ ಪ್ರದೇಶಗಳು ಉದಾ: ಹಳೆ ದಿಲ್ಲಿ, ಕಲಕತ್ತಾ ಮತ್ತು ಮುಂಬಯಿಯಲ್ಲಿ ಕೊಳಚೆ ಪ್ರದೇಶಗಳು ಅತ್ಯಂತ ಹೀನಾಯ ಸ್ಥಿತಿಯಲ್ಲಿವೆ. ಗ್ರಾಮೀಣ ಪ್ರದೇಶಗಳಿಂದ ವಲಸೆ ಬರುವುದು ಹೆಚ್ಚುತ್ತಿರುವುದರಿಂದ ಸಾಕಷ್ಟು ವಸತಿ ಸೌಲಭ್ಯವನ್ನು ಬಂದವರಿಗೆ ಒದಗಿಸಿಕೊಡುವುದು ನಗರಗಳಿಗೆ ಬಹು ಕಷ್ಟವಾಗಿದೆ. ಆದುದರಿಂದ ಕಾರ್ಖಾನೆಗಳ ಕಾರ್ಮಿಕರು, ಕುಟುಂಬಗಳಲ್ಲಿನ ಸೇವವರ್ಗದವರು ಮತ್ತು ಅಲ್ಪ ಆದಾಯದವರು ಹಾಗೂ ನಿರುದ್ಯೋಗಿಗಳು ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದಾರೆ. ಬಡತನ, ನಿರುದ್ಯೋಗ, ಅಜ್ಞಾನ, ಅನಾಗರಿಕತೆ, ಅಸಂಸ್ಕೃತಿ, ಕಾರಣ ಕೆಲವು ಸಮುದಾಯಗಳು ಕೊಳಗೇರಿಗಳಲ್ಲಿ ನೆಲೆಸಿದ್ದಾರೆ. ಕೊಳಗೇರಿಗಳಲ್ಲಿ ಸಾಕಷ್ಟು ನೀರಿನ ಸರಬರಾಜು ಇರುವುದಿಲ್ಲ. ಶೌಚಾಲಯ ಇಲ್ಲದಿರುವುದು, ಒಳಚಂಡಿ ಸಮಸ್ಯೆ ಹಾಗೂ ಮಕ್ಕಳಿಗೆ ಕ್ರೀಡೆ ಮನೋರಂಜನೆಗಾಗಿ ಒಂದು ಆಟದ ಬಯಲಾಗಲೀ ಇರುವುದಿಲ್ಲ. ವಿದ್ಯಾಭ್ಯಾಸಕ್ಕಾಗಿ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಕೆಲವರು ಮಾತ್ರ ಒತ್ತಾಯಕ್ಕಾಗಿ ಹೋಗುತ್ತಾರೆ. ಆದರೆ ನಿರ್ಲಕ್ಷ್ಯ ಮನೋಭಾವನೆ ಇವರ ತಂದೆ-ತಾಯಿಗಳಲ್ಲಿ ನೋಡಬಹುದು. ಮಕ್ಕಳು ಬಹು ಸುಲಭವಾಗಿ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಆದರೂ ನಗರಗಳು ಆಧುನಿಕ ನಾಗರಿಕತೆಯ ರೂಪ, ನಗರಗಳು ಮೇಲ್ನೋಟಕ್ಕೆ ಸುಂದರವಾಗಿ ಕಾಣುತ್ತವೆ. ಹಾಗೂ ಅಪರಿಚಿತರ ಮನೋಭಾವದಲ್ಲಿ ಕಲ್ಪನೆಗಳನ್ನು ಉಂಟು ಮಾಡುತ್ತವಾದರೂ ಈ ನಗರವೆಂಬ ಗರ್ಭದೊಳಗೆ ಅನೇಕ ಅನಿಷ್ಟಗಳು ಅಡಗಿ ಕುಳಿತಿರುತ್ತವೆ. ಅಂಥದೊಂದು ಶಾಪಗ್ರಸ್ತ ಶಿಶುವೇ ಕೊಳಚೆ ಪ್ರದೇಶ. ಈ ಕೊಳಚೆ ಪ್ರದೇಶಗಳ ಉಗಮವನ್ನು ಗುರುತಿಸುವುದು ತುಂಬ ಕಷ್ಟಕರವಾದ ಕೆಲಸವಾದರೂ ಅನೇಕ ವಿದ್ವಾಂಸರು ಕೊಳಚೆ

ಪ್ರದೇಶ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವುಗಳನ್ನು ಈ ರೀತಿಯಾಗಿ ಅವಲೋಕಿಸುವುದು ಸೂಕ್ತವಾಗಿದೆ.

'ಅಭಿವೃದ್ಧಿಯ ಸಕಾರಾತ್ಮಕ ಪರಿಣಾಮಗಳು ನಿರೀಕ್ಷೆಯಲ್ಲಿ ಮುಂದುವರೆಯುತ್ತವೆ. ವಿಜ್ಞಾನ, ತಂತ್ರಜ್ಞಾನ, ಕೈಗಾರೀಕರಣ, ನಗರೀಕರಣ, ಅಭಿವೃದ್ಧಿ ಅಡಿಯಲ್ಲಿ ಕೊಳಚೆ ಪ್ರದೇಶವು ಇತ್ತೀಚಿನ ಸಾರ್ವತ್ರಿಕ ಸಾಮಾಜಿಕ ಸಮಸ್ಯೆಯಾಗಿದೆ. ಕೈಗಾರೀಕರಣ ಮತ್ತು ನಗರೀಕರಣದ ಫಲವಾಗಿ ಹುಟ್ಟಿದ ಪಾಪದ ಶಿಶುವೇ ಕೊಳಗೇರಿ. ಇದೊಂದು ವಿಶ್ವದ ಪ್ರಮುಖ ನಾಗರೀಕ ಸಮಸ್ಯೆಯಾಗಿದೆ. ಜನಸಂದಣಿ, ವಲಸೆ, ವಸತಿಯ ಅಭಾವ, ನಿರುದ್ಯೋಗ, ರೋಗರುಜಿನ, ಕಲುಷಿತ ವಾತಾವರಣ, ಅಪರಾಧ, ಬಾಲಾಪರಾಧ, ಶೌಚಾಲಯ ಸ್ವಚ್ಛತೆ, ಮಹಿಳೆ ಆರೋಗ್ಯ ಸಮಸ್ಯೆ ಇಂಥ ಅನೇಕ ಸಮಸ್ಯೆ, ನಗರಗಳಲ್ಲೆಲ್ಲಾ ಕೊಳಗೇರಿಯು ಒಂದು ತೀವ್ರ ಸಮಸ್ಯೆಯಾಗಿದೆ. ನಗರಗಳಲ್ಲಿ ಕಾರ್ಖಾನೆಗಳು ಹೆಚ್ಚುತ್ತಿವೆ. ಹಾಗಾಗಿ ಕೆಲಸ ಹುಡುಕಿಕೊಂಡು ಹಳ್ಳಿಗಳಿಂದ ಜನರು ನಗರಗಳಿಗೆ ವಲಸೆ ಬರುತ್ತಾರೆ. ನಗರಕ್ಕೆ ಬಂದ ತಕ್ಷಣ ಉದ್ಯೋಗ ಸಿಕ್ಕರು ವಾಸಿಸಲು ಮನೆ ಸಿಗುವುದಿಲ್ಲ. ಸಂಬಳ ಕಡಿಮೆಯಾದ್ದರಿಂದ ಬಾಡಿಗೆ ಮನೆಯಲ್ಲಿರಲೂ ಆಗುವುದಿಲ್ಲ. ಇಂಥವರು ಸಣ್ಣ ಗುಡಿಸಲುಗಳನ್ನು, ಜೋಪಡಿ ಅಥವಾ ಡೇರಿಗಳನ್ನು ಹಾಕಿಕೊಳ್ಳುತ್ತಾರೆ. ಬಡತನದ ಬೇಗೆಯಲ್ಲಿ ಬೆಂದವರು ಸದಾ ಒಂದಿಲ್ಲೊಂದು ಸಮಸ್ಯೆಗೆ ತುತ್ತಾಗುವುದು ಸಹಜ. ಆರೋಗ್ಯ, ವಾಸ್ತವ, ಉದ್ಯೋಗ, ಮೂಲಭೂತ ಸಮಸ್ಯೆಗಳಿಂದ ತತ್ತರಿಸಿ ಹೋಗುತ್ತಾರೆ. ಇಂಥವರು ಬಿದಿರು, ಕಬ್ಬಿಣ, ಸೋಗೆ, ತೆಂಗಿನ ಗರಿ ಚಿಂದಿ, ಬಟ್ಟೆ, ಗೋಣಿಚೀಲ, ತಗಡುಗಳಿಂದ ಅತಿ ಕಡಿಮೆ ಬೆಲೆಯ ಸ್ಥಳೀಯ ಸಾಮಗ್ರಿಗಳನ್ನು ಬಳಸಿ ಕಾರ್ಖಾನೆ ಸುತ್ತ-ಮುತ್ತ ಕಡು ಬಡವರು ವಾಸಿಸುತ್ತಿದ್ದಾರೆ. ಮಾನವನಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಗಾಳಿ ಬೆಳಕು, ನೀರು, ಚರಂಡಿ ಶೌಚಾಲಯ, ರಸ್ತೆ ಮುಂತಾದವುಗಳು ಅತೀ ವಿರಳ. ಜನರು ನೈರ್ಮಲ್ಯವಿಲ್ಲದ ಮಾನವ ವಾಸ್ತವ್ಯಕ್ಕೆ ಯೋಗ್ಯವಲ್ಲದ ಅಹಿತಕರ ಜೋಪಡಿಗಳಲ್ಲಿ ವಾಸಿಸುತ್ತಾರೆ. ನಶಿಸುತ್ತಿರುವ ಜೋಪಡಿಗಳು ನೈರ್ಮಲ್ಯರಹಿತ ವಾತಾವರಣ, ಗಾಳಿ, ನೀರು, ಬೆಳಕಿಗೆ ಅಭಾವವಿರುವ ರೋಗರುಜಿನಗಳ ತವರುಮನೆಯೇ ಕೊಳಚೆ ಪ್ರದೇಶ. ಹಾಗೆಯೇ ಸರ್ಕಾರ ರೂಪಿಸಿದ ಆರ್ಥಿಕ, ಸಾಮಾಜಿಕ ಯೋಜನೆಗಳು ಕೊಳಚೆ ಪ್ರದೇಶದ ಬೆಳವಣಿಗೆಯನ್ನು ವಿರೋಧಿಸುವ ಬದಲು ಅವುಗಳು ಬಳವಣಿಗೆಗೂ ಪುಷ್ಟಿ ಕೊಡುತ್ತವೆ ಎನ್ನಲಾಗಿದೆ. ನಗರಗಳಲ್ಲಿನ ಜನವಸತಿಯ ಅನೇಕ ಗುಂಪುಗಳು ಕೊಳಚೆ ಪ್ರದೇಶಗಳ ಸೆಳತಕ್ಕೆ ಒಳಗಾಗಿವೆ.

ಬಳ್ಳಾರಿ ಜಿಲ್ಲೆ ಮತ್ತು ನಗರ ಕೇಂದ್ರದಲ್ಲಿ ಹೆಚ್ಚು ಕೊಳಚೆ ನಿವಾಸಿಗಳಿದ್ದಾರೆ. ಅಸ್ತವ್ಯಸ್ತವಾಗಿ ಬೆಳೆಯುತ್ತಿರುವ ಕೊಳಗೇರಿಯಲ್ಲಿ ಪರಿಸ್ಥಿತಿಯು ಅನೇಕ ಪ್ರಶ್ನೆಗಳನ್ನು ಎತ್ತಿದೆ. ತಮ್ಮ ಸುತ್ತಮುತ್ತಲಿನ ಪರಿಸರವನ್ನು ಹೇಗೆ ಸ್ವಚ್ಛ ಮಾಡಿಕೊಳ್ಳುತ್ತಾರೆ, ಕೆಳದರ್ಜೆಯ ಜನತೆ ಹೇಗೆ ವಾಸಿಸುತ್ತಾರೆ. ಇಂಥ ನೂರಾರು ಪ್ರಶ್ನೆಗಳೊಂದಿಗೆ ಕೊಳಗೇರಿ ಜನರು ಬದುಕುತ್ತಿದ್ದಾರೆ. ಕೈಗಾರೀಕರಣ

ಆಧುನಿಕ ಜಗತ್ತಿಗೆ ಒಂದು ಹೊಸ ಅಯಾಮವನ್ನು ಉಂಟುಮಾಡಿದೆ. ಏಕರೂಪದ ಆರ್ಥಿಕ ಬೆಳವಣಿಗೆಯು ಕೆಲವು ಸ್ಥಳಗಳಲ್ಲಿ ಹೆಚ್ಚಿನ ಒತ್ತಡವನ್ನು ನೋಡಬಹುದು. ಈ ಆರ್ಥಿಕತೆಯು ಹೆಚ್ಚಿನ ಆರ್ಥಿಕ ಚಟುವಟಿಕೆಗಳನ್ನು ಹೊಂದಿರುವ ಕಾರಣದಿಂದಾಗಿ ಈ ಕೆಲವು ಸ್ಥಳಗಳು ಜನರಿಗೆ ಜೀವಿಸಲು ಉತ್ತಮ ಉದ್ಯೋಗ ಅವಕಾಶಗಳನ್ನು ಒದಗಿಸುವ ಸಾಮರ್ಥ್ಯ ಕಡಿಮೆ. ಅಸಮರ್ಪಕ ಆದಾಯ ಮತ್ತು ಕಾರ್ಯಪಡೆಯು ಮತ್ತು ಬಡತನವು ಬಳ್ಳಾರಿ ಜಿಲ್ಲೆಯಲ್ಲಿ ಕೊಳಗೇರಿಗಳ ಮೇಲೆ ಹೆಚ್ಚುವರಿ ಹೊರೆ. ವಿಶೇಷವಾಗಿ ಕಡಿಮೆ ಆದಾಯದ ಪ್ರದೇಶಗಳ ಸುತ್ತ ಪರಿಸರ ಮಾಲಿನ್ಯವನ್ನು ಕಿಕ್ಕಿರದ ನಗರಗಳ ಮೂಲ ಸೌಕರ್ಯದ ಮೇಲೆ ಹಾಗೂ ಸಾಂಕ್ರಾಮಿಕ ರೋಗಗಳ ಹರಡುವಿಕೆ ಸಮಸ್ಯೆಗಳನ್ನು ನೋಡಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶಗಳು ಹಲವು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದು ಅಂಥ ಅನೇಕ ಸಮಸ್ಯೆಗಳಿಂದ ಕೂಡಿವೆ. ನೀರಿನ ಸಮಸ್ಯೆ, ಚರಂಡಿ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆಯಿಲ್ಲದೆ ಕೊಳಚೆ ನೀರು ಮನೆಯ ಮುಂದೆಯೇ ನಿಂತು ಅಲ್ಲಿ ಸೊಳ್ಳೆ, ನೊಣ, ಹಂದಿ, ನಾಯಿಗಳು ವಾಸ ಮಾಡುತ್ತವೆ. ಸಾಮೂಹಿಕ ಶೌಚಾಲಯಗಳಾಗಲಿ ಅಥವಾ ಮನೆಗೆ ಶೌಚಾಲಯಗಳಿಲ್ಲದೇ ಮಹಿಳೆಯರು ಶೌಚಾಲಯ ಇಲ್ಲದೆ ಬಯಲು ವಿಸರ್ಜನೆ ಮಾಡಲು ಪರದಾಡುತ್ತಾರೆ. ಕೌಟುಂಬಿಕ ಸಮಸ್ಯೆ ಸಾಮಾಜಿಕ, ಆರ್ಥಿಕ ಆರೋಗ್ಯ ವಸತಿ ಮಕ್ಕಳ ಶೌಚಾಲಯ, ಮಹಿಳೆಯರ ಆರೋಗ್ಯ ಸಮಸ್ಯೆ ಎದುರಿಸುವ ಬಳ್ಳಾರಿ ಜಿಲ್ಲೆಯಲ್ಲಿ ಕೊಳಚೆ ನಿವಾಸಿಗಳು ತಮ್ಮ ದಿನ ನಿತ್ಯದ ಬದುಕನ್ನು ನೋಡಬಹುದು.

ಕೊಳಚೆ ಪ್ರದೇಶದ ಜನರು ವರ್ಷಪೂರ್ತಿ ಕಡುಬಡತನದಲ್ಲಿಯೇ ಬದುಕುತ್ತಾರೆ. ಜೀವನ ನಿರ್ವಹಣೆಗಾಗಿ ಸಣ್ಣ ಪುಟ್ಟ ವ್ಯಾಪಾರ, ಮನೆಕೆಲಸ, ಬೀಡಿ ಕಟ್ಟುವುದು, ಹೂ ಕಟ್ಟುವುದು, ಹೋಟೆಲ್‌ನಲ್ಲಿ ಕೆಲಸ, ಗುಡಿಕೈಗಾರಿಕೆ, ಕೂಲಿ ಕೆಲಸ, ಗಣಿಗಾರಿಕೆ, ಕಾರ್ಮಿಕ ಕೆಲಸ ಅತ್ಯಂತ ಕನಿಷ್ಠ ಕೂಲಿ ಕೆಲಸಗಳಿಂದ ಜೀವನ ನೆರವೇರಿಸುತ್ತಾರೆ. ಈ ಜನರಿಗೆ ಬಾಡಿಗೆ ಮನೆಯಲ್ಲಿ ವಾಸಿಸಲು ಇರುವ ಸಾಮರ್ಥ್ಯ ಇರುವುದಿಲ್ಲ. ಹಾಗೆಯೇ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಮಕ್ಕಳು ಶಿಕ್ಷಣ ಬಗ್ಗೆ ನಿರ್ಲಕ್ಷ್ಯ ಮನೋಭಾವನೆ ಇದ್ದು, ಮಕ್ಕಳಲ್ಲಿ ಬಾಲಕಾರ್ಮಿಕ ಸಮಸ್ಯೆಗಳು ಹೆಚ್ಚಾಗಿವೆ. ಆರ್ಥಿಕ ಅಸಮಾನತೆ ಹಾಗೂ ಈ ಪ್ರದೇಶದ ಜನಸಮುದಾಯಗಳಿಗೆ ಸರ್ಕಾರದ ಯಾವುದೇ ಯೋಜನೆಗಳು ಇದ್ದರೂ ಸಹಾಯಕ್ಕೆ ತಲುಪಲಾರದ ಸ್ಥಿತಿ ಕಂಡುಬರುತ್ತದೆ. ಹೀಗಾಗಿ ಕೊಳಚೆ ಪ್ರದೇಶಗಳು ಇಂದಿಗೂ ತಮ್ಮ ಮೂಲ ಸ್ವರೂಪದಿಂದ ಬದಲಾವಣೆ ಆಗದ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಕೈಗಾರೀಕರಣದ ಫಲವಾಗಿ ಕೊಳಚೆ ಪ್ರದೇಶಗಳ ಸಂಖ್ಯೆ ದಿನೇ–ದಿನೇ ಹೆಚ್ಚಾಗುತ್ತಿವೆ. ಈ ಪ್ರದೇಶಗಳನ್ನು ನಿರ್ಮೂಲನೆ ಮಾಡುವ ವೇಳಗೆ ಹೊಸ ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳುತ್ತವೆ. ಹೆಚ್ಚು ನಗರಗಳು ಬೆಳೆದಂತೆಲ್ಲಾ ಕೊಳಚೆ ಪ್ರದೇಶಗಳು ಕೂಡ ಬೃಹದಾಕಾರವಾಗಿ ಬೆಳೆಯುತ್ತಾ ಹೋಗುತ್ತವೆ. ಇಂತಹ ಕೊಳಚೆ ಪ್ರದೇಶಗಳ ಕುರಿತು ಅನೇಕ ತಜ್ಞರು ವಿವಿಧ ರೀತಿಯಿಂದ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಅವುಗಳಲ್ಲಿ ಕೆಲವನ್ನು ಗಮನಿಸಬಹುದು. ೧೯೫೬ರ ಕೊಳಚೆ ಪ್ರದೇಶಗಳ (ಸುಧಾರಣಾ ಮತ್ತು ನಿರ್ಮೂಲನಾ) ಕಾಯಿದೆಯ ಪ್ರಕಾರ "ಶಿಥಿಲಗೊಂಡ ಕಿಕ್ಕಿರಿದ ಜನಸಂದಣಿಯಿಂದ ಕೂಡಿದ ದೋಷಪೂರ್ಣ ವ್ಯವಸ್ಥೆಯ ಗಾಳಿ ಬೆಳಕು ಮತ್ತು ನೈರ್ಮಲ್ಯ ಸೌಲಭ್ಯಗಳ ಅಭಾವ ಅಥವಾ ಈ ಎಲ್ಲಾ ಅಂಶಗಳು ಒಟ್ಟಿಗೆ ಇರುವ ವಾಸಗೃಹಗಳ ದುಸ್ಥಿತಿಯಿಂದಾಗಿ, ಅಲ್ಲಿ ವಾಸಿಸುವವರ ರಕ್ಷಣೆ, ಆರೋಗ್ಯ ಮತ್ತು ನೈತಿಕ ಬೆಳವಣಿಗೆ ಧಕ್ಕೆಯೆನಿಸುವ ವಸತಿ ಗೃಹಗಳಿಂದ ಕೂಡಿದ ಪ್ರದೇಶವೇ ಕೊಳಚೆ ಪ್ರದೇಶ" ಎಂದು ಉಲ್ಲೇಖಿಸುತ್ತದೆ. ವಿಶ್ವ ಸಂಸ್ಥೆಯ ನಗರ ಭೂನೀತಿಯ ವರದಿ ಪ್ರಕಾರ: "ಕಿಕ್ಕಿರಿದ ಜನಸಂದಣಿ, ಶಿಥಿಲಗೊಂಡ ನೈರ್ಮಲ್ಯ ರಹಿತವಾದ ಒಂದು ಕಟ್ಟಡ ಇಲ್ಲವೆ ಕಟ್ಟಡಗಳ ಗುಂಪಾಗಿದ್ದು, ಈ ಪರಿಸ್ಥಿತಿಗಳಲ್ಲಿ ಯಾವುದಾದರೊಂದು ಸ್ಥಿತಿಯಿಂದ ಇಲ್ಲವೆ ಎಲ್ಲಾ ಸ್ಥಿತಿಗಳಿಂದ ನಿವಾಸಿಗಳ ಅಥವಾ ಸಮುದಾಯದ ಆರೋಗ್ಯ ರಕ್ಷಣೆ ಹಾಗೂ ನೈತಿಕ ಜೀವನಕ್ಕೆ ಸಹಕಾರವಾಗಿರುತ್ತದೆ" ಎಂದು ಪರಿಭಾವಿಸುತ್ತದೆ.

"ಭಾರತದ ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಕೊಳಚೆಪ್ರದೇಶಗಳು ಹೆಚ್ಚಾಗಿ ಕಂಡುಬರುತ್ತವೆ." ಭಾರತದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಕೊಳಗೇರಿಯ ಒಟ್ಟು ಜನಸಂಖ್ಯೆ ೪೩ ಕೋಟಿ ಇದೆ ಎಂದು ನಮೂದಿಸಲಾಗಿದೆ. ಇನ್ನು ಕರ್ನಾಟಕದ ಕೊಳಗೇರಿಯ ಒಟ್ಟು ಜನಸಂಖ್ಯೆ ೧.೫ ಕೋಟಿಕ್ಕಿಂತಲೂ ಅಧಿಕ ಇದೆ. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಬಳ್ಳಾರಿ ನಗರದ ಹಾಗೂ ಜಿಲ್ಲೆಯ ಒಟ್ಟು ಕೊಳಗೇರಿ ಚಿತ್ರಣವನ್ನು ಗಮನಿಸುವುದಾದರೆ ನಗರದ ಒಟ್ಟು ಜನಸಂಖ್ಯೆ ೨೮೩,೯೩ ಸಾವಿರಕ್ಕಿಂತಲೂ ಅಧಿಕವಿದೆ. ಇದನ್ನು ಜಾತಿ ಮತ್ತು ವಿವಿಧ ಸಾಮಾಜಿಕ ಭಿನ್ನತೆ ನೆಲೆಯಲ್ಲಿ ವರ್ಗಾನುಸಾರ ವಿಂಗಡಿಸಿದರೆ ಕೊಳಚೆ ಪ್ರದೇಶದಲ್ಲಿ ಜನರ ಅಧಿಕವಾಗಿರುವುದನ್ನು ವರದಿಗಳಿಂದ ತಿಳಿಯುತ್ತದೆ. ಮೂರನೇ ವಿಶ್ವದ ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಭಾರತವು ಒಂದು. ಭಾರತದಲ್ಲಿ ನಗರ ಅಭಿವೃದ್ಧಿಯ ಪ್ರಮುಖ ಅಂಶವೆಂದರೆ ನಗರಗಳು ಮತ್ತು ದೊಡ್ಡ ಮೆಟ್ರೋಪಾಲಿಟನ್ ಕೇಂದ್ರಗಳ ಅತಿಶೀಘ್ರ ಬೆಳವಣಿಗೆಯಾಗಿದೆ. ಮೂರನೇ ಜಗತ್ತಿನ ದೊಡ್ಡನಗರಗಳು ಒಟ್ಟಾರೆ ನಗರ ಬೆಳವಣಿಗೆಗಿಂತ ಹೆಚ್ಚು ವೇಗವಾಗಿ ಬೆಳವಣಿಗೆ ದರವನ್ನು ವರದಿಮಾಡಿದೆ. ನಗರ ಬೆಳವಣಿಗೆಯ ಈ ಸ್ಫೋಟ ಸ್ವಭಾವವು ನಗರ ಪ್ರದೇಶದ ಬಡತನದಲ್ಲಿ ಹೆಚ್ಚುತ್ತಿರುವ ಬೆಳವಣಿಗೆ ದರದಿಂದ ಹೆಚ್ಚಾಗಿ ಕಂಡುಬರುತ್ತದೆ. ದುರ್ಬಲವಾದ ಬಡತನ ಅಲ್ಪ ಪ್ರಮಾಣದ ನಿರುದ್ಯೋಗ ಮತ್ತು ವಿಶೇಷ ಅಥವಾ ಸಾಮಾಜಿಕ ಅಭಿವೃದ್ಧಿಯನ್ನು ನೀಡುವ ಉದ್ಯೋಗದ ಅಡಿಯಲ್ಲಿ ಭಾರತದಲ್ಲಿ ಅನಕ್ಷರಸ್ತ, ಕೌಶಲ್ಯರಹಿತ ಮತ್ತು ಸಾಮಾಜಿಕವಾಗಿ ಬೆಚ್ಚಿಬೀಳಿಸುವ ಗ್ರಾಮೀಣ ವಲಸಿಗರು ಗುಂಪಿನ ಗುಡ್ಡ-ಗಾಡು ಪಟ್ಟಣಗಳನ್ನು ತುಂಬುತ್ತಾರೆ. ಅವರು ಬಹಳ ಕಡಿಮೆ ಕೆಲಸವನ್ನು ಕಂಡುಕೊಳ್ಳುತ್ತಾರೆ. ಸ್ವ-ಸುಧಾರಣೆಗೆ ಮೂಲ ಜೀವನಾಧಾರ ಮತ್ತು ವಿಪುಲ ಅವಕಾಶಗಳು ಅಗತ್ಯವಿರುವ ಶಿಥಿಲತೆಯ ಕೊರತೆಯು ಈ ವಲಸಿಗರಿಗೆ ಯಾವುದೇ ಆಯ್ಕೆಯಿಲ್ಲದೆ ಬಿಟ್ಟು

ಹೋಗುತ್ತದೆ. ಆದರೆ 'ಕೊಳಚೆಯಲ್ಲಿ ನೆಲಸಮಗೊಳಿಸುವಿಕೆ ಕಾರಣವಾಗುತ್ತದೆ. ಭಾರತದಲ್ಲಿ ನಗರ ಬೆಳವಣಿಗೆಯ ವೇಗವು ಹೆಚ್ಚಾಗಿದ್ದರೂ, ಕೊಳಚೆ ಪ್ರದೇಶಗಳಲ್ಲಿ ತ್ವರಿತ ಬೆಳವಣಿಗೆಯ ದರವನ್ನು ಹೊಂದಿದೆ.

ಭಾರತದಲ್ಲಿ ೧೮೮೦-೯೫ರ ಅವಧಿಯಲ್ಲಿ ಕಾರ್ಖಾನೆಯ ವ್ಯವಸ್ಥೆಯ ಆರಂಭವಾಗಿ ಜವಳಿ ಸೇರಿದಂತೆ ೬ ಸೆಣಬಿನ ಉದ್ಯಮಗಳು ಸ್ಥಾಪನೆಗೆ ಕಾರಣವಾಯಿತು. ರೈಲ್ವೆಗಳ ಜಾಲ ಮತ್ತು ಉತ್ತಮ ರಸ್ತೆಗಳ ಪರಿಚಯವು ಹಲವಾರು ಹೊಸನಗರಗಳಿಗೆ ಜನ್ಮ ನೀಡಿತು. ಹಾನ್ ನಾಗಪಾಲ್ ಗಮನಿಸಿದಂತೆ "ಕೈಗಾರೀಕರಣದ ವೇಗವು ಬ್ರಿಟನ್ ಆಳ್ವಿಕೆಯ ಸಮಯದಲ್ಲಿ ನಿಧಾನವಾಗಿ ನಿಲ್ಲುತ್ತದೆ. ದೇಶದ ಅತಿದೊಡ್ಡ ಸಾಮರ್ಥ್ಯಗಳನ್ನು ಪರಿಗಣಿಸುತ್ತದೆ ಮತ್ತು ಕೈಗಾರಿಕಾ ವಿಸ್ತರಣೆಗೆ ಮೂಲಭೂತ ಮತ್ತು ಕ್ಯಾಪಿಟಲ್ ಸರಕುಗಳು ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಮೂಲಕ ಧ್ವನಿ ಸ್ಥಾಪನೆ ಮಾಡಲು ಯಾವುದೇ ಪ್ರಯತ್ನವಿಲ್ಲ." ಒಟ್ಟಾರೆಯಾಗಿ ಬ್ರಿಟಿಷ್ ಆಡಳಿತದ ಸಮಯದಲ್ಲಿ ನಗರೀಕರಣದ ಬೆಳವಣಿಗೆಯಲ್ಲಿ ಕೈಗಾರೀಕರಣವು ಸಿಮೀತ ಪಾತ್ರವಹಿಸಿತು. ಭಾರತದಲ್ಲಿ ಸ್ವಾತಂತ್ರ್ಯದ ನಂತರ ನಗರಗಳಿಗೆ ಹಠಾತ್ ಬೆಳವಣಿಗೆಯನ್ನು ಕಾಣಬಹುದಾಗಿದೆ. ಆಧುನಿಕ ಕೈಗಾರಿಕೆಗಳ ವಿಸ್ತರಣೆಗೆ ಕೇಂದ್ರ ಸರ್ಕಾರ ಹೊಸ ನೀತಿ ಜಾರಿಗೆ ತಂದಿತು. ಈ ಬಗ್ಗೆ ಜವಾಹರಲಾಲ್ ನೆಹರೂ ಅವರ ಚಿಂತನೆ ಗಮನಾರ್ಹ. ಆಧುನಿಕ ಭಾರತದ ಕೈಗಾರಿಕರಣವನ್ನು ಹೆಚ್ಚಿಸುವ ಯೋಜನೆಗಳು ಮತ್ತು ನೀತಿಗಳು ಒಟ್ಟಾಗಿ ನಗರಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವನ್ನು ಜಾರಿಗೆ ತರಲು ಏಕಕಾಲದಲ್ಲಿ ನಗರ-ಗ್ರಾಮಗಳು ಅಭಿವೃದ್ದಿ ಹೊಂದಿದ್ದವು. ಆದ್ದರಿಂದ ಒಂದು ಕಡೆ ವಲಸಿಗರು ಸ್ಥಿರ ಹರಿವನ್ನು ಹೀರಿಕೊಳ್ಳಲು ನಗರಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೊರತೆಯಿಂದಿರುವ ಉದ್ಯೋಗಾವಕಾಶಗಳನ್ನು ನೋಡಿದಾಗ, ಸಹ ಮಧ್ಯಮ ಶಿಕ್ಷಣ ಹೊಂದಿರುವವರು ತಮ್ಮ ಹಳ್ಳಿಯಲ್ಲಿ ಭವಿಷ್ಯವಿಲ್ಲ ಎಂದು ಭಾವಿಸಿದರು. ನಗರ ವಲಸಿಗರ ಭರವಸೆಯ ಸಂಕೇತವಾಗಿ ಮಾರ್ಪಟ್ಟವು. ಗ್ರಾಮೀಣ, ನಗರ ಮತ್ತು ಪಟ್ಟಣಕ್ಕೆ ನಗರ (ಅದು ಸರೆ ನಗರ ಪ್ರದೇಶಗಳಿಗೆ ಅಂಚಿನ/ಕೆಳಸ್ತರದ ಪಟ್ಟಣಗಳಿಗೆ ಮತ್ತು ನಗರಗಳಿಗೆ) ಸ್ವಾತಂತ್ರದ ನಂತರ ದೊಡ್ಡ ಪಟ್ಟಣಗಳು ಮೂಲ ಸೌಕರ್ಯ ಸೌಲಭ್ಯಗಳನ್ನು ಹೊಂದಿರಲಿಲ್ಲ. ಜನಸಂಖ್ಯೆಯ ಬೆಳವಣಿಗೆ ಮತ್ತು ವಲಸಿಗ ಸ್ಥಿರವಿನೊಂದಿಗೆ, ನಿರುದ್ಯೋಗವು ವ್ಯಾಪಕ ಮತ್ತು ಕಡಿಮೆ ಕೆಲಸಗಾರರನ್ನು ಪಡೆಯಿತು. ಅಲ್ಲದೆ ಅನಿಯಂತ್ರಿತ ಮತ್ತು ಗುರುತಿಸಿದ ವಲಸಿಗರ ಸ್ಥಿರ ಹರಿವಿನೊಂದಿಗೆ ನಿರುದ್ಯೋಗವು ವ್ಯಾಪಕ ಮತ್ತು ಕಡಿಮೆ ಕೆಲಸಗಾರರನ್ನು ಪಡೆಯಿತು. ಅಲ್ಲದೆ, ಅನಿಯಂತ್ರಕ ಮತ್ತು ಗುರುತಿಸಿದ ವಲಸಿಗರ ಹರಿವನ್ನು ಬಂಧಿಸುವ ಯಾವುದೇ ನೀತಿಯ ಅನುಪಸ್ಥಿತಿಯ ನಗರ ಪ್ರದೇಶಗಳಲ್ಲಿ ಕೊಳಗೇರಿ ಅಭಿವೃದ್ಧಿಗೆ ಕಾರಣವಾಗಿದೆ. ನಗರಗಳಲ್ಲಿ, ಕೊಳಚೆ ಪ್ರದೇಶಗಳ ಹರಡುವಿಕೆ ಹೆಚ್ಚಾಗಿದೆ. ಈ ದಿಕ್ಕಿನಲ್ಲಿ ಗಂಭೀರ ಪ್ರಯತ್ನಗಳನ್ನು ಮಾಡಲಾಗುತ್ತಿದೆಯಾದರೂ ನಗರಗಳ ಪರಿಸರ ರಚನೆಯ ಒಂದು ಗುಣಲಕ್ಷಣವಾಗಿ ಕಡಿಮೆ ಆದಾಯದ ವಸತಿ ಪ್ರದೇಶಗಳಲ್ಲಿನ

ಜನಬಿಡತೆಯ ಕಾರಣದಿಂದ ಹೆಚ್ಚಿನ ವೆಚ್ಚ, ಮೌಲ್ಯ ಮತ್ತು ಗೃಹನಿರ್ಮಾಣದ ಬಾಡಿಗೆಗಳ ಹೆಚ್ಚಳವು ಅಧಿಕವಾಗುತ್ತದೆ.

ಕಡಿಮೆ ಆದಾಯದ ಗುಂಪುಗಳ ನಿವಾಸಿಗಳಿಗೆ ಉತ್ತಮ ಮೂಲಭೂತ ಸೌಕರ್ಯವನ್ನು ಕಂಡುಕೊಳ್ಳಲು ಅಸಾಧ್ಯ ಶಿಥಿಲವಾದ ಮತ್ತು ರನ್-ಡೌನ್ ಸೌಕರ್ಯಗಳಿಗಿಂತ ಬಾರಿ ಆಶ್ರಯದ ಪರ್ಯಾಯ ಆಯ್ಕೆಗಳನ್ನು ಅವರು ಹುಡುಕಲಾಗುವುದಿಲ್ಲ. ಮೂಲಭೂತ ನಾಗರಿಕ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಅಂತಹ ಪ್ರದೇಶಗಳು ಮಾನವ ದೌರ್ಜನ್ಯದ ಪ್ರದೇಶಗಳಾಗಿ ಕ್ಷೀಣಿಸುತ್ತಿರುತ್ತವೆ. ಅಲ್ಲಿ ನಿವಾಸಿಗಳ ಕೇವಲ ಜೀವನಾಧಾರ ಮಟ್ಟ ಇರಲ್ಲಿ ವಾಸಿಸಲು ಒತ್ತಾಯಿಸಲಾಗುತ್ತದೆ. ಸ್ಲಂ ಮತ್ತು ಸ್ಕ್ವಾಟರ್ ವಸಾಹತುಗಳ ಸರಾಸರಿ ಆದಾಯದ ಕುಟುಂಬಗಳು ಯಾವಾಗಲೂ ಮೆಟ್ರೋಪಾಲಿಟನ್ ಕೇಂದ್ರಗಳು ಒಟ್ಟಾರೆ ನಿವ್ವಳಕ್ಕಿಂತ ಗಣನೀಯವಾಗಿ ಕಡಮೆಯಾಗಿದೆ ಎಂದು ವರದಿಯಾಗಿದೆ. ಕೊಳಚೆ ನಿವಾಸಿಗಳ ಸಮಸ್ಯೆಯು ತುಂಬಾ ಹೆಚ್ಚಾಗಿದೆ. ಪುರಷರು ಮತ್ತು ಹೆಣ್ಣುಮಕ್ಕಳು ಅನುಪಾತವು ವಲಸಿಗರ ತಮ್ಮ ವಲಸಿಗರು ವಲಸೆ ಬಂದಾಗ ಗ್ರಾಮೀಣ ಪ್ರದೇಶ ನಿವಾಸಿಗಳು ಮತ್ತು ಮಕ್ಕಳನ್ನು ಬಿಟ್ಟುಹೋಗುವ ಸಂದರ್ಭವಂತೆ ಕಂಡುಬರುತ್ತದೆ. ಐದಕ್ಕಿಂತಲೂ ಹೆಚ್ಚು ಜನರು ಒಂದೇ ಗಾತ್ರದ ಕೊಠಡಿಯಲ್ಲಿ ವಾಸಿಸುತ್ತಾರೆ. ಈ ಪರಿಸ್ಥಿತಿಯಲ್ಲಿ ಕೊಳಗೇರಿಗಳ ವಿವಿಧ ಅಂಶಗಳನ್ನು ವ್ಯಾಖ್ಯಾನಿಸುವುದು ಸಮಾಜಕಾರ್ಯದಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ವಿಶೇಷವಾಗಿ ಭಾರತದಲ್ಲಿನ ನಗರ-ಬೆಳವಣಿಗೆಯ ಸನ್ನಿವೇಶಕ್ಕೆ ಸಂಬಂಧಿಸಿರುತ್ತದೆ.

ಕೊಳಗೇರಿ ನಗರದ ಜನರ ಜೀವನವು ಅತ್ಯಂತ ಪ್ರಮುಖ ಮತ್ತು ನಿರಂತರ ಸಮಸ್ಯೆಗಳಲ್ಲೊಂದು. ಸಾಮಾಜಿಕ ಅಸ್ತವ್ಯಸ್ತತೆಯ ಕುರಿತಂತೆ ಅವರು ವ್ಯಾಪಕವಾಗಿ ಪರಿಗಣಿಸಲ್ಪಡುತ್ತಾರೆ. ವಿಶೇಷವಾಗಿ ಹೆಚ್ಚು ಶ್ರೀಮಂತ ನಗರ ನಿವಾಸಿಗಳು ಮತ್ತು ಸರ್ಕಾರಿ ಅಧಿಕಾರಿಗಳ ನಡುವೆ ಗಾಬರಿ ಗೊಂಡಿದ್ದಾರೆ. ಅಧಿಕಾರಿಗಳು ಮತ್ತು ನಗರ ಯೋಜನೇಕರು ತಮ್ಮ ಬೆಳವಣಿಗೆಯನ್ನು ಪರಿಶೀಲಿಸಲು ನಿರ್ಧರಿಸಿದ ಪ್ರಯತ್ನಗಳನ್ನು ಮಾಡಿದ್ದಾರೆ. ಅದರೆ ಪರಿಹಾರವು ಎಲ್ಲಿಯೂ ಇರುವುದಿಲ್ಲ. ಆದುದರಿಂದ ಪ್ರಸ್ತುತ ಅಧ್ಯಯನ ಬಳ್ಳಾರಿ ಜಿಲ್ಲೆಯ ಕೊಳಗೇರಿ ನಿವಾಸಿಗಳನ್ನು ಅಧ್ಯಯನ ಮಾಡಲು ಅವರು ಕೊಳಚೆ ಪ್ರದೇಶ ನಿವಾಸಿಗಳ ಸಮಸ್ಯೆಗಳು ಒಟ್ಟಾರೆ ಪ್ರದೇಶದ ನಿವಾಸಿಗಳ ಸ್ಥಿತಿ ಭಿನ್ನವಾಗಿರುತ್ತದೆ. ಕೊಳಚೆ ಪ್ರದೇಶ ನಿವಾಸಿಗಳು ಸ್ವಂತ ಸಮಸ್ಯೆಯಿಂದ ಆರೋಗ್ಯ ಮೇಲೆ ಹೆಚ್ಚು ಪರಿಣಾಮಬೀರುತ್ತದೆ. ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸ್ಥಿತಿ ರಕ್ತಹೀನತೆ, ಅಪೌಷ್ಠಿಕತೆ, ಅನಾರೋಗ್ಯದಿಂದ ಬಳಲುವುದನ್ನು ಕಾಣಬಹುದಾಗಿದೆ.

೧.೧ ಅಧ್ಯಯನದ ಉದ್ದೇಶಗಳು

೧. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಸ್ವರೂಪ ಹಾಗೂ ಕೊಳಚೆ ಪ್ರದೇಶವನ್ನು ಅವಲೋಕನ ಮಾಡುವುದು. ಆ ಮೂಲಕ ನಗರ, ಪಟ್ಟಣಗಳಲ್ಲಿನ ಕೊಳಚೆ ನಿವಾಸಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗುವುದು.

೨. ಕೊಳಚೆ ಪ್ರದೇಶದ ನಿವಾಸಿಗಳ ಕೌಟುಂಬಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವುದು.

೩. ಕೊಳಚೆ ಪ್ರದೇಶ ನಿವಾಸಿಗಳ ವಿವಿಧ ಬಗೆಯ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.

೪. ಕೊಳಚೆ ಪ್ರದೇಶ ನಿವಾಸಿಗಳ ಅಭಿವೃದ್ಧಿಗೆ ಲಭ್ಯವಿರುವ ಯೋಜನೆಗಳ ಬಗ್ಗೆ ಮನವರಿಕೆ ಮಾಡಿಕೊಡುವುದಾಗಿದೆ.

೫. ಇವರ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ/ಸಂಘ–ಸಂಸ್ಥೆಗಳ ಕೊಡುಗೆಯನ್ನು ವಿಶ್ಲೇಷಿಸುವುದಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಭಾಗವಾಗಿರುವ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದೆ. ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ ತಾಲ್ಲೂಕುಗಳ ಕೊಳಚೆ ಪ್ರದೇಶಗಳು ಅಧ್ಯಯನದ ವ್ಯಾಪ್ತಿಗೊಳಪಡುತ್ತವೆ. ಬಳ್ಳಾರಿ ಜಿಲ್ಲೆಯ ಆಯ್ದ ಕೊಳಚೆ ಪ್ರದೇಶದ ಜನರು ಸಮಸ್ಯೆಗಳನ್ನು ಸಮಾಜಕಾರ್ಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು. ಪ್ರಸ್ತುತ ವಿಷಯದ ವಿವಿಧ ಸ್ವರೂಪಗಳ ಬಗೆಗೆ ಅಧ್ಯಯನ ಮಾಡಲಾಗಿದೆ. ಐತಿಹಾಸಿಕ ಹಿನ್ನೆಲೆ, ಮಹತ್ವದ ಸ್ಥಾನವನ್ನು ಪಡೆದ ಬಳ್ಳಾರಿ ನಗರವು ಹಲವು ಕೊಳಚೆ ಪ್ರದೇಶಗಳನ್ನು ಹೊಂದಿದೆ. ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಗರದಲ್ಲಿ ಘೋಷಿತವಾದ ೫೮, ಅಘೋಷಿತ ೭೫ ಕೊಳಚೆ ಪ್ರದೇಶಗಳು ಕಂಡುಬರುತ್ತವೆ. ಇವುಗಳಲ್ಲಿ ಕೊಳಚೆ ಪ್ರದೇಶಗಳು ಸರಕಾರಿ ಜಾಗದಲ್ಲಿರುವ ಐತಿಹಾಸಿಕ ಸ್ಥಳಗಳಲ್ಲಿ ನೆಲೆ ನಿಂತಿರುವುದನ್ನು ನೋಡಬಹುದು. ಈ ಪ್ರದೇಶದಲ್ಲಿ ದೊಡ್ಡ ಪ್ರಮಾಣ ಕೈಗಾರಿಕೆಗಳನ್ನು ನೋಡಬಹುದು. ಮ್ಯಾಂಗನಿಸ್, ಉಕ್ಕು, ಕಬ್ಬಿಣ, ಮೈನಿಂಗ್ ಪ್ರಭಾವವನ್ನು ಬಳ್ಳಾರಿ ಜಿಲ್ಲೆಯಲ್ಲಿ ನೋಡಬಹುದು. ಆರ್ಥಿಕ ಅಧ್ಯಯನ, ಶೈಕ್ಷಣಿಕ, ಆರೋಗ್ಯ ಕುರಿತು ಸಂಶೋಧನೆ ಮಾಡಲು ಬಳ್ಳಾರಿ ಜಿಲ್ಲೆ ಕೊಳಚೆ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೩ ಅಧ್ಯಯನದ ಮಹತ್ವ

ಭಾರತದಲ್ಲಿ ಅಂದಾಜು ೪೪ ರಿಂದ ೧೦೫ ದಶಲಕ್ಷ ಜನರು ನಗರ ಕೊಳಗೇರಿಗಳಲ್ಲಿ ವಾಸಿಸುತ್ತಾರೆ(ಮಿಲೇನಿಯಮ್ ಡೆವಲಪ್‌ಮೆಂಟ್ ಗೋಲ್ಡ್ ಡಾಟಾಬೇಸ್ ೨೦೦೯ ಮತ್ತು ಸಚಿವಾಲಯದ ಅಂಕಿ–ಅಂಶ ಹಾಗೂ ಕಾರ್ಯಕ್ರಮ ಅನುಷ್ಠಾನ ೨೦೧೩ ಯುನೈಟೆಡ್

ನೇಷನ್ಸ್ ಯು.ಎನ್ ಮತ್ತು ಭಾರತ ಸರ್ಕಾರ ಎರಡೂ ಅಧಿಕೃತ ಸ್ಲಂ ವ್ಯಾಖ್ಯಾನಗಳನ್ನು ಹೊಂದಿವೆ). ಕೊಳಚೆ ನಿರುಪಯುಕ್ತತೆಗೆ ಗಣನೀಯ ವ್ಯತ್ಯಾಸಗಳನ್ನು ಮರೆಮಾಡುತ್ತವೆ. ಅಂತರ ಕೊಳಗೇರಿ ಬದಲಾಣೆಯ ಪ್ರಮುಖ ಕಾರಣವೆಂದರೂ ಕೊಳಚೆಗಳು ಮತ್ತು ಗುರುತಿಸಿದ ಗುರಿತಿಸಲಾಗದ ಕೊಳಗೇರಿ ನಡುವೆ ಕಾನೂನು ವಿಭಜನೆ ಮುಂಬೈನಲ್ಲಿರುವ ರಾಜ್ಯವು ಮಹಾರಾಷ್ಟ್ರ ರಾಜ್ಯದಲ್ಲಿ ೩೯% ಸ್ಲಂ ಮನೆಗಳನ್ನು ಭಾರತ ದೇಶದ ೩೯% ಸ್ಲಂ ಕುಟುಂಬಗಳಲ್ಲಿ ಗುರುತಿಸಲಾಗಿದೆ (ಅಂಕಿ-ಅಂಶ ಮತ್ತು ಕಾರ್ಯಕ್ರಮದ ಸಚಿವಾಲಯ ೨೦೧೩). ಕೊಳಚೆ ಪ್ರದೇಶಗಳು ಗಮನಾರ್ಹವಾಗಿ ಕೊಳೆಚೆ ಪ್ರದೇಶದಿಂದಲೇ ಬಳಲುತ್ತವೆ. ಇದು ಲ್ಯಾಟರೀನರ್, ಕೊಳವೇನೀರು, ವಿದ್ಯುತ್ ಮತ್ತು ವಸತಿ ಸಾಮಗ್ರಿಗಳಿಗೆ ಸೂಚಿಸಲಾಗುತ್ತದೆ. ಸರ್ಕಾರದ ಕೊಳಗೇರಿ ಸುಧಾರಣೆ ಮೂಲಕ ಯೋಜನೆಗಳನ್ನು ರೂಪಿಸಿ ಮತ್ತು ಕಾರ್ಯಕ್ರಮದ ಅನುಷ್ಠಾನಗೊಳಿಸಲಾಗಿದೆ. ೨೦೧೩ರಲ್ಲಿ ಕಡಿಮೆ ಸಹಾಯವನ್ನು ಅವರು ಪಡೆದಿದ್ದಾರೆ.

ಕೊಳಗೇರಿಗಳು ಭಾರತದ ಸಾಮಾಜಿಕ ಸಮಸ್ಯೆಯಾಗಿದ್ದು, ಈ ಸಾಮಾಜಿಕ ದುಷ್ಪರಿಣಾಮದಿಂದ ಮುಕ್ತವಾಗಿ ಮತ್ತು ನಗರ ಸಮುದಾಯಗಳಲ್ಲಿನ ಕೊಳಚೆಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕೊಳಗೇರಿಗಳು ವಿವಿಧ ಕಾರಣಗಳಿಂದಾಗಿ ಬರುತ್ತಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಕೈಗಾರಿಕರಣ, ನಗರೀಕರಣ, ಗ್ರಾಮೀಣ ಜನಸಂಖ್ಯೆ ನಗರಗಳಲ್ಲಿನ ಅಭೂತಪೂರ್ವ ಕಾರಣವಾಗಿದೆ. ಕೊಳಗೇರಿಗಳು ಮತ್ತು ನವ ವಸಾಹತುಗಳು ಭಾರತೀಯ ನಗರಗಳ ಪರಿಸರ ಸಂರಚನೆಗಳಲ್ಲಿ ಅದರಲ್ಲೂ ವಿಶೇಷವಾಗಿ ನಗರಗಳು ಮತ್ತು ಮಹಾನಗರದ ಕೇಂದ್ರಗಳಲ್ಲಿ ಗುಣಲಕ್ಷಣಗಳು ಗಮನಾರ್ಹ ಲಕ್ಷಣವನ್ನು ಹೊಂದಿವೆ. ೨೫ ರಿಂದ ೩೦ ರಷ್ಟು ಭಾರತೀಯ ನಗರ ಜನಸಂಖ್ಯೆ ಕೊಳಗೇರಿಗಳು ಚದುರಿದ ಪ್ರದೇಶಗಳ ನಿವಾಸಿಗಳನ್ನು ನೋಡಬಹುದು.

೧.೪ ಅಧ್ಯಯನದ ವಿಧಾನ

ಪ್ರಸ್ತುತ ಸಂಶೋಧನೆ ಹಾಗೂ ಅಧ್ಯಯನಕ್ಕೆ ವ್ಯವಸ್ಥಿತ ಮತ್ತು ವೈಜ್ಞಾನಿಕವಾದ ವಿಧಾನವು ತುಂಬಾ ಮುಖ್ಯವಾಗಿದೆ. ಈ ಮಾದರಿಯನ್ನು ಆಯ್ಕೆ ಮಾಡುವಲ್ಲಿ ಹಾಗೂ ಸಂಶೋಧನಾ ಕಾರ್ಯದ ವಿನ್ಯಾಸ ರೂಪಿಸುವಲ್ಲಿ ಸಮಸ್ಯಾತ್ಮಕ ಅಧ್ಯಯನವಾಗಿರುವುದರಿಂದ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ ಬಳಸಲಾಗುವ ತಂತ್ರಗಳನ್ನು ಆಯ್ಕೆ ಮಾಡಲಾಗಿದೆ. ಸಂಶೋಧನಾ ಅಧ್ಯಯನಕ್ಕಾಗಿ ಸಮಾಜವಿಜ್ಞಾನ ಶಿಸ್ತಿನ ಸಮಾಜಕಾರ್ಯ ವಿಧಾನವನ್ನು ಅನುಸರಿಸಲಾಗದೆ. "ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶ ಜನರ ಸಮಸ್ಯೆಗಳು ಒಂದು ಅಧ್ಯಯನ" ಎಂಬ ವಿಷಯವನ್ನು ಕೈಗೆತ್ತಿಕೊಳ್ಳಲಾಗಿದೆ. ಸಾಮಾಜಿಕ-ಆರ್ಥಿಕ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವರದಿ, ಅಂಕಿ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಇಲ್ಲಿ ಬಳಸಲಾಗಿದೆ. ಉದ್ದರಣೆ. ಉಲ್ಲೇಖ, ಅಂಕಿ ಅಂಶಗಳ ವಿಶ್ಲೇಷಣೆ, ಗ್ರಂಥಋಣವಲ್ಲದೆ ಅಧ್ಯಯನಕ್ಕೆ ಪೂರಕವಾದ ಕೋಷ್ಟಕ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅಧ್ಯಯನದ ಸಾರ್ವತ್ರಿಕತೆ

ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುವಂತ ಸ್ಲಂ ಪ್ರದೇಶಗಳನ್ನು ಒಳಗೊಂಡಿವೆ. ಹಾಗೆಯೇ ವಿಶ್ವದಲ್ಲಿ ಬಹುದೊಡ್ಡ ಮತ್ತು ಸಣ್ಣ ಕೊಳಗೇರಿಗಳಿದ್ದಂತೆ ಭಾರತದಲ್ಲಿಯು ಕೊಳಗೇರಿಗಳಿವೆ. ಮುಂಬಯಿ, ಕಲ್ಕತ್ತಾಗಳ ಬಗ್ಗೆ ಅಧ್ಯಯನಗಳಾಗಿವೆ. ಈ ಅಧ್ಯಯನ ಸಾರ್ವತ್ರಿಕ ಚಿಂತನೆ ವಿಧಾನವಿದ್ದರೂ ಇಲ್ಲಿ ಭಿನ್ನ ಆಯಾಮಗಳ ಮೂಲಕ ಅವಲೋಕಿಸಲಾಗಿದೆ. ೬೮ ಪ್ರದೇಶಗಳಲ್ಲಿ ೨೦ ಸ್ಲಂ ಪ್ರದೇಶಗಳನ್ನು ಆಯ್ಕೆ ಮಾಡಲಾಗಿದೆ. ಅಂದರೆ, ಹೊಸಪೇಟೆ ಮತ್ತು ಕೂಡ್ಲಿಗಿ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ಸ್ಲಂ ನಿರ್ಮೂಲನ ಮಂಡಳಿಯ ಘೋಷಿಸಿದ ದೊಡ್ಡ ಕೊಳಗೇರಿ ಪ್ರದೇಶಗಳ ಕಾರಣದಿಂದ ಈ ಪ್ರದೇಶಗಳ ಜನಸಮೂಹ ಮತ್ತು ಸಾಂದ್ರತೆಯ ಜನಸಂಖ್ಯಾ ವಿವರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನದ ಅವಶ್ಯಕತೆಗಾಗಿ, ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿದ ಕೊಳಗೇರಿ ನಿವಾಸಿಗಳ ಕೌಟುಂಬಿಕ ಸಮಸ್ಯೆ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಮಾಹಿತಿದಾರರಿಂದ ಸಂಗ್ರಹಿಸಿದ ಮಾಹಿತಿಯೇ ಮುಖ್ಯ ಕೊಳಗೇರಿ ಪ್ರದೇಶಗಳಿಗೆ ಭೇಟಿ ನೀಡಿ ಕೊಳಚೆ ಪ್ರದೇಶನಿವಾಸಿಗಳ ಸಮಸ್ಯೆ ಸ್ಥಿತಿಯನ್ನು ಅರಿತು ಈ ಅಧ್ಯಯನದಲ್ಲಿ ವಿಶ್ಲೇಷಿಸುವ ಪ್ರಯತ್ನವಿದೆ. ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿಯೂ ಈ ಅಧ್ಯಯನ ಜನರ ಸಮಸ್ಯೆ ಹಾಗೂ ಸವಾಲುಗಳ ಮಹತ್ವವನ್ನು ಹೊಂದಿದೆ.

ಸಂಶೋಧನಾ ವಿನ್ಯಾಸ

ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳ ಸಮಸ್ಯೆಗಳ ಮೇಲೆ ಉದ್ದೇಶದಿಂದ ಸಂಶೋಧನಾ ವಿನ್ಯಾಸವು ವಿವರಣಾತ್ಮಕವಾಗಿದೆ. ಈ ಅಧ್ಯಯನವು ಅವರ ಕೌಟುಂಬಿಕ ಹಿನ್ನೆಲೆ ಸಾಮಾಜಿಕ-ಆರ್ಥಿಕ ಮತ್ತು ಆರೋಗ್ಯ ಸಮಸ್ಯೆ, ಶೈಕ್ಷಣಿಕ-ವಸತಿ ಶೌಚಾಲಯ ಸಮಸ್ಯೆಗಳ ಕುರಿತಂತೆ ಅಧ್ಯಯನ ಮಾಡಲು ಉದ್ದೇಶಿಸಿದೆ. ಈ ಅಧ್ಯಯನದಿಂದ ಕೊಳಚೆ ನಿವಾಸಿಗಳ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಹೇಗೆ ಪ್ರಯೋಜನ ಪಡೆಯುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

ಮಾದರಿ ವಿನ್ಯಾಸ

ಬಳ್ಳಾರಿ ಜಿಲ್ಲೆಗೆ ಸೀಮಿತವಾದ ಕೊಳಚೆ ಪ್ರದೇಶಗಳು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ರಾಜ್ಯದ ಕೊಳಗೇರಿ ನಿರ್ಮೂಲನ ಮಂಡಳಿಯು ಬಳ್ಳಾರಿ ಬಗ್ಗೆ ಘೋಷಿಸಲ್ಪಟ್ಟಿದ್ದನ್ನು ಅವಲೋಕಿಸಲಾಗಿದೆ. ಆಯ್ಕೆ ಮಾಡುವ ಅವಕಾಶವನ್ನು ಹೊಂದಿರುವ ಮಾದರಿಗಳ ನಿಯಮಿತ ಮಧ್ಯಂತರದೊಂದಿಗೆ ದತ್ತಾಂಶವನ್ನು ಸಂಗ್ರಹಿಸುವ ಸರಳಯಾದೃಚ್ಛಿಕ ಮಾದರಿ ವಿಧಾನವನ್ನು ಅಧ್ಯಯನವು ಅನ್ವಯಿಸುತ್ತದೆ. ಅಧ್ಯಯನದ ಅವಶ್ಯಕತೆಗಾಗಿ ಮಾದರಿಗಳ

ಆಯ್ಕೆಯಿಂದ ಕೆಲಸ ಮಾಡಲು ವಿನ್ಯಾಸಗೊಳಿಸಿದ ಸಂಶೋಧನಾ ಕಾರ್ಯದ ಮಾದರಿ ವಿನ್ಯಾಸ (೬೪೮೮) ಕುಟುಂಬಗಳಲ್ಲಿ (೩೯) ೫೮ ಸ್ಲಂಗಳನ್ನು ಘೋಷಿಸಲಾಯಿತು. ೩೦೦ ಯಾದೃಚ್ಛಿಕವಾಗಿ ಆಯ್ಕೆಮಾಡಿದ ೨೦ ಕೊಳಗೇರಿಗಳಿಂದ ಪ್ರತಿ ಕುಟುಂಬದಿಂದ ೩೦೦ ಮಾದರಿಗಳನ್ನು ಆಯ್ಕೆ ಮಾಡಲಾಗಿದೆ. ಸರಳ ಯಾದೃಚ್ಛಿಕ ಮಾದರಿ ವಿಧಾನವು ಆಯ್ಕೆ ಮಾಡಿಕೊಂಡಿದ್ದು ಅವಕಾಶವನ್ನು ಹೊಂದಿರುವ ಮಾದರಿಗಳ ನಿಯಮಿತ ಮಧ್ಯಂತರದೊಂದಿಗೆ ದತ್ತಾಂಶವನ್ನು ಸಂಗ್ರಹಿಸಲು ಅನ್ವಯಿಸುತ್ತದೆ. ಈ ಕೆಳಗೆ ತಿಳಿಸಿದಂತೆ ಅಧ್ಯಯನದ ಅಡಿಯಲ್ಲಿ ಆಯ್ಕೆ ಮಾಡಲಾದ ನಮೂನೆಯ ವಿವರಗಳನ್ನು ದಾಖಲಿಸಲಾಗಿದೆ.

ದತ್ತಾಂಶ ಸಂಗ್ರಹಣೆಯ ಉಪಕರಣಗಳು ಮತ್ತು ತಂತ್ರಗಳು ದತ್ತಾಂಶ ಸಂಗ್ರಹಣೆಯ ಪರಿಕರಗಳು

ಅಧ್ಯಯನದ ಉದ್ದೇಶ ದೃಷ್ಟಿಯಿಂದ ಪ್ರತಿಕ್ರಿಯೆ ನೀಡುವುದರಿಂದ ಮಾಹಿತಿಯನ್ನು ಸಂಗ್ರಹಿಸಲು ಸಂದರ್ಶನ ವೇಳಾಪಟ್ಟಿ ೫ ಭಾಗಗಳನ್ನು ಹೊಂದಿರುತ್ತದೆ. ಭಾಗಶಃ ಮೊದಲು ಸಂದರ್ಶಕರ ಸಾಮಾನ್ಯ ಮಾಹಿತಿ ಸಂದರ್ಶನ ವೇಳಾಪಟ್ಟಿ ಮೂಲಕ ಸಂಗ್ರಹಿಸಲಾಗಿದೆ. ಭಾಗಶಃ ಎರಡನೇ ಸಂದರ್ಶನ ಸಾಮಾಜಿಕ ಸ್ಥಿತಿ ಮಾಹಿತಿಯ ಸಂಗ್ರಹಿಸಿದೆ. ಸಂದರ್ಶಕರ ವೇಳಾಪಟ್ಟಿಯ ಮೂರನೇ ಭಾಗವು ಆರ್ಥಿಕ ಸ್ಥಿತಿಗೆ ಸಂಬಂಧಿದಂತೆ ನಾಲ್ಕನೆಯ ಭಾಗವು ವೇಳಾಪಟ್ಟಿಯ ಆರೋಗ್ಯ ಸ್ಥಿತಿಯನ್ನು ಒಳಗೊಂಡಿತು. ಸಂದರ್ಶನ ವೇಳಾಪಟ್ಟಿಯ ಸರ್ಕಾರದ ನೀತಿಗಳ ಬಗ್ಗೆ ಪ್ರತಿಕ್ರಿಯಿಸುವವರ ಮಾಹಿತಿಯನ್ನು ಸಂಗ್ರಹಿಸಲು ವಿನ್ಯಾಸಗೊಳಿಸಿದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.

ಸಂದರ್ಶನ/ಅವಲೋಕನ

ಸಂದರ್ಶನ ವೇಳಾಪಟ್ಟಿಗಳಲ್ಲಿ ಹೆಚ್ಚಿನ ಪ್ರಶ್ನೆಗಳು ರಚನಾತ್ಮಕ ಪಟ್ಟಿ ಪ್ರಕಾರ ಪ್ರತಿಕ್ರಿಯಿಸುವವರು ತಮ್ಮ ಸ್ವಂತ ತಿಳುವಳಿಕೆ ಮತ್ತು ಆ ಪ್ರಕಾರ ಸೂಕ್ತವಾದದನ್ನು ಆಯ್ಕೆ ಮಾಡುವಂತಹ ಕೆಲವು ಪ್ರಶ್ನೆಗಳು ಮತ್ತು ಪ್ರಶ್ನೆಗಳಲ್ಲಿ ಪ್ರತಿಕ್ರಿಯಿಸಿದವರು ಉತ್ತರಗಳನ್ನು ನೀಡಿದರು. ಈ ವಿದ್ಯಮಾನವನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಕೆಲವು ಪ್ರಶ್ನೆಗಳೊಂದಿಗೆ ಅನುಸರಿಸಲಾಯಿತು. ಪರಿಸ್ಥಿತಿ ಮತ್ತು ಸ್ಥಿತಿಯ ವಿಶ್ಲೇಷಣೆ ಸೇರಿಸಿಕೊಳ್ಳಬೇಕಾದ ಅಪೇಕ್ಷಣೀಯ ವಸ್ತುಗಳನ್ನು ಒಳಗೊಂಡಂತೆ ಮೊದಲೇ ಸಿದ್ದಪಡಿಸಲಾದ ಆಧಾರದ ಮೇಲೆ ಸಂದರ್ಶನ ಸಮಯದ ಪಟ್ಟಿಗಳನ್ನು ನಿರ್ಮಿಸಲಾಯಿತು. ಬಳ್ಳಾರಿ ಜಿಲ್ಲೆಯ ಕೊಳಗೇರಿ ನಿವಾಸಿಗಳ ಆಧಾರ ಮೇಲೆ ಸಂದರ್ಶನ ಸಮಯದ ಪಟ್ಟಿಗಳನ್ನು ನಿರ್ಮಿಸಲಾಯಿತು. ಬಳ್ಳಾರಿ ಜಿಲ್ಲೆಯ ಕೊಳಗೇರಿ ನಿವಾಸಿಗಳ ಆಧಾರ ಮೇಲೆ ಕ್ಷೇತ್ರಕ್ಕೆ ಹೋಗುವ ಮೊದಲು ನಿಗದಿಪಡಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಪಡೆದುಕೊಂಡ ನಂತರ, ಯಾದೃಚ್ಛಿಕ ಆಧಾರದ ಮೇಲೆ ೨೦ ಕೊಳಗೇರಿಗಳು ಮತ್ತು ೮೪೮೮ ಕುಟುಂಬಗಳಿಂದ ಬಳ್ಳಾರಿ ಜಿಲ್ಲೆಯೊಳಗಿನ ಮಾದರಿ ವಿಷಯಗಳ ಯಾದೃಚ್ಚಿಕವಾಗಿ

೨೦ ಕೊಳಗೇರಿಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಕುಟುಂಬದ ೩೦೦ ನಮೂನೆಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಲಾಗಿದೆ.

ದತ್ತಾಂಶ ವಿಶ್ಲೇಷಣೆ: ಸಂಖ್ಯಾಶಾಸ್ತ್ರದ ವಿಧಾನಗಳನ್ನು ವಿಶ್ಲೇಷಿಸಿ ಮತ್ತು ಅಂಕಿ-ಅಂಶದ ಸಾಧನಗಳಾದ ಸರಾಸರಿ, ಶೇಕಡವಾರು ಮತ್ತು ಬೆಳವಣಿಗೆ ದರದ ಸಹಾಯದಿಂದ ಹಾಗೂ ಸಂಗ್ರಹಿಸಿದ ದತ್ತಾಂಶ ಬಳಸಿಕೊಳ್ಳುವ ಮೂಲಕ ವಿಶ್ಲೇಷಿಸಿದ ಅಧ್ಯಯನವು ಸರಳ ಮತ್ತು ಸ್ಪಷ್ಟ ಶೈಲಿಯಲ್ಲಿ ಪ್ರಸ್ತುತಪಡಿಸಲಾಗಿದೆ. ಕೋಷ್ಟಕಗಳ ಸರಳ ನಕ್ಷೆ ಮೂಲಕ ಇತ್ಯಾದಿ ವಿವರಗಳನ್ನು ತಿಳಿಸಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ಒಟ್ಟು ಆರು ಅಧ್ಯಾಯಗಳನ್ನು ಹೊಂದಿದೆ. ಈ ಆರು ಅಧ್ಯಾಯಗಳು ಈ ಕೆಳಗಿನ ವಿಷಯಗಳನ್ನು ಒಳಗೊಂಡಿವೆ.

* **ಅಧ್ಯಾಯ ಒಂದು:** ಈ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಸಂಶೋಧನಾ ವಿಧಾನದ ಸ್ವರೂಪ ಪ್ರಸ್ತುತ ಪಡಿಸಲಾಗಿದೆ. ಇಲ್ಲಿ ಸಂಶೋಧನೆಗೆ ಒಂದು ತಾತ್ವಿಕ ಪ್ರವೇಶವನ್ನು ಒದಗಿಸಿಕೊಡಲಾಗಿದೆ.

* **ಅಧ್ಯಾಯ ಎರಡು:** ಈ ಸಾಹಿತ್ಯ ಪುನರ್ ಅವಲೋಕನ ಮತ್ತು ಸಮೀಕ್ಷೆಯನ್ನು ಒಳಗೊಂಡಿದೆ. ಈವರೆಗೆ ನಡೆದಿರುವ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ.

* **ಅಧ್ಯಾಯ ಮೂರು:** ಬಳ್ಳಾರಿ ಜಿಲ್ಲೆಯ ಭೌಗೋಳಿಕತೆ, ನಗರದ ಐತಿಹಾಸಿಕ ಹಿನ್ನೆಲೆ ವಿವರಿಸುವ ಪ್ರಯತ್ನ ಮಾಡಲಾಗಿದೆ. ನಗರದ ಜನಸಂಖ್ಯೆಯ ಗುಣಲಕ್ಷಣಗಳು, ಬಳ್ಳಾರಿ ನಗರದ ಕೊಳಗೇರಿಗಳ ಮೂಲಕ ಬೆಳವಣಿಗೆ ಕೊಳಚೆ ಪ್ರದೇಶದ ಪರಿಕಲ್ಪನೆಯನ್ನು ಗ್ರಹಿಸುವ ನೋಟವು ಇಲ್ಲಿ ಗಮನಾರ್ಹ. ಜೊತೆಗೆ ಭಾರತ ಹಾಗೂ ಕರ್ನಾಟಕ ಮತ್ತು ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶಗಳು ಕುರಿತು ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಪ್ರಸ್ತುತ ಸಮಸ್ಯೆಗಳು ಹಾಗೂ ಕೊಳಚೆ ನಿರ್ಮೂಲನಾ ಕಾಯ್ದೆ ಕುರಿತು ವಿಶ್ಲೇಷಿಸಲಾಗಿದೆ.

* **ಅಧ್ಯಾಯ ನಾಲ್ಕು:** ಈ ಅಧ್ಯಾಯವು ಕೊಳಚೆ ಪ್ರದೇಶದ ನಿವಾಸಿಗಳ ಸಮಸ್ಯೆಗಳಿಗೆ ಸಂಬಂಧಿಸಿದೆ. ಇಲ್ಲಿ ಅವರ ಕೌಟಂಬಿಕ ಸಮಸ್ಯೆ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ವಿವರವಿದೆ. ಹಾಗೂ ಆರೋಗ್ಯಜೀವನ ಸ್ಥಿತಿ ಗತಿಗಳು ಮಹಿಳೆಯ ಮತ್ತು ಮಕ್ಕಳ ಶಿಕ್ಷಣ ಸಮಸ್ಯೆಗಳು ವಾಸ್ತವಕ್ಕೆ ವಸತಿ/ನೀರು ನೈರ್ಮಲ್ಯ ಮತ್ತು ಶೌಚಾಲಯ ಸಮಸ್ಯೆಗಳನ್ನು, ಅನುಭವಿಸುವ ತೊಂದರೆಗಳನ್ನು ಸಂಶೋಧನಾ ಪ್ರಬಂಧದಲ್ಲಿ ಪ್ರಕರಣ ಮೂಲಕ ವಿಶ್ಲೇಷಿಸಲಾಗಿದೆ. ಹಾಗೆಯೇ ಬಳ್ಳಾರಿ ನಗರದ ಕೊಳಚೆ ನಿವಾಸಿಗಳ ಸಮಸ್ಯೆ ಕುರಿತು ವಿಶ್ಲೇಷಿಸಲಾಗಿದೆ.

* **ಅಧ್ಯಾಯ ಐದು:** ಕೊಳಚೆ ಪ್ರದೇಶದ ನಿವಾಸಿಗಳ ಅಭಿವೃದ್ಧಿಗೆ ಲಭ್ಯವಿರುವ ಸರ್ಕಾರ ಯೋಜನೆಗಳಾವುವು? ಅನುಷ್ಠಾನಗೊಳಿಸುವ ಸಂಘ-ಸಂಸ್ಥೆ ಪಾತ್ರ ಹೇಗಿದೆ? ಯೋಜನೆಗಳು ಮಹಿಳೆಯರಿಗೆ ಶೈಕ್ಷಣಿಕ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಸೌಲಭ್ಯಗಳ ಕುರಿತು ಅರಿವು ಕಾರ್ಯಕ್ರಮ ಹಾಗೂ ವಸತಿ ಸ್ವಚ್ಛ ನಿರ್ಮೂಲನಾ ಭಾರತ ಅಭಿಯಾನ ಹಾಗೂ ಜನರಿಗೆ ಯೋಜನೆಗಳು ಹೇಗೆ ನೆರವು ಆಗಿವೆ ಹಾಗೂ ಇವುಗಳ ಸಫಲತೆ ಕುರಿತು ಚರ್ಚಿಸಲಾಗಿದೆ.

* **ಅಧ್ಯಾಯ ಆರು:** ಈ ಅಧ್ಯಾಯದಲ್ಲಿ ಸಂಶೋಧನೆಯಿಂದ ಕಂಡುಕೊಂಡ ಫಲಿತಗಳನ್ನು ಹಾಗೂ ಸಲಹೆಗಳನ್ನು ಮುಂದಿನ ಸಾಧ್ಯತೆಗಳನ್ನು ವಿಶ್ಲೇಷಿಸಲಾಗಿದೆ. ಈ ಕುರಿತು ಬಳ್ಳಾರಿ ಕೊಳಚೆ ಪ್ರದೇಶ ನಿವಾಸಿಗಳ ಪರಿಸ್ಥಿತಿ ಸುಧಾರಣೆ ಕುರಿತು ಯೋಜನೆ ಪ್ರಸ್ತಾನೆಯನ್ನು ರೂಪಿಸಲಾಗಿದೆ. ಕೊನೆಯಲ್ಲಿ ಅನುಬಂಧಗಳ ಜೊತೆಗೆ ಅಧ್ಯಯನಕ್ಕೆ ಸಂಬಂಧಿದ ಪರಾಮರ್ಶನ ಗ್ರಂಥಗಳು ಮತ್ತು ಕೊಳಗೇರಿಗಳು ಛಾಯಚಿತ್ರಗಳನ್ನು ನೀಡಲಾಗಿದೆ. ಪ್ರಬಂಧದ ಮಧ್ಯೆ ಕೋಷ್ಟಕ ಹಾಗೂ ಅಂಕಿ ಅಂಶಗಳ ಪಟ್ಟಿಯನ್ನು ಕೊಡಲಾಗಿದೆ.

❖❖❖

ಅಧ್ಯಾಯ : ಎರಡು

ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳು ಮತ್ತು ಕೊಳಚೆ ಪ್ರದೇಶದ ನಿವಾಸಿಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರುತಿಸುವ ಪ್ರಯತ್ನವಿದೆ. ಹಾಗೂ ಅದರ ಪರಿಣಾಮವನ್ನು ದೃಢಪಡಿಸುವ ಉದ್ದೇಶವನ್ನು ಹೊಂದಿರುವುದರಿಂದ ಸಂಬಂಧಿತ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನಾ ಅಧ್ಯಯನಗಳನ್ನು ಇಲ್ಲಿ ಸಮೀಕ್ಷೆ ರೂಪದಲ್ಲಿ ಪರಾಮರ್ಶಿಸಲಾಗಿದೆ. ಪ್ರಸ್ತುತ ಸಂಶೋಧನಾ ಅಧ್ಯಯನಗಳ ಅವಲೋಕನದಿಂದ ತಿಳಿದುಬರುವ ಅಂಶವೆಂದರೆ, ಕೊಳಚೆ ಪ್ರದೇಶದ ಸಮಸ್ಯೆಗಳ ಕುರಿತು ನಡೆದಿರುವ ಅಧ್ಯಯನಗಳು ಅತಿ ವಿರಳವಾಗಿವೆ. ಆದರೆ ಕೊಳಚೆ ಪ್ರದೇಶಗಳ ವಿವಿಧ ವಿಚಾರಗಳ ಬಗ್ಗೆ ಅಧ್ಯಯನ ನಡೆದಿದೆ. ಅದರೆ ಪ್ರಸ್ತುತ ಸಂಶೋಧನಾ ವಿಷಯದ ಮೇಲೆ ನೇರವಾಗಿ ಬೆಳಕು ಚೆಲ್ಲದಿದ್ದರೂ ಪರೋಕ್ಷವಾಗಿ ಅಧ್ಯಯನ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಕೊಳಚೆ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿದ್ವಾಂಸರ ಚಿಂತನೆಗಳನ್ನು ಹಾಗೂ ಈವರೆಗೆ ನಡೆದಿರುವ ಅಧ್ಯಯನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

ದೇಸಾಯಿ ಮತ್ತು ಪಿಳ್ಳೈ (೧೯೭೨) ಅವರ ಪುಸ್ತಕವಾದ 'ಇಂಡಿಯನ್ ಸ್ಲಂ ಆಫ್ ಪ್ರೊಫೈಲ್' ಎಂಬುದನ್ನು ಬಾಂಬೆ ವಿಶ್ವವಿದ್ಯಾನಿಲಯವು ಪ್ರಕಟಿಸಿದೆ. ಬಾಂಬೆ, ಕೊಳಗೇರಿಗಳಲ್ಲಿನ ಜೀವನಕ್ಕೆ ಸ್ಪಷ್ಟವಾದ ಒಳನೋಟವನ್ನು ನೀಡುತ್ತದೆ. ವಿಶೇಷವಾಗಿ ಬಾಂಬೆಯಲ್ಲಿನ ಸ್ಲಂ ಜೀವನ ಈ ಅಧ್ಯಯನದ ಪ್ರಕಾರ ಎಪ್ಪತ್ತರ ದಶಕದ ಆರಂಭದಲ್ಲಿ ಕೊಳಗೇರಿ ನಿವಾಸಿಗಳ ಆರ್ಥಿಕ ವಿವರವನ್ನು ಸಂಶೋಧಕರು ಒದಗಿಸಿರುವುದು ಗಮನಾರ್ಹ.

ಬಾಂಬೆಯ ಕೊಳಗೇರಿಗಳಲ್ಲಿ ಜೀವನ ಶೋಚನೀಯವಾಗಿದೆ. ಹಲವು ಕೆಟ್ಟ ಪರಿಸ್ಥಿತಿಗಳಿಗೆ ಒಳನೋಟವನ್ನು ಒದಗಿಸುತ್ತದೆ. ಅಲ್ಲದೆ, ನೈಸರ್ಗಿಕ ಹೆಚ್ಚಳ ಮತ್ತು ವಲಸೆಯ ಮೂಲಕ ತೃತೀಯ ಜಗತ್ತಿನ ನಗರಗಳು ಜನಸಂಖ್ಯೆಯೊಂದಿಗೆ ಬೆಳೆಯುತ್ತಿವೆ ಎಂದು ಅವರು ಭಾವಿಸುತ್ತಾರೆ. ವಸತಿಗೆ ಸಂಬಂಧಿಸಿರುವಂತೆ, ಕುಡಿಯುವಿಕೆಯನ್ನು ಅದನ್ನು ಪರಿಹರಿಸುವ ನೈಸರ್ಗಿಕ ಮಾರ್ಗವಾಗಿದೆ. ಸ್ಕ್ವಾಟರ್ ವಸಾಹತುಗಳು ಈ ನಗರಗಳ ಸರ್ವತ್ರ ಗುಣಲಕ್ಷಣಗಳನ್ನು

ತೋರುತ್ತದೆ ಎನ್ನಬಹುದು. ಹಾಗಾಗಿ ನೀತಿ ನಿರ್ಮಾಪಕರು ಕೊಳಗೇರಿಗಳನ್ನು ಸುಧಾರಿಸುವ ಬದಲು ಯೋಚಿಸುತ್ತಿದ್ದಾರೆ. ಇದಲ್ಲದೆ ಈ ಪುಸ್ತಕದ ಲೇಖಕರು ಬಾಂಬೆ ನಗರ ೧೫ರಲ್ಲಿನ ಕೊಳಗೇರಿಗಳ ನಿರ್ಮೂಲನೆಗೆ ಸಂಬಂಧಿಸಿದಂತೆ ಸರ್ಕಾರಿ ಕ್ರಮ ಮತ್ತು ಕಾರ್ಯಕ್ರಮ ವಿಮರ್ಶಾತ್ಮಕ ವಿಶ್ಲೇಷಣೆ ಮಾಡಿದ್ದು ಶ್ಲಾಘನೀಯವಾಗಿದೆ.

ಡುಬ್ ಎಂಬ ವಿದ್ವಾಂಸರು ೧೯೭೩ರಲ್ಲಿ ಆಗ್ರಾ ನಗರದ ನಗರ ಬಳಕೆಯ ಮಾದರಿಯನ್ನು ವಿಶ್ಲೇಷಿಸಿದ್ದಾರೆ. ಆಗ್ರಾದಲ್ಲಿ ಸುಮಾರು ೨೦ ಪ್ರತಿಶತದಷ್ಟು ಅಭಿವೃದ್ಧಿ ಹೊಂದಿದ್ದ ಭೂಮಿ ದುರ್ಬಳಕೆಗೆ ಕಾರಣವಾಗಿದೆ ಎಂದು ಅವರು ಅಂದಾಜು ಮಾಡಿದ್ದಾರೆ. ಅದರಲ್ಲಿ ವಸತಿ ದುರ್ಬಳಕೆ ೧೪೫ರಷ್ಟಿದ್ದು ನಗರದ ಹೃದಯ ಭಾಗದಲ್ಲಿ ಮತ್ತು ಆರೋಗ್ಯಕರ ಮತ್ತು ಸಮತೋಲನ ನಗರ ಜೀವನ ೧೬ ರಚಿಸುವ ದೃಷ್ಟಿಯಿಂದ ಫಿಂಚ್ ವಲಯದಲ್ಲಿ ದುರುಪಯೋಗವನ್ನು ನಿಯಂತ್ರಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದ್ದಾರೆ.

ದತ್ ಅವರು ೧೯೭೭ರಲ್ಲಿ ಗ್ರಾಮೀಣ ಜನರು ಸಾಮೂಹಿಕ ವಲಸೆ ಮತ್ತು ಕೊಳಚೆ ಪ್ರದೇಶಗಳ ಪರಿಣಾಮಗಳು ಬೆಳವಣಿಗೆಯೊಂದಿಗೆ ನಿರಾಶ್ರಿತರ ಒಳಹರಿವು ರಚಿಸಿದ್ದಾರೆ. ಕಲ್ಕತ್ತಾದ ಸಂಕೀರ್ಣ ಸಾಮಾಜಿಕ ಪರಿಸರ ವಿಜ್ಞಾನದ ಸಮಸ್ಯೆಯನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಅವರು ಮುಖ್ಯವಾಗಿ ಪಶ್ಚಿಮಬಂಗಾಳದ ಪ್ರಾದೇಶಿಕ ಭೂರಾಜಕೀಯ ಹಿನ್ನೆಲೆಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ಬಡತನ ಮತ್ತು ಹೆಂಡತಿಯ ಉದ್ಯೋಗಿಯ ಬಹಳ ಸೀಮಿತವಾದ ಹಾಗೂ ಪರಮಾಣು ಕುಟುಂಬದ ರಚನೆಯನ್ನು ಅಳವಡಿಸಿಕೊಳ್ಳುವುದುಂಟು. ಇದು ಸಾಂಪ್ರದಾಯಿಕವಾಗಿ ನಿಕಟ ರಕ್ತಸಂಬಂಧ ಸಹಿತ ತಕ್ಷಣದ ಕಾರಣದಿಂದಾಗಿ ಬಡವರ ನಿವಾಸಿಗಳಿಗೆ ಸಾಮಾಜಿಕ ಬದಲಾವಣೆಯು ಮಹತ್ತರವಾಗಿ ಎದ್ದು ಬಂದಿದೆ ಎಂದು ಅವರು ತೋರಿಸಲು ಪ್ರಯತ್ನಿಸಿದ್ದಾರೆ.

ದೆಹಲಿವಾಲಾ ಅವರು ೧೯೯೭ರಲ್ಲಿ ಭಾರತದ ಸನ್ನಿವೇಶದಲ್ಲಿ ಕೊಳಗೇರಿಗಳ ಬಗ್ಗೆ ತೀರಾ ಇತ್ತೀಚಿನ ಸಮಗ್ರ ಮತ್ತು ಆಸಕ್ತಿದಾಯಕ ಅಧ್ಯಯನವನ್ನು ಮಾಡಿದ್ದಾರೆ. ಈ ಪುಸ್ತಕದಲ್ಲಿ ಅವರು ಗ್ರಾಮೀಣ ಬಡತನ ಮತ್ತು ಕೊಳಗೇರಿಗಳ ನಿರಂತರ ಬೆಳವಣಿಗೆಯ ವಿದ್ಯಮಾನಗಳ ನಡುವಿನ ಕ್ರಿಯಾಶೀಲಯತೆಯನ್ನು ಪರಿಶೋಧಿಸಿದ್ದಾರೆ. ಗ್ರಾಮೀಣ ಬಡತನದಂತಹ ಮೂಲಭೂತ ಮತ್ತು ಪ್ರಮುಖ ಅಂಶಗಳನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ ನಾವು ಕೊಳಗೇರಿ ಬೆಳವಣಿಗೆಯ ಸಮಸ್ಯೆಯನ್ನು ಮತ್ತು ಸಮಾಜದ ಮೇಲೆ ಅದರ ಪ್ರಭಾವವನ್ನು ಪರಿಹರಿಸಲಾಗುವುದಿಲ್ಲ ಎಂದು ಅವರು ಪ್ರಾಮಾಣಿಕವಾಗಿ ನಂಬುತ್ತಾರೆ. ಈ ನಿಟ್ಟಿನಲ್ಲಿ ಸ್ವಾತಂತ್ರ್ಯದ ಮುಂಚೆ ಮತ್ತು ನಂತರ ಗ್ರಾಮೀಣ ಬಡತನದ ಕೊಳಗೇರಿಗಳ ಬೆಳವಣಿಗೆಯನ್ನು ಅವರು ಗಮನಿಸಿದ್ದಾರೆ ವಿಶೇಷವಾಗಿ ೧೯೯೧ ರ ಆರ್ಥಿಕ ಸುಧಾರಣೆಗಳು ಮತ್ತು ಜಾಗತೀಕರಣದ ನಂತರ ಅವರು ವೈಯಕ್ತಿಕ ಹಿನ್ನೆಲೆ ಗಾತ್ರ ಸಾಮಾಜಿಕ-ಸಂಯೋಜನೆ, ಶೈಕ್ಷಣಿಕ ಗುಣಮಟ್ಟ ಆರ್ಥಿಕ

ಗುಣಲಕ್ಷಣಗಳೂ ವಸತಿ ಘಟಕಗಳು ಮತ್ತು ಉದ್ಯೋಗದ ಸ್ಥಾನಗಳಂತಹ ಕೊಳಗೇರಿ ನಿವಾಸಿಗಳ ಸಾಮಾಜಿಕ-ಆರ್ಥಿಕ ಪ್ರೊಫೈಲುಗಳಿಂದ ತಮ್ಮ ಅಧ್ಯಯನವನ್ನು ಇನ್ನಷ್ಟು ವಿಸ್ತಾರಗೊಳಿಸಿದ್ದಾರೆ. ಭಾರತದಲ್ಲಿನ ಕೊಳಗೇರಿಗಳ ಬೆಳೆಯುತ್ತಿರುವ ವಿದ್ಯಮಾನಕ್ಕೆ ಮುಖ್ಯ ಕಾರಣವೆಂದರೆ ಸಣ್ಣ ಪಟ್ಟಣ ಮತ್ತು ಗ್ರಾಮಗಳಿಂದ ವಲಸಿಗರು ವಲಸೆ ಹೋಗುತ್ತಾರೆ ಎಂದು ಈ ಅಧ್ಯಯನದ ಸಂಶೋಧಕರು ಭಾವಿಸುತ್ತಾರೆ. ಕೊಯಿಹಾಪ್ರರ್ ನಗರದ ಪ್ರಕರಣವನ್ನು ಪರಿಗಣಿಸುವಾಗ ಈ ಪುಸ್ತಕದ ಲೇಖಕರು ಬಡತನದ ಅಸಮರ್ಪಕ ಮೂಲಗಳಿಂದ ಹೊರತುಪಡಿಸಿದ್ದಾರೆ.

ಡಿಸೋಜಾ ೧೯೭೮: ಭಾರತದಲ್ಲಿ ಮೆಟ್ರೋಪಾಲಿಟನ್ ನಗರಗಳ ಯೋಜಿತ ಮತ್ತು ಅನಾಹುತದ ಬೆಳವಣಿಗೆಗೆ ಕಾರಣವಾಗಿದ್ದು, ದುಷ್ಪರಿಣಾಮ ಬೀರಿರುವ ಪ್ರದೇಶಗಳ ಶೀಘ್ರ ಅಭಿವೃದ್ಧಿಗೆ ಕಾರಣವಾಗಿದೆ. ಒಟ್ಟು ನಗರ ಜನಸಂಖ್ಯೆಯ ಐದನೇ ಒಂದು ಭಾಗದಷ್ಟು ೨೨ ಮಿಲಿಯನ್ ಕೊಳಗೇರಿ ಅಥವಾ ವಸಾಹತುಗಳಲ್ಲಿ ವಾಸಿಸುತ್ತಿದ್ದಾರೆ. ಅಹಮದಾಬಾದನಲ್ಲಿ ಒಟ್ಟು ನಗರದ ಜನಸಂಖ್ಯೆಯಲ್ಲಿ ಸುಮಾರು ೪೫ ಪ್ರತಿಶತದಷ್ಟು ಜನರು ಕೊಳಗೇರಿಗಳಲ್ಲಿ ವಾಸಿಸುತ್ತಿದ್ದರು. ಮತ್ತು ನಗರ ಬಡತನದ ಹಿನ್ನೆಲೆಯಲ್ಲಿ ಕೊಳಗೇರಿಗಳ ಕಳಪೆ ಮತ್ತು ಸಾಮಾಜಿಕ ಪರಿಸರ ವಿಜ್ಞಾನದ ಗುಣಲಕ್ಷಣಗಳಿಗಾಗಿ ನಗರ ಯೋಜನೆ, ವಸತಿ ನವೀಕರಣದ ಸ್ವರೂಪವನ್ನು ಅವರು ಅಧ್ಯಯನ ಮಾಡಿದ್ದಾರೆ.

ದತ್ತಾರಿ ಅವರು ೧೯೭೮ರಲ್ಲಿ ಮದ್ರಾಸ್ ನಗರ ರಚನೆಯ ವಿವಿಧ ತಾಂತ್ರಿಕಾಂಶಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅವರು ನಗರದಲ್ಲಿ ಉದ್ಯೋಗದ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ್ದಾರೆ. ಮತ್ತು ಸಾಂದ್ರತೆಯ ರಚನೆಯೊಂದಿಗೆ ಸಂಬಂಧ ಹೊಂದಿದ್ದಾರೆ. ನಗರ ಪ್ರದೇಶಗಳಲ್ಲಿ ೪೦ ಪ್ರತಿಶತವು ಇನ್ನೂ ಉಳಿಸಲ್ಪಟ್ಟಿಲ್ಲ ಮತ್ತು ಒಟ್ಟು ಜನಸಂಖ್ಯೆಯಲ್ಲಿ ೨೫ ಪ್ರತಿಶತದಷ್ಟು ಜನರು ದುರ್ಬಲವಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆಂದು ಅವರು ಗಮನಿಸಿದ್ದಾರೆ. ಸಾಮಾನ್ಯವಾಗಿ ವಸತಿ ಸ್ಥಿತಿ ಬಹಳ ಅತೃಪ್ತಿಕರವಾಗಿದೆ.

ಧಡ್ವೆ ಅವರ ಪ್ರಕಾರ (೧೯೮೯): ಇವರು ಡಾಕ್ಟರೇಟ್ ಸಿದ್ಧಾಂತದ ಕುರಿತಾಗಿ ಆಸಕ್ತಿದಾಯಕ ಮತ್ತು ಶೈಕ್ಷಣಿಕ ಅಧ್ಯಯನ ಮಾಡಿದ್ದಾರೆ. ಭಾರತದಲ್ಲಿ ಸಾಮಾನ್ಯ ಮತ್ತು ಕರ್ನಾಟಕ ಸೇರಿದಂತೆ ಭಾರತದ ಕೊಳಗೇರಿಗಳ ಚಿತ್ರಣವನ್ನು ನಿರ್ದಿಷ್ಟವಾಗಿ ಹೇಳುವುದಾದರೆ, ಅದರಲ್ಲೂ ಗುಲ್ಬರ್ಗಾವನ್ನು ಇದು ನೀಡುತ್ತದೆ. ಈ ಅಧ್ಯಯನದಲ್ಲಿ ಸಂಶೋಧಕರು ಆಯ್ದ ಹತ್ತು ವಿವಿಧ ಕೊಳಗೇರಿಗಳಿಂದ ಪಡೆದ ೨೦೦ ಮನೆಗಳನ್ನು ಆಯ್ಕೆ ಮಾಡಿದ್ದಾರೆ. ಅಧ್ಯಯನದ ಐತಿಹಾಸಿಕ ಹಿನ್ನೆಲೆಯಷ್ಟು ಒದಗಿಸುವುದರ ಹೊರತಾಗಿ ಭಾರತ ಮತ್ತು ಕರ್ನಾಟಕದಲ್ಲಿ ಕೊಳಗೇರಿಗಳ ಮೂಲ ಮತ್ತು ಬೆಳವಣಿಗೆಯ ಬಗ್ಗೆ ಸಂಶೋಧಕರು ಬೆಳಕು ಚೆಲ್ಲಿದ್ದಾರೆ.

ಗಡ್ಗಿಲ್ (೧೯೫೫): ಅವರ ಪ್ರಕಾರ ಪೂನಾದಲ್ಲಿ ಕೊಳಗೇರಿ ತೆರವು ಮತ್ತು ವಸತಿ ಸಮಸ್ಯೆಗಳನ್ನು ಗುರುತಿಸಿದ್ದಾರೆ. ಅವರ ಅಧ್ಯಯನದ ಸಮೀಕ್ಷೆಯಂತೆ ಕೊಳಗೇರಿಗಳು ನೀರು ನೈರ್ಮಲ್ಯದ ಪರಿಸ್ಥಿತಿಗಳು ಮತ್ತು ವಸತಿ ಕೊರತೆ ವ್ಯಾಖ್ಯಾನಕ್ಕೆ ಸೀಮಿತವಾಗಿದೆ. ವಸತಿ ಮತ್ತು ಸಮರ್ಪಕ ಸಂರಕ್ಷಣೆ ಸೇವೆಗಳಿಗೆ ಹೆಚ್ಚಿನ ಸ್ಥಳಾವಕಾಶ ಒದಗಿಸುವಂತೆ ಅವರು ಸಲಹೆ ನೀಡಿದ್ದಾರೆ.

ಘೋಷ್ ಮತ್ತು ಇತರರು (೧೯೭೨): ಕಲ್ಕತ್ತಾದ ವಿವರವಾದ ಸಮೀಕ್ಷೆಯನ್ನು ಭೂ-ಬಳಕೆಯ ಮಾದರಿಯನ್ನು ಮೆಟ್ರೋಪಾಲಿಟನ್ ನಗರದ ಉಪಯುಕ್ತತೆ ಸೇವೆಗಳು, ವಸತಿ ಪರಿಸ್ಥಿತಿಗಳು ಮತ್ತು ಸುಂದರ ವ್ಯವಸ್ಥೆಗೆ ವಿಶೇಷ ಉಲ್ಲೇಖವನ್ನು ನೀಡಿದ್ದಾರೆ. ರೈಲ್ವೆ ದಾಟುವಿಕೆಗಳು, ಸ್ಥಳೀಯ ಬಸ್ ಡಿಪೋ ಮತ್ತು ಕೊಳಚೆ ಪ್ರದೇಶದ ಹೃದಯಭಾಗದಲ್ಲಿರುವ ಕಡಿಮೆಸುತ್ತಿವರಿದ ಪ್ರದೇಶಗಳಲ್ಲಿ ಮತ್ತು ಫ್ರಿಂಜ್ ವಲಯದ ೨೭ದಲ್ಲಿ ಹೊಸಕೊಳಗೇರಿಗಳ ಬೆಳೆವಣೆಗೆಯ ಬಳಿ ಸ್ಕಾಟರ್ ವಸಾಹತುಗಳ ಪ್ರಮುಖ ಸಾಂದ್ರತೆಯು ಸಂಭವಿಸುತ್ತದೆ ಎಂದು ಅವರು ಕಂಡು ಕೊಂಡಿದ್ದಾರೆ.

ಗೌಡ (೧೯೭೭): ಅವರು ಸ್ವಾತಂತ್ರ್ಯೋತ್ತರ ಅವಧಿಯ ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಬೆಳವಣಿಗೆಯ ಬಗ್ಗೆ ಸಮಗ್ರ ಅಧ್ಯಯನ ಮಾಡಿದ್ದಾರೆ. ನಗರದ ಬೆಳವಣೆಗೆ ಮತ್ತು ಮೂಲಭೂತ ಸೌಕರ್ಯಗಳೊಂದಿಗಿನ ಸಮಸ್ಯೆಗಳನ್ನು ಅವರು ವಿಶ್ಲೇಷಿಸಿದ್ದಾರೆ ಮತ್ತು ಸುಮರು ೧,೨೦,೦೦೦ ಸ್ಲಮ್ ಪ್ರದೇಶಗಳನ್ನು ೧,೫೦,೦೦೦ ಜನರಿದ್ದಾರೆ ಎಂದು ಗುರುತಿಸಿದ್ದಾರೆ. ಉತ್ತಮ ವಸತಿ ಸೌಕರ್ಯಗಳನ್ನು ಮತ್ತು ದಟ್ಟಣೆಯ ಪ್ರದೇಶಗಳಿಗೆ ಪುನರಾಭಿವೃದ್ಧಿ ಅಗತ್ಯವನ್ನು ಅವರು ಗಮನಿಸುತ್ತಾರೆ. ೧೯೬೧-೭೨ರಲ್ಲಿ ಸಮುದಾಯ ಅಭಿವೃದ್ಧಿಯ ಯೋಜನೆಯನ್ನು ಕೈಗೊಂಡ ನಗರದ ಸುಧಾರಣೆ ಟ್ರಸ್ಟ್ ಮಂಡಳಿಯ ಸಾಧನೆಗಳನ್ನು ಅವರು ಪರಿಶೀಲಿಸಿದ್ದಾರೆ.

ಹೋಸೆಲಿಟ್ (೧೯೫೫): ಇವರು ಭಾರತದಲ್ಲಿನ ನಗರ ಸಮಸ್ಯೆಗಳನ್ನು ಕುರಿತಂತೆ ಸಮಗ್ರ ಅಧ್ಯಯನ ಮಾಡಿದ್ದಾರೆ. ಉಪ-ಸ್ಟೈಂಡಾರ್ಡ್ ವಸತಿ ಸಂಕೀರ್ಣ ಕೊಳಚೆಗಳು ಮತ್ತು ಸೌಲಭ್ಯಗಳ ಕೊರತೆ ಭಾರತೀಯ ಮಟ್ರೋಪಾಲಿಟ್ ಕೇಂದ್ರಗಳನ್ನು ಎದುರಿಸುತ್ತಿರುವ ಅವರು ಭಾರತೀಯ ನಗರಗಳಲ್ಲಿ ನಗರ ಸಾಂದ್ರತೆ ಹೆಚ್ಚುತ್ತಿರುವ ಪ್ರವೃತ್ತಿಯು ಅಂತಹ ಉಪಗುಣಮಟ್ಟದ ಅಭಿವೃದ್ದಿಯ ಕಾರಣದಿಂದಾಗಿ ಉಂಟಾದ ಸಮಸ್ಯೆಯಾಗಿದೆ ಎಂಬ ಅಭಿಪ್ರಾಯವನ್ನು ಹೊರ ಚೆಲ್ಲಿದ್ದಾರೆ.

ಹಂಟರ್ ೧೯೬೪ರಲ್ಲಿ ಕೊಳಗೇರಿ ನಿವಾಸಿಗಳು ನಗರ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಹೇಗೆ ಸೃಷ್ಟಿಸುತ್ತಾರೆ ಮತ್ತು ನಗರ ಪ್ರದೇಶಗಳ ಸಾಮಾಜಿಕ ಸಮತೋಲನವನ್ನು ಹೇಗೆ ಸವಾಲು ಎಂಬುದನ್ನು ತಿಳಿಸಿದ್ದಾರೆ.

'ಭಾರತದಲ್ಲಿ ಸಾಮಾಜಿಕ ಸಮಸ್ಯೆ ಮತ್ತು ವಿಘಟನೆಗಳು' ಎಂಬ ಪುಸ್ತಕದಲ್ಲಿ **ಚ.ನ. ಶಂಕರರಾವ್** ಅವರು 'ಕೊಳಚೆ ಪ್ರದೇಶಗಳು ಸಮಸ್ಯೆ' ಎಂಬ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಅನಿಯಂತ್ರಿತ ನಗರೀಕರಣದ ದುಷ್ಪಲದಂತೆ ಇರುವ ಕೊಳಚೆ ಪ್ರದೇಶಗಳು ಪ್ರದೇಶದ ವ್ಯಾಖ್ಯಾನ ಮತ್ತು ಗುಣಲಕ್ಷಣಗಳು ಭಾರತದ ಕೊಳಚೆಗಳು ಹುಟ್ಟಿಕೊಳ್ಳಲು ಕಾರಣವಾಗಿ ಸಾಮಾಜಿಕ ದುಷ್ಪರಿಣಾಮಗಳು, ಈ ಪ್ರದೇಶಗಳ ಸಮಸ್ಯೆಗಳಿಗೆ ಪರಿಹಾರ ಕಾರ್ಯಕ್ರಮಗಳು, ಕೊಳಚೆ ಪ್ರದೇಶಗಳ ಸುಧಾರಣೆ ಮತ್ತು ನಿರ್ಮೂಲನಾ ಸಲಹೆಗಳನ್ನು ಕುರಿತು ಚರ್ಚಿಸಿದ್ದಾರೆ.

ಎಸ್. ರಾಜಶೇಖರ ಅವರ 'ಸಾಮಾಜಿಕ ಸಮಸ್ಯೆಗಳು' ಎಂಬ ಕೃತಿಯಲ್ಲಿ ಕೊಳಚೆ ಪ್ರದೇಶ ಎಂಬ ಲೇಖನವಿದೆ. ಇದರಿಂದ ಒಂದು ದೇಶದಲ್ಲಿನ ಕೊಳಚೆ ಪ್ರದೇಶ ಮತ್ತೊಂದು ದೇಶದ ಕೊಳಚೆ ಪ್ರದೇಶದಿಂದ ಅನೇಕ ವಿಧದಲ್ಲಿ ಭಿನ್ನವೆಂದು ಕಂಡು ಬರುತ್ತವೆ. ಇವುಗಳ ನಡುವೆ ಅನೇಕ ವ್ಯತ್ಯಾಸಗಳನ್ನು ಗುರುತಿಸಬಹುದು. ಅಂತೆಯೇ ಎಲ್ಲ ದೇಶದ ಕೊಳಚೆ ಪ್ರದೇಶಗಳು ಒಂದೇ ಎಂದೂ ಹೇಳಲಾಗದು. ಆದರೂ ಸಹ ಕೊಳಚೆ ಪ್ರದೇಶದಲ್ಲಿ ಜೀವನದ ಕೆಲವು ಲಕ್ಷಣಗಳು ಎಲ್ಲೆಡೆ ಕಾಣುವಂತವು. ಅಸಮರ್ಪಕ ವಸತಿ ಮೂಲಸೌಲಭ್ಯಗಳ ಕೊರತೆ ಜನದಟ್ಟಣೆಯಿಂದ ಕೂಡಿ ಕಿಷ್ಕಿಂದವೆನ್ನಿಸಿದ ಪರಿಸರ ಇತ್ಯಾದಿ ಕೊಳಚೆ ಪ್ರದೇಶದ ಲಕ್ಷಣಗಳೆಂದು ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ.

ಎಂ. ನಾರಾಯಣ ಅವರ 'ನಗರ ಸಮಾಜಶಾಸ್ತ್ರ' ಎಂಬ ಕೃತಿಯಲ್ಲಿ ಕೊಳಚೆ ಪ್ರದೇಶ ಎಂಬ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಕೊಳಚೆ ಎಂಬ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಕೊಳಚೆ ಪ್ರದೇಶ ವ್ಯಾಖ್ಯಾನ ಭಾರತದಲ್ಲಿ ಕೊಳಚೆ ಪ್ರದೇಶಗಳು ಅದರ ಲಕ್ಷಣಗಳು ಮತ್ತು ಅದಕ್ಕೆ ಇರುವ ಕಾರಣಗಳ ಕುರಿತು ಚರ್ಚಿಸಿದ್ದಾರೆ. ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಅಲ್ಲಿನ ನಿವಾಸಿಗಳೇ ಕಾರಣ. ಮೊದಲನೆಯದಾಗಿ ಕೊಳಚೆ ಪ್ರದೇಶದ ನಿವಾಸಿಗಳು ಚೊಕ್ಕಟಾಗಿ ಉತ್ತಮ ಬಾಳುವೆ ನಡೆಸಲು ಬಯಸುವುದಿಲ್ಲ. ಆರೋಗ್ಯ ಮತ್ತು ನೈರ್ಮಲ್ಯದ ಪ್ರಜ್ಞೆ ಅವರಲ್ಲಿರುವುದು ತುಂಬಾ ವಿರಳ.

ಕೊಳಚೆ ಪ್ರದೇಶಗಳಲ್ಲಿ ಇರುವವರು ನಿರ್ಮೂಲನೆ ಮಾಡಿ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು. ಆದರೆ ಅವರು ಸೋಮಾರಿಗಳು. ಎರಡನೆಯದಾಗಿ ಸರ್ಕಾರ ಮತ್ತು ಸ್ಥಳೀಯ ಸಂಘ ಸಂಸ್ಥೆಗಳು ಈ ನಿವಾಸಿಗಳಿಗೆಂದೇ ನಿರ್ಮಿಸಿರುವ ಉತ್ತಮ ಪಡಿಸಿಕೊಳ್ಳಬಹುದು. ಆದರೆ ಸೌಲಭ್ಯಗಳನ್ನು ಹೊಂದಿರುವ ವಸತಿಗಳನ್ನು ದೊರಕಿಸಿದ್ದರೂ ಕೊಳಚೆ ಪ್ರದೇಶದ ನಿವಾಸಿಗಳೂ ಅಲ್ಲಿ ವಾಸಿಸಲು ನಿರಾಕರಿಸುತ್ತಾರೆ. ಹೀಗಾಗಿ ನಿವಾಸಿಗಳ ವರ್ತನೆ, ಕೊಳಚೆ ಪ್ರದೇಶದ ಬಹುತೇಕ ನಿವಾಸಿಗಳು ಉತ್ತಮ ವಸತಿಗೆ ಹೋಗಲು ನಿರಾಕರಿಸುತ್ತಾರೆ. ಅವರಿಗಾಗಿ ನಿರ್ಮಿಸಿರುವ ಉತ್ತಮ ಮಟ್ಟದ ಗೃಹಗಳಿಗೆ ಬದಲು ಹಳೆಯ ಶಿಥಿಲಗೊಂಡ ಗುಡಿಸಲುಗಳಲ್ಲಿ ವಾಸಿಸಲು ಇಷ್ಟಪಡುತ್ತಾರೆ. ಭಾರತದ ಜನತೆ ಅದರಲ್ಲೂ

ಕಡಿಮೆ ಆದಾಯದವರು ಪೌರಪ್ರಜ್ಞೆಯನ್ನು ಹೊಂದಿಲ್ಲ. ಅವರು ಎಲ್ಲೆ ಇದ್ದರೂ ಅವರ ಮನೋಧರ್ಮವನ್ನು ಬಿಡುವುದಿಲ್ಲ. ಅವರನ್ನು ಗಂಭೀರ ಸುಸಜ್ಜಿತ ಮನೆಗಳಲ್ಲಿ ಇರಿಸಿದ್ದರೂ ಈ ಮನೆಗಳನ್ನು ಕೊಳಕಿನ ಆಗರವಾಗಿಸುತ್ತಾರೆ ಎಂದು ಹಲವು ವಿಚಾರಗಳನ್ನು ಚರ್ಚಿಸಿರುವರು.

೧೯೫೭ ಫಲಿತಾಂಶದ ಪ್ರಕಾರ: ಸಾಮಾನ್ಯವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೊಳಗೇರಿಯೆಂದರೆ ವ್ಯಾಪಾರ ಕೇಂದ್ರಿತ ಜಿಲ್ಲೆಗೆ ಸಮೀಪದಲ್ಲಿ ಬದಲಾವಣೆಗೆ ಒಳಪಡುತ್ತಿರುವ ಒಂದು ಪ್ರದೇಶ. ಸುಧಾರಿಸಿದ ವಲಸೆಗಾರರು ಆಶ್ರಯಿಸಿದ ಪ್ರದೇಶವಾಗಿದೆ. ಒಂದು ಕಾಲದಲ್ಲಿ ಸಮರ್ಪಕವೆನಿಸಿದ ವಸತಿ ಇದಾಗಿತ್ತು. ಇಂದು ಕಡಿಮೆ ಬಾಡಿಗೆ ಹಾಗೂ ಸರಿಯಾದ ನಿರ್ವಹಣೆ ಇಲ್ಲದೇ ದುಸ್ಥಿತಿ ತಲುಪಿರುತ್ತೇವೆ. ಭಾರತೀಯ ಕೊಳಗೇರಿಯ ಪರಿಸರವು ಪಾಶ್ಚಿಮಾತ್ಯ ಕೊಳಗೇರಿಗಿಂತ ಭಿನ್ನವಾಗಿದೆ. ಆಂಗ್ಲ ಭಾರತೀಯ ಅಂದಾಜಿನಲ್ಲಿ ಕೊಳಗೇರಿಯ ಬಗ್ಗೆ ಹೇಳುವುದಾದರೆ ಇದನ್ನು ಯಾವುದೇ ಬೆಳವಣಿಗೆಯಿಲ್ಲದ ವಸಾಹತು ಎನ್ನುಬಹುದು.

೧೯೯೧ರ ಸಮೀಕ್ಷೆಯ ಪ್ರಕಾರ: ನಗರ ಪ್ರದೇಶಗಳಲ್ಲಿ ಜನಸಂಖ್ಯಾ ಹಂಚಿಕೆಯ ಪಟ್ಟಿಯಲ್ಲಿ ಗುಜರಾತ ರಾಜ್ಯ ಪ್ರಥಮ ಸ್ಥಾನದಲ್ಲಿರುತ್ತದೆ. ೪೧% ಜನಸಂಖ್ಯೆಯ ಪಟ್ಟಣ ಮತ್ತು ನಗರಗಳಲ್ಲಿ ವಾಸಿಸುತ್ತಾರೆ. ೧೯೮೧ರಲ್ಲಿ ಮಹಾರಾಷ್ಟ್ರ ಹಾಗೂ ತಮಿಳುನಾಡು ಪ್ರಥಮ ಹಾಗೂ ದ್ವಿತೀಯ ಸ್ಥಾನದಲ್ಲಿದ್ದವು. ಆದರೆ ಗುಜರಾತ್ ಅವರ ಜನಸಂಖ್ಯೆಯನ್ನು ದಾಟಿ ೧೯೯೧ರ ಅಂತ್ಯದಲ್ಲಿ ನಗರ ಜನಸಂಖ್ಯೆಯಲ್ಲಿ ೩೮% ೭% ಹಾಗೂ ೩೪.೨% ಆಗಿರುತ್ತದೆ.

೧೯೮೭ರ ರಾಷ್ಟ್ರೀಯ ನಗರ ಸಂಬಂಧಿ ಬಡತನ ಸಮೀಕ್ಷೆಯ ವರದಿಯ ಪ್ರಕಾರ: ಕಡಿಮೆ ಆದಾಯ ಉಳ್ಳ ಹಾಗೂ ಬಡತನರೇಖೆಗೂ ಮೇಲುಳ್ಳ ೬೦% ನೆರೆಹೊರೆಯ ಜನರು ಕಚ್ಚಾವಸತಿಗಳಲ್ಲಿ ವಾಸಿಸುತ್ತಿರುವರು ಹಾಗೂ ಬಡತನರೇಖೆಗಿಂತಲೂ ಕೆಳಮಟ್ಟದಲ್ಲಿರುವ ಕುಟುಂಬಗಳು ಅದೇ ಕಳಪೆ ಕೊಳಚೆ ವಾತಾವರಣದಲ್ಲಿ ವಾಸಿಸುತ್ತಿರುವುದು ಕಂಡುಬಂದಿದೆ.

ಜೆ.ಪಿ. ಪಾರವರ ಪ್ರಕಾರ: ಕೊಳಗೇರಿ ಸಮಸ್ಯೆಯ ಸ್ಥಿರವಲ್ಲದ ಹಾಗೂ ಪ್ರತಿದಿನವೂ ಉಲ್ಬಣಗೊಳ್ಳುತ್ತಿರುವ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪ್ರಮುಖವಾಗಿ ವೇಗದಲ್ಲಿ ನಗರೀಕರಣಗೊಳ್ಳುತ್ತಿರುವ ರಾಷ್ಟ್ರಗಳಲ್ಲಿ ಪ್ರಮುಖವಾಗಿ ಆರ್ಥಿಕ ಹಾಗೂ ಕೈಗಾರಿಕ ಅಭಿವೃದ್ಧಿಯತ್ತ ಹೆಜ್ಜೆ ಹಾಕುತ್ತಿರುವ ರಾಷ್ಟ್ರಗಳಲ್ಲಿ ಕಾಣುತ್ತೇವೆ. ಇದರಿಂದ ಆರ್ಥಿಕತೆಯಲ್ಲಿ ರಾಚನಿಕ ಬದಲಾವಣೆ ಹಾಗೂ ಗ್ರಾಮೀಣ ಪ್ರದೇಶಗಳಿಂದ ಜನಸಂಖ್ಯೆಯ ನಗರ ಪ್ರದೇಶದತ್ತ ಸಾಗುವುದು ತಿಳಿದು ಬರುತ್ತದೆ. ನಗರ ಪ್ರದೇಶದಲ್ಲಿ ಜನಸಂಖ್ಯೆಯು ವೇಗವಾಗಿ ವರ್ಧನೆಯಾದಾಗ, ಕೊಳಗೇರಿ ನಿವಾಸಿಗಳ ಮೇಲೆ ಹಾಗೂ ನಗರಗಳಿಗೆ ವಲಸೆ ಬಂದ ವಲಸೆಗಾರರ ಮೇಲೆ ಸಮಸ್ಯೆ ಅಥವಾ ದುಷ್ಪರಿಣಾಮ ಉಂಟುಗುತ್ತದೆ.

ಸತ್ಯನಾರಾಯಣರವರ ಪ್ರಕಾರ: ೧೯೮೭ ವರದಿಯಲ್ಲಿ ಕೊಳಗೇರಿಯ ಭೌತಿಕ ಸಂಸ್ಕೃತಿಯ ಅಂಶವಾಗಿದ್ದು, ಜೀವನ ಭದ್ರತೆಗೆ ಹಾಗೂ ಪ್ರಾಕೃತಿಕ ಅಂಶಗಳಿಗೆ ಉಂಟಾಗುವ ತೊಡಕುಗಳ

ವಿರುದ್ಧ ಹೋರಾಡುವ ಒಂದು ಮಾಪನವಾಗಿದ್ದು, ಆಶ್ರಯವನ್ನು ಕಲ್ಪಿಸಿ ಒಂದು ಮಹತ್ವದ ಉದ್ದೇಶವನ್ನು ಸಾಧಿಸಿದೆ.

ಈ ಕೊಳಗೇರಿಯ ಮಾನವ ಚಟುವಟಿಕೆಗಳು ಕಾರ್ಯಚರಣೆಗೆ ಸ್ಥಳವನ್ನು ಕಲ್ಪಿಸುವುದಲ್ಲದೇ ವಸತಿ ಆಶ್ರಯದ ಮುಖಾಂತರ ಸೌಕರ್ಯವನ್ನು ಒದಗಿಸಿಕೊಡುತ್ತದೆ. ಇದು ಕುಟುಂಬ ಹಾಗೂ ಹೊರ ಜಗತ್ತಿನೊಂದಿಗೆ ಪರಸ್ಪರ ವರ್ತನೆ ಅಥವಾ ಸಂವಹನದಲ್ಲಿ ತೊಡಗಲು ಸಹಾಯಮಾಡುತ್ತದೆ. ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾದಲ್ಲಿ ಹೇಳಿರುವ ಹಾಗೆ ವಸತಿ ಎನ್ನುವ ಶಬ್ದವು ಸರಕಾರಿ ಸರಕಾರೇತರ ವಲಯಗಳು ಸಹಯೋಗ ಹೊಂದಿದಾಗ ಒಂದು ಪರಿಹಾರ ದೊರಕುತ್ತದೆ. ಗುಲ್ಯಾನಿ ಹಾಗೂ ತುಳೂಕ್‌ಡತ್ ೨೦೦೮ ನೈರೋಬಿಯಲ್ಲಿ ನಡೆಸಿದ ಸಂಶೋಧನೆಯ ಪ್ರಕಾರ ಕೊಳಗೇರಿಯ ಬಗ್ಗೆ ಹೊಂದಿರುವ ಸಾಮಾನ್ಯ ಅಭಿಪ್ರಾಯಗಳಿಂದ ಸಂಶೋಧನಾ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಕೊಳಗೇರಿ ಸ್ಥಿತಿಗತಿಗಳನ್ನು ಸೂಕ್ತವಾಗಿ ಅರ್ಥೈಸಿಕೊಂಡು ಅವಶ್ಯಕವಾದ ವಿಧಾನ ಹಾಗೂ ಸಂಪನ್ಮೂಲವನ್ನು ಅರಿತುಕೊಳ್ಳುವುದು ಕ್ಲಿಷ್ಟಕರ. ಇವರ ಸಹಯೋಗದಿಂದ ಕೊಳಗೇರಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಕಷ್ಟಕರ.

ಹೊಸ ಪ್ರಕಟಣೆ ಬಹಿರಂಗಪಡಿಸಿರುವ ಪ್ರಕಾರ: ಭಾರತದಲ್ಲಿ ಕೊಳಗೇರಿ ನಿವಾಸಿಗಳು ಎದುರಿಸಿತ್ತಿರುವ ಸಮಸ್ಯೆಯು ಅತ್ಯಂತ ಗಂಭೀರ್ಯ ಕ್ಲಿಷ್ಟವಾಗಿದ್ದು, ಸರಕಾರ ಹಾಗೂ ಜನತೆಯು ತಕ್ಷಣ ಗಮನಹರಿಸಬೇಕಾಗಿದೆ. ಮಗುವಿನ ಪೌಷ್ಠಿಕಾಂಶದ ಸ್ಥಿತಿಯ ಮೇಲೆ–ಪರಿಸರಾತ್ಮಕ ಅಂಶಗಳು ತಕ್ಷಣದ ಹಾಗೂ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ.

ಜಿ. ಗೌರಿನಾಥಶಾಸ್ತ್ರೀಯವರ ಪ್ರಕಾರ: ಕೊಳಗೇರಿ ಪ್ರದೇಶಗಳಲ್ಲಿರುವ ವಸತಿಗಳು ಅತಿಯಾದ ಜನಸಾಂದ್ರತೆಯಿಂದ, ದೋಷಯುಕ್ತ ವ್ಯವಸ್ಥೆಗಳಿಂದ, ಕಟ್ಟಡಗಳ ವಿನ್ಯಾಸ ಹಾಗೂ ಕಿರಿದಾದ ರಸ್ತೆಗಳಿಂದ ಮಾನವನ ವಾಸಕ್ಕೆ ಸೂಕ್ತವಾಗಿರುವುದಿಲ್ಲ. ಹೈದರಾಬಾದ್ ನಗರದ ಜನಸಂಖ್ಯೆಯ ಆಹಾರ ಹಾಗೂ ಪೋಷಣೆಯ ಸ್ಥಿತಿಯ ಸಮೀಕ್ಷೆ ನಡೆಸಿದಾಗ, ಗೌರಿನಾಥ್ ಶಾಸ್ತ್ರಿ ಆದಾಯ ೮೬% ಅರ್ಥಿಕ ಆರಂಭ ಕುಟುಂಬವು ಅವಶ್ಯಕ ಆಹಾರವನ್ನು ಪಡೆದು ಪೌಷ್ಠಿಕ ಆಹಾರ ಸ್ವೀಕರಿಸುತ್ತಿದ್ದಾರೆ. ಇದೇ ರೀತಿಯಾಗಿ ಪ್ರೋಟೀನ್‌ಯುಕ್ತ ಆಹಾರ ಪಡೆಯುವಿಕೆಯಲ್ಲಿಯೂ ವ್ಯತ್ಯಾಸವನ್ನು ಕಾಣಲಾಗಿದೆ. ಈ ರೀತಿಯಾಗಿ ಹಲವಾರು ರೀತಿಯ ಕೊರತೆಯನ್ನು ಅಧಿಕ ಆದಾಯ ಗುಂಪು, ಮಾಧ್ಯಮ ಆದಾಯ ಗುಂಪು, ಕಡಿಮೆ ಆದಾಯ ಗುಂಪು ಮತ್ತು ನಗರ ಪ್ರದೇಶಗಳಲ್ಲಿರುವ ಕೈಗಾರಿಕಾ ಕಾರ್ಮಿಕರಿಗಿಂತ ನಗರಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳಲ್ಲಿ ಹೆಚ್ಚಾಗಿ ಗುರುತಿಸಬಹುದು. ರಾಷ್ಟ್ರೀಯ ಪೋಷಣಾ ಮೇಲ್ವಿಚಾರಣ ಕಚೇರಿ (ಬಳ್ಳಾರಿ) ಸಾಮಾನ್ಯವಾದ ಅರ್ಥವನ್ನು ಹೊಂದಿದ್ದು, ಸಮುದಾಯದ ನಿವಾಸಗಳು ಹೊಂದಿರಬೇಕಾದ ಎಲ್ಲಾ ಷರತ್ತುಗಳನ್ನು ಒಳಗೊಂಡಿವೆ.

ವಿಶ್ವಸಂಸ್ಥೆಯ ವರದಿ ಪ್ರಕಾರ: ವಿಶ್ವಸಂಸ್ಥೆಯ ವರದಿ ಅಂದಾಜು ೫೦% ಜಾಗತಿಕ ನಗರ ಜನಸಂಖ್ಯೆಯನ್ನು ಕೊಳಗೇರಿ ನಿವಾಸಿಗಳೆಂದು ವರ್ಗೀಕರಿಸಬಹುದು. ಇವರಿಗೆ ಸರಿಯಾದ ಶುಚಿಯಾದ ನೀರಿನ ವ್ಯವಸ್ಥೆ, ನೈರ್ಮಲ್ಯೀಕರಣದ ವ್ಯವಸ್ಥೆ ಹಾಗೂ ಇತರೇ ಮೂಲಭೂತ ಸೌಲಭ್ಯಗಳ ವ್ಯವಸ್ಥೆ ಇಲ್ಲದೆ ಸದಾ ಜನಸಂಖ್ಯೆಯಿಂದ ಕಿಕ್ಕಿರಿದ ಸ್ಥಳದಲ್ಲಿ ಕಳಪೆ ಗುಣಮಟ್ಟದ ರಾಚನಿಕ ಗೃಹದಲ್ಲಿ ಅಭದ್ರತಾ ಸ್ಥಿತಿಯಲ್ಲಿ ಜೀವವನ್ನು ಸಾಗಿಸುತ್ತಿರುತ್ತಾರೆ. ಕನಿಷ್ಠ ಅಭಿವೃದ್ಧಿ ಹೊಂದಿರುತ್ತಿರುವ ರಾಷ್ಟ್ರಗಳಲ್ಲಿ ಸುಮಾರು ೭೮% ನಗರ ಜನಸಂಖ್ಯೆಯಲ್ಲಿ ಉತ್ತಮ ಆದಾಯ ಹೊಂದಿದ ಸಮುದಾಯದೊಂದಿಗೆ ಬಡತನ ಹಾಗೂ ಅವಿದ್ಯುಕ್ತತೆಯಲ್ಲಿ ಜೀವನ ಸಾಗಿಸುವ ಸಮುದಾಯವನ್ನು ಕಾಣಬಹುದು. ಇವರಿಗೆ ಸಾಂಪ್ರಾದಾಯಿಕ ಉದ್ಯೋಗ, ಸಾಲ, ಶಿಕ್ಷಣ, ಸ್ವಸ್ಥ ಆರೋಗ್ಯದ ಅನುಕೂಲತೆಗಳು ಇಲ್ಲದಿರುವುದು ತಿಳಿದುಬರುತ್ತದೆ. ಇದು ಕೊಳಗೇರಿ ನಿವಾಸಿಗಳ ಶೋಚನೀಯ ಸ್ಥಿತಿಯನ್ನು ತೋರಿಸುತ್ತದೆ. ಆಲಿಯನ್ಸ್ ಸ್ಪಷ್ಟವಾಗಿ ಗಮನಿಸುವುದೇನೆಂದರೆ, "ವಿಫಲ ಯೋಜನೆಗಳಿಂದ, ಕಳಪೆ ಆಡಳಿತದಿಂದ, ಭ್ರಷ್ಟಾಚಾರದಿಂದ, ಅಸೂಕ್ತ ನಿಯಂತ್ರಣಗಳಿಂದ, ಹಣಕಾಸಿನ ಪದ್ಧತಿಗಳಿಂದ ಹಾಗೂ ಕಳಪೆ ರಾಜಕಾರಣಗಳಿಂದ ಕೊಳಗೇರಿ ಹುಟ್ಟಿಕೊಳ್ಳುತ್ತದೆ. ಆದಕಾರಣ ಅಸಮರ್ಪಕ ಗೃಹ ವ್ಯವಸ್ಥೆಯು ಕೊಳಗೇರಿಯ ಹುಟ್ಟಿಕೊಳ್ಳುತ್ತದೆ. ಆದಕಾರಣ ಅಸಮರ್ಪಕ ಗೃಹ ವ್ಯವಸ್ಥೆಯಿಂದ ಕೊಳಗೇರಿಯ ಸವಾಲಾಗಿ ಪರಿಣಮಿಸಿದೆ ಹಾಗೂ ಬಹುಮಟ್ಟ ಅಭಿವೃದ್ಧಿಯ ಸಮಸ್ಯೆಯ ಅಂಶವಾಗಿದೆ. ರಾಜಕೀಯ ಆರ್ಥಿಕ ನಿಟ್ಟಿನಲ್ಲಿ ಪರಿಗಣಿಸಿದಾಗ, ಕೊಳಗೇರಿಯ ಸ್ಥಿತಿಯನ್ನು ಸುಧಾರಿಸಲು ಕೇವಲ ಸರಕಾರ ಮಾತ್ರವಲ್ಲದೇ ಸಮುದಾಯದ ಸದಸ್ಯರುಗಳು, ಉದ್ದಿಮೆದಾರರು ಹಾಗೂ ಕೊಳಗೇರಿ ನಿವಾಸಿಗಳೇ ಮುನ್ನಾಗಿ ಪ್ರಯತ್ನಿಸಬೇಕಾಗಿದೆ. ಕಳೆದ ೫೦ ವರ್ಷಗಳ ಅಂತರಾಷ್ಟ್ರೀಯ ಗೃಹ ಹಣಕಾಸಿನ, ಪ್ರತಿಪಾದನೆಯ ಪ್ರಕಾರ ಸರಕಾರಿ ಹಾಗೂ ಸರಕಾರೇತರ ವಲಯಗಳ ನ್ಯೂನತೆಯಿಂದ ಸೂಕ್ತ ಪರಿಹಾರವನ್ನು ತರುವಲ್ಲಿ ವಿಫಲತೆಯನ್ನು ಕಾಣಲಾಗುತ್ತಿದೆ. ಹೊಸತನದ ಸಹಯೋಗದಿಂದ ಸರಕಾರಿ ವಲಯಗಳಿಂದಾಗುವ ಭ್ರಷ್ಟಾಚಾರ, ಅಸಾಮರ್ಥ್ಯತೆ ಅವಕಾಶವಾದಿತನ, ದುರಾಸೆ ಹಾಗೂ ಸ್ವಾರ್ಥವನ್ನು ತಡೆದು ಹೊಸ ಭರವಸೆ ಮೂಡಿಸಬಹುದು. ಅಖಿಲ ಭಾರತೀಯ ಮಟ್ಟದಲ್ಲಿ ಆಹಾರ ಸಮೀಕ್ಷೆಯನ್ನು ವಿವಿಧ ಭಾಗಗಳಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಾಡಲಾಯಿತು. ಈ ವರದಿಯ ಪ್ರಕಾರ ನಗರ ಕೊಳಗೇರಿಯ ಜನರಿಗಿಂತ ಉತ್ತಮ ಆಹಾರವನ್ನು ಗ್ರಾಮೀಣ ಗುಂಪುಗಳು ಸ್ವೀಕರಿಸುತ್ತವೆ. ಈ ಮಾಹಿತಿಯ ಸಲಹಿನದಂತೆ ಗ್ರಾಮೀಣ ಗುಂಪುಗಳ ಹಾಗೂ ನಗರ ಕೊಳಗೇರಿ ನಿವಾಸಿಗಳ ೮೦% ಒಟ್ಟು ಸಾಮರ್ಥ್ಯವು ಒಂದೇ ಪ್ರಧಾನ ಆಹಾರದಿಂದಲೇ ಬಂದಿರುತ್ತದೆ.

ಏಕದಳ ಧಾನ್ಯ ಅಥವಾ ಕಾಳು ಎರಡರ ಸಂಯೋಗ ೫೦% ಗ್ರಾಮೀಣ ಗುಂಪು ಕುಟುಂಬಗಳ ಹಾಗೂ ೫೫% ನಗರ ಕೊಳಗೇರಿ ಕುಟುಂಬ ಪ್ರತಿನಿತ್ಯ ಅವಶ್ಯಕ ಪೌಷ್ಟಿಕಾಂಶವನ್ನು ಪಡೆಯುತ್ತಿಲ್ಲ. ಆದ್ದರಿಂದ ಇವರನ್ನು ಅಪೌಷ್ಟಿಕರ ಗುಂಪಿಗೆ ಸೇರಿಸಲಾಗಿದೆ. ನಗರ ಕೊಳಗೇರಿ

ನಿವಾಸಿಗಳ ಉತ್ತರ ಹಾಗೂ ತೂಕವನ್ನು ಗ್ರಾಮೀಣ ಜನತೆಯೊಡನೆ ಹೋಲಿಸಿದಾಗ ಇತರ ತೂಕ ಹಾಗೂ ಎತ್ತರವು ಭಾರತೀಯ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್‌ನ ಪ್ರಮಾಣಕ್ಕಿಂತ ಕಡಿಮೆ ಇರುವುದು ತಿಳಿದುಬಂದಿತು. ಸಮೀಕ್ಷೆಯ ವರದಿಯ ಸಲಹೆಯಂತೆ ಗ್ರಾಮೀಣ ಗುಂಪುಗಳಲ್ಲಿ ಹಾಗೂ ನಗರ ಕೊಳಗೇರಿಯಲ್ಲಿ ಪೂರ್ವ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಲ್ಲಿ ಹಾಗೂ ಹೆಣ್ಣುಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆಯನ್ನು ಕಾಣಲಾಯಿತು.

ಜೈಪುರದಿಂದ ೫ ವಯಸ್ಸಿಗೂ ನಗರ ಮಕ್ಕಳ ಸ್ವಸ್ಥತೆಯನ್ನು ಅನುಲಂಬವಾಗಿ ಮಾಪನ ಮಾಡಿದಾಗ ದೊರಕಿದ ಮಾಹಿತಿಯಂತೆ ಮಕ್ಕಳಲ್ಲಿ ಉಸಿರಾಟದ ಸೋಂಕು, ಅತಿಸಾರ, ಭೇದಿ, ಹುಳುಕಡ್ಡಿ, ದಡಾರ, ಪೈರೇಕ್ಯಿಯಾ ಹಾಗೂ ನಾಯಿಕೆಮ್ಮನ್ನು ಮುಖ್ಯವಾಗಿ, ಕೆಳಮಟ್ಟದ ಸಾಮಾಜಿಕ-ಆರ್ಥಿಕ ಗುಂಪುಗಳಲ್ಲಿ ಕಾಣಲಾಯಿತು. ಕೊಲ್ಕತಾದಲ್ಲಿ ೩೦೦೦ ನಗರ ಕೊಳಗೇರಿ ಮಕ್ಕಳ ಮೇಲೆ ನಡೆಸಿದ ಅಧ್ಯಯನದಲ್ಲಿ ತಿಳಿದು ಬಂದ ಹಾಗೆ ೩೦%ರಷ್ಟು ಮಕ್ಕಳು ಕ್ಷಯಾ ಹೊಂದಿದ್ದು ೦.೧೯% ಮಿಟಮಿನ್ A ಮತ್ತು B ಕೊರತೆ ೩.೨೫% ಹಾಗೂ ಕುಟಿಲವಾತ ೨% ಬಾಲಗ್ರಹದೋಷದಷ್ಟು ಕಾಣಲಾಯಿತು. ಪ್ರೋಟಿನ್‌ಯುಕ್ತ ಆಹಾರವನ್ನು ಸ್ವೀಕರಿಸಿದ ನಂತರವೂ ಒಂದು ಮಗುವಿನಲ್ಲೂ ಸೂಕ್ತವಾದ ಕ್ಯಾಲರಿ ಅಂಶವನ್ನು ಕಾಣಲಾಗಲಿಲ್ಲ. ಸಮೀಕ್ಷೆಯ ಫಲಿತಾಂಶದ ವರದಿಯಂತೆ ೬೦%ಗೂ ಅಧಿಕ ಕೊಳಗೇರಿ ಕುಟುಂಬಗಳು ತಮ್ಮ ಆದಾಯವನ್ನು ಆಹಾರದಲ್ಲಿ ವಿನಿಯೋಗಿಸಿದರೆ ೩೫% ನಷ್ಟು ಸಾಲ ಕಟ್ಟುವಲ್ಲಿ ತಮ್ಮ ಆದಾಯವನ್ನು ವಿನಿಯೋಗಿಸಿರುವುದು ತಿಳಿದುಬರುತ್ತದೆ.

ಟಂಡನೆರ ಪ್ರಕಾರ (೧೯೮೭): ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಡೆಲ್ಲಿಯ ನರ ಶಸ್ತ್ರಚಿಕಿತ್ಸೆ ಹಾಗೂ ಅಂಗಶೋಧನ ವಿಭಾಗ ಪ್ರಕಾರ ಭಾರತದಲ್ಲಿ ಸುಮಾರು ೨೫೦ ದಶಲಕ್ಷ ಜನತೆಯ ೩/೪ ಅನುಪಾತಕ್ಕೂ ಕಡಿಮೆ ಕಾಲ್ಯೋರಿ ಆಹಾರವನ್ನು ಸೇವಿಸುತ್ತಿದ್ದಾರೆ ಮತ್ತು ೫೫ ದಶಲಕ್ಷ ಜನರು ದೇಹದ ಅವಶ್ಯಕತೆಗೂ ೫೦% ಕಡಿಮೆ ಆಹಾರ ಸೇವೆನೆ ಮಾಡುತ್ತಿದ್ದಾರೆ.

ನಾಗ್ಪೂರ್ ಟೈಮ್ಸ್ (೩ ಜೂನ್ ೧೯೮೭) ವರದಿ: ಗೋಪಾಲನ್ ಹಾಗೂ ಅವರ ಸಹಾಯಕ ಸೇವಕರ ವೈಜ್ಞಾನಿಕ ವರದಿಯ ಪ್ರಕಾರ : ಭಾರತದ ಬಡಜನತೆಯಲ್ಲಿ ಗಮನಿಸಬೇಕಾದ ಆಹಾರದ ಲಕ್ಷಣವೆಂದರೆ ದ್ವಿದಳಧಾನ್ಯಗಳಿಗೆ ಮಹತ್ವ, ಆಹಾರ ದ್ರವ್ಯಗಳ ರಕ್ಷಣಾ ಕೊರತೆ ಈ ಲಕ್ಷಣಗಳನ್ನು ಬಡ ಜನರ ಆಹಾರಸೇವನೆಯಲ್ಲಿ ಸಾಮಾನ್ಯವಾಗಿ ಕಾಣಬಹುದು. ಅವರು ಯಾವ ದೇಶಕ್ಕೆ ಸೇರಿದರೂ ಈ ಸಮಸ್ಯೆಯಿಂದ ಬಳಲುತ್ತಿರುವುದು ಕಂಡುಬರುತ್ತಿದೆ. ಆದಕಾರಣ ಪ್ರೋಟಿನ್ ಅಂತರ (ಸಸಾರ ಜನ ಅಂತರ) ಕ್ಕಿಂತ ಪ್ರೋಟೀನ್ ಸಾಮರ್ಥ್ಯ ಅಪೌಷ್ಠಿಕಾಂಶತೆಯ ಆಹಾರ ಅಂತರವನ್ನು ಮಹತ್ವವೆಂದು ಪರಿಗಣಿಸಲಾಗಿದೆ. ಕೊಲ್ಕತ್ತದ U.SAID ಅಧ್ಯಯನ ವರದಿಯ ಪ್ರಕಾರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಕೊಳಗೇರಿಯ ಮಕ್ಕಳು

ಸರಾಸರಿ ೧೭೦ ಕಿಲೋ ಕ್ಯಾಲೋರಿಸ್ ಕಡಿಮೆ ಆಹಾರ ಸೇವನೆ ಮಾಡುತ್ತಿರುವುದು ಕಂಡುಬಂದಿದೆ. I.CMK ನಡೆಸಿದ ಹಲವಾರು ಸಮೀಕ್ಷೆಗಳು ಇದೇ ವಿಧವಾದ ಫಲಿತಾಂಶವನ್ನು ವರದಿಸಿದೆ. ೧೯ನೇ ಶತಮಾನದಲ್ಲಿ ಜಗತ್ತಿನ ೨% ಜನಸಂಖ್ಯೆಯು ನಗರಗಳ ನಾಗರೀಕರಾಗಿದ್ದಾರೆ. ೧೯ನೇ ಶತಮಾನದ ಮಧ್ಯಭಾಗದಲ್ಲಿ ೩೦%ಗೆ ಅಧಿಕಗೊಂಡಿದ್ದು ಇಂದು ಜಗತ್ತಿನ ಅರ್ಧದಷ್ಟು ಜನಸಂಖ್ಯೆಯು ೩೦% ನಗರದ ಪರಿಸರದಲ್ಲಿ ವಾಸಿಸುತ್ತಿದ್ದಾರೆ. ೧೯೭೨ರ ಮಾಲ್ತೂಸಿಯನ್ ನಗರೀಕರಣ ಸಿದ್ಧಾಂತದ ಪ್ರಕಾರ ನಗರದ ಬೆಳವಣಿಗೆ ರೋಮ್ಸ್ ಸುಪ್ರಸಿದ್ಧ ಕ್ಲಬ್‌ನ ಬೆಳವಣಿಗೆಗಿಂತಲೂ ಶೀಘ್ರಗತಿಯಲ್ಲಿ ಉಂಟಾಯಿತು. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ನಗರದ ಬೆಳವಣಿಗೆ ಸ್ಥಿರವಾದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತ್ವರಿತ ಹೆಚ್ಚಳ ಅಂದರೆ ೨೦೦೦ ದಲ್ಲಿ ೧೯ ದಶಕೋಟಿಯಿಂದ ೨೦೩೦ರಲ್ಲಿ ೩೯ ದಶಕೋಟಿಗೆ ಹೆಚ್ಚುವ ಸಂಭವ ವರದಿ ಮಾಡಲಾಯಿತು. ನಗರೀಕರಣದ ಸವಾಲುಗಳ ವಿಭಿನ್ನವಾಗಿದೆ. ಹಲವು ಮಧ್ಯಸ್ಥಿಕೆದಾರರು ಸ್ವಲಾಭಕ್ಕಾಗಿ ನಗರದ ಬಗ್ಗೆ ಸುಳ್ಳಿನ ಮಾಹಿತಿಯನ್ನು ನೀಡುತ್ತಿರುವುದು ತಿಳಿದು ಬಂದಿದೆ. ಉದಾ: ಮುಂದಿನ ಪೀಳಿಗೆಯ ಅಭಿವೃದ್ಧಿ ನಗರಗಳು ಪೋಷಣೆ ನೀಡುತ್ತವೆ ಮತ್ತು ಮಕ್ಕಳು ನಗರದ ನೈಜತೆಯಲ್ಲಿ ಜನಿಸುತ್ತಾರೆ. ಈ ಎಲ್ಲಾ ಮಾಹಿತಿಗಳ ವಿವರಗಳನ್ನು ದಾಖಲಿಸಲಾಗಿದೆ.

'ಪ್ಲಾನ್ಯೆಟ್ ಆಫ್ ಸ್ಲಮ್' ಎಂಬ ಪುಸ್ತಕದಲ್ಲಿ ಮೈಕ್ ಡೇವಿಸ್‌ರವರ ಕೊಳಗೇರಿಯ ಸಮಗ್ರ ಅಧ್ಯಯನ ವಿವರಿಸುವ ಹಾಗೆ ಪ್ರಪಂಚದಾದ್ಯಂತ ಕೊಳಗೇರಿಯ ಬೆಳವಣಿಗೆಯು ವಿಮರ್ಶಾತ್ಮಕವಾಗಿದೆ. ಬರವಣಿಗೆಯ ವರದಿಗಳು ಹಾಗೂ ಅಂಕಿ-ಅಂಶಗಳೆರಡನ್ನು ಪರಿಗಣಿಸಿದಾಗ ನಗರೀಕರಣದ ಮಹತ್ವದ ವಿಷಯಗಳು ತಿಳಿಯುತ್ತದೆ. ಇದನ್ನು ವಿವರಿಸುವಲ್ಲಿ ಡೇವಿಸ್ ಕೊಳಗೇರಿ ನಿವಾಸಿಗಳು ಇದರ ಬಲಿಪಶುಗಳೆನ್ನುವ ಉದ್ದೇಶವಲ್ಲ ಹೊರತು ಕೊಳಗೇರಿಯ ಮೂಲ ಹಾಗೂ ಕೊಳಗೇರಿ ಪ್ರದೇಶಗಳು ಅಧಿಕವಾಗುವಿಕೆಯಿಂದ ಉಂಟಾಗುವ ಪರಿಣಾಮಗಳನ್ನು ಅರ್ಥೈಸುವುದು ಬಡಜನತೆಯಲ್ಲಿಟ್ಟಿರುವ ಪಕ್ಷಪಾತದಲ್ಲಿ ಬದಲಾವಣೆಯಾಗುತ್ತಿದ್ದು ದಿನಗೂಲಿಗಾಗಿ ಅವರು ವಹಿಸುತ್ತಿರುವ ಕ್ರಮವನ್ನು ಅಭಿವೃದ್ಧಿ ಅಧ್ಯಯನದ ಮಹತ್ವ ವಿಷಯವಾಗಬೇಕು. U.N. ನಿವಾಸಿಗಳು ಹೊರತಂದ ಕೊಳಗೇರಿಯವರ ಸವಾಲುಗಳು ಹಾಗೂ ೧೦೦ ವಿದ್ವಾಂಸರುಗಳು ಅಭಿಪ್ರಾಯಗಳು ಈ ವರದಿಯನ್ನು ೨೦೦೩ರಲ್ಲಿ ಪ್ರಕಟಿಸಲು ಸಹಕರಿಸಲಾಯಿತು. ನಗರ ಬಡತನವನ್ನು ಕೇಂದ್ರಿಕರಿಸಿ ಹಲವು ಮಾಹಿತಿಗಳನ್ನು ಸೂಕ್ಷ್ಮ ಅಧ್ಯಯನಗಳಿಂದ ಪಡೆದುಕೊಂಡು, ದೊರೆತ ಮಾಹಿತಿಗಳನ್ನು ಹೋಲಿಸಿ ಅಧ್ಯಯನ ಮಾಡಿ ಸ್ವೀಕೃತಿಯನ್ನು ವಿಶ್ವವಿದ್ಯಾಲಯಗಳೊಂದಿಗೆ ಸಹಯೋಗ ನಡೆಸಿ ಪ್ರಪಂಚಾದಾತ್ಯಂತ ವಿಸ್ತಾರಗೊಂಡ ಕೊಳಗೇರಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಸುದೀರ್ಘ ಅವಧಿಯವರೆಗೂ ನಗರೀಕರಣವನ್ನು ಆರ್ಥಿಕ ಬೆಳವಣಿಗೆಯ ಪರಿಣಾಮವೆಂದು ಪರಿಭಾವಿಸಲಾಗಿತ್ತು. ಆದರೆ ಇಂದು ಇದನ್ನು ಸಂಶೋಧನೆಯ ಸಂಕೀರ್ಣ ಭಾಗವೆಂದು

ಪರಿಗಣಿಸಲಾಗಿದೆ. ಕಳಪೆಗುಣಮಟ್ಟದ ಗೃಹಗಳು ಸಾಮಾಜಿಕ ವರ್ಗೀಕರಣ ಹಿಂಸೆ ಮತ್ತು ಅಪರಾಧ, ಪರಿಸರ ಅಪಾಯಕ್ಕೆ ಸಿಲುಕುವ ಪ್ರದೇಶ ಹಾಗೂ ಮೂಲಭೂತ ವಂಚಿತವಾದ ಪ್ರದೇಶ ನಗರ ಬಡತನದ ಗುಣಲಕ್ಷಣಗಳಾಗಿವೆ. ೨೦೦೨ರ U.N. ಆವಾಸಸ್ಥಾನವು ಕೊಳಗೇರಿಯ ೫ ಗುಣಲಕ್ಷಣಗಳನ್ನು ವಿವರಿಸಿವೆ.

ಮಾನವ ನೆಲೆಸುವಿಕೆ ವಸಾಹತುಗಳ ಬಗ್ಗೆ ಜಾಗತಿಕ ವರದಿ (೨೦೦೩) ಪ್ರಮುಖವಾಗಿ ನಗರ ಬಡಜನರ ಆಶ್ರಯ ಸ್ಥಿತಿ–ಗತಿಗಳ ಬಗ್ಗೆ ಗಮನ ಹರಿಸುತ್ತದೆ. ಈ ವರದಿಯು ಪ್ರಮುಖವಾಗಿ ಬಡಜನರು ನಗರ ಪ್ರದೇಶಗಳಲ್ಲಿ ಯಾವುದೇ ವಿದ್ಯುಕ್ತ ಆಶ್ರಯ ಹಾಗೂ ಆದಾಯ ಮಾರ್ಗವಿಲ್ಲದೆ ಪರದಾಡುತ್ತಾರೆ. ಹಾಗೂ ಸರಕಾರ ಮತ್ತು ಮಾರುಕಟ್ಟೆಯ ಬೆಂಬಲವಿಲ್ಲದೆ ನಿಸ್ಸಹಾಯಕತೆಯ ಸಮಸ್ಯೆ ಎದುರಿಸುತ್ತಾ ಜೀವನಕ್ಕಾಗಿ ಹೋರಾಡುತ್ತಿರುವುದನ್ನು ತಿಳಿಸುತ್ತದೆ. ಅದೇ ರೀತಿಯಲ್ಲಿ ಈ ವರದಿಯು ಅವರ ಉಳಿವಿಗಾಗಿ ಹೊಸ ಯೋಜನೆಯ ಬಗ್ಗೆ ವಿಶ್ವಾಸವನ್ನು ತಿಳಿಸುತ್ತದೆ. ಅಲ್ಲದೇ ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು, ಅಂತರಾಷ್ಟ್ರೀಯ ಸಮುದಾಯಗಳು ಈ ನಿಟ್ಟಿನಲ್ಲಿ ಯಾವ ವಿಧದಲ್ಲಿ ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ತಿಳಿಸಿಕೊಡುತ್ತದೆ ಮತ್ತು ನಗರ ಬಡಜನರಿಗೆ ಅವಶ್ಯಕ ಆಶ್ರಯದ ಮುಖಾಂತರ ಗುರಿಯನ್ನು ತಲುಪಿಸುವ ವಿಧಾನವನ್ನು ತಿಳಿಸುತ್ತದೆ. ಕಳೆದ ದಶಕಗಳನ್ನು ಕೊಳಗೇರಿ ನಿವಾಸಿಗಳ ಸ್ಥಿತಿ–ಗತಿಗಳನ್ನು ಸುಧಾರಿಸುವ ಪ್ರಯತ್ನವು ಅತ್ಯಂತ ದುರ್ಬಲವಾಗಿತ್ತು. ಆದರೆ ವಿಶ್ವಸಂಸ್ಥೆಯ ಸಹ ವಾರ್ಷಿಕ ಅವಧಿಯ ಘೋಷಣೆಯ ಮೇರೆಗೆ ಸರಕಾರವು ಬಡಜನತೆಯು ಸುಧಾರಣೆಗೆ ಆದ್ಯತೆ ನೀಡಿ ೨೦೨೦ರ ಅವಧಿಗೆ ಕನಿಷ್ಠ ೧೦೦ ದಶಲಕ್ಷ ಕೊಳಗೇರಿ ನಿವಾಸಿಗಳ ಜೀವನಗಳನ್ನು ಸುಧಾರಿಸುವ ಪಣತೊಟ್ಟಿದೆ. ಈ ವರದಿಯು ಒತ್ತಿ ಹೇಳುವ ಹಾಗೆ ಕೊಳಗೇರಿಯು ಎರಡು ಪ್ರಮುಖ ಅವಿರ್ಭಾವ ಸವಾಲುಗಳ ಹೊಂದಿದ್ದು ಹೊಸ ಸಹಸ್ರಮಾನ ಆರಂಭದಲ್ಲಿ ಅವರು ವಾಸಿಸುವ ಸ್ಥಳಗಳ ಅಭಿವೃದ್ಧಿತ್ವರಿತ ನಗರೀಕರಣ ಹಾಗೂ ಬಡತನದ ನಗರೀಕರಣ ಕೊಳಗೇರಿ ಪ್ರದೇಶಗಳಲ್ಲಿ ಅಧಿಕವಾಗಿ ಬಡಜನತೆಯ ಕೇಂದ್ರಿಕೃತವಾಗಿದೆ. ಹಾಗೂ ಅತ್ಯಂತ ಶೋಚನೀಯ ಆಶ್ರಯದಡಿ ಯಾವುದೇ ಭೌತಿಕ ಸೌಲಭ್ಯವಿಲ್ಲದೇ ಪರದಾಡುವುದನ್ನು ಕಾಣಬಹುದುದಾಗಿದೆ. ಕೊಳಗೇರಿಯ ಸವಾಲುಗಳ ಪ್ರಮುಖ ಫಲಿತಾಂಶವೆಂದರೆ ಜಾಗತಿಕಮಟ್ಟದಲ್ಲಿ ಕೊಳಗೇರಿಯ ಸವಾಲು ಯಾವ ಗ್ರಾಮದಲ್ಲಿ ಬೆಳೆಯುತ್ತಿದೆ ಎಂದು ಅರಿತು ಕೊಳ್ಳುವುದು. ೨೦೦೧ರಲ್ಲಿ ಜಗತ್ತಿನ ಒಟ್ಟು ಕೊಳಗೇರಿ ನಿವಾಸಿಗಳ ಸಂಖ್ಯೆಯು ೯೨೪ ದಶಲಕ್ಷವಾಯಿತು. ಈ ಅಂಕೆಯು ಜಗತ್ತಿನ ೩೨% ನಷ್ಟು ಒಟ್ಟು ಜನಸಂಖ್ಯೆಯು ಕೊಳಗೇರಿ ನಿವಾಸಿಗಳಾಗಿದ್ದಾರೆ. ಅಭಿವೃದ್ಧಿ ಹೊಂದಿದ ಪ್ರದೇಶಗಳ ೪೩% ನಷ್ಟು ನಗರ ಜನಸಂಖ್ಯೆಯು ಕೊಳಗೇರಿಯಲ್ಲಿ ವಾಸಿಸುತ್ತಿದ್ದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ೭೮% ರಷ್ಟು ನಗರ ಜನಸಂಖ್ಯೆಯು ಕೊಳಗೇರಿ ನಿವಾಸಿಗಳಾಗಿದ್ದಾರೆ. ಇನ್ನೂ ಹಲವು ಅಭಿವೃದ್ಧಿಯ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವ್ಯತಿರಿಕ್ತವಾದ ಸ್ಥಿತಿಯಲ್ಲಿದ್ದು ಶ್ರೀಮಂತರು ತಮ್ಮ

ಗೃಹಗಳನ್ನು ಚಿಕ್ಕದ್ವಾರ ಪೂವೃತದಿಂದ ಬೇರ್ಪಡಿಸಿಕೊಂಡಿರುತ್ತಾರೆ. ಈ ವರದಿಯು ಕೊಳಗೇರಿಗಳ ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನು ಪ್ರಸ್ತುತ ಪಡಿಸುತ್ತದೆ. ನಕಾರಾತ್ಮಕ ಅಂಶವನ್ನು ಗಮನಿಸಿದಾಗ ಈ ವರದಿಯ ಕೊಳಗೇರಿಯಲ್ಲಿರುವ ಅಸಹನೀಯ ನಗರ ವಸತಿಯ ಸ್ಥಿತಿ ಅಂದರೆ ಅಭದ್ರತೆ ಮೂಲಭೂತ ಸೌಕರ್ಯಗಳ ಕೊರತೆ ಪ್ರಮುಖವಾಗಿ ನೀರು ಮತ್ತು ಸ್ವಚ್ಛತೆಯ ಕೊರತೆ ಸುರಕ್ಷತೆ ಹೊರತಾದ ಕಟ್ಟಡಗಳ ವಿನ್ಯಾಸ, ಅತಿಯಾದ ಜನಸಂದಣಿ ಹಾಗೂ ಅಪಾಯಕಾರ ಪ್ರದೇಶದಲ್ಲೇ ನೆಲೆ ಇದಲ್ಲದೇ ಕೊಳಗೇರಿ ಪ್ರದೇಶಗಳಲ್ಲಿ ಅತಿಯಾದ ಬಡತನ ಕಂಡುಬರುತ್ತವೆ ಹಾಗೂ ಸಾಮಾಜಿಕ ಮತ್ತು ಆರ್ಥಿಕತೆ ಅಭಾವ ಅಂದರೆ ಬಡತನ ಕುಟುಂಬಗಳು ನಿರುದ್ಯೋಗ, ಆರ್ಥಿಕ ಭೌತಿಕ ಹಾಗೂ ಸಾಮಾಜಿಕವಾಗಿ ಬಹಿಷ್ಕರಿಸಿರುವುದು ತಿಳಿದುಬರುತ್ತದೆ. ಕೊಳಗೇರಿ ನಿವಾಸಿಗಳು ಸಾಲದ ಅನೂಕೂಲತೆಗಳಿಂದ ವಂಚಿತರಾಗಿದ್ದಾರೆ. ಹಲವಾರು ದೋಷಗಳ ಕಾರಣ, ಸಂಪ್ರಾದಾಯಿಕ ಉದ್ಯೋಗಾವಕಾಶಗಳ ಕೊರತೆ ಪಕ್ಷಪಾತ ಹಾಗೂ ಭೌಗೋಳಿಕವಾಗಿ ಪ್ರತ್ಯೇಕ ವಾಸವಾಗಿರುವುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ತಿಳಿದುಬರುತ್ತದೆ. ಕೊಳಗೇರಿ ನಿವಾಸಿಗಳು ಕಲುಷಿತ ನೀರಿನಿಂದ ಉದ್ಭವವಾಗುವ ಕಾಯಿಲೆಗಳಾದ ಟೈಪಾಡ್, ಮಲೇರಿಯಾ, ಕಾಲರ ಹಾಗೂ ಹೆಚ್.ಐ.ವಿ./ ಏಡ್ಸ್‌ಗಳಂತಹ ಮಾರಕ ರೋಗಗಳನ್ನು ಕಾಣಬಹುದು, ಕೊಳಗೇರಿ ಮಹಿಳೆಯರ ಹಾಗೂ ಮಕ್ಕಳು ಈ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಕೊಳಗೇರಿ ಪ್ರದೇಶಗಳಲ್ಲಿ ಅತಿಯಾದ ಅಪರಾದ ನಡೆಯುತ್ತದೆ ಎನ್ನುವುದು ಸಾಮಾನ್ಯ ನಂಬಿಕೆಯಾಗಿದೆ. ಈ ಪ್ರದೇಶವು ಅತ್ಯಂತ ಕಡಿಮೆ ಬೆಲೆಯಲ್ಲಿ ಆಶ್ರಯವನ್ನು ನೀಡಿ ನಗರ ಸಮಾಜದಲ್ಲಿ ಜೀವನ ಸಾಗಿಸಲು ಅನುಕೂಲ ಮಾಡಿಕೊಡುತ್ತದೆ. ಕಡಿಮೆ ಆದಾಯವುಳ್ಳ ಕೆಲಸಗಾರರಿಗೆ ಆಶ್ರಯ ನೀಡಿ ಈ ಕೊಳಗೇರಿಯು ನಗರದ ಚಕ್ರವನ್ನೇ ವಿವಿಧ ಪದದಲ್ಲಿ ಸಾಗಿಸುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ನಗರಗಳಲ್ಲಿ ಬಹುಭಾಗದ ಕೊಳಗೇರಿ ನಿವಾಸಿಗಳು ಅಸಾಂಪ್ರದಾಯಿಕ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಸಣ್ಣ ಪುಟ್ಟ ವ್ಯಾಪಕಗಳನ್ನು ಕೊಳಗೇರಿಯಲ್ಲಿ ಆರಂಭಿಸಿ ನಗರದ ಉಳಿದ ಭಾಗಗಳಿಗೆ ತಲುಪಿಸುತ್ತಿದ್ದಾರೆ. ಬಹುಮಟ್ಟದ ಕೊಳಗೇರಿ ನಿವಾಸಿಗಳು ಪ್ರಾಮಾಣಿಕವಾಗಿ ಜೀವನ ಸಾಗಿಸಲು ಹೋರಾಟ ನಡೆಸುತ್ತಿರುವರು.

ಈ ಕೊಳಗೇರಿಯು ನಗರದ ಚಕ್ರವನ್ನು ವಿವಿಧ ಪದದಲ್ಲಿ ಸಾಗಿಸುತ್ತದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಗರಗಳಲ್ಲಿ ಬಹುಭಾಗದ ಕೊಳಗೇರಿ ಸಾವಾಸಿಗಳು ಅಸಾಂಪ್ರಾದಾಯಿಕ ವಲಯಗಳಲ್ಲಿ ಕೆಲವು ನಿರ್ವಹಿಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಸಣ್ಣ ಪುಟ್ಟ ವ್ಯಾಪಾರಗಳನ್ನು ಕೊಳಗೇರಿಯಲ್ಲಿ ಆರಂಭಸಿ ನಗರದ ಉಳಿದ ಭಾಗಗಳಿಗೆ ತಲುಪಿಸುತ್ತಿದ್ದಾರೆ. ಬಹುಮಟ್ಟದ ಕೊಳಗೇರಿ ನಿವಾಸಿಗಳು ಪ್ರಮಾಣಿಕವಾಗಿ ಜೀವನ ಸಾಗಿಸಲು ಹೋರಾಟ ನಡೆಸುತ್ತಿರುವರು. ಇವರು ಸಾಂಪ್ರದಾಯಿಕ-ಉದ್ಯೋಗಾವಕಾಶಗಳಿಗಾಗಿ ಪ್ರಯತ್ನ ನಡೆಸುತ್ತಿರುವರು. ಕೊಳಗೇರಿಯು ವಿಭಿನ್ನ ಸಂಸ್ಕೃತಿ ವ್ಯಕ್ತಿಗಳ ನೆಲೆಯಾಗಿದ್ದು, ಈ ಸಂಸ್ಕೃತಿಗಳ ಮಿಶ್ರಣದಿಂದ

ಹೊಸ ಸಂಸ್ಕೃತಿಯನ್ನು ಹುಟ್ಟಿಹಾಕಿದೆ. ಇದೆಲ್ಲಾ ತೊಂದರೆಗಳ ಮಧ್ಯೆಯೂ, ಕೊಳಗೇರಿ ನಿವಾಸಿಗಳ ಆರ್ಥಿಕವಾಗಿ ವಿವೇಚನಾತ್ಮಕವಾಗಿ ಕಾರ್ಯನಿರ್ವಹಿಸುತ್ತಾ ತಮಗಾಗಿ ಸ್ವಪ್ರಯತ್ನದಿಂದ ಆಶ್ರಯವನ್ನು ಕಂಡುಕೊಳ್ಳುತ್ತಿದ್ದಾರೆ. ಈ ಹಲವು ಸಕರಾತ್ಮಕ ಅಂಶಗಳನ್ನು ಕೊಳಗೇರಿ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ನ್ಯಾಯ ದೊರಕಿಸುತ್ತಿಲ್ಲ. ಈ ನಿಧಾನಗತಿಯ ಬೆಳವಣಿಗೆಯಿಂದ ಸೂಕ್ತವಾದ ಆಶ್ರಯದಿಂದ ಗುರಿಯನ್ನು ತಲುಪಲು ಸಾಧ್ಯವಾಗುವುದಿಲ್ಲ.

ಸುಧಾರಿಸಿದ ವಸತಿಗಳು ಹಾಗೂ ಇತರೇ ಭೌತಿಕ ಅನುಕೂಲತೆಗಳಿಂದ ಕೊಳಗೇರಿಯ ಸಮಸ್ಯೆಗಳು ಪರಿಹಾರವಾಗುತ್ತದೆಂಬ ಹಳೆಯ ನಂಬಿಕೆಯಿತ್ತು. ಕೇವಲ ಉತ್ತಮ ಕಟ್ಟಡಗಳ ವ್ಯವಸ್ಥೆ ಕೊಳಗೇರಿಯ ಸಮಸ್ಯೆಯನ್ನು ಹೊಡೆದೋಡಿಸಲು ಆದರೆ ಇಲ್ಲಿ ಪ್ರಮುಖವಾದ ಅಂಶವೆಂದರೆ ಬಡತನ. ಆದಕಾರಣ ಈ ವರದಿಯು ಅಸಾಂಪ್ರಾದಾಯಿಕ ವಲಯಗಳ ಕಸುಬುಗಳಿಂದ ಕುಲಕಸುಬುಗಳು ಮಾಯವಾಗಿ ಜ್ಯೋತಿಷ್ಯ ಹೇಳುವುದು, ಭಿಕ್ಷೆ ಬೇಡುವುದು, ಕಾಗದ ಹಾರಿಸುವ ಕೆಲಸಗಳನ್ನು ಬಹುತೇಕ ಕೊಳಗೇರಿ ಜನರು ಮಾಡುತ್ತಾರೆ. ನಗರ ಬಡಜನತೆಯು ಬೆಳೆಯಲು ಹಾಗೂ ಅವರ ಜೀವನವನ್ನು ಸಾಗಿಸಲು ಭವಿಷ್ಯದ ಯೋಜನೆಗಳನ್ನು ರೂಪಿಸಬೇಕೆಂದು ಒತ್ತಿಹೇಳುತ್ತದೆ. ಆದಕಾರಣ ಕೊಳಗೇರಿಯ ಯೋಜನೆಗಳನ್ನು ನಗರ ಬಡತನ ನಿವಾರಣೆಗಾಗಿ ಕೇಂದ್ರೀಕರಿಸಿ, ಬಡತನಕ್ಕೆ ಕಾರಣವಿರುವ ವಿವಿಧ ಅಂಶಗಳ ನಿರ್ಮೂಲನೆಗೆ ಪ್ರಯತ್ನಿಸಬೇಕು.

ಈ ವರದಿಯು ಹಲವು ಕೊಳಗೇರಿಯ ಸುಧಾರಣೆಯ ಕಾರ್ಯಕ್ರಮಗಳನ್ನು ಗುರುತಿಸುತ್ತದೆ. ಹಾಗೂ ಈ ಕಾರ್ಯಕ್ರಮವು ಬಡತನ ಕ್ಷೀಣಿಸುವ ಉದ್ದೇಶವನ್ನು ಹೊಂದಿದೆ. ಕೊಳಗೇರಿ ಉನ್ನತೀಕರಣದ ಕಾರ್ಯಕ್ರಮವು ಇಡೀ ನಗರವನ್ನು ಒಳಗೊಂಡಿರುತ್ತದೆ. ಇತರೆ ನಗರಗಳನ್ನು ಒಳಗೊಂಡ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತದೆ. ಯಶಸ್ಸಿನ ಹಾಗೂ ಸಾಮರ್ಥ್ಯ ಕೊಳಗೇರಿಯ ಉನ್ನತೀಕರಣಕ್ಕೆ ಮೂಲಭೂತ ಸೌಲಭ್ಯಗಳಿಗಾಗಿ ಹಣವಿನಿಯೋಗಿಸುವುದು ಅದರ ಸಾಮಾಜಿಕ, ಆರ್ಥಿಕ ಬೆಳವಣಿಗಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ನಗರದ ಬಡಜನರನ್ನು ಕೊಳಗೇರಿಯ ಬೆಳವಣಿಗೆಯ ಯೋಜನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದಾಗಿದೆ. ಮಾತ್ರವಲ್ಲದೇ ಸರಕಾರಿ ವಲಯಗಳೂ ಈ ನಗರ ಯೋಜನೆಗಳಲ್ಲಿ ಪಾಲ್ಗೊಳಿಸಿ ಕೊಳಗೇರಿ ಯೋಜನೆಗಳು ಪರಿಣಾಮಕಾರಿಯಾಗಿ ಕಾರ್ಯಗತವಾಗುವಂತೆ ಮಾಡಬೇಕು. ನಗರೀಕರಣ ಸಮಾಜವು ಹಾಗೂ ಅಂತರಾಷ್ಟ್ರೀಯ ಸಮುದಾಯವು ಕೊಳಗೇರಿಯ ಅಭಿವೃದ್ಧಿಯಲ್ಲಿ ಶ್ರಮಿಸುವಂತೆ ಮಾಡುವುದು ಕೊಳಗೇರಿಯ ಉದ್ದೇಶವಾಗಿದೆ.

ವಿಶ್ವಸಂಸ್ಥೆಯ ಮಾನವ ವಸಾಹತು ಯೋಜನೆಯ (UN-HAB(TAI) ಸಹಪ್ರಮಾಣದ ಗುರಿಯು ಜಾಗತಿಕಮಟ್ಟದಲ್ಲಿ ಕೊಳಗೇರಿಯ ಅಭಿವೃದ್ಧಿಗಾಗಿ ಶ್ರಮಿಸುವುದಾಗಿದೆ. ಆದ ಕಾರಣ

ಸಂಸ್ಥೆಗಳು ಪ್ರಮುಖ ಆದ್ಯತೆಯು ಕೊಳಗೇರಿಗಳ ಉನ್ನತೀಕರಣಕ್ಕೆ ಹಲವಾರು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನೂತನ ನಗರ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಹಣಕಾಸಿನ ಸಹಾಯದಿಂದ ಸ್ವಚ್ಛ ನೀರಿನ ಪೂರೈಕೆ ಹಾಗೂ ನಿರ್ಮೂಲತೆ ಪ್ರಮುಖವಾಗಿ ಪ್ರಾದೇಶಿಕ ಮಟ್ಟಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಿಕೆ ಮತ್ತು ನಗರ ಆರ್ಥಿಕತೆಯ ನಿರ್ವಹಣೆಯ ಮುಖಾಂತರ ಬಡಜನತೆಗಾಗಿ ಆದಾಯ ಸೃಷ್ಟಿಸುವ ಅವಕಾಶವನ್ನು ಕಲ್ಪಿಸುವುದು. ಕೊಳಗೇರಿಯ ಸವಾಲುಗಳು ಮಾನವನ ವಸಾಹತುಗಳ ಜಾಗತಿಕ ವರದಿ ೨೦೦೩ ಎಲ್ಲಾ ಪ್ರಯತ್ನಗಳಿಗೂ ಹೊಸ ಪ್ರಯೋಜನೆಯನ್ನು ನೀಡಿದೆ. ಕೊಳಗೇರಿ ನಿವಾಸಿಗಳ ಸುಧಾರಣೆಗಾಗಿ ರಾಷ್ಟ್ರೀಯ ಸರಕಾರಗಳು ಮುನಿಸಿಪಲ್ ಅಧಿಕಾರಿಗಳು, ನಾಗರೀಕ ಸಮಾಜ ಸಂಸ್ಥೆಗಳು ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳು ತೋರಿಸಿದ ಮಾರ್ಗವನ್ನು ಈ ವರದಿಯು ವಿಶ್ಲೇಷಿಸುತ್ತದೆ. ಈ ವರದಿಯು ಕೊಳಗೇರಿ ರಹಿತ ನಗರಗಳ ಭವಿಷ್ಯದ ಮಾರ್ಗವನ್ನು ವರದಿ ಮಾಡುತ್ತದೆ. ಹೀಗೆ ಕೊಳಗೇರಿಯ ಅಭಿವೃದ್ಧಿಯು ವಿಶ್ವಸಂಸ್ಥೆಯ ಸಹ ಪ್ರಮಾಣದ ಘೋಷಣೆಯಾಗಿದೆ.

ಹಾರ್ಡಿಮಾನ್ ಮತ್ತು ಮಿಡ್‌ಗ್ಲೇ (೧೯೮೯) ಪ್ರಕಾರ: ಕೊಳಗೇರಿಗೆ ಯಾವುದೇ ಆದ ನಿರ್ದಿಷ್ಟ ವ್ಯಾಖ್ಯೆಯು ಇಲ್ಲ. ನಗರ ಪ್ರದೇಶಗಳಲ್ಲಿ ಬಡಜನರು ಅತಿ ಕಡಿಮೆ ಬಾಡಿಗೆ ಇರುವ ವಸತಿಗಳಲ್ಲಿ ಸೇತುವೆಗಳ ಅಡಿಯಲ್ಲಿ, ಬೀದಿಗಳಲ್ಲಿ ಅಥವಾ ಕೊಳಗೇರಿಗಳಲ್ಲಿ ವಾಸಿಸುವುದು ಕಂಡುಬರುತ್ತದೆ. ಹಲವು ತಜ್ಞರ ಪ್ರಕಾರ ಕೊಳಗೇರಿಯನ್ನು ನಕಾರಾತ್ಮಕತೆಯಿಂದ ನೋಡಲಾಗುತ್ತಿದ್ದು, ಇದು ಯಾವುದೇ ವಿಭಿನ್ನ ಜೀವನಕ್ರಮವನ್ನು ಬಿಂಬಿಸುವುದಿಲ್ಲ.

ರಾಷ್ಟ್ರೀಯ ಗೃಹ ಪ್ರಾಧಿಕಾರ ಪ್ರಕಾರ: ಪುಸ್ತಕದಲ್ಲಿ ಕೊಳಗೇರಿಯು ಅಧಿಕ ಸಾಂದ್ರತೆಯಿಂದ ಕ್ಲಿಷ್ಟ ಪರಿಸ್ಥಿತಿ ಎದುರಿಸುತ್ತಿದೆ. (ಪ್ರತಿ ಗೃಹವು ೧೦೦) ಇಲ್ಲಿ ಮೂರು ಪ್ರಮುಖ ಷರತ್ತುಗಳನ್ನು ಕಾಣಬಹುದು.

(i) ಯಾವುದೇ ವಿನ್ಯಾಸ ಮಾದರಿಗಳಿಲ್ಲದೇ ಗೃಹಗಳನ್ನು ಕಟ್ಟಿರುವುದರಿಂದ ಖಾಸಗೀತನದ ಕೊರತೆ ಇದರಿಂದ ನಿವಾಸಿಗಳ ನಡುವೆ ವಿನಾಕಾರಣ ಘರ್ಷಣೆ.

(ii) ಕಳಪೆ ಗುಣಮಟ್ಟದ ಗೃಹಗಳು ಅಂದರೆ ನಿರ್ಮಾಣಕ್ಕಾಗಿ ಬಳಸಿದ ವಸ್ತುಗಳು ಶಿಥಿಲಾವಸ್ತೆ ಹೊಂದಿರುವುದು.

(iii) ಅಶಿಸ್ತಿನ ಭೌತಿಕ ಪರಿಸರ ಮತ್ತು ಮೂಲಭೂತ ಸೌಲಭ್ಯಗಳ ಹಾಗೂ ಸರಕಾರಿ ಸೌಲಭ್ಯಗಳ ಕೊರತೆ.

ಜಾನ್‌ಸನ್ (೧೯೭೮) ಪ್ರಕಾರ: ಕೊಳಗೇರಿಗಳು ನೈಸರ್ಗಿಕ ಪ್ರದೇಶಗಳಾಗಿದ್ದು ಇಲ್ಲಿ ಪ್ರತ್ಯೇಕವಾದ ಸಾಮಾಜಿಕ ಹಾಗೂ ಭೌತಿಕ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಇವರು

ಹಲವಾರು ರೀತಿಯ ಆದಾಯಗಳುಳ್ಳ ಗುರಿಯನ್ನು ಕೊಳಗೇರಿಯಲ್ಲಿ ಗುರುತಿಸಿದ್ದಾರೆ. ಹಾಗೆ ಕೊಳಗೇರಿ ನಿವಾಸಿಗಳ ಬಡತನ ನಗರದಲ್ಲಿ ವಾಸಿಸುವ ಇತರೇ ಬಡಜನರ ಬಡತನಕ್ಕೆ ಅಷ್ಟಾಗಿ ವ್ಯತ್ಯಾಸವನ್ನು ಕಾಣಲಾಗುವುದಿಲ್ಲ. ಬ್ಯಾಂಕ್‌ನ ಇತರೇ ಗೃಹಗಳಲ್ಲಿ ವಾಸಿಸುತ್ತಿರುವ ಬಡಜನತೆಯ ಸ್ಥಿತಿ ಹಾಗೂ ಕೊಳಗೇರಿಗಳಲ್ಲಿ ವಾಸಿಸುವ ಬಡಜನತೆಯ ಸ್ಥಿತಿ ಹೊರತಾಗಿಲ್ಲ. ಮಲ್‌ಡರ್ (೧೯೯೨) ಅವರು ವಾದಿಸುವ ಹಾಗೆ ಪೋಷಕ ಕಟ್ಟುಪಾಡುಗಳಿಂದ ಗೃಹವು ಒಂದು ರಕ್ಷಣೆಯ ಸ್ಥಳವಾಗಿದ್ದು ಗೃಹದಿಂದ ಹೊರಬಂದರೆ, ಪ್ರಪಂಚವು ಅಸುರಕ್ಷಿತ ಸ್ಥಳ, ಆರ್ಥಿಕ ಸಮಸ್ಯೆಯನ್ನು ಎದುರಿಸಿದಾಗ ಹೊರಜಗತ್ತು ಅಸುರಕ್ಷಿತ ಸ್ಥಳವಾಗಿದೆ ಎಂಬುದು ನಿಜ ಎನಿಸುತ್ತದೆ.

ಮೈಕೇಲ್‌ಗ್ರೀನ್ ವುಡ್ (೧೯೭೧) ಅರ್ ಸಲಾಕರ್ಮಾ (೧೯೭೭) ಬಾಸ್ವಜಿತ್ ಬ್ಯಾನರ್ಜಿ ಹಾಗೂ ಎಸ್.ಎಂ. ಕಾನ್‌ಬೂರ್ (೧೯೮೧) ರ ನಂಬಿಕೆಯಂತೆ ಬಡತನಕ್ಕಿಂತ ಆಸ್ತಿಯು ವಲಸೆಗೆ ಪ್ರಮುಖ ಕಾರಣ. ಈ ಎಲ್ಲಾ ತಜ್ಞರ ಪ್ರಕಾರ : ವಲಸೆಗೆ ಗ್ರಾಮೀಣ ಬಡತನವು ವಲಸೆಗೆ ನಿರೋಧಕವಾಗಿ ವರ್ತಿಸುತ್ತದೆ. ಈ ತಜ್ಞರ ಪ್ರಕಾರ: ನಗರ ಪ್ರದೇಶಗಳಲ್ಲಿರುವ ಆರ್ಥಿಕ ಅವಕಾಶಗಳಿಗನುಗುಣವಾಗಿ ವಿಶೇಷ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ ಗ್ರಾಮೀಣ ಪ್ರದೇಶದ ಜನತೆ ನಗರಗಳಿಗೆ ವಲಸೆ ಹೋಗುತ್ತಾರೆ. (ಗುಪ್ತಾ ಟಿ.ಆರ್. ೧೯೬೧ ಹೆಬ್ಬೂರ್ ಆರ್.ಕೆ. ೧೯೭೮).

ಆಲ್‌ಫ್ರೆಡ್ ಡಿಸೋಜ್ (೧೯೭೫) ರವರ ಪ್ರಕಾರ ನಗರದ ವೈ.ಎಸ್. ಜನಸಂಖ್ಯೆಯು ಕೊಳಗೇರಿಯಲ್ಲಿ ಮತ್ತು ಇಕ್ಕಟಾದ ವಸಾಹತುಗಳಲ್ಲಿ ವಾಸಿಸುತ್ತಿದ್ದಾರೆ. ಅಲಹಾಬಾದಿನಲ್ಲಿ ಸುಮಾರು ೪೫% ನಗರ ಜನಸಂಖ್ಯೆಯು ಕೊಳಗೇರಿಯಲ್ಲಿ ವಾಸಿಸುತ್ತಿದ್ದು, ಅವರ ಅಂಕಿ–ಅಂಶ ೨೫ ದಶಲಕ್ಷವಾಗಿದೆ. ನಗರದ ವಿನ್ಯಾಸದ ಲಕ್ಷಣ ಬಡಜನರ ವಸತಿಗಳು ಹಾಗೂ ನಗರ ಬಡತನ ಹಿನ್ನೆಲೆಯಲ್ಲಿ ಸಾಮಾಜಿಕ–ಪರಿಸರದ ಲಕ್ಷಣಗಳನ್ನು ಅಧ್ಯಯನ ಮಾಡಿದ್ದಾರೆ.

ಮಜುಮ್‌ದಾರ್ (೧೯೭೮) ರವರು ತಮ್ಮ ಅಧ್ಯಯನದಲ್ಲಿ ನಗರ ಬಡಜನರ ಸಾಮಾಜಿಕ ಗುಣಲಕ್ಷಣಗಳಲ್ಲಿ ಗ್ರಾಮೀಣ ಬಡಜನರು ಹಾಗೂ ನಗರ ಬಡಜನರು ಒಂದೇ ಎನ್ನುವುದನ್ನು ಸಾಭೀತು ಪಡಿಸಲು ಪ್ರಯತ್ನಿಸಿದ್ದಾರೆ. ಕಾರಣ ಸಾಮಾಜಿಕ ರಚನೆಯಲ್ಲಿ ಇಬ್ಬರೂ ಕೆಳಹಂತ ಸಮುದಾಯದ ಒಟ್ಟು ಬೆಳವಣಿಗೆ ಹಾಗೂ ಸಂಚಲನವು ವಸಾಹತುಗಳ ಬೆಳವಣಿಗೆಗೆ ಅನುಕೂಲಕರವಾಯಿತು. ಅದೇ ವರ್ಷ ಶಿವರಾಮಕೃಷ್ಣನ್‌ರವರು ಕೊಳಗೇರಿಯ ಮೂಲ ವ್ಯಾಪ್ತಿ ಕೊಲ್ಕತ್ತಾ ಮೆಟ್ರಪೊಲಿಟನ್ ಜಿಲ್ಲೆಯ ನಗರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖವಾಗಿ ವಸಾಹತು ಕಾಲೋನಿಗಳ ಹಂಚಿಕೆಯ ಬಗ್ಗೆ ಚರ್ಚೆ ಮಾಡಿದರು. ಸಾಮಾಜಿಕ, ಆರ್ಥಿಕ ಅಸಮತೋಲನಗಳಿಂದ ಕೊಳಗೇರಿಯಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ತಿಳಿಯಲು ಹಲವು ನಿಯಮ ಪಾಲಿಕೆಗಳನ್ನು ಅನುಸರಿಸುತ್ತಾರೆ. ಖಾನ್ (೧೯೭೮) ಅವರು ಕೊಳಗೇರಿಯ

ಸಾಮಾಜಿಕ ಆರ್ಥಿಕ ಗುಣಲಕ್ಷಣಗಳನ್ನು ಚರ್ಚಿಸಿದ್ದಾರೆ ಹಾಗೂ ಇವರು ಹೈದರಾಬಾದ್‌ನ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಹೆಚ್ಚುತ್ತಿರುವ ಕೊಳಗೇರಿಗಳ ಸಾಮಾಜಿಕ, ಆರ್ಥಿಕ ವ್ಯತ್ಯಾಸಗಳನ್ನು ಚರ್ಚಿಸಿದ್ದಾರೆ.

ಮೋಹಿಸಿನ್ (೧೯೭೭): ಅವರು **"ಕೊಳಗೇರಿ ಮಕ್ಕಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯ ಬಗ್ಗೆ ಸಮಾಜಶಾಸ್ತ್ರಿಯ ವಿವರಣೆ"** ಎಂಬ ಪುಸ್ತಕದಲ್ಲಿ ಕೊಳಗೇರಿ ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನಕ್ಷರತೆಯನ್ನು ಶಿಕ್ಷಣದ ಅನುಕೂಲತೆಗಳ ಕೊರತೆಯಿಂದ ಕಾಣಬಹುದೆಂದು ತಿಳಿಸಿದ್ದಾರೆ. ಈ ಮಕ್ಕಳ ಕೊಳಗೇರಿ ಕುಟುಂಬಗಳಿಗೆ ಭೇಟಿಯಾಗಿ ಅವರ ಸಾಮಾಜಿಕ ಆರ್ಥಿಕ ಸ್ಥಿತಿ ಗತಿಗಳನ್ನು ಅಧ್ಯಯನ ಮಾಡಿದ್ದಾರೆ. ಶಿಕ್ಷಣಕ್ಕೆ ಯಾವುದೇ ರೀತಿಯ ಪ್ರೇರಣೆ ಸಿಗದೇ ಬಹುಮಟ್ಟದ ಮಕ್ಕಳು ಶಾಲೆಯನ್ನು ಬಿಟ್ಟು ಹೊರಬಂದಿರುವುದನ್ನು ಮಣಿ (೧೯೮೦) ಯವರು ಗಮನಿಸಿದ್ದಾರೆ.

ರತ್ನ ಎಸ್. ರಾವ್ (೧೯೯೦): ಭಾರತದ ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್‌ಕಲಾಂರವರು ಮಕ್ಕಳನ್ನು ಉದ್ದೇಶಿಸಿ ಭವಿಷ್ಯಕ್ಕಾಗಿ ಕನಸುಕಾಣಿ ಎಂದು ನುಡಿದಿರುವುದನ್ನು ತಿಳಿಸಿದ್ದಾರೆ. ಇದೇ ರೀತಿಯಾಗಿ ಅಗ್ರಮಟ್ಟದಲ್ಲಿ ತಜ್ಞವ್ಯಕ್ತಿಗಳು ಯುವ ಪೀಳಿಗೆಗಳಿಗೆ ಉಜ್ವಲ ಭವಿಷ್ಯಕ್ಕಾಗಿ ಕನಸು ಕಾಣಲು ಪ್ರೇರೇಪಿಸುತ್ತಿದ್ದಾರೆ. ಉದಾ: 'ಕೊಳಗೇರಿರಹಿತ ನಗರಗಳು ಬಡತನವನ್ನು ಹೊಡೆದೋಡಿಸಿ ಸರ್ವರಿಗೂ ಆಶ್ರಯ ಎಲ್ಲರಿಗೂ ಶಿಕ್ಷಣ' ಮುಂತಾದವುಗಳಿಂದ ನಿರ್ಣಯಕಾರರೂ ನಾಗರೀಕರು ಉದ್ದಿಮೆಗಾರರೂ ಕೈಗೂಡಿಸುತ್ತಿದ್ದಾರೆ. ಇವರು ಆಕಾಂಕ್ಷೆ ಮತ್ತು ಕನಸುಗಳನ್ನು ಘೋಷಣೆಗಳನ್ನು ಮತ್ತು ಯೋಜನೆ ಮತ್ತು ವಿಧಾನಗಳನ್ನಾಗಿ ಪರಿವರ್ತಿಸಲು ಯತ್ನಿಸುತ್ತಿದ್ದಾರೆ.

ಕೇಂದ್ರ ಸರಕಾರವು ಕೊಳಗೇರಿಯ ಸುಧಾರಣೆಗಾಗಿ ಇತ್ತೀಚಿಗೆ ನಿರೂಪಿಸಿದ ಹಲವಾರು ಯೋಜನೆಗಳಲ್ಲಿ ಕೊಳಗೇರಿ ರಹಿತಭಾರತ ಒಂದಾಗಿದೆ. ನಗರಗಳ ಯೋಜನೆಗಳನ್ನು ಭಾರತ ಸರಕಾರವು ೭೦ ಹಾಗೂ ೮೦ ರಲ್ಲಿ ಜಾರಿಗೆತಂದಿತು. ೧೯೭೦ ರಲ್ಲಿ ಸರಕಾರವು ಕೊಳಗೇರಿಗಳ ಪರಿಸರ ಸುಧಾರಣೆಗಾಗಿ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಇಲ್ಲಿ ಸ್ವಚ್ಛ ಕುಡಿಯುವ ನೀರು ಹಾಗೂ ಸ್ವಾಸ್ಥ್ಯತೆಗೆ ಆದ್ಯತೆ ನೀಡಲಾಯಿತು. ನಂತರ ೧೯೯೬ರಲ್ಲಿ ಹೇರಳವಾದ ನಿಧಿಯಿಂದ ರಾಷ್ಟ್ರೀಯ ಕೊಳಗೇರಿ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ೨೦೦೫ರಲ್ಲಿ ಜವಾಹರಲಾಲ ನೆಹರು ರಾಷ್ಟ್ರೀಯ ನಗರ ನವೀಕೃತ ನಿಯೋಗವನ್ನು ಪ್ರಾರಂಭಿಸಿತು. ೨೦೦೬ ರಿಂದ ೨೦೧೨ರ ಹೊತ್ತಿಗೆ ನಗರಗಳು ಬೆಳವಣಿಗೆಗಾಗಿ ಸುಮಾರು ೧೫೦೦೦೦ ಕೋಟಿ ಬಜೆಟ್ (ಮುಂಗಡ)ಅನ್ನು ಬಿಡುಗಡೆ ಮಾಡಲಾಯಿತು. ನಗರ ಬಡತನ ಹೋಗಲಾಡಿಸಲು ಕಳೆದ ೪೦ ವರ್ಷಗಳಲ್ಲಿ ಕೈಗೊಂಡ ಯಾವ ಯೋಜನೆಗಳಿಂದಲೂ ಕೊಳಗೇರಿಯ ನಿರ್ಮೂಲನ ಸಾಧ್ಯವಾಗಿಲ್ಲ.

ರಾಷ್ಟ್ರೀಯ ಕೊಳಗೇರಿ ಯೋಜನೆಯು ಕೊಳಗೇರಿಯು ನಗರ ಪ್ರದೇಶಗಳ ಸಮಗ್ರ ಭಾಗವೆಂದು ಹಾಗೂ ನಗರ ಆರ್ಥಿಕತೆಗೆ ಇವರ ಕೊಡುಗೆ ಅಪಾರವೆಂದು ಗುರುತಿಸಿದ್ದಾರೆ. ಅವರು ಕೂಲಿಯನ್ನು ಕೈಗೆಟಕುವ ದರದಲ್ಲಿ ಪಡೆಯುತ್ತಾರೆ. ಅಸಾಂಪ್ರಾದಾಯಿಕ ವ್ಯಾಪಾರ ವಲಯಗಳ ಬೆಳವಣಿಗೆಗೆ ಅವರು ಸಾಧನವಾಗಿದ್ದಾರೆ. ಕೊಳಗೇರಿ ನಗರಗಳ ಆರ್ಥಿಕತೆಯಲ್ಲಿ ವಸ್ತುಗಳ ಉತ್ಪಾದನೆಯಲ್ಲಿ ಹಾಗೂ ಮಾರುಕಟ್ಟೆಗಳ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಆದ ಕಾರಣ ರಾಷ್ಟ್ರೀಯ ಯೋಜನೆಯು ಕೊಳಗೇರಿಗಳ ಉನ್ನತೀಕರಣ ಹಾಗೂ ಸುಧಾರಣೆಗೆ ಆದ್ಯತೆ ನೀಡಿದೆ. ಇದು ಕೊಳಗೇರಿಗಳ ಮುಕ್ತಗೊಳಿಸುವಿಕೆಗೆ ಸಲಹೆ ಸೂಚಿಸುತ್ತಿಲ್ಲ. ಇದನ್ನು ಕೇವಲ ನಿಯಂತ್ರಿತ ಸಲಹೆ ಮೇರೆಗೆ ಮಾತ್ರ ನಡೆಸಲು ನಿರ್ಧರಿಸಿದೆ.

ಕೊಳಗೇರಿ ಸಮೀಕ್ಷೆಗಳ ವರದಿಯ ಪ್ರಕಾರ : ಕೊಳಗೇರಿಗಳ ಜನಸಂಖ್ಯೆಯು ತುಂಬಾ ಕಡಿಮೆಯಾಗಿರುವುದರಿಂದ, ರಾಜ್ಯ ಪ್ರಾಧಿಕಾರದಿಂದ ಗುರುತಿಸಲ್ಪಟ್ಟ ಕೊಳಗೇರಿಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. STEM ಹಾಗೂ ಇತರೇ ಸಾಂಪ್ರದಾಯಿಕ ಸಂಸ್ಥೆಗಳು ನಡೆಸಿದ ಸಮೀಕ್ಷೆಗನುಗುಣವಾಗಿ ನಗರದಲ್ಲಿ ಕಾನೂನಾತ್ಮಕವಾಗಿ ಗುರುತಿಸಲ್ಪಟ್ಟ ಕೊಳಗೇರಿಗಳು ಕೇವಲ ೨೫ ರಿಂದ ೪೫% ಇದರಿಂದ ಸಮೀಕ್ಷೆಯ ಅಂದಾಜಿನ ಎರಡು ಪಟ್ಟು ಕೊಳಗೇರಿಯ ಜನಸಂಖ್ಯೆ ಎಂದು ಊಹಿಸಲ್ಪಡಬಹುದು. ಆದಕಾರಣ ನಗರ ಜನಸಂಖ್ಯೆಯ Y3 ಭಾಗವು ಕೊಳಗೇರಿಯಲ್ಲಿ ವಾಸಿಸುತ್ತಾರೆ ಎಂದು ಊಹಿಸುವುದು ಸೂಕ್ತಕರ, ೨೦೦೯–೨೦೧೦ರಲ್ಲಿ ಭಾರತದ ಅಂದಾಜು ಜನಸಂಖ್ಯೆಯ ೧೧೮ ಕೋಟಿ ೧,೧೮೦ ದಶಲಕ್ಷ (ಜನಸಂಖ್ಯೆಯ ರಾಷ್ಟ್ರೀಯ ಆಯೋಗ) ಹಾಗೂ ಇವರಲ್ಲಿ ನಗರ ಜನಸಂಖ್ಯೆಯು ಸುಮಾರು ೪೧ ಕೋಟಿ ೪೧೦ ದಶಲಕ್ಷ ನಗರದಲ್ಲಿ ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವವರ ಜನಸಂಖ್ಯೆಯು ೨೦೦೯ರಲ್ಲಿ ಸುಮಾರು ೧೬೫ ಕೋಟಿ ೧೬೫ ದಶಲಕ್ಷ ಇದರಲ್ಲಿ ೭೦ ರಿಂದ ೭೫% ನಷ್ಟು ಕೊಳಗೇರಿ ನಿವಾಸಿಗಳಗಿರಬಹುದೆಂದು ಊಹಿಸಿದಾಗ ೨೦೦೯ರ ಕೊನೆಯ ವೇಳೆಗೆ ಇವರ ಜನಸಂಖ್ಯೆಯ ೧೨೪ ದಶಲಕ್ಷವಾಗಿರಬಹುದೆಂದು ಅಂದಾಜಿಸಲಾಗಿದೆ.

ಅರ್ಥಶಾಸ್ತ್ರಜ್ಞರು ನಗರ ಪ್ರದೇಶಗಳ ಮತ್ತು ಕೊಳಗೇರಿಗಳ ಬಗ್ಗೆ ಜನಸಂಖ್ಯಾಶಾಸ್ತ್ರಜ್ಞರು, ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು, ಸಮಾಜವಿಜ್ಞಾನಿಗಳೂ, ಭೌಗೋಳಿಕಶಾಸ್ತ್ರಜ್ಞರು ಹಾಗೂ ಇತರೇ ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾಹಿತಿಗಳು ಹೇರಳವಾಗಿದೆ. ಭೌಗೋಳಿಕ ತಜ್ಞರು ಜನರು ವಾಸಿಸುವ ಸ್ಥಳದಲ್ಲಿರುವ ಜನಸಂಖ್ಯಾ ಸಾಂದ್ರತೆಯನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಇತಿಹಾಸಕಾರರು ಅವರ ಚರಿತ್ರೆಯನ್ನು ರಾಜಕೀಯ ಹಾಗೂ ನಗರಗಳ ಸಂಸ್ಕೃತಿಯ ಹುಟ್ಟನ್ನು ತಿಳಿಸಲು ಯತ್ನಿಸಿದ್ದಾರೆ. ಅರ್ಥಶಾಸ್ತ್ರಜ್ಞರು ನಗರವನ್ನು ಸಂಪನ್ಮೂಲಗಳು ಹಂಚಿಕೆಯ ನಿಟ್ಟಿನಲ್ಲಿ ಪರಿಗಣಿಸಿರುವುದಲ್ಲದೇ ಇದನ್ನು ಪ್ರಾಂತೀಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಆರ್ಥಿಕ ಪದ್ಧತಿಯ ಘಟಕವೆಂದು ಪರಿಗಣಿಸಿದ್ದಾರೆ. ಸಮಾಜಶಾಸ್ತ್ರಜ್ಞರು ಇವರಲ್ಲಿನ ನಾಯಕತ್ವ, ಸಂವಹನ

ಪ್ರಕ್ರಿಯೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಭಾವನಾತ್ಮಕ ಜೀವನದ ವಿವರವನ್ನು ವ್ಯಕ್ತಪಡಿಸುತ್ತಾರೆ.

ಸಮಿಲಾ ಗಾಲ್ಯಾನಿ (೨೦೧೨) ನೈರೋಬಿ ಮತ್ತು ಡಕಾರ್‌ನ ಪ್ರಕಾರ ೩,೭೧೫ ಕೊಳಗೇರಿ ನಿವಾಸಿಗಳಿಂದ ಸಂಗ್ರಹಿಸಿದ ಮಾಹಿತಿಯಂತೆ ಬಾಡಿಗೆಗಾರರ ಜೀವನ ಸ್ಥಿತಿ–ಗತಿಗಳು ಮನೆ ಯಜಮಾನರಿಗಿಂತ ಅಹಿತಕರವಾಗಿರುವುದು ತಿಳಿದುಬಂದಿದೆ. ನೈರೋಬಿಗೆ ಹೋಲಿಸಿದಾಗ ಬಾಡಿಗೆ ಹಾಗೂ ಜೀವನದ ಸ್ಥಿತಿಗಳು ಕೊಳಗೇರಿಯ ಬಾಡಿಗೆ ಮಾರುಕಟ್ಟೆಯಲ್ಲಿ ವ್ಯತ್ಯಾಸಗಳಿದ್ದರೂ, ಎರಡು ನಗರಗಳಲ್ಲಿ ಬಾಡಿಗೆ ಕಾರಣಗಳು ಒಂದೇ ಆಗಿವೆ. ವಿಶ್ಲೇಷಣೆಯ ಸಲಹಿಸುವುದೇನೆಂದರೆ ವಿಭಿನ್ನ ಬಾಡಿಗೆಯ ಪರಿಣಾಮವು ಒಟ್ಟು ಜೀವನಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುತ್ತದೆ. ಮನೆ ಯಜಮಾನನ ಮನೆಯ ಒಂದು ಭಾಗವನ್ನು ಬಾಡಿಗೆ ಪಡೆದುಕೊಂಡಂಥಹ ಸಂದರ್ಭದಲ್ಲಿ ಮನೆಯ ಎಲ್ಲಾ ಕೊಳಗೇರಿ ನಿವಾಸಿಗಳು ಉತ್ತಮ ಜೀವನ ಸ್ಥಿತಿಯನ್ನು ಹೊಂದಬಹುದು.

L.N.P Mothaty ಮತ್ತು Swathy Montnanty ರವರು ತಮ್ಮ ಸಂಶೋಧನೆಗೆ ಒರಿಸ್ಸಾದ ಭುವನೇಶ್ವರ ನಗರದ ೧೯೦ ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದಾರೆ. ಇದರಲ್ಲಿ ೫೯ ಕೊಳಚೆ ಪ್ರದೇಶಗಳು ಮುನ್ಸಿಪಲ್ ಕಾರ್ಪೋರೇಷನ್‌ಗೆ ಸೇರಿದವುಗಳಾಗಿವೆ. ೧೩೧ ಕೊಳಚೆ ಪ್ರದೇಶಗಳು ಅನಧಿಕೃತ ಕೊಳಚೆ ಪ್ರದೇಶಗಳಾಗಿವೆ. ಮುನ್ಸಿಪಾಲ್ ಕಾರ್ಪೋರೇಶನ್‌ಗಳು ಅಧಿಕೃತವಾದ ಸೇರಿದ Hoda Bhoi Sahi ಕೊಳಚೆ ಪ್ರದೇಶವನ್ನು ಮತ್ತು ಅನಧಿಕೃತ ಕೊಳಚೆ ಪ್ರದೇಶಗಳಲ್ಲಿ ಒಂದಾದ ಪಥಾರ್ ಬಂದ್ (T. PATARBANDH) ಕೊಳಚೆ ಪ್ರದೇಶವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಈ ಎರಡು ಕೊಳಚೆ ಪ್ರದೇಶಗಳನ್ನು ಅವುಗಳಿಂದ ೨೦೦ ಕುಟುಂಬ ಸರಳ ಯಾದೃಚ್ಛಿಕ ನಮೂನೆ ಮೂಲಕ ಆಯ್ಕೆ ಮಾಡಿಕೊಂಡಿದ್ದಾರೆ. ಇದರಲ್ಲಿ ೯೨೭ ರಷ್ಟು ಕುಟುಂಬಗಳು ಪಿತೃಪ್ರಧಾನವಾಗಿದ್ದರೆ, ಶೇ ೮% ರಷ್ಟು ಸ್ತ್ರೀ ಪ್ರಧಾನ ಕುಟುಂಬ ಜೊತೆ ಶೇ ೯% ರಷ್ಟು ಹಿಂದೂ ಧರ್ಮಕ್ಕೆ ಸೇರಿದ ಜನರಿದ್ದಾರೆ. ಶೇ ೫% ರಷ್ಟು ಜನರು ಇಸ್ಲಾಂ ಧರ್ಮಕ್ಕೆ ಸೇರಿದವರಾಗಿದ್ದಾರೆ. ನಂತರ ಪರಿಶಿಷ್ಟ ಜಾತಿ (SC) ಸೇರಿದವರು ಶೇ.೨೪% ರಷ್ಟಿದರೆ ಪರಿಶಿಷ್ಟ ಪಂಗಡ (ST) ಶೇ.೧೦% ರಷ್ಟು ಇತರೆ ಹಿಂದುಳಿದ ವರ್ಗದವರು (OBC) ಶೇ.೧೬ರಷ್ಟು ಹಾಗೂ ಇವರನ್ನು ಹೊರತಾದವರು ಶೇ.೫೦% ರಷ್ಟಿದ್ದಾರೆಂಬುದು ಸಂಶೋಧನೆಯಿಂದ ಗುರುತಿಸಲ್ಪಟ್ಟಿದೆ. ಮೇಲಿನ ಎರಡು ಕೊಳಚೆ ಪ್ರದೇಶಗಳಲ್ಲಿ ಶಿಕ್ಷಣ, ಆರೋಗ್ಯ ನೀರು ಸರಬರಾಜು, ಶೌಚಾಲಯಗಳು ಮತ್ತು ಪಾಯಖಾನೆಗಳು ಮುಂತಾದ ಮೂಲಭೂತ ಸೌಲಭ್ಯಗಳ ಕುರಿತು ವ್ಯತ್ಯಾಸಗಳು ತುಲನಾತ್ಮಕವಾಗಿ ತೋರಿಸುತ್ತಾ ಹೋಗಿದ್ದಾರೆ.

ಅಧಿಕೃತ ಎಂದರೆ ಮುನಿಸಿಪಾಲಿಟಿಗೆ ಸೇರಿದ ಅಧಿಕೃತ ಘೋಷಿತ ಕೊಳಚೆ ಪ್ರದೇಶಗಳನ್ನು ಸರ್ಕಾರ ನೀಡಿರುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡಿದ್ದಾರೆ. ಜನರು ಉತ್ತಮ ಸ್ಥಿತಿಯಲ್ಲಿದ್ದರೆ

ಅನಧಿಕೃತ ಕೊಳಚೆ ಪ್ರದೇಶಗಳು ಸೌಲಭ್ಯಗಳು ಸಿಗದಿರುವ ಜನರು ಅದರೊಂದಿಗೆ ಸಿಕ್ಕಂತಹ ಕೆಲ ಸೌಲಭ್ಯಗಳನ್ನು ಕೂಡ ಸರಿಯಾಗಿ ಬಳಸಿಕೊಳ್ಳದಿರುವ ಜನರಿದ್ದು ಅಧಿಕೃತ ಪ್ರದೇಶಗಳು ಜನರಿಗಿಂತ ಎಲ್ಲಾ ವಿಚಾರಗಳಲ್ಲೂ ಹಿಂದಿದ್ದಾರೆ ಎಂಬುದು ಅವರ ಸಂಶೋಧನೆಯ ಸಾರಾಂಶದಲ್ಲಿ ವ್ಯಕ್ತವಾಗಿದೆ.

ಶಾಮಚರಣ ದುಬೆ (೧೯೯೦) ಅನುವಾದ ಆರ್.ಎಲ್ ಅನಂತರಾಮಯ್ಯ (೧೯೯೪) 'ಭಾರತೀಯ ಸಮಾಜ' ಈ ಗ್ರಂಥದಲ್ಲಿ ಭಾರತದ ನಗರಗಳಲ್ಲಿನ ಅಸಂಖ್ಯಾತ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. ಭಾರತದಲ್ಲಿ ಬಡತನದ ರೇಖೆಗಿಂತ ಕಡಿಮೆ ಇರುವ ಜನರು ಹೆಚ್ಚಾಗಿದ್ದು ಗ್ರಾಮೀಣ ಬಡವರು ತಮ್ಮ ಹಳ್ಳಿಗಳನ್ನು ತೊರೆದು ನಗರಗಳಲ್ಲಿ ಬರುವಂತಹದಾಗಿದ್ದು ಅನೇಕ ಸಮಸ್ಯೆಗಳನ್ನು ಸೃಷ್ಟಿಸಲು ಕಾರಣವಾಗಿರುತ್ತಾರೆ. ಈ ರೀತಿ ವಲಸೆ ಬಂದವರು ವಸತಿ ಹೀನರಾಗಿದ್ದು ಸಾಮಾನ್ಯ ಅನಿಸಬಹುದು. ಆದರೆ ನಗರಗಳ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಿದ್ದಾರೆ.

ಈ ಸಂಖ್ಯೆ ಭಯ ಹುಟ್ಟಿಸುವಂತಿದೆ ಕೊಳಚೆ ವಾಸ ಸರ್ವೆ ಸಾಮಾನ್ಯವಾಗಿದೆ. ಕೊಳಚೆಗಳಲ್ಲಿ ಕೆಲವರು ಶ್ರಮಜೀವಿಗಳಿದ್ದಾರೆ. ಕೆಲವರು ಸುಲಿಗೆಕೋರರು, ಕಳ್ಳಸಾಗಾಣಿಕೆದಾರರಿದ್ದಾರೆ. ಕಳ್ಳ ಮಧ್ಯ (ಸಾರಾಯಿ) ಸಾಗಿಸುವರು, ವೇಶ್ಯಾವೃತ್ತಿಗೆ ಇಳಿದವರು ಕಾಣಸಿಗುತ್ತಾರೆ. ಕೊಳಚೆ ಪ್ರದೇಶದ ಬಡವರಿಗೆ ಪೌರ ಸೌಲಭ್ಯಗಳು ತುಂಬಾ ಕಡಿಮೆ. ನಲ್ಲಿಗಳಲ್ಲಿ ಬೆಳಗ್ಗೆ ಸುಮಾರು ಒಂದುಗಂಟೆ ಹಾಗೂ ಸಂಜೆ ಒಂದು ಗಂಟೆ ನೀರು ಬರುತ್ತದೆ. ಕೊಳಗೇರಿಗಳಲ್ಲಿ ಕೆಲವೇ ಕೆಲವು ಬೀದಿಗಳಲ್ಲಿ ನಲ್ಲಿಗಳಿರುವುದರಿಂದ ನೀರಿಗಾಗಿ ಬಿಂದಿಗೆ ಹಿಡಿದುನಿಂತು ವಾರ ಸರತಿ ಸಾಲುಗಳಲ್ಲಿ ಸಮಸ್ಯೆಗಳು ಉದ್ಭವಾಗಿರುತ್ತವೆ. ಬಹುತೇಕ ಕೈಪಂಪುಗಳು ಹಾಳಾಗಿರುತ್ತವೆ. ಕೆಲಸ ಮಾಡುವ ಕೆಲವು ವಿಪರೀತ ಒತ್ತಡ ಶೌಚಾಗೃಹಗಳು ಸೊಲ್ಲೇ ಇರುವುದಿಲ್ಲ. ಬಹುಪಾಲು ಜನರು ಬಯಲನ್ನೇ ಉಪಯೋಗಿಸಬೇಕು. ಹಂದಿಗಳು ಮತ್ತು ಬೀದಿ ನಾಯಿಗಳು ಅಲ್ಪಸ್ವಲ್ಪ ಸ್ವಚ್ಛತೆಗಳನ್ನು ಒದಗಿಸುತ್ತವೆ. ಏನೋ ನಿಜ, ಆದರೆ, ಅವುಗಳು ರೋಗಗಳನ್ನು ಹರಡುತ್ತವೆ.

ರಸ್ತೆಗಳು ಮತ್ತು ಓಣಿಗಳು ಇಕ್ಕಟ್ಟು ಇದ್ದು, ಅಲ್ಲಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಕಷ್ಟು ಸಿಬ್ಬಂದಿಯು ಕೂಡ ಇಲ್ಲ. ಔಷಧಿಗಳಲ್ಲಿ ಅತ್ಯಂತ ಜರೂರಾದ ಜೀವ ರಕ್ಷಣೆ ಜೀವರಕ್ಷಕ ಔಷಧಿಗಳ ಕೊರತೆ ಶಾಲೆಗಳು ಅಹಿತಕರ ವಾತಾವರಣದಿಂದ ಕೂಡಿದ್ದು ಕೇವಲ ನಾಮಕಾವಸ್ಥೆ ಶಿಕ್ಷಣವನ್ನು ಒದಗಿಸುತ್ತವೆ. ಸಾರ್ವಜನಿಕ ಸಾರಿಗೆ ತುಂಬ ದುಬಾರಿ ಹಾಗೂ ಸದಾ ಜನರಿಂದ ತುಂಬಿರುತ್ತವೆ. ಸಿನಿಮಾಗಳು ಮತ್ತು ವಿಡಿಯೋ ಅಂಗಡಿಗಳು ಸ್ವಲ್ಪ ಮಟ್ಟಿಗೆ ಮನರಂಜನೆ ಒದಗಿಸಬಹುದು. ಅವು ಬಹುತೇಕ ಕಾಲುದಾರಿ ಮತ್ತು ಕೊಳಗೇರಿ ವಾಸಿಗಳು ತಮ್ಮ ಪರಂಪರಾಗತ ಜೀವನ ಕ್ರಮವನ್ನು ತಪ್ಪಿಸಿಕೊಂಡಿರುತ್ತಾರೆ. ಸಾಂಸ್ಕೃತಿಕವಾಗಿ ಒಂದು ಶೂನ್ಯದಲ್ಲಿ ಅವರು ಜೀವಿಸುತ್ತಾರೆ. ಅವರಲ್ಲಿ ಅನೇಕರು ತಮ್ಮ ಕುಟುಂಬವನ್ನು ಬಿಟ್ಟು ಬಹುದೂರ ಬಂದಿರುತ್ತಾರೆ.

ನಗರ ಜೀವನವನ್ನು ಅಳವಡಿಸಿಕೊಳ್ಳುವುದು ಅವರಿಗೆ ಕಷ್ಟವಾಗಿರುತ್ತದೆ. ಅವರು ಒಂಟಿ ಜೀವನ ನಡೆಸುತ್ತಾರೆ ಇಲ್ಲವೆ ಕೆಟ್ಟ ಸಹವಾಸಕ್ಕೆ ಬೀಳುತ್ತಾರೆ. ಕುಟುಂಬ ಸಮೇತ ಜೀವನ ನಡೆಸುತ್ತಿರುವವರು ಕೂಡ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಗಂಡಸರು ಕೆಲಸಕ್ಕೆ ಹೋದಾಗ ಕೊಳಗೇರಿಯಲ್ಲಿ ಬಿಟ್ಟು ಹೋದ ಹೆಂಗಸರಿಗೆ ಯಾವ ಭದ್ರತೆಯು ಇರುವುದಿಲ್ಲ. ತಂದೆ-ತಾಯಿಯರ ಅಧಿಕಾರ ಬೇಡುತ್ತಾರೆ. ಕೆಲವರು ಮಾದಕ ದ್ರವ್ಯ ವ್ಯಸನಿಗಳಾಗಿರುತ್ತಾರೆ. ಹಲವರು ಬಾಲಪರಾಧಿಗಳಾತ್ತಾರೆ. ಈ ನಗರ ಗಂಡಾಂತರವು ಜನತೆಯನ್ನು ಗಮನಾರ್ಹವಾಗಿ ಅವರಿಸಿದೆ. ಉದಾ: ಕಲ್ಕತ್ತಾದ ಕೊಳಗೇರಿ ನಿವಾಸಿಗಳು ಸಂಖ್ಯೆ ನಗರ ಜನಸಂಖ್ಯೆಯ ಶೇ. ೩೨% ರಷ್ಟು ಮುಂಬಯಿಯಲ್ಲಿ ಶೇ. ೨೫% ರಷ್ಟು, ಮದ್ರಾಸಿನಲ್ಲಿ ಶೇ.೨೪ ರಷ್ಟಿರುವುದನ್ನು ಸಂಶೋಧನೆಯಿಂದ ವ್ಯಕ್ತಿಗೊಂಡಿದೆ.

ಡೋನಾಲ್ಡ್ ಲೈಟ್ ಟಿ.ಆರ್. ಸುಜಮೀರ್ ಅವರ 'ಸೋಷಿಯಾಲಜಿ' (೧೯೭೫) ಎಂಬ ಕೃತಿಯಲ್ಲಿ ಒಂದು ಸಮುದಾಯ ನಗರಗಳಾಗಿ ರೂಪಾಂತರ ಹೊಂದುವುದರ ಬಗ್ಗೆ ತಿಳಿಸಿದ್ದಾರೆ.

ನಗರ ಹುಟ್ಟು ಹೇಗಾಯಿತು? ಅಲೆಮಾರಿ ಜೀವನ ನಡೆಸುತ್ತಿದ್ದ ಮನುಷ್ಯ ಒಂದಡೆ ನಲೆ ನಿಂತು ಬೆಳೆಯುವ ಪ್ರಾಣಿಗಳನ್ನು ಸಾಕುವ ಹಂತಕ್ಕೆ ತಲುಪಿ ನಂತರ ಹತ್ತಾರು ಕುಟುಂಬಗಳನ್ನು ಒಟ್ಟಾಗಿ ಒಂದೆಡೆ ವಾಸಮಾಡುತ್ತ ಮತ್ತೆ ಜನಸಂಖ್ಯೆ ಹೆಚ್ಚಿದಂತೆಲ್ಲ ಕಾಲೋನಿಗಳು (ಬೀದಿಗಳು) ಹೆಚ್ಚುತ್ತಹೋದಂತೆ ಹಳ್ಳಿಗಳೇ ನಗರಗಳಾದವು ಎನ್ನುತ್ತಾರೆ. ಇದರೊಂದಿಗೆ ನೈಲ್, ಟೈಗ್ರೀಸ್ ಮತ್ತು ಸಿಂಧೂ ನದಿ ಬಯಲ್ಲಿನಲ್ಲಿ ಮೊದಲು ಈ ರೀತಿಯ ನಗರಗಳು ಅಸ್ತಿತ್ವಕ್ಕೆ ಬಂದವು ಎನ್ನುವರು. ಇದರೊಂದಿಗೆ ನೈಲ್, ಟ್ರೈಗ್ರೀಸ್ ಮತ್ತು ಸಿಂಧೂ ನದಿ ಬಯಲಿನಲ್ಲಿ ಮೊದಲು ಈ ರೀತಿಯ ನಗರಗಳು ಅಸ್ತಿತ್ವಕ್ಕೆ ಬಂದವು ಎನ್ನುವರು. ಕೈಗಾರಿಕರಣಕ್ಕಿಂತ ಮುಂದಿನ ದಿನಗಳ ನಗರಗಳ ಬೆಳವಣಿಗೆ ಕುರಿತು ಚಿಂತನೆ ನಡೆಸಿದ್ದಾರೆ. ಆ ದಿನಗಳಲ್ಲಿ ನಗರಗಳ ಪರಿಸ್ಥಿತಿ ಅನುಗುಣವಾಗಿ ಕಾರಣಗಳನ್ನು ಹೇಳಿದ್ದಾರೆ.

ಇತ್ತೀಚಿನ ನಗರ ಜೀವನ, ನಗರ ಸಾಮಾಜಿಕ ಸಂಬಂಧಗಳು, ಸಾಮಾಜಿಕ ಲಕ್ಷಣಗಳನ್ನು ಅನಾಮಿಕತೆ, ವೈಯಕ್ತಿಕ ಸ್ವಾತಂತ್ರ್ಯ, ಸಾಮಾಜಿಕ ನಿಯಂತ್ರಣ ಇವುಗಳನ್ನು ಚರ್ಚಿಸಿದ್ದಾರೆ. ನಂತರ ಈಗಿನ ನಗರ ಸಾಮಾಜಿಕ ಸಂಬಂಧವು ಟೋನಿಸೆರಸ್ ಹೇಳಿರುವ ಗೆಸೆಲ್ ಚಾಫ್ಟನ್ನು (Gesells Charle) ಹೋಲುತ್ತದೆ ಎನ್ನುವರು (ನೇರವಾದ ಮುಖಮುಖಿಯಾದ) ಆತ್ಮೀಯವಾದ, ಅನ್ಯೋನ್ಯ ಸಂಬಂಧಗಳಾಗಿರುವ ಪ್ರಾಥಮಿಕ ಸಮೂಹ ಗ್ರಾಮಗೈಮನ್ ಚಾಫ್ ತಿಳಿಸುತ್ತಾರೆ.

ಮೆಟ್ರೋಪಾಲಿಟನ್ ನಗರಗಳಲ್ಲಿ ಕೊಳಚೆ ಪ್ರದೇಶಗಳು ಮತ್ತು ಜನರು ವಾಸಸ್ಥಳ ಬಗ್ಗೆ ಆಲ್‌ಫ್ರೆಡ್ ಡಿಸೋಜ ಮತ್ತು ಗೋಪಾಲ್ ಭಾರ್ಗ (Alfred De Souza, Gopal Bhoragere) ರವರು ಈ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಮೆಟ್ರೋಪಾಲಿಟನ್ ನಗರಗಳು ಮಹಾನಗರ ಇತಿಮಿತಿ ಇಲ್ಲದೆ ಬೆಳದಿವೆ. ಈ ಮಹಾನಗರಗಳ ಶೇ.೨೦% ರಿಂದ ಶೇ.೩೦% ರಷ್ಟು ಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇಷ್ಟೊಂದು ಕೊಳಚೆ ಪ್ರದೇಶಗಳು ನಿರ್ಮಾಣಕ್ಕೆ ಜನಸಂಖ್ಯೆ ಹೆಚ್ಚಳ ವಲಸೆ, ಬರುವಿಕೆ ಬಡತನ, ವಸತಿ ಸಮಸ್ಯೆ ಇವೆಲ್ಲವು ಹೇಗೆ ಕಾರಣ ಎಂಬುದನ್ನು ಲೇಖಕರು ಕೂಲಂಕಶವಾಗಿ ಹೇಳುತ್ತಾರೆ. ಇದಲ್ಲದೆ ಈ ಮಹಾನಗರಗಳ ನವೀಕರಣ ಹೇಗಾಗಬೇಕು? ಎಂಬುದರ ಬಗ್ಗೆ ಮಾಹಿತಿ ನೀಡುತ್ತಾರೆ. ನಗರಗಳ ನವೀಕರಣ ಮಾಡುವಾಗ ಎರಡು ಅಂಶಗಳ ಬಗ್ಗೆ ಲೇಖಕರು ಗಮನಹರಿಸುತ್ತಾರೆ.

ಮೂಲಭೂತ ಸೌಲಭ್ಯಗಳಿರುವ ಉತ್ತಮ ವಸತಿ ನೀಡುವುದು ಕೊಳಚೆ ಪ್ರದೇಶಗಳು ಅಂದರೆ ಬಸ್ತಿಗಳಲ್ಲಿ ವಾಸಿಸುವ ಜನರನ್ನು ಊರಿನಾಚೆ ಎಲ್ಲಾ ಅನುಕೂಲತೆಗಳನ್ನು ನೀಡಿ ಅಲ್ಲಿಗೆ ಅವರನ್ನು ರವಾನಿಸುವುದು. ಆದರೆ ಈ ಎರಡೂ ವಿಚಾರಗಳು ಅಧಿಕವಾಗಿ ಹೆಚ್ಚು ಭಾರವೆನಿಸುತ್ತವೆ ಎಂತಲೂ ಕೂಡ ಅಭಿಪ್ರಾಯ ಪಟ್ಟಿದ್ದಾರೆ.

ಇದಲ್ಲದೆ ಭಾರತದ ನಗರಗಳ ಕೊಳಚೆ ಪ್ರದೇಶಗಳು ಮತ್ತು ಇದರ ಬಗ್ಗೆ ಇರುವ ಯೋಜನೆಗಳು ಎಂಬ ವಿಚಾರವಾಗಿ ಗೋಪಾಲ್-ಭಾರ್ಗವರರು ಬರೆಯುತ್ತಾರೆ. ಈ ಲೇಖಕರು ಕೊಳಚೆ ಪ್ರದೇಶಗಳು ಶಾಪವಾಗಿದೆ ಹಾಗೆ ಕೊಳಚೆ ಪ್ರದೇಶಗಳ ವಿಧಗಳು ಇವುಗಳ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಈ ಸಮಸ್ಯೆ ಭಾರತಕ್ಕೆ ಮಾತ್ರ ಸಿಮೀತವಾಗಿದ್ದರೆ ಜಗತ್ತಿನ ಎಲ್ಲಾ ಅನಭಿವೃದ್ಧಿ, ಅಭಿವೃದ್ಧಿ ಹೊಂದಿರುತ್ತಿರುವ ದೇಶಗಳ ಸಮಸ್ಯೆಯಾಗಿದೆ ಎಂತಲು ಹೇಳುತ್ತಾರೆ. ಜೊತೆಗೆ ಪ್ರತಿ ಮಹಾನಗರಗಳಾದ ಬಾಂಬೆ, ಕೊಲ್ಕತ್ತ, ದೆಹಲಿಗಳಲ್ಲಿ ಕೊಳಚೆ ಪ್ರದೇಶ ಚಿತ್ರಣ ಅಲ್ಲಿನ ಸಮಸ್ಯೆಗಳು ಹಾಗೂ ಪರಿಣಾಮಗಳ ಬಗ್ಗೆ ಹೇಳಿದ್ದಾರೆ. ಯೋಜನಾ ಕಾರ್ಯಕ್ರಮಗಳಲ್ಲಿನ ಪ್ರತಿ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಅವುಗಳ ಉಪಯೋಗ ಮತ್ತು ಖರ್ಚಾಗಿರುವ ಹಣ ಇವುಗಳ ಬಗ್ಗೆಯು ಚರ್ಚಿಸಿದ್ದಾರೆ.

ರೋನಾಲ್ಡ್ ಡಬ್ಲ್ಯೂ ಸ್ಮಿತ್ ಅವರ ಸೋಷಿಯಾಲಜಿ ಆನ್ ಇಂಟ್ರಡಕ್ಷನ್ (೧೯೭೭) ಎಂಬ ಕೃತಿಯಲ್ಲಿ ಜನರ ಜೀವನದ ಬಗ್ಗೆ ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿದ್ದಾರೆ. ೧೯ನೇ ಶತಮಾನದ ಸಮಾಜದಿಂದಲೂ ನಗರ ಪ್ರದೇಶದ ಜನರ ಜೀವನದ ಬಗ್ಗೆ ಅನೇಕ ಸಮಾಜಶಾಸ್ತ್ರಜ್ಞರು ಕುತೂಹಲದಿಂದಲೇ ಅಧ್ಯಯನಗಳು ನಡೆದಿದೆ. ಈ ಬಗ್ಗೆ ಈ ಹಿಂದೆ ಅನೇಕ ತಜ್ಞರು ಸಮಾಜಶಾಸ್ತ್ರಜ್ಞರು ನೀಡಿರುವ ವಿಚಾರಗಳನ್ನು ಯಾಂತ್ರಿಕವಾಗಿ ಮತ್ತೊಮ್ಮೆ ಹೇಳಿದ್ದಾರೆ. ಎಮಿಲಿ ಡರ್ಖೀಂ, ಪ್ರಾಚೀನ ಸಮಾಜವನ್ನು ಯಾಂತ್ರಿಕ (ಮೆಕಾನಿಕಲ್) ಐಕ್ಯ ಮಹತ್ವಕ್ಕೆ ಹೋಲಿಸಿದ್ದಾರೆ.

ಅದೇ ರೀತಿ ಟೋನಿಸ್‌ರವರು (Tonnies) ನಗರ ಮತ್ತು ಗ್ರಾಮಗಳನ್ನು ಗೆಮೈನ್‌ಶಾಫ್ (Gemien Shehate) ಮತ್ತು ಗೆಸೆಲೈಶಾಫ್ (Gesell Schate) ಗುರುತಿಸಿದ್ದಾರೆ. ಆನಂತರ

ದಿನಗಳಲ್ಲಿ ಅಮೇರಿಕಾದ ತಜ್ಞರಾದ ರಾರ್ಬಟ್ ರೆಡ್‌ಫೆಲ್ ಎನ್ನುವರು ಗ್ರಾಮ ನಗರಗಳ ಅಂತರವನ್ನು ಗುರುತಿಸುತ್ತಿದ್ದಾರೆ. ಇದನ್ನು ಲೂಯಿಸ್ ವರ್ಥ್‌ವರು (Urbanism as away of Life) "Urbansim" ಎಂಬ ಪದವನ್ನು ಅದರ ಸಾರಾಂಶವನ್ನು ಬಳಸಿಕೊಂಡು ನಗರ ಜೀವನದ ಅಧ್ಯಯನದ ಬಗ್ಗೆ ಗಮನ ಹರಿಸಿದ್ದಾರೆ. ಆದರೆ ಇತ್ತೀಚಿನ ಸಮಾಜಶಾಸ್ತ್ರಜ್ಞರ ಪ್ರಕಾರ ಇಂದಿನ ಟೋನಿಸ್‌ವರು ಹೇಳಿದರು. ಗೆಸೆಲ್ಲೈ ಶಾಫ್ ಲಕ್ಷಣಗಳಂತೆ ಗುರುತಿಸಲಾಗುವುದಿಲ್ಲ. ಏಕೆಂದರೆ ನಾವೂ ನಗರಗಳಲ್ಲೂ ಕೂಡ ಉತ್ತಮ ಸಾಮಾಜಿಕ ಸಂಬಂಧಗಳಿಂದ ನೆರೆ ಹೊರೆ ಇದ್ದಾರೆ ಎಂತಲೂ ಆದರೂ ನಾವು ಹಿಂದೆ ಸಮಾಜಶಾಸ್ತ್ರಜ್ಞರ ಕೆಲವೊಂದು ವಿಚಾರಗಳನ್ನು ಅಲ್ಲಗಳೆಯುವಂತೆಯೂ, ಇಲ್ಲವೆಂತಲೂ ಹೇಳುತ್ತಾರೆ. ಏಕೆಂದರೆ ಇಂದು ನಗರಗಳಿಂದ ಕೂಡಲೆ ವಿವಿಧತೆ ಪರಿವರ್ತಿಸಿ ಭಿನ್ನತೆ ವ್ಯತ್ಯಾಸ ಇವೇ ಕಾಣುತ್ತೇವೆ. ಆದರೆ ನಗರಗಳ ಎಲ್ಲಾ ಪ್ರದೇಶಗಳಲ್ಲೂ ಇದೆ ಲಕ್ಷಗಳಿದದಿಲ್ಲ ಕೆಲ ಲಕ್ಷಣಗಳಿರುವುದಾಗಿ ಹೇಳುತ್ತಾರೆ.

ಪಿ.ಎಸ್.ಲಂಬಾ ಮತ್ತು ಎಸ್.ಎಸ್. ಸೋಲಂಕಿ 'ಇಂಪ್ಯಾಕ್ಟ್ ಆಫ್ ಅರ್ಬನೈಜೇಷನ್ ಅಂಡ್ ಇಂಡಸ್ಟ್ರಿಯಲೈಜೇಷನ್ ಆನ್ ರಿಯಲ್ ರೂರಲ್ ಸೊಸೈಟಿ' (೧೯೯೨) ಎಂಬ ಕೃತಿಯಲ್ಲಿ ಈ ಇಬ್ಬರು ಅಭಿಪ್ರಾಯದಂತೆ ವ್ಯವಸಾಯವನ್ನೇ ಆಧರಿಸಿರುವ ಭಾರತದಲ್ಲಿ ನಗರೀಕರಣ ಮತ್ತು ಕೈಗಾರೀಕರಣಗಳು ಬಡವ ಶ್ರೀಮಂತರ ಅಂತರವನ್ನು ಹೇಗೆ ಹೆಚ್ಚಿಸಿವೆ ಎಂಬುದನ್ನು ಚರ್ಚಿಸಿದ್ದಾರೆ. ಗ್ರಾಮೀಣ ಪ್ರದೇಶವು ಬಹು ಹಿಂದಿನಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕೃಷಿ ಹೀಗೆ ಎಲ್ಲಾ ರಂಗಗಳಲ್ಲೂ ಸಮಸ್ಯೆಗಳನ್ನು ಎದುರಿಸಿಕೊಂಡು ಬಂದಿದೆ. ಇಂದು ಕೂಡ ಸ್ಥಿತಿ-ಗತಿ ಬದಲಾಗಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದ ಅತೀ ಸಣ್ಣ ರೈತರು ಕೃಷಿ ಕಾರ್ಮಿಕರು ಪರಿಸ್ಥಿತಿಗಳಲ್ಲಿ ಏನು ಬದಲಾವಣೆಯಾಗಿಲ್ಲ. ಹಾಗೆಯೇ ಕೃಷಿಯ ಸಮಸ್ಯೆಗಳಾದ ನೀರಾವರಿ, ವಿಜ್ಞಾನ-ತಂತ್ರಜ್ಞಾನ ಅವಳವಡಿಸಿಕೊಳ್ಳಲಾಗದೆ. ಗ್ರಾಮಸ್ಥರು ಹದಗೆಟ್ಟ ಮಾರುಕಟ್ಟೆ ವ್ಯವಸ್ಥೆ ಇವೆಲ್ಲವನ್ನು ಕುರಿತು ಚಿಂತನೆ ನಡೆಸಿದ್ದಾರೆ. ಲೇಖಕರು ಸರ್ಕಾರದ ಯಾವುದೇ ಕಲ್ಯಾಣ ಕಾರ್ಯಕ್ರಮಗಳು, ಗ್ರಾಮೀಣ ಪ್ರದೇಶದ ಅಭಿವೃದ್ಧಿ ತರುವಲ್ಲಿ ಯಶಸ್ವಿಯಾಗಿಲ್ಲ ಎಂದು ಹೇಳುತ್ತಾ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಮೂಲಭೂತ ಸೌಲಭ್ಯಗಳು ಗ್ರಾಮೀಣ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯವಾಗಿಲ್ಲ. ಹೀಗೆ ವ್ಯವಸಾಯೋತ್ಪನ್ನಗಳಿಗೆ ಹೆಚ್ಚುಸುವಿಕೆಗೆ ಪ್ರೇರಣೆ ನೀಡಿದಲ್ಲಿ ಈ ಅಂತರ ಇನ್ನೂ ಹೆಚ್ಚುವ ನಿರೀಕ್ಷೆ ಇದೆ ಎನ್ನುವರು. ಬದಲಾವಣೆಗಳನ್ನು ನಗರ ಪ್ರದೇಶಗಳನ್ನು ತರುವಷ್ಟು ಸುಲಭವಾಗಿ ವೇಗವಾಗಿ ಸರ್ವತೋಮುಖವಾಗಿ ಹಳ್ಳಿಗಳಲ್ಲಿ ತರುತ್ತಿಲ್ಲ. ಇದು ಹೀಗೆಯೆ ಮುಂದುವರೆದರೆ ಗ್ರಾಮ, ನಗರ ಅಂತರ ಅಲ್ಲಿನ ಜನರು ನಗರಗಳ ಅಂತರ ಅಲ್ಲಿನ ಜನರ ಸಾಮಾಜಿಕ ಆರ್ಥಿಕ ಜೀವನದ ಅಂತರ ಭೂಮಿ ಆಕಾಶದಷ್ಟಾಗುತ್ತದೆ ಎನ್ನುವುದನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಲಕ್ಷ್ಮೀನರಸಯ್ಯನವರು 'ಅರ್ಬನೈಜೇಷನ್ ಅಂಡ್ ಸಿಟೀಸ್' (೨೦೦೫) ಎಂಬ ತಮ್ಮ ಗ್ರಂಥದಲ್ಲಿ ನಗರ ವಸತಿಯ ಬಗ್ಗೆ ಈ ಕೆಳಗಿನಂತೆ ತಿಳಿಸಲ್ಪಟ್ಟಿದ್ದಾರೆ. ಕಳೆದ ಅರ್ಧ ಶತಮಾನದಿಂದ

ಜಗತ್ತಿನ ಜನಸಂಖ್ಯೆ ಹೆಚ್ಚಿದಂತೆ ವಸತಿ ವ್ಯವಸ್ಥೆಯು ಹೆಚ್ಚುತ್ತಲೆ ಇದೆ. ಆದರೆ ಸರಿಯಾದ ಆರೋಗ್ಯಯುತವಾದ ವಸತಿ ವ್ಯವಸ್ಥೆ ಸಿಗದಾಗಿದೆ. ಇದರಿಂದ ಉತ್ತಮ ಮಟ್ಟದ ವಸತಿ ಇಲ್ಲದೆ ಕೊಳಚೆ ಪ್ರದೇಶ ನಿರ್ಮಾಣವಾಗಿದೆ. ಎಷ್ಟೋ ಜನರು ಬೀದಿಯಲ್ಲೆ ಬದುಕು ಸಾಗಿಸುವಂತಾಗಿದೆ.

ಇನ್ನು ಮುಂದಿನ ೫೦ ವರ್ಷಗಳಲ್ಲಿ ಮನೆಗಳ ಸಂಖ್ಯೆ ಈಗಿರುವುದಕ್ಕಿಂತ ಎರಡರಷ್ಟು ಆಗಬೇಕಾಗುತ್ತದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಇಂದಿನ ಜನಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ವಸತಿ ವ್ಯವಸ್ಥೆ ಇಲ್ಲದಿರುವುದರಿಂದಾಗಿ ಎಷ್ಟೋ ಜನ ಮನೆ ಇಲ್ಲದೆ ನಿರ್ಗತಿಕರಾಗಿದ್ದಾರೆ. ಮುಂದಿನ ದಿನಗಳಲ್ಲಿ ಪ್ರಪಂಚದಾದ್ಯಂತ ೧೦೦ ಮಿಲಿಯನ್‌ನಷ್ಟು ಜನರಿಗೆ ವಸತಿ ಇರುವುದಿಲ್ಲ. ಹಾಗೆಯೇ ೧ ಬಿಲಿಯನ್ ಜನರಿಗೆ ವಸತಿ ಇಲ್ಲದೆ ತಾತ್ಕಾಲಿಕ ವಸತಿಯಲ್ಲಿದ್ದು ಅವರಿಗೂ ಅಭದ್ರತೆ ಕಾಡುತ್ತದೆ. ಬಾಂಬೆ ನಗರವೊಂದಲೇ ಸುಮಾರು ೨,೫೦,೦೦೦ ಬೀದಿಯಲ್ಲಿ ಜೀವಿಸುತ್ತಿರುವ ಜನರಿದ್ದಾರೆ. ಮುಂದೆ ಬೀದಿಯಲ್ಲಿ ಜನಿಸುವ ಬೀದಿಯಲ್ಲಿ ಜೀವನ ಮಾಡುವ ಬೀದಿಯಲ್ಲಿ ಸಾಯುವ ಸ್ಥಿತಿಯ ಜನರಿರುವುದು ಪ್ರತಿ ಮುಖ್ಯ ನಗರಗಳಲ್ಲೂ ಸಾಮಾನ್ಯವಾಗಿರುತ್ತದೆ. ಜನಸಂಖ್ಯೆಗೆ ಕಡಿವಾಣ ಹಾಕದಿದ್ದರೆ ವಸತಿ ಇಲ್ಲದೆ ಜನರ ಸಂಖ್ಯೆ ನಾಟಕೀಯವಾಗಿ ಮೇಲೇರಲಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಾಟನ್ ಎ.ಎಂ.ವೈ. ಅವರು **'ದಿ ಸೋಸಿಯಾಲಜಿ ಆಫ್ ಜಂಡರ್'** (೨೦೦೫) ಎಂಬ ಗ್ರಂಥದಲ್ಲಿ ಲಿಂಗ ಎಂದರೇನು? ಎಂಬುದರ ಬಗ್ಗೆ ಈ ರೀತಿ ಪ್ರತಿಕ್ರಿಯಿಸುತ್ತಾರೆ.

ಲಿಂಗ ಎನ್ನುವುದು ಸ್ತ್ರೀತ್ವ ಮತ್ತು ಪುರುಷತ್ವದ ಮಾನಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೋಟ ಎನ್ನಬಹುದು. ಈ ವಿಚಾರವನ್ನು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಸ್ತ್ರೀತ್ವ ಮತ್ತು ಪುರುಷತ್ವ ಎಂಬುದು ಸಾಮಾಜಿಕ ಜೀವನದಲ್ಲಿ ಸಾಮಾಜಿಕರಣ ಮುಖಾಂತರ ಸ್ತ್ರೀ–ಪುರುಷರು ಪಡೆದುಕೊಂಡ ಲಕ್ಷಣಗಳಾಗಿವೆ.

ಇದರೊಂದಿಗೆ ಸ್ತ್ರೀ ಮತ್ತು ಪುರುಷರಲ್ಲಿ ಕೆಲ ಜೈವಿಕ ಮತ್ತು ಜನ್ನೋತ್ಸವ (Gemntion) ವ್ಯತ್ಯಾಸಗಳು ಆದರೆ ಅಷ್ಟೇ ಪರಿಶುದ್ಧವಾದ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸಲಾಗುದಿಲ್ಲ ಎಂದು ಹೇಳಿದ್ದಾರೆ ಲಿಂಗ ವ್ಯತ್ಯಾಸಗಳು(ತಾರತಮ್ಯ) ಮತ್ತು ಅಸಮಾನತೆಯ ಬಗ್ಗೆ ತಿಳಿಸುತ್ತಾ, ಈ ವ್ಯತ್ಯಾಸಗಳು ಮತ್ತು ಅಸಮಾನತೆಯ ಮೇಲೆ ಸಾಮಾಜಿಕ ಆಚರಣೆಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಸಿದ್ದಾರೆ ಲಿಂಗವನ್ನು ಹಲವು ಚೌಕಟ್ಟಿನ ಅಡಿಯ ಅಂದರೆ ವೈಯಕ್ತಿಕ ಅಂತೆ, ಕ್ರಿಯಾತ್ಮಕ ಹಾಗೂ ಸಂಸ್ಥಾಪಕ ಮಾರ್ಗಗಳ ಚೌಕಟ್ಟಿನ ಅಡಿಯಲ್ಲಿ ಅರ್ಥೈಯಿಸುವ ಪ್ರಯತ್ನ ಮಾಡಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ಪ್ರಾಯೋಗಿಕ ಸಾಕ್ಷಧಾರಗಳಿಂದ ಅಧ್ಯಯನ ನಡೆಸಿದ್ದಾರೆ. ಒಂದು ಯಥಾದೃಶ್ಯರೂಪಣ ಸಾಲದು ಎನ್ನವರು ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ಮಾರ್ಗದರ್ಶಿ ಅಂಶಗಳನ್ನು ಸಹ ತಿಳಿಸಲ್ಪಟ್ಟಿದ್ದಾರೆ. ಅವರ ನಂಬಿಕೆಯಂತೆ ಸಾಮಾಜಿಕ ಜೀವನ ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಇನ್ನೊಂದು ಮಹತ್ವದ ಅಂಶವೆಂದರೆ ಇಂತಹ ಅಂಶಗಳನ್ನು ಸಾಮಾಜಶಾಸ್ತ್ರದಲ್ಲಿ ಲಿಂಗದ ಬಗೆಗಿನ ಅಧ್ಯಯನವು ತೀರ ಇತ್ತೀಚಿಗಷ್ಟೆ ಪ್ರಾರಂಭವಾಗಿದೆ ಮತ್ತು ಅಧ್ಯಯನದ ವಿಷಯವಾಗಿ ಇನ್ನಷ್ಟು ಬೆಳೆಯುತ್ತಲೇ ಇದೆ. ಈ ವಿಚಾರ ಮರುಚಿಂತನೆ ಅಧ್ಯಯಗಳನ್ನು ಮಾಡುವ ಅಗತ್ಯವಿದ್ದು ಅಭಿಪ್ರಾಯವನ್ನು ನೀಡಲ್ಪಟ್ಟಿದ್ದಾರೆ.

ಲಕ್ಷ್ಮಿನರಸಯ್ಯ ಎಂ. ಅವರ 'ಪಾಪುಲೇಶನ್ ಅಂಡ್ ಬೈಯೋಡೆವರ್ಸಿಟಿ' (೨೦೦೬) ಎಂಬ ಕೃತಿಯಲ್ಲಿ ನಗರೀಕರಣ ಮತ್ತು ಪರಿಸರ (Urbansation and the Enviorment) ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ. ಇಂದಿನ ನಗರಗಳಲ್ಲಿನ ಪರಿಸರ ಸಮಸ್ಯೆಗಳಿಗೆ ಕಾರಣವೇನು? ಎಂದು ಚಿಂತಿಸಿದ್ದಾರೆ. ೨೦ ಶತಮಾನದ ಪ್ರಾರಂಭದಲ್ಲಿ ಜಗತ್ತಿನಾದ್ಯಂತ ಶೇ. ೫೦% ರಷ್ಟು ನಗರ ವಾಸಿಗಳಾದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯೂ ನಗರ ಜನಸಂಖ್ಯೆ ಒಂದೇ ಸಮನೆ ಹೆಚ್ಚುತ್ತದೆ. ಭಾರತದಲ್ಲೂ ಪರಿಸರ ಸಮಸ್ಯೆಗಳು ಹೆಚ್ಚುತಲೇ ನಗರ ಜನಸಂಖ್ಯೆ ಒಂದೆ ಸಮನ ಹೆಚ್ಚುತ್ತಿದೆ.

ನಗರ ಜನಸಂಖ್ಯೆ ಒಂದೆ ಸಮನ ಹೆಚ್ಚುತ್ತಿದೆ. ಭಾರತದಲ್ಲೂ ಪರಿಸರ ಸಮಸ್ಯೆಗಳು ಹೆಚ್ಚಿದಂತೆ, ಇವೆ ಅದರಲ್ಲೂ ಜಲಮಾಲಿನ್ಯಕ್ಕೆ ಕಾರಣ. ಚರಂಡಿಗಳ ಮತ್ತು ನಗರದ ಮನೆಗಳಿಂದ ಬಿಡುಗಡೆಯಾಗುವ ಬಚ್ಚಲನೀರಿನಿಂದ ಶೇ.೭೫% ರಷ್ಟು ನದಿಗಳು ಮಾಲಿನ್ಯಗೊಂಡಿದೆ. ಜನಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರಗಳು ಇದರ ಬಗ್ಗೆ ಕಾಳಜಿ ತೋರದಿರುವುದು ಇದಕ್ಕೆ ಕಾರಣ. ಈ ರೀತಿಯ ಮಾಲಿನ್ಯವು ಲೇಖಕರ ಪ್ರಕಾರ ಅರ್ಥಿಕಾಭಿವೃದ್ಧಿಗೆ ಮಾರಕ. ಇದಕ್ಕೆ ಸಂಬಂಧಿದಂತೆ ಸರ್ಕಾರದ ನಿಯಮಗಳು ಹೇರಬೇಕಾದರೆ ತಿಳಿಸುತ್ತಾ ಹೋಗುತ್ತಾರೆ. ಸರ್ಕಾರಗಳು ರಸ್ತೆ ನೀರಿನ ಸೌಲಭ್ಯಗಳನ್ನು ನೀಡಿದ್ದಾಗೆ ಅದಕ್ಕೆ ಸಂಬಂಧಿಸಿದಂತೆ ರಸ್ತೆ ನೀರಿನ ಸಮಸ್ಯೆಗಳ ಬಗ್ಗೆ ಚಿಂತಿಸುವುದಿಲ್ಲ ಉದಾ : ಅನುಪಯುಕ್ತ ನೀರಿನ ವಿತರಣಾ ವ್ಯವಸ್ಥೆ ನಾಯಿ. ಕೊಡೆಗಳಂತೆ ಬೆಳೆಯುತ್ತಿರುವ ನಗರಗಳು. ಇದರ ಬಗ್ಗೆ ಸೂರ್ಯ ನಿರ್ಧಾರ ತೆಗೆದುಕೊಳ್ಳುಬೇಕು. ಆದರೆ ಸರ್ಕಾರಗಳು ಒಮ್ಮುಖ ನಿರ್ಧಾರ ತೆಗೆದುಕೊಂಡು ಯಾರೋ ಕೆಲವರಿಗೆ ಮಾತ್ರ ಸಹಾಯವಾಗುವಂತಹ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ವ್ಯಕ್ತಪಡಿಸುತ್ತಾರೆ. ಗ್ರೀಕ್ ಪೊಲೀಸ್ ಇದ್ದ ಸಮಯದಲ್ಲಿ ಎಂದೂ ಯಾರೂ ನೋಡದ ಕೆಟ್ಟ ಸುಂದರ ನಗರವೊಂದನ್ನು ನಿರ್ಮಾಣ ಮಾಡಬೇಕೆಂದರೆ ಗ್ರೀಕ್ ಪಟ್ಟದ ಕೌನ್ಸಿಲ್ಲಗಳ ಮಹದಾಸೆಯಾಗಿತ್ತು. ಆದರೆ ಅಂತಹ ಸುಂದರ ನಗರ ನೋಡಲು ಭಾರತೀಯರು ಬಹಳ ವರ್ಷಗಳೇ ಕಾಯಬೇಕಾಗಿದೆ. ಎಂಬುದನ್ನು ಲೇಖಕರು ಚಿಂತಿಸಿದ್ದಾರೆ.

ಅಶೋಕ ನಾರಂಗ್‌ರವರು 'ಅರ್ಬನ್ ಸೋಷಿಯಾಲಜಿ' (೨೦೦೫) ಎಂಬ ತಮ್ಮ ಪುಸ್ತಕದಲ್ಲಿ ವಸತಿ ಸಮಸ್ಯೆಯ ಸಂಪೂರ್ಣ ಚಿತ್ರಣ ನೀಡಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶೇ.೨೫% ರಿಂದ ೫೦ ರಷ್ಟು ಜನರು ಕಾನೂನಿನ ಪರವಾನಿಗೆ ಇಲ್ಲದೆ ವಸತಿಗಳಲ್ಲಿ ವಾಸಿಸುತ್ತಾರೆ. ಹಾಗೆಯೇ ಇವರು ವಾಸಿಸುವ ಪ್ರದೇಶಗಳು ಅನಾರೋಗ್ಯಕರ ವಾತಾವರಣವನ್ನು ಹೊಂದಿವೆ. ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ. ಇದಲ್ಲದೆ ಹೀಗೆ ವಾಸಿಸುವ ಜನರು ತಮ್ಮನ್ನು ಈ ಸ್ಥಳದಿಂದ ಯಾವಾಗ ಒಕ್ಕಲೆಬ್ಬಿಸುತ್ತಾರೆ ಎಂಬ ಭಯದಲ್ಲೇ ಜೀವನ ನಡೆಸುತ್ತಿದ್ದಾರೆ. ಏಕೆಂದರೆ ಈ ಮನೆಗಳಿಗೆ ಕಾನೂನಿನ ಪರವಾನಿಗೆ ಇರುವುದಿಲ್ಲ. ಒಂದು ವೇಳೆ ಈ ಒಕ್ಕಲೆಬ್ಬಿಸುವಿಕೆ (ಹೊರ ತಳ್ಳುವಿಕೆ) ಏನಾದರೂ ಸಂಭವಿಸಿದರೆ ಇದರಿಂದ ಅದರ ಅವರು ಭಾರಿ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕುಗುತ್ತದೆ. ಇದರೊಂದಿಗೆ ಇಲ್ಲಿನ ಮಕ್ಕಳ ಬಗ್ಗೆ ಅಧ್ಯಯನ ನಡೆಸಿ ನಗರ ಪ್ರದೇಶಗಳ ಕೊಳಚೆ ಮಕ್ಕಳ ಬಗ್ಗೆ ಅನಿವಾರ್ಯವಾಗಿ ಗಮನ ಹರಿಸಲು ಸಾಧ್ಯವಾಗಿಲ್ಲ. ಅನಾರೋಗ್ಯಕರ ವಾತಾವರಣ ರೋಗರುಜಿನಗಳಿಗೆ ಎಡೆ ಮಾಡಿಕೊಡಲಾಗಿದೆ. ನೀರಿನ ಕೊರತೆಯಿಂದ ಮಕ್ಕಳು ಶುಚಿಯಾಗಿರುವುದಿಲ್ಲ. ಇಲ್ಲಿನ ಮಗು ಅನಾರೋಗ್ಯ ಅಶುಚಿತ ವಾತಾರಣ ರೋಗ ರುಜಿನಗಳಿಗೆ ಎಡೆ ಮಾಡಿಕೊಟ್ಟರೆ ನೀರಿನ ಕೊರತೆಯಿಂದ ಮಕ್ಕಳನ್ನು ಶುಚಿಯಾಗಿಡಲು ಸಾಧ್ಯವಾಗುತ್ತಿಲ್ಲ. ಇಲ್ಲಿನ ಮಗು ಅನಾರೋಗ್ಯ ಅಶುಚಿಯಾದ ವಾತಾವರಣದಲ್ಲಿ ತನ್ನ ದಿನನಿತ್ಯದ ಬಹುಪಾಲು ಸಮಯವನ್ನು ಕಳೆಯುತ್ತದೆ. ಅದಕ್ಕೆ ಸರಿಯಾದ ಆರೈಕೆ ಇಲ್ಲದೆ ಅಪೌಷ್ಟಿಕತೆ ಉಂಟಾಗುತ್ತದೆ. ಇದರಿಂದಾಗಿ ಶೇಕಡ ಅರ್ಧದಷ್ಟು ಮಕ್ಕಳು ಮರಣ ಹೊಂದುತ್ತಾರೆ. ಸಾಮಾಜಿಕ ವಿಘಟನೆಯ ಕೂಡ ಇಲ್ಲಿ ಹೆಚ್ಚಾಗಿದೆ. ಚಿಕ್ಕ ಮಕ್ಕಳ ಸಮಸ್ಯೆಗಳ ಜೊತೆಗೆ ಪ್ರೌಢಾವಸ್ಥೆಗೆ ಒಂದು ಮಕ್ಕಳು ಬಗ್ಗೆಯು ಇಲ್ಲಿ ಚರ್ಚಿಸಿ ಅವರ ಅಪವರ್ತನೆಗೆ ಕಾರಣವಾದ ಅಂಶಗಳ ಬಗ್ಗೆಯು ವಿವರಣ ನೀಡಿದ್ದಾರೆ. ಮಕ್ಕಳ ರಕ್ಷಣೆಗಾಗಿ ಯಾವ ನಿಯಮಗಳನ್ನು ಹಾಕಿಕೊಳ್ಳಬೇಕೆಂಬುದರ ಬಗ್ಗೆಯು ಇಲ್ಲಿ ಮಾಹಿತಿ ನೀಡಿದ್ದಾರೆ.

'ಮಂಥ್ಲಿ ಜರ್ನಲ್ ಆಫ್ ಸಿಟೀಸ್ ಗವರ್ನಮೆಂಟ್' (ನಂ. ೧೫-೧೮ ಸೆಪ್ಟಂಬರ್ ೧೯೮೫) ಎಂಬ ನಿಯತಕಾಲಿಕದಲ್ಲಿ ಬಾಂಬೆಯ ಕೊಳಚೆ ಪ್ರದೇಶದ ಬಗ್ಗೆ ಹೀಗೆ ಹೇಳಲ್ಪಟ್ಟಿದೆ. ಬಾಂಬೆ ನಗರದಲ್ಲಿ ಸುಮಾರು ೧೪೦ ಕೊಳಚೆ ಪ್ರದೇಶಗಳಿದ್ದು, ಸುಮಾರು ಅರ್ಧದಷ್ಟು ಜನರು ಆ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಬಾಂಬೆನಗರದ ಜನ ಸಾಂದ್ರತೆಯ ಶೇ. ೧೫೦% ರಷ್ಟು ಹೆಚ್ಚಾದಾಗ ವಸತಿ ಗೃಹಗಳು ಶೇ.೨೫% ರಷ್ಟು ಮಾತ್ರ ಹೆಚ್ಚಾದವು. ಆದುದರಿಂದ ೧೫ ಲಕ್ಷ ಜನರು ಮಾತ್ರ ವಾಸಿಸಲು ಅವಕಾಶವಿರುವ ಜಾಗದಲ್ಲಿ ೩೩ ಲಕ್ಷ ಜನರ ವಾಸಿಸಬೇಕಾಯಿತು.

೧೯೫೧ರಲ್ಲಿ ಸಂಗ್ರಹಿಸಲಾದ ಅಂಕಿ-ಅಂಶಗಳ ಪ್ರಕಾರ ಕೊಳಚೆಯಲ್ಲಿ ೨೦ ಜನರು ವಾಸಿಸಬೇಕಾದ ಪರಿಸ್ಥಿತಿ ಇದ್ದಿತು. ಅದು ಅಸಾಧ್ಯವಾದುದು. ಆದುದರಿಂದ ಅನೇಕ ಜನರು ರಸ್ತೆಗಳ ಪಕ್ಕದಲ್ಲಿನ ನೆಲೆಗಟ್ಟಿನ ಕಾಲುದಾರಿಗಳಲ್ಲಿ ರಾತ್ರಿ ವೇಳೆ ವಾಸಿಸುವುದು ಅನಿವಾರ್ಯವಾಗಿತ್ತು.

ಹೀಗೆ ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ ಆರೋಗ್ಯ ನೈರ್ಮಲ್ಯ ಕಡೆ ಸರಿಯಾದ ಗಮನವಿರುವುದಿಲ್ಲ. ಬಾಂಬೆಯ ಒಂದು ಕೊಳಚೆ ಪ್ರದೇಶದಲ್ಲಿ ೮೪೯ ಜನರು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ವ್ಯಕ್ತವಾದ ಅಂಶಗಳು ಈ ರೀತಿ ಇವೆ.

೫೪೧ ಜನರು ಅಂದರೆ ಶೇ. ೪೧.೬ ಸಾಧಾರಣೆ ಆರೋಗ್ಯವಂತರು.

೧೭೯ ಜನರು ಅಂದರೆ ಶೇ. ೨೦.೦ ರಕ್ತ ಹೀನತೆಯಿಂದ ಕೂಡಿದವರು.

೮೧ ಜನರು ಅಂದರೆ ಶೇ. ೯.೬ ಸುಧಾರಣ ಆರೋಗ್ಯವಂತರು.

ಆ ಜನರು ವಾಸಿಸುವ ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆ ಇರುವುದಿಲ್ಲ. ಹೀಗೆ ರಾಷ್ಟ್ರದ ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಬಾಂಬೆ ನಗರದಲ್ಲಿ ೧೯೮೧ ನೇ ಜನಗಣತಿಯ ಪ್ರಕಾರ ೯೦೦ ಕ್ಕೂ ಹೆಚ್ಚಾಗಿ ಕೊಳಚೆ ಪ್ರದೇಶಗಳು ಕಂಡುಬರುತ್ತದೆ. ಲೆಕ್ಕಕ್ಕೆ ಬರದಷ್ಟು ಜನರು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಾರೆ.

ಇವರಿಗೆ ಅನೂಕೂಲವಾಗುವಂತೆ ನಗರದಲ್ಲಿ ತುರ್ತಾಗಿ ೩೦೦ ಸಾವಿರ ಮನೆಗಳನ್ನು ೫೦ ಸಾವಿರ ಘಟಕಗಳನ್ನು ಹೆಚ್ಚಾಗಿ ವರ್ಷಕ್ಕೆ ಕಟ್ಟಿಸಿ ಕೊಡಬೇಕಾಗುತ್ತದೆ. ೧೯೮೧ನೇ ಜನಗಣತಿ ಪ್ರಕಾರ ಬಾಂಬೆ ನಗರದಲ್ಲಿ ೧೦ ದಶಲಕ್ಷರು ಜನರು ವಾಸಿಸುತ್ತಿದ್ದು ೨೦ನೇ ಶತಮಾನದ ಕೊನೆಯವರೆಗೆ ೧೩ ದಶಲಕ್ಷ ಜನರು ವಾಸಿಸಬಹುದು ಎಂದು ಅಂದಾಜು ಮಾಡಲಾಗಿದೆ. ಸಹಜವಾಗಿ ಗ್ರಾಮೀಣ ಪ್ರದೇಶದಿಂದ ನಗರದ ಕಡೆ ವಲಸೆ ಬರುವುದರಿಂದ ನಗರದ ಜನಸಂಖ್ಯೆ ಹೆಚ್ಚಾಗಿ ವಸತಿಗಳ ಅವಶ್ಯಕತೆ ಉಂಟಾಯಿತು ಇದರಿಂದ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಖಾಸಗಿ ವ್ಯಕ್ತಿಗಳು ಮುಂದಾದರು. ಇವರು ತಮ್ಮ ಸ್ವಂತ ಸ್ಥಳಗಳಲ್ಲಿ ಸಣ್ಣ ಸಣ್ಣ ಕೋಣೆಗಳನ್ನು ನಿರ್ಮಿಸಿದರು. ಇವರ ಒಂದು ಉದ್ದೇಶ ಲಾಭ ಮಾಡುವುದೇ ಆಗಿತ್ತು. ಈ ರೀತಿ ನಿರ್ಮಾಣವಾದ ಮನೆಗಳಿರುವ ಪ್ರದೇಶಗಳಿಗೆ ಚಾವಲಿಗಳಿಂದ ಕರೆಯುವರು ಒಂದೊಂದು ಚಾವಲಿಗಳ ಒಂದು ರೂಮಿನಲ್ಲಿ ಒಂದೊಂದು ಕುಟುಂಬಗಳು ಅಂದರೇ ೧೦ ರಿಂದ ೧೨ ಜನ ವಾಸಿಸುತ್ತಾರೆ. ಎಲ್ಲಾ ಕುಟುಂಬಳಿಗೂ ಸೇರಿದಂತೆ ಒಂದೇ ಸ್ನಾನದ ಮನೆ ಮತ್ತು ಮಲ ಮೂತ್ರ ವಿಸರ್ಜನೆ ಗೃಹ ಇರುತ್ತದೆ. ಈ ಚಾವಣಿಗಳನ್ನು ೩ ರಿಂದ ೪ ಅಂತಸ್ತುಗಳನ್ನು ಹೊಂದಿರುತ್ತವೆ. ಇಲ್ಲಿ ಕನಿಷ್ಠ ವಸತಿಗೆ ಬೇಕಾದ ನಾಗರಿಕ ಸೌಲಭ್ಯಗಳಿರುವುದಿಲ್ಲ. ಸಾಮಾನ್ಯವಾಗಿ ಈ ನಗರದ ಬೆಳವಣಿಗೆಯು ಅಸಹಜ ರೀತಿಯಲ್ಲಿ ಬೆಳೆಯುವುದರಿಂದ ಕಟ್ಟಡಗಳು ಬಹು ಮಹಡಿ ಕಟ್ಟಡಗಳೂ ನಿರಂತರವಾಗಿ ತಲೆ ಎತ್ತಿದವು. ಈ ರೀತಿಯ ಬೆಳೆವಣಿಗೆಯಿಂದ ಮಾನವನ ಜೀವನವು ದುಸ್ಥಿತಿಯಲ್ಲಿ ಕಂಡುಬರುತ್ತವೆ. ಇದರಿಂದ ಎಲ್ಲೆಲ್ಲೂ ಜನದಟ್ಟಣೆಯಿಂದ ಕೂಡಿದ ಪ್ರದೇಶಗಳು ಬೆಳೆದು ಕೊಳಚೆ ಪ್ರದೇಶಗಳಾಗುತ್ತವೆ. ಈ ಪ್ರದೇಶ ಕೊಳಚೆ ಪ್ರದೇಶಗಳಲ್ಲಾ ಬಾಂಬೆ ನಗರದಲ್ಲಿ ಚಾವಲಿಗಳ ಮೂಲ ಸ್ಥಾನಗಳಾಗಿರುತ್ತದೆ.

ಸಿವಿಲ್ ಅಫೇರ್ಸ್ ಎಂಬ ನಿಯತಕಾಲಿಕ ಮತ್ತು ವಿಶ್ವಕೋಶದಲ್ಲಿ ದೆಹಲಿ ಕೊಳಚೆ ಪ್ರದೇಶದ ಬಗೆಗಿನ ಮಾಹಿತಿ ಈ ಕೆಳಗಿನಂತಿದೆ. ಭಾರತದ ಮೂರನೆಯ ದೊಡ್ಡನಗರ ಹಳೆದೆಹಲಿ. ನಗರ ದಕ್ಷಿಣಕ್ಕಿರುವ ನವದೆಹಲಿ ಭಾರತದ ರಾಜಧಾನಿ ಹಳೆ ದೆಹಲಿಯ ಬಹುಭಾಗ ಷಹಜಹಾನ್, ದೊರೆ ಕಟ್ಟಿಸಿದ ಕೋಟೆಯೊಳಗಡೆಯೇ ಇದೆ. ಇಲ್ಲಿ ಅಸಂಖ್ಯಾತ ಪ್ರಾಚೀನ ಕಟ್ಟಡಗಳು ಪ್ರಾಚೀನ ವಸ್ತು ವಿಷಯಗಳು ಉಂಟು. ಇದು ಇಂಡೋ ಇಸ್ಲಾಮಿಕ್ ವಾಸ್ತುಶಿಲ್ಪದ ನೆಲೆಗಳಲ್ಲೊಂದು. ೧೯೬೯ ರಿಂದ ಈಚೆಗೆ ಪುರಾತತ್ವ ಇಲಾಖೆಯು ದೆಹಲಿಯ ಪುರಾಣ ಖಿಲಾದಲ್ಲಿ ಅವಶೇಷಗಳು ಬೆಳಕಿಗೆ ಬಂದಿವೆ. ಮಹಾಭಾರತ ಕಾಲದಿಂದ ಹಿಡಿದು ಮೊಗಲ್ ಕಾಲದವರೆಗೆ ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಮಜಲುಗಳನ್ನು ಇಲ್ಲಿ ಗುರುತಿಸಬಹುದು. ದೆಹಲಿ ಜನಸಂಖ್ಯೆ ೧೯೧೧-೧೯೬೧ ಅವಧಿಯಲ್ಲಿ ಹತ್ತು ಮಡಿ ಎಂದರೆ ೨,೪೦,೦೦ ರಿಂದ ೨೩,೫೦,೦೦೦ ಬೆಳೆಯಿತು. ೧೯೪೧-೧೯೫೧ ರಲ್ಲಿ ಇಮ್ಮಡಿಸಿತು. ಭಾರತದ ವಿಭಜನೆಯ ಫಲವಾಗಿ ನಿರಾಶ್ರಿತರು ಅಧಿಕ ಸಂಖ್ಯೆಯಲ್ಲಿ ಬಂದದ್ದು ಒಂದು ಇದಕ್ಕೆ ಮುಖ್ಯಕಾರಣ. ೧೯೬೧-೧೯೭೧ ಬೆಳವಣಿಗೆಯ ದರ ಭಾರತದ ಇತರ ನಗರಗಳ ಬೆಳವಣಿಗೆಯ ದರಗಳಿಗಿಂತ ಅಧಿಕವಾಗಿಯೆ ಇದೆ. ನಗರ ಸರಾಸರಿ ಸ್ಥೂಲ ಜನಸಾಂದ್ರತೆ ಚ.ಮೈಗೆ ೩೫೦೦ ಆದರೆ ನಗರದ ವಿವಿಧ ಭಾಗಗಳಲ್ಲಿ ಇವುಗಳಲ್ಲಿ ತೀವ್ರ ಅಂತರಗಳಿಗೆ ಹಳೆದೆಹಲಿಯ ಸದರಗಂಜ್ ಪ್ರದೇಶದಲ್ಲಿ ಚ. ೩೩೦. ಆದರೆ ನಗರದ ವಿವಿಧ ಭಾಗಗಳಲ್ಲಿ ಇವುಗಳಲ್ಲಿ ತೀವ್ರ ಅಂತರಗಿಗೆ ಹಳೆ ದೆಹಲಿಯ ಸದರಗಂಜ್ ಪ್ರದೇಶದಲ್ಲಿನ ನಗರ ಕೈಗಾರಿಕಾ ಪ್ರದೇಶಕ್ಕೆ ಜನರು ಬಂದು ಸೇರಿದರು. ಇವರು ಸೇರಿದ್ದ ಸ್ಥಳ ದೊಡ್ಡ ದೊಡ್ಡ ಕೊಳಚೆ ಪ್ರದೇಶಗಳಾಗಿ ಬೆಳೆದವು. ದೆಹಲಿ ಅಂದಿಗೆ ಹಳೆದೆಹಲಿ ಮತ್ತು ನವದೆಹಲಿ ಎಂದಿದ್ದು ಎರೆಡರಿಂದ ಸುಮಾರು ೪೧೮ ಕೊಳಚೆ ಪ್ರದೇಶಗಳು ಇಂದಿಗೂ ಇರುತ್ತವೆ. ಇಂಥ ಅನೇಕ ವಿವರಗಳನ್ನು ಪ್ರಸ್ತುತ ಕೃತಿ ಬೆಳಕು ಚೆಲ್ಲಿರುವುದು. ಹೀಗೆ ರಾಷ್ಟ್ರೀಯ, ಅಂತರಾಷ್ಟ್ರೀಯ, ಪ್ರಾದೇಶಿಕ, ಸ್ಥಳೀಯ ಮಟ್ಟದಲ್ಲಿ ಕೊಳಗೇರಿಗಳ ಬಗ್ಗೆ ಅಧ್ಯಯನಗಳಾಗಿವೆ. ಬಳ್ಳಾರಿ ಜಿಲ್ಲೆ ಬಗ್ಗೆ ಆಗಿರುವುದು ಅತಿ ವಿರಳವೆಂದು ಹೇಳಬಹುದು.

ಕೊನೆ ಟಿಪ್ಪಣಿಗಳು

೧. ದೇಸಾಯಿ ಮತ್ತು ಪಿಳ್ಳೆ, ೧೯೭೨ 'ಇಂಡಿಯನ್ ಸ್ಲಂ ಆಫ್ ಪ್ರೊಫೈಲ್' ಮುಂಬಾಯಿ, ವಿಶ್ವವಿದ್ಯಾಲಯ, ಪು. ೧೯

೨. ಕನ್ನಡ ವಿಶ್ವಕೋಶ ಸ-೯. ಜುಲೈ ೧೯೮೫, ಸಮಾಜಕಾರ್ಯ ವಿಶ್ವಕೋಶ, ಪು. ೭೦೫.

೩. ರಾಜಶೇಖರ್ ಎಸ್., ಅವರ ಸಾಮಾಜಿಕ ಸಮಸ್ಯೆಗಳು, ಪು. ೨೫

೪. ನಾರಾಯಣ ಎಂ., ನಗರ ಸಾಮಾಜಶಾಸ್ತ್ರ, ಪು. ೧೦೦

೫. ೧೯೫೭-೧೮೫೦ ಫಲಿತಾಂಶ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೊಳಗೇರಿಗಳು.

೬. ವಿಶ್ವಸಂಸ್ಥೆಯ ವರದಿ ಕೊಳಗೇರಿ ನಿವಾಸಿಗಳ ವರ್ಗೀಕರಣ.

೭. ಶಾಮಚರಣ ದುಬೆ, ೧೯೯೦, (ಅನುವಾದ) ಆರ್.ಎಲ್. ಅನಂತರಾಮಯ್ಯ ೧೯೯೪ ಭಾರತೀಯ ಸಮಾಜ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ಪು. ೬೦

೮. ಕನ್ನಡ ವಿಶ್ವಕೋಶ ಸಂಖ್ಯೆ ೦೯ ಪು ೭೦೫-೭೧೦ ಮತ್ತು Cilvic Affaris Vol 38 July (1985) ಎಂಬ ವಿವರಣೆ.

೯. A.P.H. Pulishing Corporation New Delhi - 2005.

೧೦. Gopal Bhargova "Urban Problems and Policy perspectives", Abhinav publication New Delhi 1972.

೧೧. Donald Light T.R. Suzamer Kellere Sociology Publishing Alterd A Knopt, New Yourk (1975).

೧೨. Ronald w. smith Fhedrick w. presto c Sociology an Introduction 'St. Martins press New york (1977).

೧೩. P.S. Lamba and S.S. Solunki "Impact of Urbanisation and Industrilization on real Rual Socieity "Wille Eastern Ltd., New Delhi, Bangalore, Bombay, Culcutta, Guwati Pune" 1992.

೧೪. Dr. Lakshmi Narasiah "Urbanisation and Cites, "Discovery Publishing House New Delhi-2005.

೧೫. A.M.Y. Whaton The "Socialogy of Gender" Black well Publishing U.S.A. U.K. Austraillia 2005".

୧୬. Dr. M. Lakshmi Narasaiah "Population and Biodiverstiy Discovery publishing House, New Delhi 2006.

୧୭. Ashok Naramg "Urban Sociology "Publicatting Murarital and same New Delhi 2005.

୧୮. Slums in bombay : Civic Affari (Mothely to journals of citey goverment) Ph No.15-18 September 1985.

❖❖❖

ಅಧ್ಯಾಯ : ಮೂರು

ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ ಹಾಗೂ ಕೊಳಚೆ ಪ್ರದೇಶದ ಸ್ಥಿತಿ–ಗತಿಗಳ ಅವಲೋಕನ

೩.೧ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

೩.೨ ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

೩.೩ ಕೊಳಚೆ ಪ್ರದೇಶದ ಅರ್ಥ ಮತ್ತು ವ್ಯಾಖ್ಯಾನಗಳು

೩.೪ ಕೊಳಚೆ ಪ್ರದೇಶದ ಲಕ್ಷಣಗಳು

೩.೫ ಭಾರತದಲ್ಲಿನ ಕೊಳಚೆ ಪ್ರದೇಶಗಳ ಅಂಕಿ ಅಂಶಗಳು

೩.೬ ಕರ್ನಾಟಕ ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಉತ್ತಮೀಕರಣ ಕಾಯ್ದೆ ಮತ್ತು ಪರಿಹಾರೋಪಾಯಗಳು

ಅಧ್ಯಾಯ: ಮೂರು

ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ ಹಾಗೂ ಕೊಳಚೆ ಪ್ರದೇಶದ ಸ್ಥಿತಿ-ಗತಿಗಳ ಅವಲೋಕನ

ಪ್ರಸ್ತುತ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಅಧ್ಯಯನದ ಕಾರ್ಯಕ್ಷೇತ್ರವಾದ ಬಳ್ಳಾರಿ ಪ್ರದೇಶವು ಮುಖ್ಯವಾಗಿರುವುದರಿಂದ ಸಂಶೋಧನೆಗೆ ಹೊಸ ಬಗೆಯ ಚರ್ಚೆಗಳನ್ನು ಹುಟ್ಟುಹಾಕಿದೆ. ಈ ಜಿಲ್ಲೆಯ ಭೌಗೋಳಿಕ, ಚಾರಿತ್ರಿಕ, ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯವಾಗಿ ಆಯಾಮಗಳು ಗಮನಸೆಳೆಯುತ್ತವೆ. ಪ್ರಸ್ತುತ ಅಧ್ಯಾಯದಲ್ಲಿ ಕೊಳಚೆ ಪ್ರದೇಶದ ಅರ್ಥ, ವ್ಯಾಖ್ಯೆ, ಪರಿಕಲ್ಪನೆ ಮತ್ತು ಲಕ್ಷಣಗಳ ಕುರಿತು ವಿಶ್ಲೇಷಿಸಲಾಗಿದೆ. ಪೂರಕವಾಗಿ ಜಾಗತಿಕ ಮಟ್ಟದಲ್ಲಿ ಕೊಳಚೆ ಪ್ರದೇಶಗಳ ಹುಟ್ಟು ಮತ್ತು ಬೆಳವಣಿಗೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಭಾರತದಲ್ಲಿ ಈ ಒಂದು ವ್ಯವಸ್ಥೆಯ ಬೆಳವಣಿಗೆ ಕ್ರಮ ವಿಶೇಷವಾಗಿ ಕರ್ನಾಟಕದಲ್ಲಿ ಬೆಳೆದುಬಂದ ಬಗೆಯನ್ನು ಗುರುತಿಸಲಾಗಿದೆ. ಬಳ್ಳಾರಿ ಪ್ರದೇಶದಲ್ಲಿ ಕೊಳಚೆ ಪ್ರದೇಶದ ಬೆಳವಣಿಗೆಗೆ ಕಾರಣವಾಗಿರುವ ಅಂಶಗಳನ್ನು ಅಂಕಿ ಸಂಖ್ಯೆಗಳ ಮುಖಾಂತರ ಕಟ್ಟಿಕೊಡಲಾಗಿದೆ. ಕೊಳಚೆ ಪ್ರದೇಶಗಳ ನಿರ್ಮೂಲನೆಗೆ ಸರಕಾರವು ತೆಗೆದುಕೊಂಡಿರುವ ಕ್ರಮಗಳ ಕುರಿತು ಅವಲೋಕಿಸಲಾಗಿದೆ.

ಪ್ರಾಗೈತಿಹಾಸಿಕ ಕಾಲದಿಂದಲೂ ಬಳ್ಳಾರಿ ಪ್ರದೇಶವು ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನಹೊಂದಿದೆ. ಚಾರಿತ್ರಿಕವಾಗಿ ಹಲವು ರಾಜಮನೆತನಗಳಿಗೆ ಒಳಪಟ್ಟಿದ್ದ ಈ ಜಿಲ್ಲೆಯು ಅಧ್ಯಯನಕಾರರಿಗೆ ಸಂಶೋಧನೆಯ ಗಣಿಯಾಗಿದೆ. ಕೇವಲ ಚಾರಿತ್ರಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯು ಗಮನಸೆಳೆಯುತ್ತದೆ. ಭೌಗೋಳಿಕವಾಗಿ ಬಯಲು ಪ್ರದೇಶವಾದರೂ ಅಧ್ಯಯನಕ್ಕೆ ಸಂಶೋಧನೆಗೆ ಹೊಸ ಸವಾಲುಗಳನ್ನು ಹುಟ್ಟುಹಾಕಿದೆ.

೩.೧ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

ಇಂದಿನ ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಬಳ್ಳಾರಿಯೂ ಒಂದು. ಈ ಜಿಲ್ಲೆಯ ಪ್ರಾಕೃತಿಕ ಸಂಪನ್ಮೂಲಗಳಾದ ಕಬ್ಬಿಣ (ಐರನ್ ಓರ್), ಮ್ಯಾಂಗನೀಸ್ ಮೊದಲಾದ ಖನಿಜ ನಿಕ್ಷೇಪಗಳಿಂದ ಗಣಿಗಾರಿಕೆ ನಡೆಯುತ್ತಿದ್ದು ವಿಶ್ವಪ್ರಸಿದ್ಧಿ ಪಡೆದಿದೆ. ಈ ಜಿಲ್ಲೆ ರಾಜ್ಯದ ಮಧ್ಯಭಾಗದಿಂದ ಪೂರ್ವಕ್ಕಿದೆ. ದಕ್ಷಿಣಕ್ಕೆ ಮೈಸೂರು ರಾಜ್ಯಕ್ಕೆ (ಕರ್ನಾಟಕ ಸೇರಿದ ಚಿತ್ರದುರ್ಗ, ಉತ್ತರಕ್ಕೆ ಕೊಪ್ಪಳ ಮತ್ತು ತುಂಗಭದ್ರಾ ನದಿ, ರಾಯಚೂರು, ಪಶ್ಚಿಮಕ್ಕೆ ಹಾವೇರಿ, ದಾವಣಗೆರೆ ಮತ್ತು ಧಾರವಾಡ (ಮುಂಬಯಿ ಪ್ರಾಂತ್ಯ) ಮತ್ತು ಪೂರ್ವಕ್ಕೆ ಆಂಧ್ರಪ್ರದೇಶದ ಕರ್ನೂಲು, ಅನಂತಪುರ ಜಿಲ್ಲೆಗಳು ಈ ಜಿಲ್ಲೆಯ ಮೇರೆಗಳಾಗಿವೆ. ಪ್ರಸ್ತುತ ಜಿಲ್ಲೆಯ ವಿಸ್ತೀರ್ಣ ಪೂರ್ವ–ಪಶ್ಚಿಮವಾಗಿ ೧೬೧ ಕಿ.ಮೀ. ಉದ್ದ, ಉತ್ತರ–ದಕ್ಷಿಣವಾಗಿ ೮೨–೭ ಕಿ.ಮೀ. ಅಗಲವನ್ನೂ, ನೈಋತ್ಯ ಮತ್ತು ಈಶಾನ್ಯದಿಂದ ನೋಡಿದಾಗ ಇದರ ಉದ್ದ ೧೮೩ ಕಿ.ಮೀ ಹೊಂದಿದೆ. ಜಿಲ್ಲೆಯ ಉತ್ತರ ಅಕ್ಷಾಂಶ ೩೦, ೧೫–೫೦ ಮತ್ತು ರೇಖಾಂಶ ೧೫೦೭೭–೧೧ ನಡುವೆ ಇದ್ದು ಒಟ್ಟು ಜಿಲ್ಲೆಯ ವಿಸ್ತೀರ್ಣ ೬೮೬೮ ಚದರ ಕಿಲೋಮೀಟರ್‌ಗಳು. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆ ೨೦ ಲಕ್ಷಕ್ಕೂ ಹೆಚ್ಚಾಗಿದೆ.[೧]

ಈ ಜಿಲ್ಲೆಯನ್ನು ಆಡಳಿತದ ಅನುಕೂಲಕ್ಕಾಗಿ ಎರಡು ವಿಭಾಗಗಳಾಗಿ ಮತ್ತು ೯ ತಾಲ್ಲೂಕುಗಳಾಗಿ ವಿಭಾಗಿಸಿದ್ದಾರೆ. ಒಂದು ಬಳ್ಳಾರಿ ವಿಭಾಗ ಮತ್ತೊಂದು ಹೊಸಪೇಟೆ ಉಪವಿಭಾಗ. ಬಳ್ಳಾರಿ ವಿಭಾಗದಲ್ಲಿ ಸೊಂಡೂರು, ಕಂಪ್ಲಿ, ಕುರುಗೋಡು, ಸಿರುಗುಪ್ಪ ಸೇರಿದ್ದು; ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು ಹೊಸಪೇಟೆ ಉಪವಿಭಾಗಕ್ಕೆ ಬರುತ್ತವೆ. ಹೊಸ ಜಿಲ್ಲೆಗಳು ರಚನೆ ಆದಾಗ ಹರಪನಹಳ್ಳಿ ತಾಲ್ಲೂಕು ನೂತನ ದಾವಣಗೆರೆ ಜಿಲ್ಲೆಗೆ ಸೇರಿಹೋಯಿತು. ೨೦೧೮ರಲ್ಲಿ ೩೭೧ ಜೆ ಕಾರಣವಾಗಿ ಹರಪನಹಳ್ಳಿಯನ್ನು ಪುನಃ ಬಳ್ಳಾರಿ ಜಿಲ್ಲೆಗೆ ಸೇರಿಸಲಾಗಿದೆ. ಜಿಲ್ಲೆಯಲ್ಲಿ ಸುಮಾರು ೭೦೦ ಗ್ರಾಮ, ೩೫ (ಫಿರ್ಕಾ) (೨೮) ಹೋಬಳಿ ಗಳಿದ್ದು, ಪ್ರಸ್ತುತ ಸಂದರ್ಭದಲ್ಲಿ ೧೭ ಲಕ್ಷಕ್ಕೂ ಹೆಚ್ಚು ಮತದಾರರ ಜನಸಂಖ್ಯೆಯನ್ನು ಹೊಂದಿದೆ. ಅತಿ ಹೆಚ್ಚು ಗ್ರಾಮಗಳಿರುವ ಬಳ್ಳಾರಿ ಜಿಲ್ಲೆ ಕೃಷಿಯಲ್ಲಿ ಪ್ರಧಾನಸ್ಥಾನ ಪಡೆದಿದೆ. ಇದು ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಹಿಂದುಳಿದಿಲ್ಲ. ಈ ಅಂಶಗಳನ್ನು ತಿಳಿಯಲು ಇದರ ಹಿಂದಿನ ಭೌಗೋಳಿಕತೆ ಮತ್ತು ಚಾರಿತ್ರಿಕತೆಯನ್ನು ಅರಿಯುವುದು ಸೂಕ್ತ.

ಹವಾಮಾನ

ಉರಿಬಿಸಿಲಿನ ಪ್ರಮಾಣ ಹೆಚ್ಚಿರುವ ಕೆಲವು ಜಿಲ್ಲೆಗಳ ಪಟ್ಟಿಯಲ್ಲಿ ಬಳ್ಳಾರಿ ಜಿಲ್ಲೆಯು ಸೇರುತ್ತದೆ. ಈ ಜಿಲ್ಲೆಯಲ್ಲಿ ಕಲ್ಲುಬಂಡೆಗಳು ವಿಶೇಷವಾಗಿವೆ. ಇವು ಬಿಸಿಲಿನತಾಪದಿಂದ ಕಾಯ್ದು ಹೆಚ್ಚು ತಾಪಮಾನಕ್ಕೆ ಕಾರಣವಾಗಿವೆ. ತುಂಗಭದ್ರಾ ಜಲಾಶಯದ ಕಾರಣದಿಂದ

ಸದಾಕಾಲ ಹಸಿರಿರುವ ಪರಿಸರ ಹಾಗೂ ನೀರಾವರಿಯಿಂದಾದ ಬೆಳೆಗಳು ಕೊಂಚ ಮಟ್ಟಿಗೆ ಹಿತಕರವೆನಿಸುವುದು. ಈ ಜಿಲ್ಲೆಯಲ್ಲಿ ಚಳಿಗಾಲ, ಕೂಡ ಉಷ್ಣತೆ ೩೦% ೩೨ ಇದ್ದು ರಾತ್ರಿಯ ಕಾಲದಲ್ಲಿ ೨೨-೨೪ ಡಿಸಿ, ಇರುತ್ತದೆ. ಬೇಸಿಗೆ ಕಾಲದಲ್ಲಿ ಅಂದರೆ- ಏಪ್ರಿಲ್-ಮೇ ತಿಂಗಳಲ್ಲಿ ಹಗಲಿನ ಉಷ್ಣತೆ ೩೮, ೪೦, ೪೪ ಡಿ.ಸಿ. ಇದ್ದು, ಅನೇಕ ಸಲ ೪೨ ಸೇ.ಡಿ.ಸಿ. (ಉದಾಃ ಆಗಿನ ರಾತ್ರಿಯ ಸಮಯದಲ್ಲಿ ಉಷ್ಣತೆ ೩೦-೩೨ ಡಿ.ಸೆ. ಇರುತ್ತದೆ. ಹವಮಾನದಲ್ಲಿ ಆರ್ದ್ರತೆ ಕಡಿಮೆ ಇರುತ್ತದೆ.

ಭೂಗರ್ಭ ಖನಿಜಗಳು

ಭೂಗರ್ಭವು ಆರ್ಕೇಯಿಯನ್ ಯುಗದ ಪಿಪ್, ನೀಸ್ ಹಾಗೂ ಗ್ರಾನೈಟ್ ಶಿಲೆಗಳಿಂದ ನಿರ್ಮಿತವಾಗಿದೆ. ಜಿಲ್ಲೆಯಲ್ಲಿ ಚಿನ್ನ, ತಾಮ್ರ, ಕಬ್ಬಿಣ, ಮ್ಯಾಂಗನೀಸ್, ಗಲೆನಾ, ಜಿಪ್ಸಮ್‌ನು, ಕೋರಂಡಮ್ ಬಳಪದ ಕಲ್ಲು ಕಟ್ಟಡಕ್ಕೆ ಬೇಕಾಗುವ ಕಲ್ಲು ಮುಖ್ಯ ಅದಿರು ಕಬ್ಬಿಣ, ಮ್ಯಾಂಗನೀಸ್ ದೊರೆಯುತ್ತದೆ. ಉತ್ತಮ ದರ್ಜೆಯ ಹೈಮಟೈಟ್ ಕಬ್ಬಿಣ ಅದಿರುಗಳು ಧಾರವಾಡದ ಜಿಲ್ಲೆಯಲ್ಲಿ ಒಟ್ಟು ೧೨೫೦ ಮಿಲಿಯನ್ ಮೆಟ್ರಿಕ್ ಕಬ್ಬಿಣದ ಅದಿರುಗಳ ಸಂಗ್ರಹಿವಿದೆ. ಸಂಡೂರು, ಹೊಸಪೇಟೆ, ತಾಲ್ಲೂಕಿನ ಈ ಪ್ರದೇಶದಲ್ಲಿ ಮ್ಯಾಂಗನೀಸ್ ಅದಿರು ಉತ್ಪಾದನೆಯಿದೆ. ಬಳ್ಳಾರಿ ತಾಲೂಕಿನಲ್ಲಿ ಅದಿರು, ಪಶ್ಚಿಮ ತಾಲೂಕುಗಳಲ್ಲಿ ಮಣ್ಣುಗಳು, ವಿವಿಧ ಮರಳು ಹಾಗೂ ಜೇಡಿ ಮಿಶ್ರತ ಕೆಂಪು ಮಣ್ಣು ಇದೆ. ಬಳ್ಳಾರಿ ಮತ್ತು ಸಿರಿಗುಪ್ಪ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಖನಿಜ ಸಂಪತ್ತು ಇದ್ದು ಇದು ಈ ಜಿಲ್ಲೆಯ ವ್ಯಾಪಕವಾಗಿದೆ.

ಕೈಗಾರೀಕರಣ/ಅಭಿವೃದ್ಧಿ ಮತ್ತು ಆಧುನಿಕ ನೆಲೆ

ಬಳ್ಳಾರಿ ಜಿಲ್ಲೆಯ ನೈಸರ್ಗಿಕ ಸಂಪತ್ತನ್ನಾಧರಿಸಿ ಆಧುನಿಕ ತಂತ್ರಜ್ಞಾನದ ಸಹಾಯದಿಂದ ಬೃಹತ್ ಕೈಗಾರಿಕರಣ ಇಲ್ಲಿ ಸ್ಥಾಪಿತವಾಗಿದೆ. ಸಾರ್ವಜನಿಕ ಸುಪರ್ದಿಯ ಎನ್.ಎಂ.ಡಿ.ಸಿ. ಸಂಸ್ಥೆ, ಜಿಂದಾಲ್ ವಿಜಯನಗರ ಉಕ್ಕುಕಾರ್ಖಾನೆ, ತುಂಗಭದ್ರ ಸ್ಟೀಲ್‌ಪ್ರಾಡೆಕ್ಟ್, ಸಂಡೂರಿನ ಮ್ಯಾಂಗನೀಸ್ ಐರನ್ ಓರೈ ಲಿಮಿಟಿಡ್. ಹೊಸಪೇಟೆ ಸಕ್ಕರೆ ಕಾರ್ಖಾನೆ, ಸಂಡೂರು, ಹೊಸಪೇಟೆ-ತಾರಾನಗರ-ಕಂಪ್ಲಿ, ದೇವಗಿರಿ, ಪ್ರದೇಶಗಳಲ್ಲಿ ರೈಸ್‌ಮಿಲ್‌ಗಳು, ಬಳ್ಳಾರಿ ಜೀನ್ಸ್ ಉದ್ಯಮ ಇವು ಜಿಲ್ಲೆಯ ಅಭಿವೃದ್ಧಿಯ ಮಾದರಿಗಳಾಗಿವೆ.

ಬಳ್ಳಾರಿಯಲ್ಲಿ ಆರಂಭವಾದ ಈ ಬಗೆಯ ಆಧುನಿಕರಣವು ಸಮುದಾಯಗಳ ಬದುಕಿನಲ್ಲಿ ಅನೇಕ ಸ್ಥಿತಿಗತಿಗಳನ್ನು ತಂದಿದೆ. ಇತ್ತೀಚಿಗೆ ಗಣಿಗಾರಿಕೆಯಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆ ಇಲ್ಲಿ ಆಕ್ರಮಮಿಸಿದ್ದು, ಇಡೀ ಬಳ್ಳಾರಿಯ ಬದುಕು. ವೇಗವಾಗಿ-ಮಾರುಕಟ್ಟೆಯಲ್ಲಿ ಆಕ್ರಮಿಸಿದ್ದು ಇದೇ ಬಳ್ಳಾರಿ ಬದುಕು ಪಲ್ಲಟಗೊಳ್ಳಲು ಕಾರಣವಾಗಿದೆ.

೩.೨ ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಕರ್ನಾಟಕ ಮತ್ತು ಮದ್ರಾಸ್ ಅಧಿಪತ್ಯದ ಜಿಲ್ಲೆಗಳಲ್ಲಿ ಬಳ್ಳಾರಿ ಐತಿಹಾಸಿಕ ಮಹತ್ವ ಪಡೆದುಕೊಂಡಿದೆ. ಇದರ ಪ್ರಾಚೀನತೆಯನ್ನು ನೋಡಿದಾಗ ಶಿಲಾಯುಗ, ಮಧ್ಯಶಿಲಾಯುಗ ಮತ್ತು ನವಶಿಲಾಯುಗದ ನೆಲೆಗಳು ಕಂಡುಬರುತ್ತವೆ. ಅವುಗಳಲ್ಲಿ ಹೆಚ್ಚಿನವು ಪ್ರಾಗೈತಿಹಾಸಿಕ ನೆಲೆಗಳಾಗಿವೆ. ಮಾನವನು ಇಲ್ಲಿ ಜೀವನ ನಡೆಸಿದ್ದನ್ನು ಪ್ರಾಕ್ತನಶಾಸ್ತ್ರೀಯ ಆಧಾರಗಳು ಪ್ರಚುರಪಡಿಸುತ್ತವೆ. ಪ್ರಮುಖ ನೆಲೆಗಳಾದ ಗಾದಿಗನೂರು, ದರೋಜಿ, ಕುಮತಿ, ಹಿರೆಕುರುವತ್ತಿ, ಸಂಗನಕಲ್ಲು, ಹಂಪೆ ಮತ್ತು ತುಂಗಭದ್ರ ನದಿಯ ಇಕ್ಕೆಲಗಳಲ್ಲಿ ಪ್ರಾಕ್ತನ ಕುರುಹುಗಳು ಹೆಚ್ಚಾಗಿ ಕಂಡುಬರುತ್ತವೆ. ಸೂಕ್ಷ್ಮ ಶಿಲಾಯುಗದಲ್ಲಿ ಮಾನವನ ಭೌಗೋಳಿಕ ವಿಸ್ತರಣೆ, ನವ ಶಿಲಾಯುಗದಲ್ಲಿ ಮಾನವನ ಅಲೆಮಾರಿತನವನ್ನು ನಿಲ್ಲಿಸಿ, ಬೇಸಾಯ ಪಶುಪಾಲನೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ಇದಕ್ಕೆ ತೆಕ್ಕಲಕೋಟೆ, ಸಂಗನಕಲ್ಲು, ಕಪ್ಪಗಲ್ಲು, ಬೂದಿಹಾಳು, ಹಲಸ(ಸಿ) ಗ್ರಾಮ, ಗೊಲ್ಲಪಲ್ಲಿ, ತೋರಣಗಲ್ಲು ಪ್ರಮುಖ ಉದಾಹರಣೆಗಳಾಗಿವೆ.[೨]

ಈ ಜಿಲ್ಲೆಯು ಪುರಾತನ ಕಾಲದಿಂದ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಕ್ರಿ.ಪೂ. ೩ನೇ ಶತಮಾನದಿಂದ ಕ್ರಮವಾಗಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಪಶ್ಚಿಮ ಚಾಲುಕ್ಯರು, ಚೋಳರು, ಕಲಚೂರ್ಯರು, ಹೊಯ್ಸಳರು, ನೊಳಂಬರು, ವಿಜಯನಗರ ಸಾಮ್ರಾಜ್ಯ, ಬಹುಮನಿ ಸುಲ್ತಾನರು, ಪಾಳೆಯಗಾರರ ಏಳಿಗೆ, ಮರಾಠರು, ಔರಂಗಜೇಬ ಅಕ್ರಮಣ, ನಿಜಾಮ ಮತ್ತು ಹೈದರ್–ಅಲಿ ಟಿಪ್ಪು–ಸುಲ್ತಾನರವರೆಗೆ ವ್ಯಾಪ್ತಿಯನ್ನು ಹೊಂದಿದೆ. ಅಕ್ಕ–ಪಕ್ಕದ ಜಿಲ್ಲೆಗಳಾದ ಕೊಪ್ಪಳ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಿಗಿಂತ ಇದು ಪ್ರಾಚೀನತೆ ಪಡೆದಿದೆ. ವಿವಿಧ ಅರಸರು ಆಳ್ವಿಕೆ ನಡೆಸಿದ ರಾಜಕೀಯ ಚರಿತ್ರೆಯುಂಟು. ಐತಿಹಾಸಿಕವಾಗಿ ಮೌರ್ಯ ಸಾಮ್ರಾಟನಾದ ಆಶೋಕನ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿದ್ದಿತೆಂದು ಕ್ರಿ.ಪೂ. ೨೫೮ರ ಶಾಸನ ಕೂಡ್ಲಿಗಿ ತಾಲೂಕಿನಲ್ಲಿ ದೊರೆಕಿರುವ ಅಂಶ ಬೆಳಕಿಗೆ ಬಂದಿದೆ. ನಂತರ ಬಂದ ಶಾತವಾಹನರು ದಕ್ಷಿಣ ಪಥದಲ್ಲಿ ರಾಜ್ಯಭಾರ ನಡೆಸಿದ್ದು, ಬಳ್ಳಾರಿ ಹತ್ತಿರ ಮ್ಯಾಕಡೋಣೆಯಲ್ಲಿ (ಆದೋನಿ–ತಾ) ಇವರ ಶಾಸನ ಕಂಡುಬಂದಿದೆ. ಇವರು ಈ ಪ್ರದೇಶವನ್ನು 'ಕುಂತಳ'ವೆಂದು ಕರೆದುಕೊಂಡಿದ್ದರು. 'ತಳವಾರಿಕೆ' ವ್ಯವಸ್ಥೆಯನ್ನು ಕನ್ನಡ ಪ್ರದೇಶದಲ್ಲಿ ಜಾರಿಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಗುಪ್ತರ ಕಾಲಕ್ಕೆ ಒಂದು ಚಾರಿತ್ರಿಕ ಘಟನೆ ನಡೆದುದನ್ನು ಅರಿಪುರ ಬೀಡಿನಲ್ಲಿ ಎಂದು ಬಾಣ ಕವಿಯೂ, 'ಭೋಜಕವಿ'ಯೂ 'ಅಲಿಪುರಂ ಸ್ವಂಧವಾರಂ' ಎಂದಿರುವುದು ಇಂದಿನ ಬಳ್ಳಾರಿ ಹಾಗೂ ಅಲ್ಲೀಪುರ ಪ್ರದೇಶವೇ ಇರಬೇಕು. ನಂತರ ಕದಂಬರು ಪ್ರಾಬಲ್ಯಕ್ಕೆ ಬಂದಾಗ ಉಚ್ಚಂಗಿದುರ್ಗದವರೆಗೆ ಅವರ ರಾಜ್ಯ ವಿಸ್ತಾರವಾಗಿತ್ತು. ಈ ದುರ್ಗವು ಜಿಲ್ಲೆಗೆ ಪಶ್ಚಿಮಕ್ಕಿದೆ. ಕ್ರಿ.ಶ. ೭೮೭–೮೮ರಲ್ಲಿದ್ದ ಗಂಗರ ದೊರೆ ಶ್ರೀಪುರಷ ಕ್ರಿ.ಶ. ೭೨೫ ಕಾಲದಲ್ಲಿ ಕಂಪೇಲಿ ಹತ್ತಿರ ಯುದ್ದವಾಗಿ ಗಂಗರಿಗೆ ಜಯವಾಗುತ್ತದೆ. ಈ ಕಾಳಗದಲ್ಲಿ ಪಾಂಡಪ್ಪ ಎಂಬುವವನು ತೀರಿಕೊಳ್ಳುತ್ತಾನೆ. ಕ್ರಿ.ಶ. ೭ನೇ ಶತಮಾನದಲ್ಲಿ

ಕದಂಬರನ್ನು ಸೋಲಿಸಿದಾಗ ಬಾದಾಮಿಯ ಚಾಲುಕ್ಯರ ಅಧೀನಕ್ಕೆ ಈ ಪ್ರದೇಶ ಒಳಪಟ್ಟಿತ್ತು. ೧ನೇ ಕೀರ್ತಿವರ್ಮ, ೨ನೇ ಪುಲಕೇಶಿ, ಅವನ ಪುತ್ರರನ್ನು ಉಲ್ಲೇಖಿತವಾಗಿವೆ. ಕುರುಗೋಡಿನ ಶಾಸನ ೨ನೇ ಪುಲಕೇಶಿ ಉಲ್ಲೇಖಿಸುತ್ತದೆ. ೭ನೇ ಶತಮಾನದಲ್ಲಿ ಚಾಲುಕ್ಯ ದೊರೆ-ವಿನಯಾದಿತ್ಯ ಪಂಪಾತೀರ್ಥದಲ್ಲಿ ತಂಗಿದು, ಭರಾವಿಯನ್ನು ದತ್ತಿ ಬಿಟ್ಟಿರುವುದು ತಿಳಿದುಬಂದಿದೆ. ಕ್ರಿ.ಶ. ೮ನೇ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯರಿಂದ ಈ ಪ್ರದೇಶದ ಒಡೆತನವನ್ನು ಮಳಖೇಡದ ರಾಷ್ಟ್ರಕೂಟರು ಪಡೆದುಕೊಂಡು ಹಗರಿ ನದಿವರೆಗೆ ರಾಜ್ಯದ ಗಡಿಯನ್ನು ವಿಸ್ತರಿಸಿ ಆಳ್ವಿಕೆ ನಡೆಸಿದರು. ಅಲ್ಲಿಂದ ೧೦ನೇ ಶತಮಾನದವರೆಗೆ ಚಾಲುಕ್ಯರು ರಾಷ್ಟ್ರಕೂಟರಿಗೆ ಸಾಮಂತರಾಗಿದ್ದರೆಂದು ಬಾಗಳಿಯ ಶಿಲಾಶಾಸನದಿಂದ ತಿಳಿಯುತ್ತದೆ. ೧೦ನೇ ಶತಮಾನದಲ್ಲಿ ತಲಕಾಡಿನ ಗಂಗ ಮಾರಸಿಂಹನು ಉಚ್ಚಂಗಿದುರ್ಗದ ಕೋಟೆಯನ್ನು ಪಡೆದುಕೊಂಡಾಗ, ನೊಳಂಬಕುಲಾಂತಿಕ ಎಂಬ ಬಿರುದು ಪ್ರಾಪ್ತವಾಯಿತು. ನೊಳಂಬ ಪಲ್ಲವೆ ರಾಜನು ಕಂಪಲಿಯ ಹತ್ತಿರ ರಾಜ್ಯವಾಳುತ್ತಿದ್ದನಂತೆ. ಕ್ರಿ.ಶ. ೨೫-೧೧-೧೫೧೧ರ ಬೈಲೂರು ಶಿಲಾಶಾಸನದಲ್ಲಿ ಇಮ್ಮಡಿ ಭೀಮರಾಜನಿಗೆ. ಬಳ್ಳಾರಿ ಭೀಮರಸ ಎಂದಿದೆ. ಶಾಸನಗಳಲ್ಲಿ (೧೧೪೧) ಬಳ್ಳಾರಿಯ ರಾಚಮಲ್ಲ ದೇವರಸೆ, ಕೋಳೂರು ಶಾಸನದಲ್ಲಿ ಬಳ್ಳಾರಿಯ ದುರಿ ಕುರುಗೋಡ ಕಲ್ಲೇಶ್ವರ ದೇವಾಲಯದಲ್ಲಿ ಬಳ್ಳಾರಿಯ ಅಜ್ಜರಸ ಎಂದಿದೆ. ತರುವಾಯ ಪಶ್ಚಿಮ ಚಾಲ್ಯುಕ್ಯರ ತೈಲಪ ಗಂಗರನ್ನು ಸೋಲಿಸಿದನು. ಈ ಪ್ರದೇಶವು ಸೇರಿರುವಂತೆ ಕುಂತಲ ರಾಜ್ಯವನ್ನು ಅವರು ಆಳುತ್ತಿದ್ದರೆಂದು ಬಾಗಳಿ ಮತ್ತು ಕೋಗಳಿ ದೇವಾಲಯಗಳಲ್ಲಿರುವ ಶಿಲಾಶಾಸನಗಳು ತಿಳಿಸುತ್ತವೆ. ಪಶ್ಚಿಮ ಚಾಲುಕ್ಯರ ತರುವಾಯ ಅವರ ಸಾಮಂತರಾಗಿದ್ದ ಕಳಚೂರಿಗಳು ದ್ವಾರಸಮುದ್ರದ ಹೊಯ್ಸಳರು ದೇವಗಿರಿಯ ಯಾದವರು ಕಾರಣರಾದರು. ಬಿಜ್ಜಳನು ಕಲ್ಯಾಣದಲ್ಲಿ ರಾಜ್ಯ ಸ್ಥಾಪಿಸಿದ ನಂತರ ಚಾಲುಕ್ಯರು ಅಲ್ಪಕಾಲಾವಧಿಯಲ್ಲಿ ಈ ಪ್ರದೇಶದಲ್ಲಿದ್ದರೆಂದು ತಿಳಿದುಬಂದಿದೆ. ಹೊಯ್ಸಳರು ತಮ್ಮ ರಾಜ್ಯಾಳ್ವಿಕೆಯಲ್ಲಿ ವಿಷ್ಣುವರ್ಧನನವರೆಗೆ ಕಲ್ಯಾಣ ಚಾಲುಕ್ಯರ ಅಧೀನದಲ್ಲಿದ್ದರು. ಇವನ ಕಾಲಕ್ಕೆ (೧೧೨೦) ಒಳ್ಳೆರೆಯ ಎಂದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ೨ನೇ ಬಲ್ಲಾಳ ನೊಳಂಬವಾಡಿಯನ್ನು ಹಲವು ಬಾರಿ ವಶಪಡಿಸಿಕೊಂಡನಲ್ಲದೆ. ಇವನು ಉಚ್ಚಂಗಿವಾಡಿಯನ್ನು ಹಲವು ಬಾರಿ ವಶಪಡಿಸಿಕೊಂಡನಲ್ಲದೆ ಇವನು ಉಚ್ಚಂಗಿದುರ್ಗವನ್ನು ಉತ್ತರ ಭಾಗದ ರಾಜಧಾನಿ ತುಂಗದ ಕಂಪಿಲರಾಯನು ಸೇವುಣರಪರ, ಹೊಯ್ಸಳರ ವಿರೋಧಿಯಾಗಿಯದ್ದು, ಕ್ರಿ.ಶ. ೧೩೨೭ ರಲ್ಲಿ ಕಮ್ಮಟದುರ್ಗ ಮಹಮದೀಯರ ದಾಳಿಗೆ ತುತ್ತಾಗಿ ಅಸ್ತಂಗತವಾದದ್ದು ತಿಳಿದುಬರುತ್ತದೆ. ಬಳ್ಳಾರಿ ಸೊಂಡೂರು ಹತ್ತಿರ ಇರುವ ಹೊಸಮಲೆದುರ್ಗದಲ್ಲಿ ಮುಮ್ಮಡಿ ಸಿಂಗೇನಾಯಕ, ಕಂಪಿಲರಾಯ ಮತ್ತು ಕುಮಾರರಾಮ ಅವರಗಳು ಆರಂಭ ಆಳ್ವಿಕೆ ನಡೆಸಿರುತ್ತಾರೆ. ಆನಂತರ ಇಂದಿನ ಗಂಗಾವತಿ ತಾಲ್ಲೂಕಿನ ಕುಮ್ಮಟದುರ್ಗದಲ್ಲಿ ರಾಜ್ಯಾಳ್ವಿಕೆ ಮಾಡಿದ್ದು ಗಮನಾರ್ಹ. ಹೊಯ್ಸಳರ ವಿಷ್ಣುವರ್ಧನನ ಕಾಲಕ್ಕೆ ಬಳ್ಳಾರಿ ಕೋಟೆ ಅವರಿಗೆ ಸೇರಿತು. ಕ್ರಿ.ಶ. ೧೩೩೬ (೧೩೪೨) ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ನಾಲ್ಕು ವಂಶಗಳು ಆಳ್ವಿಕೆ

ನಡೆಸಿದವು. ಇವರ ಕಾಲದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆ, ಅಭಿವೃದ್ಧಿ ಮತ್ತು ಸುಧಾರಣೆಗಳಾದವು. ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಾಳೆಯಗಾರರು ರಾಜಕೀಯ ಪ್ರಾಬಲ್ಯ ಬೆಳೆಸಿಕೊಂಡು ಆದಿಲ್‌ಷಾಹಿಗಳಿಗೆ ಅಧೀನರಾಗಿ ಈ ಭಾಗದಲ್ಲಿ ಆಡಳಿತ ನಡೆಸುತ್ತಾರೆ. ಉದಾಹರಣೆಗೆ ಗುಡೇಕೋಟೆ, ಹರಪನಹಳ್ಳಿ, ಬಳ್ಳಾರಿ, ಜರಿಮಲೆ, ಸೊಂಡೂರು ಪ್ರಮುಖವಾದವು.[೮]

ಕ್ರಿ.ಶ. ೧೭೭೨ರಲ್ಲಿ ಬಳ್ಳಾರಿ ಪ್ರದೇಶ ಹೈದರನ ಆಳ್ವಿಕೆಗೆ ಸೇರ್ಪಡೆಯಾಗಿ, ೧೭೯೯ರ ೪ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತಾಗ ಬಳ್ಳಾರಿಯು ನಿಜಾಮಗೆ ಸೇರಿತು. ನಿಜಾಮನು ೧೮೦೦ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿ ಒಪ್ಪಂದ ಮಾಡಿಕೊಂಡು ದತ್ತಮಂಡಲವಾಗಿ ಆಂಗ್ಲರಿಗೆ ಇದನ್ನು ಬಿಟ್ಟುಕೊಟ್ಟನು. ಆಗ ಇದರ ಭೌಗೋಳಿಕತೆ ವಿಸ್ತಾರವಾಯಿತಲ್ಲದೆ, ಈ ಜಿಲ್ಲೆಗೆ ಕರ್ನೂಲು, ಕಡಪ, ಅನಂತಪುರ ಸೇರಿದವು. ಅಂದು ಮದ್ರಾಸ್ ಸಂಸ್ಥಾನದ ವಾಯವ್ಯ ದಿಕ್ಕಿಗಿರುವ ಬಳ್ಳಾರಿ ಜಿಲ್ಲೆಯು ತನ್ನದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿತ್ತು. ನಾಲ್ಕುದತ್ತಿ ಜಿಲ್ಲೆಗಳಲ್ಲಿ ಇದೂ ಒಂದು. ಅಕ್ಷಾಂಶವಾಗಿ ೧೪°-೨೦° ೧೫-೫೮ ಮತ್ತು ರೇಖಾಂಶ ೭೫-೪೩°, ೭೫-೮೪ ಮಧ್ಯೆ ಇತ್ತು. ಜಿಲ್ಲೆಯ ಆಗಿನ ಭೌಗೋಳಿಕ ವಿಸ್ತೀರ್ಣ ೫೯೦೪ ಚದರ ಮೈಲುಗಳು. ಈ ಜಿಲ್ಲೆಯ ಉತ್ತರ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿ ಪಶ್ಚಿಮಕ್ಕೆ ಧಾರವಾಡ, ಉತ್ತರಕ್ಕೆ ರಾಯಚೂರು ಜಿಲ್ಲೆಗಳನ್ನು ಪ್ರತ್ಯೇಕಿಸಿತ್ತು. ದಕ್ಷಿಣಕ್ಕೆ ಮೈಸೂರು ಸಂಸ್ಥಾನವಿದ್ದು, ಚಿತ್ರದುರ್ಗ ಜಿಲ್ಲೆ ಗಡಿ ಪ್ರದೇಶವಾಗಿತ್ತು.[೯]

೧೮೦೦ರಲ್ಲಿ ಈ ಪ್ರದೇಶವನ್ನು ಬ್ರಿಟಿಷರು ದತ್ತಿಮಂಡಲ ಸೀಡೆಡ್ ಡಿಸ್ಟ್ರಿಕ್ಟ್ (ರಾಯಲಸೀಮಾ) ಎಂದು ಕರೆದರು. ಆಗ ಸ್ಥಳೀಯ ಪಾಳೆಯಗಾರರು ಇಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಇವರು ಕೋಟೆ, ಕೊತ್ತಲು, ಆರಮನೆಗಳನ್ನು ಕಟ್ಟಿಕೊಂಡಿದ್ದರು. ವಿಜಯನಗರ ಅರಸರು ಈ ಪಾಳೆಯಗಾರರ ಆಡಳಿತ ವ್ಯವಸ್ಥೆಗೆ ನಾಂದಿ ಹಾಡಿದ್ದರು. ಪಾಳೆಯಗಾರರು ವಿಜಯನಗರದ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಅನಂತರ ಈ ಪ್ರದೇಶದ ಮೇಲೆ ಪ್ರಭುತ್ವ ಹೊಂದಿದ ಸರ್ವಾಧಿಕಾರಿಗಳಾದ ನಿಜಾಮ ತೆಲಂಗಾಣ ಜಹಗೀರು ಪಡೆದು ದೇಶಮುಖಿ ಪಾಳೆಯಗಾರರಿಗೆ ಬಿಟ್ಟುಕೊಟ್ಟಿದ್ದರು. ರಾಯಲಸೀಮಾದಲ್ಲಿ ೫೦ ವರ್ಷಗಳಿಂದ ಆಳುತ್ತಿದ್ದ ಪಾಳೆಯಗಾರರನ್ನು ಹೈದರಾಲಿ ಅಧೀನಕ್ಕೊಳಪಡಿಸಿಕೊಂಡಾಗ ರಾಯಲಸೀಮೆಯಲ್ಲಿ ೮೦ ಜನರು ಪಾಳೆಯಗಾರರಿದ್ದರು. ಕಡಪ ಜಿಲ್ಲೆಯಲ್ಲಿ ಕೆಲವು ಹಳ್ಳಿಗಳು ಇವರಿಗೆ ಸೇರಿದ್ದವು.[೪] ಅನಂತಪುರ, ಕಡಪ, ಕರ್ನೂಲು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಇವು ಒಳಪಟ್ಟಿದ್ದವು.

ಮದ್ರಾಸ್ ಅಧಿಪತ್ಯಕ್ಕೆ ಒಳಗಾದಾಗ ಜಿಲ್ಲೆಯಲ್ಲಿ ೧೮ ತಾಲ್ಲೂಕುಗಳಿದ್ದವು. ಅವುಗಳೆಂದರೆ, ಆಲೂರು, ಆದೋನಿ, ಗುತ್ತಿ, ಉರವಕೊಂಡ, ತಾಡಪತ್ರಿ, ರಾಯದುರ್ಗ, ಅನಂತಪುರ, ಧರ್ಮಾವರಂ, ಕಲ್ಯಾಣದುರ್ಗ, ಪೆನುಕೊಂಡ, ಬುಕ್ಕಪಟ್ಟಣಂ, ಹಿಂದೂಪುರ, ಮಡಕಶಿರಾ ಮತ್ತು ಎಮ್ಮಿಗನೂರು. ಬಳ್ಳಾರಿ ಜಿಲ್ಲೆಯ ತಾಲೂಕುಗಳಾದ ಸಿರುಗುಪ್ಪ, ಕಂಪ್ಲಿ (ಹೊಸಪೇಟೆ) ಕೂಡ್ಲಿಗಿ, ಹೂವಿನಹಡಗಲಿ ಮತ್ತು ಹರಪನಹಳ್ಳಿ ಸೇರಿದ್ದವು. ಸಂಡೂರು ಪ್ರತ್ಯೇಕ

ಸಂಸ್ಥಾನವಾಗಿತ್ತಲ್ಲದೆ, ಅಂಗ್ಲರ ಅಧೀನದಲ್ಲಿ ಆಳ್ವಿಕೆ ನಡೆಸಿತು. ೧೮೫೧ರಲ್ಲಿ ಕಂಪ್ಲಿಯಲ್ಲಿದ್ದ ತಾಲೂಕು ಕೇಂದ್ರವನ್ನು ವರ್ಗಾಯಿಸಿ ಹೊಸಪೇಟೆಯನ್ನು ತಾಲ್ಲೂಕು ಕೇಂದ್ರವಲ್ಲದೆ, ಉಪ-ವಿಭಾಗವಾಗಿ ಕೂಡ ಮಾಡಲಾಯಿತು. ಜಿಲ್ಲೆಯಲ್ಲಿ ತುಂಗಭದ್ರಾ ನದಿಯು ಮುಖ್ಯವಾಗಿದ್ದು. ಇದರ ಉಪನದಿಗಳಾಗಿ ಚಿನ್ನಹಗರಿ, ನಾರಿಹಳ್ಳ, ಚಿಕ್ಕಹಗರಿಗಳಿದ್ದವು. ಈ ಪರಿಸರದಲ್ಲಿ ಹೆಚ್ಚು ಬೆಟ್ಟಗುಡ್ಡಗಳ ಸಾಲುಗಳಿದ್ದು ಅವುಗಳಲ್ಲಿ ಸೊಂಡೂರು ಗುಡೇಕೋಟೆ, ಜರಿಮಲೆ, ಹಂಪೆ, ಉಚ್ಚಂಗಿದುರ್ಗ ಮತ್ತು ಬಳ್ಳಾರಿ ಪಟ್ಟಣದ ನಡುವೆ ಇರುವ ಬೆಟ್ಟಗಳ ಸಾಲು ಮುಖ್ಯವಾಗಿವೆ. ಸಂಡೂರು ಮತ್ತಿತರ ಬೆಟ್ಟಗಳಲ್ಲಿ ಉತ್ತಮ ದರ್ಜೆಯ ಮ್ಯಾಂಗನೀಸ್, ಕಬ್ಬಿಣದ ಅದಿರು ದೊರೆಯುತ್ತದೆ. ಜಿಲ್ಲೆಯು ಅಮೂಲ್ಯವಾದ ಖನಿಜ ಸಂಪತ್ತನ್ನು ಹೊಂದಿದೆ. ಅನೇಕ ಗಣಿಗಳಿದ್ದು, ಕಬ್ಬಿಣದ ಅದಿರನ್ನು ವಿದೇಶಿಗಳಿಗೆ ರಫ್ತು ಮಾಡುವುದರ ಅಪಾರ ಆರ್ಥಿಕ ವಹಿವಾಟನ್ನು ನಡೆಸುವ ಜಿಲ್ಲೆ ಇದಾಗಿದೆ. ಗಣಿಗಳಿಂದ ಕೆಲವೇ ವ್ಯಕ್ತಿಗಳು ಶ್ರೀಮಂತರಾಗುತ್ತಿದ್ದು ಇಂಥ ಶ್ರೀಮಂತರೇ ರಾಜಕೀಯದಲ್ಲಿ ಮುಂದುವರೆಯುತ್ತಾರೆ. ಬಂಡವಾಳಶಾಹಿಗಳಿಂದ ಬಡವರು ನಿರ್ಗತಿಕರಾಗಿದ್ದು ಶೋಚನೀಯ ಸ್ಥಿತಿಯಲ್ಲಿದ್ದಾರೆ.[೫] ಆ ಮೂಲಕ ಕೊಳಗೇರಿಗಳ ಉಗಮಕ್ಕೆ ಇಂಥ ಹಲವು ಕಾರಣಗಳಿವೆ.

ಸಾಹಿತ್ಯ ಪರಂಪರೆ

ಈ ಜಿಲ್ಲೆಯ ಸಾಹಿತ್ಯ ಪರಂಪರೆಯ ಶಾಸನ ಕವಿ ಕಲ್ಲಿದೆ. ಗದ್ಯ, ಪದ್ಯ ರಚಿಸಿದ್ದ ಶಿವಕೋಟ್ಯಾಚಾರ್ಯ, ಹರಿಹರ, ರಾಘವಾಂಕರಿಂದ ಗುರುತಿಸಲಾಗಿದೆ. ಕನ್ನಡ ಭಾಷೆ ಸಾಹಿತ್ಯವನ್ನು ಸಂಸ್ಕೃತಿಗಳ ವಿಷಯದಲ್ಲಿ ವಿಜಯನಗರ ಪ್ರೌಢದೇವರಾಯನ ಕಾಲದ ಚಟುವಟಿಕೆಗಳ ಸಾಹಿತ್ಯ ಪರಂಪರೆಯನ್ನು ಈ ಒಟ್ಟು ಪರಂಪರೆಯ ಕೆಲಸವನ್ನು ಬಿ.ವಿ. ಮಲ್ಲಾಪುರ ಅವರ ಶೋಧಿಸುತ್ತಾ ವಿಜಯ ನೆನಪನ್ನುಂಟುಮಾಡುವ ಕವಿ ವಿಜಯಕಲ್ಯಾಣ ಎಂಬ ಅಭಿನಾಮವು ಇಲ್ಲಿನ ಸಾಹಿತ್ಯದ ನೆಲೆಗೆ ಸಾಕ್ಷಿಯಾಗಿದೆ. 'ಹಂಪಿಯ ಕೇಂದ್ರದಿಂದಲೇ' ಕನ್ನಡ ಸಾಹಿತ್ಯದಲ್ಲಿ ಮಾಧ್ವ ಪರಂಪರೆಯ ಜೀವನಲೆಯಿಂದ ಬೆಳೆದ ದಾಸ ಸಾಹಿತ್ಯದ ಕೆಲವು ಎಳೆಗಳು ಕೂಡ ಹಂಪಿಯ ಚಹರೆಯೊಂದಿಗೆ ಬೆಸೆದುಕೊಂಡಿವೆ. ನಂಜುಂಡ, ಷಡಕ್ಷರದೇವ, ಕುಮಾರವ್ಯಾಸ, ಕನಕದಾಸ ಮೊದಲಾದವರು ಇಲ್ಲಿನ ಜಗತ್ತು ಪ್ರಸಿದ್ಧ ವಿಜಯವಿಠ್ಠಲನ ದೇವಾಲಯದ ಸಮೀಪ ಇರುವ ನದಿ ತೀರದ ಪುರಂದರಮಂಟಪ ಇಂದಿಗೂ ಆವೇಶವನ್ನು ಸಾರಿ ಹೇಳುತ್ತದೆ. ಪುರಂದರದಾಸರ ಕೀರ್ತನೆಗಳಿಗೆ ಪ್ರಚೋದನೆಯನ್ನು ಒದಗಿಸಿದೆ. ಹಂಪಿಯ ಕೇಂದ್ರದಿಂದಲೇ ಹೆಸರಿಸಬಹುದಾದ ಮತ್ತೊಂದು ಸಾಹಿತ್ಯ ಪರಂಪರೆ ಎಂದರೇ ಕಾಲಜ್ಞಾನ ಪರಂಪರೆವೆಂದು ಹೇಳಬಹುದು. ಬಳ್ಳಾರಿ ಜಿಲ್ಲೆ ಕಲೆ ಮತ್ತು ಸಾಹಿತ್ಯವಲಯಕ್ಕೆ ರಂಗಭೂಮಿ ಕಲಾವಿದ್ದರು/ಜಾನಪದ ತಜ್ಞ ಆಧುನಿಕ ಸಾಹಿತ್ಯ ಪರಂಪರೆಯು ಎಲ್ಲಾ ಪ್ರಕಾರಗಳಲ್ಲಿಯೂ ಗಮನಾರ್ಹ ಕೊಡುಗೆ ನೀಡಿರುವುದನ್ನು ಮರೆಯುವಂತಿಲ್ಲ. ಆಧುನಿಕ ಕಾಲದಲ್ಲಿ ವೈ. ನಾಗೇಶಶಾಸ್ತ್ರಿ, ಬಿ.ಚಿ.

ವೃಷಬೇಂದ್ರಸ್ವಾಮಿ, ಕೋ. ಚನ್ನಬಸಪ್ಪ, ಬಿ.ಎಂ. ಮರುಳಸಿದ್ದಯ್ಯ, ಕುಂ. ವೀರಭದ್ರಪ್ಪ ಮೊದಲಾದವರಿದ್ದಾರೆ.

ಶೈಕ್ಷಣಿಕ ಹಿನ್ನೆಲೆ

ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಗ್ರಹಾರ, ಘಟಿಕ, ಬ್ರಹ್ಮಪುರಿಗಳು ಗುರುಕುಲ ಶಿಕ್ಷಣ ಕೇಂದ್ರಗಳಾಗಿದ್ದವು. ವೇದ, ಮಹಮದೀಯ ಮತ್ತು ಆಂಗ್ಲೋ ಶಿಕ್ಷಣ ಸಂಸ್ಥೆಗಳು ಇಲ್ಲಿ ಸ್ಥಾಪನೆಗೊಂಡು ಇಂದಿಗೂ ಕಾರ್ಯನಿರ್ವಹಿಸುತ್ತವೆ. ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಪರಂಪರೆಯು ವ್ಯಾಪಕವಾಗಿದೆ. ನಂದಿಹಳ್ಳಿಯಲ್ಲಿ ೧೯೭೫ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ಆರಂಭವಾಯಿತು. ಕೆಲಸ ನಿರ್ವಹಿಸುತ್ತಿದೆ. ಈ ಕೇಂದ್ರವು ಭೂ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿಶೇಷವಾದ ಹೊಸ-ಹೊಸ ಕೋರ್ಸ್‌ಗಳನ್ನು ಹೊಂದಿದೆ. ಆನಂತರ ಬಳ್ಳಾರಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾದ ಮೇಲೆ ಸ್ನಾತಕೋತ್ತರವಾದ ಕೇಂದ್ರವು ಎಂ.ಬಿ.ಎ ಕೋರ್ಸ್‌ಗಳನ್ನು ಹೊಂದಿದೆ. ಇನ್ನೊಂದು ಸ್ನಾತಕೋತ್ತರ ಕೇಂದ್ರವಾಗಿ ಆಸ್ತಿತ್ವಕ್ಕೆ ಬಂತು. ತದನಂತರದಲ್ಲಿ ಕರ್ನಾಟಕದ ಸಾಂಸ್ಕೃತಿಕ ಸಂಸ್ಥೆಯಾಗಿ ಅಸ್ತಿತ್ವದಲ್ಲಿ ಬಂದ ಹಂಪಿ ಕನ್ನಡ ವಿಶ್ವವಿದ್ಯಾಲಯ ೧೯೯೧ರಲ್ಲಿ ಕಾರ್ಯಾರಂಭ ಮಾಡಿತು.

ಅಖಿಲ ಕರ್ನಾಟಕದ ವ್ಯಾಪ್ತಿಯು ಕನ್ನಡ ವಿಶ್ವವಿದ್ಯಾಲಯ ಇದ್ದರೂ ಕೂಡ ಮೌಖಿಕತೆ ಹಾಗೂ ಜಿಲ್ಲೆ ಪ್ರದೇಶ ವ್ಯಾಪ್ತಿಯ ಕಾರಣಕ್ಕಾಗಿ ಇಲ್ಲಿನ ಜನಸಮುದಾಯದ ವಿಕಾಸಕ್ಕೆ ಇದು ಮುಖ್ಯ ನೆಲೆಯಾಗಿದೆ. ಕರ್ನಾಟಕದಲ್ಲಿ ಮುಂಚೂಣೆಯಲ್ಲಿರುವ ಕನ್ನಡ ವಿಶ್ವವಿದ್ಯಾಲಯ ಬಳ್ಳಾರಿಯ ಶೈಕ್ಷಣಿಕ ಪರಂಪರೆಯ-ಹಿನ್ನೆಲೆಯಾಗಿದೆ.

ಕರ್ನಾಟಕದ ಹಂಪಿಯನ್ನು ಶೋಧಿಸಲಾಗುತ್ತದೆ. ಐತಿಹಾಸಿಕ, ಪರಂಪರೆಯನ್ನು ಉತ್ಖನನ ಮಾಡಿ ಅಧ್ಯಯನ, ಸಂರಕ್ಷಿಸಿ, ಮ್ಯೂಸಿಯಂ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಉದ್ದೇಶದಿಂದ ಸ್ಥಾಪಿತವಾದ ಕೇಂದ್ರ ಪ್ರಾಚ್ಯಸಂಶೋಧನಾ ಇಲಾಖೆಯ ಕಛೇರಿ, ರಾಜ್ಯ ಸರ್ಕಾರ ಪ್ರಾಚ್ಯ ಸಂಶೋಧನೆನಾ ಇಲಾಖೆಯ ಬಹುದಿನಗಳಿಂದ ಕೆಲಸ ನಿರ್ವಹಿಸುತ್ತಿವೆ. ಶೈಕ್ಷಣಿಕ ಹಾಗೂ ಸಂಶೋಧನಾತ್ಮಾಕ ಸಾಧನೆಗಳು ಬಳ್ಳಾರಿಯ ಚಹರೆಯನ್ನು ವಿಶ್ವಾತ್ಮಗೊಳಿಸುವ ಕಾರ್ಯ ಕಂಡುಬರುತ್ತದೆ.[೭] ಕ್ರಿ.ಶ. ೨೦೦೯-೧೦ನೇ ಸಾಲಿನ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ಥಾಪನೆ ಆಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈಗ ಎರಡು ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತವೆ.

೩.೩ ಕೊಳಚೆ ಪ್ರದೇಶದ ಅರ್ಥ ಮತ್ತು ವ್ಯಾಖ್ಯಾನಗಳು

ಕೊಳಚೆ ಪ್ರದೇಶದ ಅರ್ಥ

ನಗರ ಅಥವಾ ಪಟ್ಟಣ ಬೀದಿ, ಗಲ್ಲಿಗಳಲ್ಲಿ, ಅಂಗಳದಲ್ಲಿ ತುಂಬಿರುವ ಕೆಳ ವರ್ಗ ಅಥವಾ ಕಡು ಬಡವರ ವಾಸಸ್ಥಳವೇ ಕೊಳಚೆ. ಇಂತಹ ಬೀದಿ ಅಥವಾ ಅಂಗಳಗಳ ಸಂಖ್ಯೆ

ಅಸುರಕ್ಷಿತವಾದ ಅತ್ಯಂತ ಹಳೆಯ ಮನೆಗಳ ಸಮಸ್ಯೆ : ಹಲವಾರು ದಶಕಗಳ ಅಥವಾ ಶತಮಾನಗಳ ಇತಿಹಾಸವನ್ನು ಹೊಂದಿರುವ ಕೆಲವು ನಗರಗಳಲ್ಲಿನ ಅತ್ಯಂತ ಹಳೆಯದಾದ ಹಾಗೂ ನಗರಗಳ ಮಧ್ಯಭಾಗದಲ್ಲಿರುವ ಹಲವಾರು ಮನೆಗಳು ಕಿಕ್ಕಿರಿದ ಜನರಿಂದ ಕೂಡಿದ್ದು, ನಶಿಸುವ ಹಂತದಲ್ಲಿದ್ದು ವಾಸಮಾಡಲು ಅಸುರಕ್ಷಿತ ತಾಣಗಳಂತಾಗಿವೆ. ಪುನರ್ ನವೀಕರಣವಾಗದ ಇಂತಹ ಕೆಲವು ಮನೆಗಳು ಕುಸಿದು ಬಿದ್ದು ಕಲ್ಕತ್ತಾ, ಬೊಂಬಾಯಿ ಮುಂತಾದ ಕಡೆ ಬಹಳಷ್ಟು ಜೀವಹಾನಿ ಹಾಗೂ ಸೊತ್ತು ಹಾನಿಯುಂಟಾಗಿದೆ.

ಒಂಟಿ ಕೊಠಡಿಯ ಮನೆಯಲ್ಲಿ ವಾಸಿಸುವವರ ಸಮಸ್ಯೆ: ದೆಹಲಿ, ಕಲ್ಕತ್ತಾ, ಮುಂಬೈ, ಚೆನ್ನೈಗಳಂತಹ ಮಹಾನಗರಗಳಲ್ಲಿ ಮತ್ತು ಸುಮಾರು ೫೩ ಇತರ ಸಾಮಾನ್ಯ ಗಾತ್ರದ ನಗರಗಳಲ್ಲಿ ನಡೆಸಿದ ಒಂದು ಸಮೀಕ್ಷೆ ವರದಿಯಂತೆ ದೇಶಾದ್ಯಂತ ೪೪.೧% ಗಿಂತಲೂ ಅಧಿಕ ಸಂಖ್ಯೆಯ ಜನರು ಕೇವಲ ಒಂದು ಕೊಠಡಿಯ ಮನೆಗಳಲ್ಲಿ ೧೨% ರಷ್ಟು ಮಂದಿ ೩ ಕೊಠಡಿಗಳ ಮನೆಗಳಲ್ಲಿ ೧೬% ರಷ್ಟು ೪ ಅಥವಾ ಅದಕ್ಕೂ ಹೆಚ್ಚಿನ ಕೊಠಡಿಗಳಿರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಮುಂಬೈ ಉದಾ: ಮುಂಬೈನಂತಹ ದೊಡ್ಡ ನಗರಗಳ ಲ್ಲಿನ ೭೭% ರಷ್ಟು ಮನೆಗಳು ಒಂದು ಕೊಠಡಿಯ ಮನೆಗಳಾಗಿವೆ. ಇವುಗಳಲ್ಲಿ ಸರಾಸರಿ ೫.೩ ವ್ಯಕ್ತಿಗಳು ವಾಸ ಮಾಡುತ್ತಿದ್ದಾರೆಂದು ಅಂದಾಜಿಸಲಾಗಿದೆ.

ವಸತಿ ಇಲ್ಲದೇ ಜೀವಿಸುವವರ ದುಸ್ಥಿತಿ: ದೆಹಲಿ, ಮುಂಬೈ, ಕಲ್ಕತ್ತಾ ಚೆನ್ನೈ ಬೆಂಗಳೂರು ಬೃಹತ್ ನಗರಗಳಲ್ಲಿ ವಸತಿಯೇ ಇಲ್ಲದೆ ಜೀವಿಸುವವರ ದುಃಸ್ಥಿತಿ ಹೆಚ್ಚಾಗಿದೆ. ದೆಹಲಿ, ಮುಂಬೈ, ಕಲ್ಕತ್ತಾ ಗಳಂತಹ ಬೃಹತ್ ನಗರಗಳಲ್ಲಿ ಯಾವುದೇ ಬಗೆಯ ವಸತಿ ಆಶ್ರಯವಿಲ್ಲದೆ, ಕೊಳಚೆ ಪ್ರದೇಶಗಳ ಆಶ್ರಯವೂ ಲಭ್ಯವಿಲ್ಲದ ಸಹಸ್ರಾರು ಮಂದಿ ರಸ್ತೆಗಳ ಬದಿಯಲ್ಲಿ ಬಸ್‌ಸ್ಟಾಂಡ್ ಹಾಗೂ ರೈಲ್ವೇ ಸ್ಟೇಷನ್‌ಗಳಲ್ಲಿ, ರಸ್ತೆ ಬಳಿ ಇರಿಸಿರಬಹುದಾದ ಬೃಹತ್ ಗಾತ್ರದ ಕೊಳಾಯಿಗಳೊಳಗೆ, ದೇವಸ್ಥಾನದ ಹೊರವಲಯಗಳಲ್ಲಿ ಹಾಗೂ ಮರಗಳ ಕೆಳಗೆ ವಾಸಿಸುವುದು ಕಾಣಬಹದು. ಯಾವುದೇ ಬಗೆಯ ವಸತಿ ಗತಿಯಿಲ್ಲದ ನೂರಾರು ಜನರು ರಾತ್ರಿ ಹೊತ್ತು ಮಲಗಿಕೊಂಡಿರುವ ದೃಶ್ಯವನ್ನು ಮುಂಬೈ ಹಾಗೂ ಕಲ್ಕತ್ತಾಗಳಲ್ಲಿ ನೋಡಬಹುದು. ಬೆಂಗಳೂರು, ಮುಂಬೈ ರೈಲ್ವೆ ಸ್ಟೇಷನ್‌ಗಳಲ್ಲಿ (ಇಂದಿಗೂ ಕೊಳಚೆ ಪ್ರದೇಶದ ನಿವಾಸಿಗಳ ವಸತಿ ಸಮಸ್ಯೆ ತುಂಬ ತಳಮಟ್ಟದಲ್ಲಿದ್ದು) ವಾಸಿಸುತ್ತಾರೆ. ಇಂತಹ ಸಮಸ್ಯೆಗಳು ಇಂದಿಗೂ ಕಾಣಬಹುದು.

ದುಬಾರಿ ಮನೆ ಬಾಡಿಗೆ ಸಮಸ್ಯೆಗಳು : ಕೊಳಗೇರಿ ನಿವಾಸಿಗಳ ಸಮಸ್ಯೆ ದುಬಾರಿ ಬಾಡಿಗೆ ನಗರಗಳಲ್ಲಿ ವಾಸಿಸಲು ಸುಯೋಗ್ಯವಾದ ಬಾಡಿಗೆ ಮನೆಗಳಲ್ಲಿನ ಸಮಸ್ಯೆಯ ಜೊತೆಗೆ ಲಭ್ಯವಿರುವ ಬಾಡಿಗೆ ಮನೆಗಳ ಬಾಡಿಗೆಯ ದರ ಕೂಡ ಅತ್ಯಧಿಕವಾಗಿದೆ. ಬಾಡಿಗೆಗಾಗಿ ಮನೆಗಳನ್ನು ಕಟ್ಟಿಸುವವರು ಕಂಡುಬರುತ್ತದೆ. ಬಡಜನರಿಗೆ ಹಾಗೂ ಕೆಳಮಧ್ಯಮ ವರ್ಗದವರಿಗೆ ಬಾಡಿಗೆ ಗೃಹಗಳನ್ನು ಕಟ್ಟಿಸುವುದು, ಲಾಭದಾಯಕವಲ್ಲವೆಂದು ಪರಿಗಣಿಸಿರುವುದರಿಂದ ಈ ವರ್ಗಗಳ ಜನರ ವಸತಿಯ ಸಮಸ್ಯೆ ನಗರಗಳಲ್ಲಿ ತೀವ್ರವಾಗಿದೆ.

ನಗರದ ಕೊಳಚೆ ಪ್ರದೇಶದ ವಸತಿ ಸಮಸ್ಯೆ ಕಾರಣಗಳು

ನಗರದ ಅಭಿವೃದ್ಧಿಕ್ಕೆ ಕಾರಣವಾಗಿ ಹುಟ್ಟಿಕೊಳ್ಳುವುದು ಕೊಳಚೆ ಪ್ರದೇಶಗಳು, ಕೈಗಾರಿಕಾ ಕ್ರಾಂತಿಯ ಸಹಜ ಸೌಲಭ್ಯಗಳು ಲಭ್ಯವಿರುವ ದೊಡ್ಡ ಗಾತ್ರದ ನಗರಗಳಲ್ಲಿ ಕೈಗಾರಿಕೋದ್ಯಮಗಳು ಕೇಂದ್ರೀಕರಣಗೊಳ್ಳುವುದನ್ನು ಗಮನಿಸಬಹುದು. ದೂರದ ಊರುಗಳಿಂದ ಮುಖ್ಯವಾಗಿ ಹಳ್ಳಿಗಳಿಂದ ನಗರಕ್ಕೆ ಉದ್ಯೋಗಗಳನ್ನು ಅರಿಸಿಕೊಂಡು ಬರುವವರ ಸಂಖ್ಯೆ ಹೆಚ್ಚು. ಉದ್ಯಮವಾಗಿ ಜನಸಂಖ್ಯೆ ಹೆಚ್ಚುವರಿ ವಸತಿ, ಸೌಕರ್ಯ ಸಹಿತ ಕನಿಷ್ಟ ನಾಗರೀಕರಣ ಮೂಲ ಮುಂಬೈ, ಕೊಲ್ಕತ್ತಾ, ಚೆನ್ನೈ, ಅಹ್ಮದಾಬಾದ್, ಬೆಂಗಳೂರು ಮೊದಲಾದ ನಗರಗಳಿಗೆ ವಲಸೆ ಬರುತ್ತಾರೆ.

ಕೊಳಚೆ ಪ್ರದೇಶದಲ್ಲಿ ಅನೇಕ ಸ್ಲಂಗಳು ಮಳೆಗಾಲದಲ್ಲಿ ಮಳೆನೀರಿನಿಂದ, ನಿಂತ ನೀರಿನಿಂದ ಭಾಗಶಃ ತೊಂದರೆಯನ್ನು ಅನುಭವಿಸುತ್ತಿವೆ. ಈ ಸ್ಲಂಗಳಲ್ಲಿ ಕೆಲವು ಮಾತ್ರ ಮಳೆನೀರಿನ ತೊಂದರೆಯಿಂದ ಪಾರಾಗಿವೆ. ಉಳಿದಂತೆ ಎಲ್ಲಾ ಸ್ಲಂಗಳು ಮಳೆಗಾಲದ ದಿನಗಳಲ್ಲಿ ಅಕ್ಷರಶಃ ಪ್ರವಾಹಕ್ಕೆ ತುತ್ತಾದ ಪ್ರದೇಶಗಳಂತೆ ಕಾಣುತ್ತವೆ. ಗಮನಕ್ಕೆ ಬಾರದೇ ಉಳಿದ ಸ್ಲಂಗಳಲ್ಲಿ ಸ್ಥಿತಿಗತಿ ತಿಳಿಯದು. ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿರುವ ಇಲ್ಲಿಯ ಕೊಳಚೆ ಪ್ರದೇಶಗಳ ಜನರು ದಿನನಿತ್ಯ ಒಂದಲ್ಲಾ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದರಲ್ಲಿ

ಹೆಚ್ಚು ತೀವ್ರತೆಯನ್ನು ಅನುಭವಿಸುವರು ಮಹಿಳೆಯರು. ಮೂಲಭೂತ ಅವಶ್ಯಕತೆಗಳಾಗಲಿ, ಸಾಮಾಜಿಕ ಸಮಸ್ಯೆಯಾಗಲಿ ಅದರ ತೀವ್ರತೆಗೆ ಮೊದಲು ಬಲಿಯಾಗುವುದು ಮಹಿಳೆ. ಆ ಸಮಸ್ಯೆಯಿಂದ ಹೊರಬರಲು ಮಹಿಳೆಯರು ತನ್ನ ಇಡೀ ಜೀವನವನ್ನೇ ಕಳೆಯುವಳು. ಜೀವನವನ್ನು ಕಷ್ಟದಲ್ಲಿ ಕಳೆದರೂ ಈ ಪಿತೃಪ್ರಧಾನ ಸಮಾಜದಲ್ಲಿ ಸಮಸ್ಯೆಗಳು ಸಾಮಾನ್ಯ ಸಂಗತಿಗಳಾಗಿವೆ.


ಕೊಳಚೆ ಪ್ರದೇಶಗಳಲ್ಲಿ ರೋಗರುಜಿನಗಳು–ಎಚ್.ಐ.ವಿ.: ಏಡ್ಸ್ ಎಂಬುದು ಮಾರಕ ರೋಗ. ಆದರೆ ಅದು ಶಾಪವಲ್ಲ. ಪ್ರಚಲಿತ ಆರೋಗ್ಯ ವಲಯದಲ್ಲಿ ವಿಶ್ವವನ್ನೇ ತಲ್ಲಣಿಸಿದ ಒಂದು ಆರೋಗ್ಯ ಸಮಸ್ಯೆಯಾಗಿದೆ. ಮುಂದುವರೆದು ಜಗತ್ತಿನ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿದೆ. ಇದು ಜಗತ್ತಿನಾದ್ಯಂತ ತನ್ನ ಛಾಪು ಮೂಡಿಸುತ್ತಿದೆ. ಈ ರೋಗವಿದೆ ಎಂದರೆ ಜನ ಭಯ ಪಡುವಂತೆ ಮಾಡಿದೆ. ಇಂಗ್ಲೀಷ್ ಭಾಷೆಯಲ್ಲಿ 'ಹ್ಯೂಮನ್ ಇಮ್ಯುನ ಡಿಫಿಷಿಯನ್ಸ್ ವೈರಸ್' ಎಂಬುದರ ಸಂಕ್ಷಿಪ್ತ ರೂಪವೇ ಎಚ್.ಐ.ವಿ. ಅಂದರೆ ಮನುಷ್ಯನ ದೇಹದಲ್ಲಿರುವ ಸಹಜವಾದ ರೋಗ ನಿರೋಧಕ ಶಕ್ತಿಯನ್ನು ಕುಂದಿಸುವ ಅಥವಾ ಕೊರತೆಯನ್ನುಂಟು ಮಾಡುವ ಒಂದು ವೈರಾಣು ಎಂದರ್ಥ. ಇದರಿಂದಾಗಿ ದೇಹವು ರೋಗಗಳ ವಿರುದ್ಧ ಹೋರಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತದೆ. ದೇಹದಲ್ಲಿರುವ ಬಿಳಿ ರಕ್ತ ಕಣಗಳನ್ನು ನಾಶಮಾಡಿ ದೇಹದ ರಕ್ಷಣೆಗಾಗಿ ವ್ಯವಸ್ಥೆಯನ್ನು ನಾಶ ಮಾಡುತ್ತದೆ. ಇದರಿಂದ ಸೋಂಕಿತ ವ್ಯಕ್ತಿಯು ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಾನೆ.

ಕೊಳಚೆ ನಿವಾಸಿ ಜನರಿಗೆ ಏಡ್ಸ್ ಕುರಿತು ಎಷ್ಟರ ಮಟ್ಟಿಗೆ ತಿಳುವಳಿಕೆ ಇದೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ. ಏಡ್ಸ್ ಎಂಬ ರೋಗದ ಬಗ್ಗೆ ನಿಮಗೆ ತಿಳಿದಿದೆಯೇ? ಎಂದು ಸಂದರ್ಶನದಲ್ಲಿ ಪ್ರಶ್ನಾವಳಿಗಳಿಗೆ ಉತ್ತರವನ್ನು ಈ ಕೆಳಕಂಡಂತೆ ಪಡೆಯಲಾಗಿದೆ.

ಕೋಷ್ಟಕ ೫.೪೫

ಏಡ್ಸ್ ಕುರಿತು ಅರಿವಿನ ವಿವರ

ಕ್ರ. ಸಂ.	ಪ್ರತಿಕ್ರಿಯೆ	ಮ.ಸಂ.	ಶೇಕಡ
೧	ತಿಳಿದಿದೆ	೨೬೦	೮೬.೬೭
೨	ತಿಳಿದಿಲ್ಲ	೪೦	೧೩.೩೩
	ಒಟ್ಟು	೩೦೦	೧೦೦.೦೦



ಶೇಕಡಾ ೮೬.೬೭ ರಷ್ಟು ಮಹಿಳೆಯರಿಗೆ ಏಡ್ಸ್ ಕುರಿತು ಅರಿವು ಇದೆ. ಏಡ್ಸ್ ಹೇಗೆ ಹರಡುತ್ತಿದೆ ಎಂಬುವುದರ ಅರಿವು ಇಲ್ಲಿಯ ಮಹಿಳೆಯರಿಗೆ ಸರ್ಕಾರೇತರ ಸಂಸ್ಥೆಗಳು ಅರಿವನ್ನು ಮೂಡಿಸಿವೆ. ಶೇಕಡಾ ೧೩.೩೩ ರಷ್ಟು ಮಹಿಳೆಯರಿಗೆ ಸಂದರ್ಶನದ ಸಮಯದಲ್ಲಿ ಏಡ್ಸ್ ಕುರಿತು ಎಲ್ಲಾ ರೀತಿಯ ಮಾಹಿತಿಯನ್ನು ನೀಡಲಾಗಿದೆ. ಕ್ಷೇತ್ರಕಾರ್ಯದ ಸಮಯದಲ್ಲಿ ಇಬ್ಬರು ಮಹಿಳೆಯರಿಗೆ ಎಚ್.ಐ.ವಿ. ಇರುವುದು ತಿಳಿದು ಬಂದಿದೆ. ಈ ಮಾರಣಾಂತಿಕ ಖಾಯಿಲೆಗೆ ಬಲಿಯಾದ ಒಬ್ಬರ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ.

ಮಹಿಳೆಯರ ಸಮಸ್ಯೆಗಳು


ಮಹಿಳೆ ಇಂದು ಸಮಾಜದಲ್ಲಿ ಅನೇಕ ವಿಧವಾದ ಸ್ಥಾನ ಮತ್ತು ಪಾತ್ರಗಳನ್ನು ನಿರ್ವಹಿಸುತ್ತಿದ್ದಾಳೆ. ಅವಳು ಉದ್ಯೋಗ ಹಾಗೂ ಬಾಂಧವ್ಯದಲ್ಲಿ ಕುಟುಂಬದಲ್ಲಿ ಪುರುಷನಷ್ಟೇ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸುತ್ತಾಳೆ. ಆಕೆ ಬಾಲಕಿಯಾಗಿ, ಹದಿಹರೆಯದವಳಾಗಿ,

ಹಲವು ಕಡೆ ಸ್ವೀಪರ್‌ಗಳಾಗಿ ಕಸಗುಡಿಸುವ, ಬೀದಿ ಸ್ವಚ್ಛ ಮಾಡುವ ಕಾರ್ಯದಲ್ಲಿ ನಿರತಳಾಗುತ್ತಾಳೆ. ಒಟ್ಟಾರೆಯಾಗಿ ಕೊಳಗೇರಿ ಮಹಿಳೆಯರ ಸ್ಥಿತಿಯು ತುಂಬಾ ಅಧೋಗತಿಯಿಂದ ಕೂಡಿದೆ. ಅವರ ವೈವಾಹಿಕ ಮಾದರಿಗಳಲ್ಲಿ, ರೂಢಿ ಸಂಪ್ರದಾಯಗಳಲ್ಲಿ, ಭಾವನೆಗಳಲ್ಲಿ ಹಾಗೂ ಬಾಂಧವ್ಯದಲ್ಲಿ ಭಿನ್ನತೆಯಿದೆ. ಇತರ ಪ್ರದೇಶದ (ನಗರ ಗ್ರಾಮಗಳ) ಮಹಿಳೆಯರಿಗಿಂತ ತೀರ ವಿಭಿನ್ನವಾಗಿರುವುದನ್ನು ಗಮನಿಸಬಹುದಾಗಿದೆ.

ಕೋಷ್ಟಕ ೫.೪೬

ಮಹಿಳೆಯರ ವಿವಿಧ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ವಿವರ

ಕ್ರ. ಸಂ.	ಕೆಲಸ	ಸಂಖ್ಯೆ	ಶೇಕಡ
೧	ಟೈಲರಿಂಗ್	೯೦	೩೦.೦೦
೨	ಮನೆಕೆಲಸ	೧೩೦	೪೩.೮೩
೩	ಶಾಲೆಯಲ್ಲಿ ಅಡುಗೆ ಕೆಲಸ	೦	೦.೦೦
೪	ರೊಟ್ಟಿ ಮಾಡುವುದು	೫೨	೧೭.೩೩
೫	ತರಕಾರಿ ವ್ಯಾಪಾರ	೨೩	೭.೬೭
೬	ಬಟ್ಟೆ ಅಂಗಡಿ ಕೆಲಸ	೫	೧.೬೭
೭	ಬೀಡಿ ಕಟ್ಟುವುದು	೦	೦.೦೦
	ಒಟ್ಟು	೩೦೦	೧೦೦.೦೦



ಪ್ರೌಢೆಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತೆಯಾಗಿ... ಹೀಗೆ ವೈವಿಧ್ಯಮಯ ಸ್ಥಾನವನ್ನು ನಿರ್ವಹಿಸುತ್ತಾಳೆ.

ಕೊಳಗೇರಿಯಲ್ಲಿ ಮಹಿಳೆ ಎಂದರೆ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿರುತ್ತವೆ. ಇಲ್ಲಿ ವಿವಾಹಿತ ಮಹಿಳೆ, ಅವಿವಾಹಿತ ಮಹಿಳೆ, ವಿಚ್ಛೇದಿತ ಮಹಿಳೆ, ವಿಧವೆ, ಗಂಡನಿಂದ ದೂರವಿರುವವಳು ಇರುತ್ತಾರೆ. ಮರು ವಿವಾಹವಾದವಳು, ಅವಿವಾಹಿತಳಾಗಿ ಸಂಸಾರ ಮಾಡುವವಳು, ಗ್ರಾಮೀಣ ಅಥವಾ ಇತರೆಡೆಗಳಲ್ಲಿ ಬಹಿಷ್ಕಾರಕ್ಕೆ ಒಳಗಾದವಳು, ಇಲ್ಲಿ ವಾಸ ಮಾಡುವುದು ತೀರಾ ಸಹಜ. ಅನೈತಿಕ ಸಂಬಂಧ ವೇಶ್ಯಾವಾಟಿಕೆಯಲ್ಲಿ ವ್ಯಭಿಚಾರದಲ್ಲಿ ತೊಡಗಿರುವರೇ ಹೆಚ್ಚಾಗಿ ಕಂಡುಬರುತ್ತಾರೆ.

ಯಾವ ಸಮಾಜದಲ್ಲಿಯೂ ಮಹಿಳೆಯರು ಒಂದೇ ಕಡೆ ಸ್ವತಂತ್ರವಾಗಿ ಒಟ್ಟಿಗೆ ಇರುವುದು ಕಂಡುಬರುವುದಿಲ್ಲ. ಆಯಾ ಸಮಾಜದ ವರ್ಗ, ಜನಾಂಗ, ವೃತ್ತಿ, ಜಾತಿ, ಧರ್ಮ ಮೊದಲಾದವುಗಳಲ್ಲಿ ಅವರು ಹಂಚಿಹೋಗಿರುತ್ತಾರೆ. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕೆಲವು ಸಾಮಾನ್ಯವಾಗಿವೆ. ಸೌಲಭ್ಯಗಳು ಹೇಗೆ ದೊರಕುತ್ತವೆಯೋ ಹಾಗೆಯೇ ಅವರವರ ಸಮೂಹದ ರಚನೆಗಳ ಭಿನ್ನತೆಯಲ್ಲಿ ಅವರನ್ನು ಬೇರೆ ಮಾಡುವ ಸನ್ನಿವೇಶಗಳಿವೆ. ಆಗ ನಾವು ಅವರನ್ನು ಕೊಳಗೇರಿ ಮಹಿಳೆ, ನಗರದ ಮಹಿಳೆ, ಗ್ರಾಮೀಣ ಮಹಿಳೆ, ಬುಡಕಟ್ಟು ಮಹಿಳೆ, ದಲಿತ ಮಹಿಳೆ, ಮುಸ್ಲಿಂ ಮಹಿಳೆ ಎಂದು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಅವರ ಸ್ಥಿತಿಗತಿಗಳನ್ನು ನಿರ್ದಿಷ್ಟವಾಗಿಯೇ ಗಮನಿಸಬೇಕಾಗುತ್ತದೆ. ಅವರ ಸಮಸ್ಯೆಗಳ ಸ್ವರೂಪ ಅದರ ನಿವಾರಣೆಗೆ ಅನುಸರಿಸಬೇಕಾದ ವಿಧಾನ ಈ ಎಲ್ಲವೂ ಬೇರೆಬೇರೆಯಾಗಿರುತ್ತದೆ. ಎಲ್ಲಾ ಮಹಿಳೆಯರು ಮುಂದೆಯೂ ಸಮಾನವಾದ ಕೆಲವು ಆದರ್ಶಗಳನ್ನು ವಿದ್ಯೆ, ಉದ್ಯೋಗದ ಅವಕಾಶಗಳಿವೆ. ಕುಟುಂಬ, ಸಂತಾನದ ಆಯ್ಕೆ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಬಲೀಕರಣ ಇತ್ಯಾದಿ. ಕವಲುದಾರಿಯಲ್ಲಿರುವ ಮಹಿಳೆಯರು ಅದನ್ನು ತಲುಪಿ ಪುನಃ ದಾರಿಗಳು, ದಾರಿಗಳಲ್ಲಿ ಕಾಣಿಸುವ ಅಡಚಣೆಗಳು ವಿಭಿನ್ನ ಭಾರತೀಯ ಮಹಿಳೆಯರ ಸಂದರ್ಭದಲ್ಲಿ ಅತ್ಯಂತ ಮುಖ್ಯವಾಹಿನಿಗೆ ತರಲು ಒಂದು ವರ್ಗವೇ ಸೃಷ್ಟಿಯಾಗುತ್ತದೆ.

ಇದೆಲ್ಲದರ ಪರಿಣಾಮವಾಗಿ ಕೊಳಗೇರಿಯ ಮಹಿಳೆಯು ವಿಧಿಯಿಲ್ಲದೇ ಅನೈತಿಕ ವ್ಯವಹಾರದಲ್ಲಿ ತೊಡಗುತ್ತಾಳೆ. ಇದರ ಫಲವಾಗಿ ಕಳ್ಳತನ ಮುಂತಾದ ಕೃತ್ಯಗಳಲ್ಲಿ ನಿರತಳಾಗುತ್ತಾಳೆ. ಹಾಗೆಯೇ ಕೊಳಗೇರಿಗಳಲ್ಲಿ ಮಹಿಳೆಯರು ಜೀವನಾಧಾರಕ್ಕಾಗಿ ಮನೆಗೆಲಸ, ಊದುಬತ್ತಿ, ಮೇಣದಬತ್ತಿ ಮಾಡುವುದು, ಬೀಡಿ ಕಟ್ಟುವುದು ಮುಂತಾದ ಕೆಲಸಗಳಲ್ಲಿ ತೊಡಗುತ್ತಾರೆ. ಅಲ್ಲದೇ ಹಳೇ ಪೇಪರುಗಳ ಸಂಗ್ರಹ, ಪ್ಲಾಸ್ಟಿಕ್ ಮತ್ತು ಇನ್ನಿತರ ಅನುತ್ಪಾದಕ ವಸ್ತುಗಳ ಸಂಗ್ರಹ ಹಣ್ಣು ಹಂಪಲುಗಳ ಮಾರಾಟ, ತರಕಾರಿ ಮಾರಾಟಗಳಲ್ಲಿ ಪುರುಷರಿಗೆ ಸಹಾಯ ಮಾಡುತ್ತಾಳೆ. ಅಲ್ಲದೆ ಮಹಿಳೆಯು ಹಾಸ್ಟಲ್ ಮತ್ತು ದಿನಸಿ ಅಂಗಡಿಗಳಲ್ಲಿ ದಾಸ್ತಾನು ಮಾಡುವ, ಆಸ್ಪತ್ರೆ ಮತ್ತು ಶಾಲೆಗಳಲ್ಲಿ ಆಯಾಗಳ ಕೆಲಸ ಮಾಡುವ, ನಗರಪಾಲಿಕೆ ಸೇರಿದಂತೆ

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ, ೫.೪೬ರಲ್ಲಿ ನೀಡಲಾಗಿದೆ. ಮಹಿಳೆಯರು ವಿವಿಧ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಾರೆ. ಶೇ. ೩೦.೦೦ ರಷ್ಟು ಮಹಿಳೆಯರು ಟೈಲರಿಂಗ್ ಕೆಲಸ ನಿರ್ವಹಿಸುತ್ತಿದ್ದಾರೆ. ಶೇಕಡಾ ೪೩.೩೩ ರಷ್ಟು ಮಹಿಳೆಯರು ಮನೆ ಕೆಲಸವನ್ನು ನಿರ್ವಹಿಸುತ್ತಾರೆ. ಇಲ್ಲಿಯ ಮಹಿಳೆಯರಿಗೆ ಸುಲಭವಾಗಿ ಸಿಗುವ ಮನೆ ಹತ್ತಿರದ ಕೂಲಿ ಕೆಲಸವೆಂದರೆ ಮನೆಕೆಲಸವಾಗಿದೆ. ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಕೂಡ ಅನುಕೂಲವಾಗುತ್ತಿರುವುದು ಸಹ ಹೆಚ್ಚಿನವರು ಈ ಕೆಲಸಕ್ಕೆ ಬಲವನ್ನು ತೋರಿಸುತ್ತಿರುವವರು. ಏಕೆಂದರೆ ಶಾಲೆಯಲ್ಲಿ ಅಡುಗೆ ಕೆಲಸ ಮಾಡುವವರು ಶೇಕಡಾ ೦.೦೦ ಇದ್ದಾರೆ. ಶೇ. ೧೭.೩೩ ರಷ್ಟು ರೊಟ್ಟಿ ಮಾಡುವವರು ಮಹಿಳೆಯರು ಕಂಡುಬರುತ್ತಾರೆ. ರಷ್ಟು ತರಕಾರಿ ವ್ಯಾಪಾರ ೭.೬೭ ರಷ್ಟು ಜನರು ಕೆಲಸ ನಿರ್ವಹಿಸುತ್ತಾರೆ. ಬಟ್ಟೆ ಅಂಗಡಿ ಕೆಲಸ ಶೇ. ೧.೬೭ ರಷ್ಟು ಮಹಿಳೆಯರು ಕೆಲಸ ಹೋಗುತ್ತಾರೆಂದು ಪ್ರತಿಕ್ರಿಯಿಸುತ್ತಾರೆ.

ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆ

ಕುಟುಂಬ ಸಾಮಾಜಿಕ ಅವಿಭಾಜ್ಯ ಅಂಗ. ಮಹಿಳೆಯರಿಂದಲೇ ಕುಟುಂಬ ವ್ಯವಸ್ಥೆ ಆರಂಭವಾಗುತ್ತದೆ. ಮಹಿಳೆಯರ ಬದುಕಿನಲ್ಲಿ ಕುಟುಂಬ ತುಂಬ ಮಹತ್ವ ಪಡೆದುಕೊಳ್ಳುತ್ತದೆ. ಕುಟುಂಬ ಸಾಮಾಜಿಕ ವ್ಯವಸ್ಥೆಯ ಒಂದು ಮೂಲ ಘಟಕ. ಇದರಲ್ಲಿ ಪುರುಷರು, ಮಹಿಳೆಯರು, ಮಕ್ಕಳು ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆ, ಜೀವನ ಸಾಗಿಸುವಂತಹ ಮೂಲಭೂತ ಅಗತ್ಯತೆಗಳಿರುತ್ತವೆ. ಕುಟುಂಬ ಸದಸ್ಯರ ಜೊತೆ ಪರಸ್ಪರ ಆಹಾರ ಕ್ರಮ ಮಕ್ಕಳ ಶೈಕ್ಷಣಿಕ ಚಿಂತನೆ ಹಾಗೂ ಲೈಂಗಿಕ ಜೀವನ ಕುಟುಂಬದ ಒಂದು ಜೀವನಗಳ ಮೂಲಭೂತ ಅಗತ್ಯತೆಗಳ ಅರಿವಿರುತ್ತದೆ. ಕುಟುಂಬದ ಮಹಿಳೆಯನ್ನು ಗೃಹಣಿಯಾಗಿ ವಿವಾಹದ ಪಾತ್ರ ಸ್ಥಾನಮಾನವನ್ನು ನಿರ್ಧರಿಸುವಂತಹುದಾಗಿದೆ. ಗೃಹ 'ಕೊಳಚೆ' ಪ್ರದೇಶಗಳಲ್ಲಿ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರು ತುಂಬ ಶ್ರಮ ಪಡುತ್ತಾರೆ. ಒಂದು ಕುಟುಂಬದಲ್ಲಿ ೧/೫ ಜನರು ೮ ರಿಂದ ಕುಟುಂಬ ನಿವಾಸಿ ನೋಡಬಹುದು. ಇಲ್ಲಿಯ ಕೊಳಚೆ ಪ್ರದೇಶಗಳಲ್ಲಿ ವಿಭಕ್ತ ಕುಟುಂಬ ಕಂಡುಬರುತ್ತವೆ. ಈ ಎಲ್ಲ ಕುಟುಂಬಗಳು ಪುರುಷ ಪ್ರಧಾನ ಆಗಿವೆ. ಕೊಳಚೆ ಕೌಟುಂಬಿಕ ಸಾಮಾಜಿಕ ಮತ್ತು ಆರ್ಥಿಕ ನಿರ್ವಹಣೆಗಳು, ಮನೆಯಲ್ಲಿ ಯಜಮಾನ ಅಧಿಕಾರ ಸ್ವರೂಪವನ್ನು ಅಥವಾ ವಿವಾಹಿಸುವುದನ್ನು ನೋಡಬಹುದು. ಈ ಪ್ರದೇಶದಲ್ಲಿ ಪರಪುಷರಿಗಿಂತ ಮಹಿಳೆಯರು ಹೆಚ್ಚು ಜವಾಬ್ದಾರಿ ನೋಡಿಕೊಳ್ಳುತ್ತಾರೆ.

ಕೊಳಚೆ ನಿವಾಸಿಗಳಲ್ಲಿ ಅದರದೇ ವಿವಾಹ, ಆಚರಣೆ, ಪದ್ಧತಿ, ಸಂಪ್ರದಾಯಗಳು ಬಳಕೆಯಲ್ಲಿವೆ. ಕೊಳಚೆ ನಿವಾಸಿಗಳ ಹಲವು ಧರ್ಮ, ಜಾತಿಗಳಲ್ಲಿ ಹಂಚಿಹೋಗಿದ್ದರಿಂದ ನೋಡಬಹುದು. ಉದಾ : ಮುಸ್ಲಿಂ, ಕ್ರಿಶ್ಚಿಯನ್, ಲಂಬಾಣಿಗಳು, ಹರಿಜನರು, ಬ್ರಾಹ್ಮಣರು, ಮುಂತಾದ ವಿವಿಧ ಜಾತಿ, ಧರ್ಮದವರು ತಮ್ಮ ಸಂಪ್ರದಾಯಗಳಿಗೆ ಅನುಗುಣವಾಗಿ ವಿವಾಹವಾಗುತ್ತಾರೆ. ಈ ಪ್ರದೇಶಗಳಲ್ಲಿ ಅನೇಕ ಜಾತಿಗಳ ಸಂಗಮವಾಗಿರುವುದರಿಂದ ಅಂತರ್ ಜಾತಿಯ ವಿವಾಹಗಳು ಜರುಗಿರುವುದು ಕಂಡುಬರುತ್ತದೆ.

ಮಹಿಳೆಯರ ಸಮಸ್ಯೆಗಳು : ಮಹಿಳೆ ಮತ್ತು ಪರಿಸರ

ಕೊಳಗೇರಿ ಪರಿಸರದಲ್ಲಿ ಉಂಟಾಗುವ ಸಾಮಾಜಿಕ ಅನಿಷ್ಟಗಳಿಗೆ ಪುರುಷರಿಗಿಂತ ಮೊದಲು ಬಲಿಯಾಗುವವಳು ಮಹಿಳೆಯೇ. ಸಾಮಾಜಿಕ, ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದಾಗಿ ಮತ್ತು ಅವರ ಭೌತಿಕ ಕಾರಣಗಳಿಂದಾಗಿ ಹಿಂದುಳಿದಿರುವುದು ಕಟುಸತ್ಯ. ಬೇರೆ ಪದಗಳಲ್ಲಿನ ಹೇಳುವುದಾದರೆ ಕೋಳಗೇರಿ ಮಹಿಳೆ ಇಂದು ಪರಿಸರದ ಸಮಸ್ಯೆಗಳಿಗಿಂತ ಪುರುಷರಿಗಿಂತ ಹೀನಾಯವಾಗಿ ಶೋಷಣೆಗೆ ಒಳಗಾಗಿದ್ದಾಳೆ.

೧. ಕೆಳಮಟ್ಟದ ಆರೋಗ್ಯ : ಕೊಳಗೇರಿಯಲ್ಲಿ ಮಹಿಳೆಯರು ಅತ್ಯಂತ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಇದರ ಪರಿಣಾಮವಾಗಿ ಮಹಿಳೆಯರು ಗರ್ಭಕೋಶದ ತೊಂದರೆ, ರಕ್ತಹೀನತೆ, ದೈಹಿಕವಾಗಿ ದುರ್ಬಲತೆ, ಚರ್ಮರೋಗ ಮತ್ತು ಇನ್ನಿತರ ತೊಂದರೆಗಳಿಂದ ಬಳಲುತ್ತಾರೆ. ಸರಿಯಾದ ಶುಚಿತ್ವ ವಾಯುಸಂಚಾರ, ಶುದ್ಧ ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳಿಲ್ಲದೆ ಮಹಿಳೆಯು ರೋಗಗ್ರಸ್ಥಳಾಗಿದ್ದಾಳೆ. ಲೈಂಗಿಕ ರೋಗಗಳಿಂದ ಬಳಲುತ್ತಿದ್ದು ಹಾಗೂ ಅದರ ಬಗ್ಗೆ ಸರಿಯಾದ ವೈದ್ಯಕೀಯ ಉಪಚಾರ, ಅರಿವು-ಜ್ಞಾನ ಮತ್ತು ರೋಗಗಳಿಂದ ಮುಕ್ತರಾಗದೇ ಸಂಕಷ್ಟದಲ್ಲಿರುವುದನ್ನು ಗುರುತಿಸಬಹುದು.

೨. ಮಹಿಳೆ ಮತ್ತು ಶೋಷಣೆ: ಕೊಳಗೇರಿಯಲ್ಲಿರುವ ಮಹಿಳೆಯರು ಕಾರ್ಖಾನೆಯಲ್ಲಿ ದುಡಿಯುವುದರಿಂದ ಸರಿಯಾದ ಕೂಲಿ, ಉದ್ಯೋಗದಲ್ಲಿ ಪರಿಣತಿ ಪಡೆಯುವುದರಿಂದ ವಂಚಿತರಾಗಿದ್ದಾರೆ. ಅವರು ಪುರುಷರಿಂದ ಲೈಂಗಿಕ, ದೈಹಿಕ ಮತ್ತು ಮಾನಸಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಹಲವಾರು ಸಾಮಾಜಿಕ ಶಾಸನಗಳಾದ ೧೯೮೪ ಕಾರ್ಖಾನೆ ಕಾಯಿದೆ. ಕನಿಷ್ಟ ವೇತನ ೧೯೫೨ ಮೆಟರ್‌ನಿಟ್ ಬೆನಿಫಿಟ್, ೧೯೬೧ ಮತ್ತು ಸಮಾನ ವೇತನ ೧೯೭೫ರ ಕಾಯಿದೆಗಳು ಅವರ ಶೋಷಣೆಯನ್ನು ನಿರ್ಮೂಲನೆ ಮಾಡುವುದಲ್ಲಿ ಈ ಕಾಯಿದೆಗಳು ಸಹಕಾರಿಯಾಗಿವೆ. ಹೆಚ್ಚಾಗಿ ಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗಾಗಿ ಸೀಮಿತವಾಗಿ, ಕೊಳಗೇರಿಯ ಮಹಿಳೆಯರ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು, ಶೇ. ೯೮ರಷ್ಟು ಮಹಿಳೆಯರ ಈ ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಬಳ್ಳಾರಿ ಪ್ರದೇಶದ ಕೊಳಗೇರಿಗಳಲ್ಲಿ ಮಹಿಳೆಯರ ಮೇಲೆ ಪುರುಷನ ದೌರ್ಜನ್ಯ, ಅಹಂಬಾವ, ಶೋಷಣೆ ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ.

೩. ಹಿಂಸೆಯ ವಿರುದ್ಧ ಮಹಿಳೆ: ಕೊಳಗೇರಿಯು ಅನೇಕ ಸಾಮಾಜಿಕ ಅನಿಷ್ಟಗಳ ತೌರೂರು. ಇಂತಹ ಅನಿಷ್ಟಗಳ ಫಲದಿಂದ ಮಹಿಳೆಯರು ಇಂದು ದೌರ್ಜನ್ಯ ಮತ್ತು ಕಿರುಕುಳಿಗೆ ಬಲಿಯಾಗಿದ್ದಾರೆ. ಮಹಿಳೆಯರ ಇಂದು ದೌರ್ಜನ್ಯ ಮತ್ತು ಅನೇಕ ಕಿರುಕುಳಗಳಿಗಿಂತ ತತ್ತರಿಸಿರುವುದನ್ನಲ್ಲದೆ, ಹಿಂಸೆ ಅತ್ಯಾಚಾರ ಮುಂತಾದವು ಕೊಳಗೇರಿ ಮಹಿಳೆಯರು ಎದುರಿಸುತ್ತಿರುವುದು ಸರ್ವವಿಧಿತ. ಇಂತಹವರ ಬಗ್ಗೆ ಅಂಕಿ-ಅಂಶಗಳು ಲಭ್ಯವಿಲ್ಲ. ಪುರುಷರು

ಮದ್ಯಪಾನ ಮಾಡುವುದು ಮತ್ತು ಅಜ್ಞಾನದಿಂದ ಅಸಭ್ಯತನದಿಂದ ವರ್ತಿಸುವುದು ಕೊಳಗೇರಿಯಲ್ಲಿರುವ ಕೆಟ್ಟ ಹೊಂದಾಣಿಕೆಯ ಪರಿಸರವೇ ಪರಿಸ್ಥಿತಿಗೆ ಪ್ರಮುಖ ಕಾರಣವಾಗಿದೆ.

೪. ಮಹಿಳೆ ಮತ್ತು ಭೌತಿಕ ಪರಿಸರ : ಕೊಳಗೇರಿಯ ಭೌತಿಕ ಪರಿಸರ ಬಹಳ ಕೊಳಕು ಮತ್ತು ದುರ್ವಾಸನೆ ಬೀರುವಂತದ್ದು. ಜೋಪಡಿಗಳು, ಮೂಲಭೂತ ಸೌಕರ್ಯದ ಶುದ್ಧ ನೀರು, ವಾಯುಸಂಚಾರ ಮತ್ತು ಬೆಳಕಿನ ಕೊರತೆಗಳಿಂದ ನಿರ್ಮಾಣವಾಗಿದ್ದು, ಮಹಿಳೆಯರ ತುಂಬಾ ವರ್ಷಗಳು ಅಲ್ಲಿ ವಾಸವಾಗಿದ್ದು ಅನೇಕ ರೋಗಗಳಿಗೆ ಬಲಿಯಾಗುತ್ತಾರೆ. ಯಾವಾಗಲೂ ನೀರಿನ ಬವಣೆಯು ಕೊಳಗೇರಿಯಲ್ಲಿ ಸರ್ವಸಾಮಾನ್ಯ. ಮಹಿಳೆಯರು ನೀರಿನ ಸಂಗ್ರಹಕ್ಕಾಗಿ ಬಹು ದೂರ ಕ್ರಮಿಸಬೇಕಾಗುತ್ತದೆ. ಹಾಗೂ ಆ ನೀರು ಕೂಡಾ ತುಂಬಾ ಕೊಳಕಾಗಿದ್ದು ತುಂಬಾ ಜನರಿಗೆ ಅನಗತ್ಯವಾಗಿರುತ್ತದೆ. ನೆರೆಯ ಬೋರ್‌ವೆಲ್ ಕೂಡಾ ಕೊಳಕು ವಾತಾವರಣದಿಂದ ಕೂಡಿದ್ದು ನೀರು ಕಲುಷಿತವಾಗಿರುತ್ತದೆ.

೫. ಉರುವಲು: ಕೊಳಗೇರಿ ನಿವಾಸಿಗಳು ಸೌದೆಯನ್ನು ಎರಡು ಉದ್ದೇಶಗಳಿಗಾಗಿ ಬಳಸುತ್ತಾರೆ. ಒಂದು ಅಡುಗೆ ಬೇಯಿಸುವುದಕ್ಕಾಗಿ, ಮತ್ತೊಂದು ಸ್ವಂತ ಬಳಕೆಗಾಗಿ ಅದಕ್ಕೆಂದೆ ಮಹಿಳೆಯರು ಸೌದೆ ಸಂಗ್ರಹದಲ್ಲಿ ಪ್ರಮುಖರಾಗಿದ್ದಾರೆ. ಹೆಚ್ಚಾಗಿ ಮಹಿಳೆಯರು ಅಡಿಗೆ ಮಾಡುವುದರಿಂದ ಹಾಗೂ ಉರುವಲಿನಿಂದ ಬರುವ ಹೊಗೆಯಿಂದ ಮಹಿಳೆಯರು ಕಣ್ಣಿನ ತೊಂದರೆ ಮತ್ತು ಶ್ವಾಸಕೋಶ ತೊಂದರೆಯಿರುವ ಸದಾ ಬಳಲುತ್ತಾರೆ.

೬. ಸಾಮಾಜಿಕ ಸಂಪ್ರದಾಯಗಳು ಮತ್ತು ದುರ್ವ್ಯಸನ (Social Customs and Vices): ಕೊಳಗೇರಿ ನಿವಾಸಿಗಳೆಲ್ಲರೂ ಸಾಮಾಜಿಕ-ಆರ್ಥಿಕ ಏಣಿ ಶ್ರೇಣಿಯ ಮತ್ತು ಸಂಸ್ಕೃತೀಕರಣ ಪ್ರಕ್ರಿಯೆಯ ಅಡಿಯಲ್ಲಿ ಬರುವವರು. ಅವರು ಹಿಂದೂ ಮೇಲ್ಜಾತಿಯ ಜನರ ಸಾಮಾಜಿಕ ಅನಿಷ್ಟಗಳಿಗೆ ಬಲಿಯಾಗುವವರು ಬಾಲ್ಯವಿವಾಹ, ವರದಕ್ಷಿಣೆ, ವಿಚ್ಛೇದನ, ಕೂಡಾವಳಿ ದುಂದುವೆಚ್ಚ ಮುಂತಾದವು ಹಿಂದೂ ಮೇಲ್ಜಾತಿಯ ಜನರ ಅನುಕರಣೆ ಪರಿಣಾಮವಾಗಿ ಕೊಳಗೇರಿಗಳಲ್ಲಿ ಅತೀ ಕಡಿಮೆ ವಯಸ್ಸಿಗೆ ಹೆಣ್ಣು ಗಂಡು ಮಕ್ಕಳಿಗೆ ವಿವಾಹ ಮಾಡುವುದು ಕಂಡುಬರುತ್ತದೆ.

ಮಹಿಳೆಯ ಸಮಸ್ಯೆಗಳು

ನಾವು ದೇಶಿಯ ಹಿಂಸಾಚಾರ. ಲೈಂಗಿಕ ಕಿರುಕುಳ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಚರ್ಚಿಸುತ್ತೇವೆ. ಕೊಳಚೆ ಪ್ರದೇಶ ಮಹಿಳೆಯರ ಸಮಸ್ಯೆಗಳನ್ನು ಕುರಿತು ಪರಸ್ಪರ ಚರ್ಚಿಸಲಾಗುತ್ತದೆ. ಈ ಸಮಸ್ಯೆಗಳು ಮಹಿಳೆಯರ ಮೇಲೆ ತೀವ್ರವಾಗಿ ಪರಿಣಾಮ ಬೀರುತ್ತವೆ. ಹಾನಿಕಾರಕವಾದ ಅನೇಕ ಸಮಾಧಿ ಸಮಸ್ಯೆಗಳಿಗೆ ಪ್ರಪಂಚದಾದ್ಯಂತ ಮಹಿಳಾ ಜೀವನ. ಈ ಕೆಲವು ಸಮಸ್ಯೆಗಳು ಆಹಾರದ ಕೊರತೆ, ಆರೋಗ್ಯ ಸೌಲಭ್ಯಗಳ ಕೊರತೆ ಮತ್ತು ಬಡತನ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರು ಈ ಅಂಶಗಳಿಂದ ತೀರಾ ಕೆಟ್ಟದಾಗಿದೆ. ಸ್ಥಿತಿ-ಗತಿ ಕೊಳಗೇರಿ ಮಹಿಳೆಯರ-ಮಾನವ ಹಕ್ಕುಗಳ-ಮಹಿಳೆಯರ ಆಹಾರದ ಕೊರತೆ ಮುಖ್ಯ

ಕಾಳಜಿಯ ವಿಷಯವಾಗಿದೆ. ಆಹಾರದ ಕೊರತೆಯಿಂದಾಗಿ ಲಕ್ಷಾಂತರ ಮಹಿಳೆಯರು ಬಳಲುದ್ದಾರೆ. ಜಗತ್ತಿನಾದ್ಯಂತ ಪ್ರತಿಕೂಲ ಪ್ರಭಾವ ಬೀರಿದೆ. ಸಮತೋಲನವನ್ನು ತೆಗೆದುಕೊಳ್ಳುತ್ತಿರುವ ಮಹಿಳೆಯರಲ್ಲಿ ಬಹಳ ಕಡಿಮೆ ಶೇಕಡಾವಾರು ಮಹಿಳೆಯರು ಇದ್ದಾರೆ ಆಹಾರ ಮತ್ತು ಆರೋಗ್ಯಕರ ದೇಹವನ್ನು ಹೊಂದಿರುತ್ತಾರೆ. ಕೆಲವು ಕೊಳಚೆ ಪ್ರದೇಶಕ್ಕೆ ಭೇಟಿ ನೀಡಿದಾಗ, ಕೊಳಚೆ ಪ್ರದೇಶದಲ್ಲಿರುವ ಮಹಿಳೆಯರ ಜೀವನ ಮಾದರಿಗಳನ್ನು ಅವಲೋಕಿಸಿಲಾಗಿದೆ. ಅಲ್ಲಿ ನೋಡಿದ ಸಮಸ್ಯೆ ಈ ಪ್ರದೇಶದಲ್ಲಿ ವಾಸಿಸುವ ಕೆಲವು ಮಹಿಳೆಯರು ಭಯಾನಕ ಸಣ್ಣ ಮತ್ತು ಅವಿಶ್ವಸನೀಯವಾಗಿ ದುರ್ಬಲರಾಗಿದ್ದಾರೆ. ಮೂಲವನ್ನು (ಕಂಡುಹಿಡಿಯಲು) ಸಮಸ್ಯೆಯ ಕಾರಣ. ಕ್ಷೇತ್ರಕಾರ್ಯ ಮಾಡುವಂತಹ ಸಮಯದಲ್ಲಿ ಭೇಟಿ ಮಾಡಿದಾಗ, ಕೆಲವು ಭಯಾನಕ ಸಂಗತಿಯನ್ನು ಕಂಡುಕೊಂಡಿದ್ದಾನೆ. ಕೊಳಗೇರಿಯಾಗಿರುವ ಕಾರಣ ಈ ಪ್ರದೇಶದಲ್ಲಿ ವಾಸಿಸುವ ಜನರಿಗೆ ಅವರ ಕುಟುಂಬಗಳಿಗೆ ಬೆಂಬಲ ನೀಡಲು ಸಾಕಷ್ಟು ಹಣಕಾಸಿನ ಸಂಪನ್ಮೂಲಗಳಿಲ್ಲ. ಒಂದು ಯೋಗ್ಯ ಮಾರ್ಗವಿಲ್ಲದ ಹೆಚ್ಚಿನ ನಿವಾಸಿಗಳು ಕಸ ಸಂಗ್ರಹಕರು ಮತ್ತು ನಿರ್ಲಕ್ಷಿಗೊಳಪಟ್ಟ ಜಾಗದಲ್ಲಿ ವಾಸಿಸುತ್ತಿದ್ದಾರೆ. ಆಹಾವು ಸಾಕಾಗುವುದಿಲ್ಲ. ಇಡೀ ಕುಟುಂಬಕ್ಕೆ ಲಭ್ಯವಿರುತ್ತದೆ. ಪ್ರತಿ ಕುಟುಂಬದ ಬಹುತೇಕ ಮಹಿಳೆಯರ ಚೆನ್ನಾಗಿ ತಿನ್ನಲು ಸಮರ್ಥರಾಗಿದ್ದರೂ ನಿರಂತರವಾದ ಹಸಿವು ಮತ್ತು ಅಸಮರ್ಪಕ ಆಹಾರವು ಅವರಿಗೆ ಅನೇಕ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗಿದೆ. ಮತ್ತು ಅಪೌಷ್ಟಿಕತೆಯು ವಿಶೇಷವಾಗಿ ಮಹಿಳೆಯರ ದೈಹಿಕ ಬೆಳವಣಿಗೆಯ ತೀವ್ರ ಪರಿಣಾಮ ಬೀರಿದೆ. ಅಥವಾ ಬಿರುಗಾಳಿಗಳು ಸೇರಿದಂತೆ ಇಲ್ಲದೆ, ಕೊಳಚೆ ಪ್ರದೇಶಗಳು ಅನೇಕ ವೇಳೆ ಪ್ರದೇಶಕ್ಕಾಗಿ ಪ್ರಮುಖ ನಗರ ಜಾಲಗಳಿಂದ ಹೊರಗುಳಿಯುತ್ತವೆ. ಆರೋಗ್ಯ ರಕ್ಷಣೆ ಸೇವೆಗಳಿಂದ ಯೋಜಿತ ನಗರ ಅಭಿವೃದ್ಧಿ ಸಂಘಟಿತವಾಗಿರುತ್ತದೆ. ಹೊರಾಂಗಣ ಮತ್ತು ಒಳಾಂಗಣ ವಾಯು ಮಾಲಿನ್ಯಕ್ಕೆ ಸಂಬಂಧಿಸಿದ ರೋಗಗಳು ಅಪಾಯಗಳು ಇದಲ್ಲದೆ, ನಗರ ಸಂಚಾರ ಅಪಾಯವನ್ನು ನೋಡಬಹುದು.

ಆ ಪ್ರದೇಶದಲ್ಲಿ ಸಾಮಾಜಿಕ ಅಸಮಾನತೆಗಳಿಂದ ಮಹಿಳೆಯರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಅಪೌಷ್ಟಿಕ ಮತ್ತು ಇತರೆ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಂದ ವಿವಾಹಿತ ಮಹಿಳೆಯರು ಮಕ್ಕಳು ಹೊತ್ತಿದ್ದಾರೆ. ನಿರಂತರವಾಗಿ ಮತ್ತು ಅವರ ಗರ್ಭಧಾರಣೆಯ ಸಮಯದಲ್ಲಿ ಅವರಿಗೆ ಸರಿಯಾದ ಆಹಾರ ಕ್ರಮದ ಕೊರತೆ ಇದೆ. ಇದು ಮಾತೃತ್ವ ಮತ್ತು ಸಾವು, ಶಿಶುಗಳ ಜನನ ಮತ್ತು ಮಗುವಿನ ಸಾವುಗಳು–ಜೀವನದ ಮೊದಲ ವಾರದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸಂಭವಿಸುವ ಮಕ್ಕಳ ಸಾವಿನ ಅರ್ಧಕ್ಕಿಂತ ಹೆಚ್ಚಿನವು. ಅಪೌಷ್ಟಿಕತೆಯ ಕಾರಣದಿಂದಾಗಿವೆ. ಮತ್ತು ಕಾರಣ ಅಸಹಜ ಜನನ ಮತ್ತು ಶಿಶುಗಳ ಸಾವು ತಾಯಂದಿರು ದೀರ್ಘಾವಧಿಯಲ್ಲಿ ಆತಂಕದ ಅಸ್ವಸ್ಥತೆಗಳಿಂದ ಬಳಲುತ್ತಿದ್ದಾರೆ. ಈ ಪ್ರದೇಶದ ಮಾರುಕಟ್ಟೆಗಳಲ್ಲಿ ಪರಿಸ್ಥಿತಿಯು–ಇನ್ನಷ್ಟು ಕೆಟ್ಟದಾಗಿದೆ. ತಿರಸ್ಕರಿಸಲ್ಪಟ್ಟ ಹಣ್ಣು ಮತ್ತು ತರಕಾರಿಗಳು

ಈ ವರ್ಗ ಪ್ರದೇಶಗಳಲ್ಲಿನ ಮಾರುಕಟ್ಟೆಯನ್ನು ಅಗ್ಗದ ದರದಲ್ಲಿ ಮಾರಾಟ ಮಾಡಲು ಇಲ್ಲಿಗೆ ತರಲಾಯಿತು. "ಅಂತಹ ಸೇವೆ ೧೨-೦೬-೨೦೧೭ರಲ್ಲಿ ಕೊಳಚೆ ಮಹಿಳೆಯರ ಚರ್ಚೆ, ಅನಾರೋಗ್ಯಕರ ಆಹಾರ ಆ ಪ್ರದೇಶದಲ್ಲಿ ಜನಸಂಖ್ಯೆಗೆ ಹೆಚ್ಚಿನ ಆರೋಗ್ಯ ವಸ್ತು ತರುತ್ತದೆ. ಈ ಪ್ರದೇಶದಲ್ಲಿನ ಆರೋಗ್ಯ ಸೌಲಭ್ಯಗಳು ಕಳಪೆಯಾಗಿದೆ. ಈ ಪರಿಸ್ಥಿತಿಗಳ ನಡುವೆಯೂ ಸರ್ಕಾರವೂ ಅಭಿವೃದ್ಧಿಗಾಗಿ ಅತ್ಯಂತ ಕಳಪೆ ಕಾರ್ಯತಂತ್ರಗಳನ್ನು ಹೊಂದಿದೆ. ಇದು ಖರ್ಚು ಮಾಡುತ್ತಿದೆ. ಜೀವಂತ ಪರಿಸರದ ಮೇಲೆ ಖರ್ಚು ಮಾಡುವ ಬದಲು ರಸ್ತೆಗಳು ಇತರ ಮೂಲ ಸೌಕರ್ಯಗಳಲ್ಲಿ ಕೋಟಿ ರೂಪಾಯಿ ಹಣವನ್ನು ಆರೋಗ್ಯ ಮತ್ತು ಶಿಕ್ಷಣಕ್ಕೆ ವೆಚ್ಚ ಮಾಡಲಾಗಿದೆ. ಇದು ಸಾಮಾನ್ಯ ಜನರು ಜೀವನಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಕೊಳಚೆ ಪ್ರದೇಶದ ಕೌಟುಂಬಿಕ ಸಮಸ್ಯೆಗಳು

ಕುಟುಂಬ ಎಂದಾಕ್ಷಣ ಇಂದಿಗೂ ಬಹುಜನರ ಮನಸ್ಸಿನಲ್ಲಿ ಮೂಡಿಬರುವಂತಹದು ಒಂದು ಆದರ್ಶ ಮಾದರಿ. ತಂದೆ, ತಾಯಿ, ಮಕ್ಕಳು ನಡುವೆ ಗಂಡ ಮತ್ತು ಹೆಂಡತಿ, ಅಣ್ಣ-ತಮ್ಮಂದಿರು ಮತ್ತು ಅಕ್ಕ-ತಂಗಿಯರು ಹಾಗೂ ಇತರೆ ಬಂಧುಗಳ ನಡುವೆ ಪ್ರೀತಿ, ವಿಶ್ವಾಸ, ಸಹಕಾರ, ಸಹಾನುಭೂತಿ, ಸ್ವಾವಲಂಬನೆ ಮುಂತಾದ ಮೌಲ್ಯಗಳನ್ನು ಆಧರಿಸಿದ ಭಾವನಾತ್ಮಕ ಸಂಬಂಧಗಳು ಕುಟುಂಬಗಳಲ್ಲಿ ಕಂಡುಬರುತ್ತವೆ. ಇದು ಕುಟುಂಬದ ಬಗ್ಗೆ ಪ್ರಚಲಿತವಾಗಿರುವಂಥ ಒಂದು ಕಲ್ಪನೆ. ಆದರೆ ಕುಟುಂಬ ಎನ್ನುವ ಸಂಸ್ಥೆ ಬಳಗದಲ್ಲಿ ಎಲ್ಲವೂ ಸುಗಮವಾಗಿಲ್ಲ ಎನ್ನುವುದು ಸಮಕಾಲೀನ ಸಮಾಜದ ಕಠೋರ ಸತ್ಯಗಳಲ್ಲಿ ಒಂದು. ಈ ಪರಿಸ್ಥಿತಿ ವಿಶೇಷವಾಗಿ ಅನ್ವಯಿಸುವುದು ಮಹಿಳೆಯರಿಗೆ. ನಾಗರಿಕ ಜಗತ್ತನ್ನು ದಿಗ್ಭ್ರಮೆಗೊಳಿಸುವಂತಹ ಬಗೆಗಳಲ್ಲಿ ಕುಟುಂಬ ಎನ್ನುವ ಸಂಸ್ಥೆಯ ಬಳಿಗೆ ಎಲ್ಲವೂ ಸಮಾನವಾಗಿಲ್ಲ ಎನ್ನುವುದು ಖೇದಕರ ಸಂಗತಿ. ಪ್ರಚಲಿತ ಕುಟುಂಬವು ಸ್ತ್ರೀರೂಪ ಪ್ರಾಧಾನ್ಯತೆಯು ವಿಶ್ವವ್ಯಾಪ್ತಿಯಾದ ಒಂದು ಲಕ್ಷಣ. ಬಹುಪಾಲು ಸಮಾಜಗಳಲ್ಲಿ ಕುಟುಂಬ, ವಿವಾಹ ಮತ್ತು ಬಂಧುತ್ವವೆಂಬ ಸಾಮಾಜಿಕ ಸಂಸ್ಥೆಗಳಲ್ಲಿ ಮಹಿಳೆಯರ ಪಾತ್ರ, ಅದನ್ನು ವಿವಾಹದಲ್ಲಿ ಸಂಗಾತಿಗಳನ್ನು ಆಯ್ಕೆ ವೈವಾಹಿಕ ಜೀವನದ ಮಾದರಿಗಳು ಮತ್ತು ವಿವಾಹದಲ್ಲಾಗುತ್ತಿರುವ ಇತ್ತೀಚಿನ ಬದಲಾವಣೆಗಳಲ್ಲಿ ಮಹಿಳೆಯರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೇ ಪುರುಷರು ಕೇಂದ್ರೀಕೃತವಾಗಿರುವುದು ಯಾವುದೇ ವಿಧದಲ್ಲೂ ಮನಗಾಣಬಹುದು. ಬಂಧುಗಳ ನಡುವೆ ನಡೆಯುವ ಎಲ್ಲಾ ರೀತಿಯ ಮಾನವೀಯ ಸಂಬಂಧಗಳ ಪಾತ್ರ ಹಂಚಿಕೆಯಲ್ಲಿ ಮಹಿಳೆಯರು ನಿರ್ವಹಿಸುವ ಪಾತ್ರಗಳು ಪುರುಷರಿಗಿಂತ ತೀರಾ ವಿಭಿನ್ನ. ಪ್ರಸ್ತುತ ಕೊಳಗೇರಿ ನಿವಾಸಿಗಳ ಕೌಟುಂಬಿಕ ಪರಿಸ್ಥಿತಿಯು ಇತರ ಬಹುಪಾಲು ಸಮಾಜಗಳಿಗಿಂತ ತೀರಾ ವಿಭಿನ್ನವಾಗಿದೆ. ಕೊಳಗೇರಿಗಳಲ್ಲಿ ವಾಸಿಸುವ ಕುಟುಂಬವು ಚಿಕ್ಕದಾಗಿದ್ದರೂ, ಅದು ವಿಭಕ್ತ ಕುಟುಂಬ ಮತ್ತು ಅವಿಭಕ್ತ ಕುಟುಂಬಗಳೂ ಇವೆ. ಹಲವು ಕುಟುಂಬಗಳಲ್ಲಿ ವಿವಿಧ ಸಂಬಂಧಿಗಳಿದ್ದಾರೆ. ಮತ್ತೆ ಕೆಲವು ಕುಟುಂಬಗಳಲ್ಲಿ ಗಂಡ-ಹೆಂಡತಿ,

ಮಕ್ಕಳು ಅಳಿಯ ಮತ್ತು ಸೊಸೆಯಂದಿರು ಇರುತ್ತಾರೆ. ಮೊದಲೇ ಹೇಳಿದಂತೆ ಒಂದೇ ಕುಟುಂಬದಲ್ಲಿ ಎಲ್ಲಾ ವಯೋಮಾನದವರು ಬಂಧುಗಳು ವಾಸಿಸುವುದರಿಂದ ಹಾಗೂ ದಂಪತಿಗಳು ಮಧ್ಯವ್ಯಸನಿಗಳಾಗಿ ಯಾವುದೇ ಪ್ರಜ್ಞೆ ಇಲ್ಲದೇ ಹದಿ–ಹರೆಯ ವಯಸ್ಸಿನ ಮಕ್ಕಳು ಎಚ್ಚರವಿದ್ದಾಗಲೇ (ಲೈಂಗಿಕ ಕ್ರಿಯೆಯಲ್ಲಿ ತೊಡಗುವ ತಂದೆ–ತಾಯಿಯರ ಅಪ್ರಜ್ಞಾಪೂರ್ವಕ ಕ್ರಿಯೆಯಿಂದ ಮಕ್ಕಳು ಅಂತಹ ಪ್ರಸಂಗಗಳಿಂದ ದಾರಿತಪ್ಪುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.) ಯಾವಾಗಲೂ ಆರ್ಥಿಕವಾಗಿ ಬಡತನದಿಂದ ಕೊರಗುವ ಈ ನಿವಾಸಿಗಳ ಕುಟುಂಬಗಳಲ್ಲಿ ಮಹಿಳೆಯರು ವೈದಿಕ ಧರ್ಮದಲ್ಲಿ (ಸ್ತ್ರೀಯ ಬಗ್ಗೆ ಇರುವ ಅನಾದರ ಉಪೇಕ್ಷೆ ಅತಿ) ಹೆಚ್ಚಳವಾದುದು. ನಮ್ಮ ಹಿಂದಿನ ಸಂಸ್ಕೃತಿಯಲ್ಲಿ ಸ್ತ್ರೀಗೆ ಅತಿ ಕಿರಿಯ ವಯಸ್ಸಿನಲ್ಲಿಯೇ ವಿವಾಹ ಮಾಡಬೇಕೆಂದು ತಿಳಿಸಿರುವುದರಿಂದ ಬಾಲ್ಯವಿವಾಹ ಹೆಚ್ಚಾಗಿ ನಡೆದು ಅನೇಕ ಸಮಸ್ಯೆಗಳ ಸೃಷ್ಟಿಯು ನಿರ್ವಹಿಸುವ ಪಾತ್ರ ಸ್ಮರಣೀಯ, ಹಲವಾರು ಕೆಳದರ್ಜೆಯ ವೃತ್ತಿಗಳನ್ನು ನಿಶ್ಚಯಿಸಿ ಅವಳು ಸಂಸಾರದ ಹೊಣೆಯನ್ನು ಹೊರುವುದರ ಜೊತೆಯಲ್ಲಿಯೇ ಅಲ್ಪಸ್ವಲ್ಪ ಮಟ್ಟಿಗೆ ಮಕ್ಕಳು ಭವಿಷ್ಯದ ಬಗ್ಗೆ ಆಲೋಚಿಸುವ ಶಕ್ತಿಯುಳ್ಳವರಾಗಿದ್ದಾರೆ. ಬಡತನವೆನ್ನುವುದು ಇವರ ಹಣೆಬರಹವೆಂಬಂತೆ ಮಹಿಳೆಯರು ಆಸಕ್ತಿಹೀನರಾಗಿ ಉತ್ತರಿಸುತ್ತಾರೆ.

ಹೀಗೆ ಕೊಳಗೇರಿಗಳಲ್ಲಿ ಪುರುಷ ಪ್ರಾಧಾನ್ಯತೆ–ಸಮಾಜದ ಎಳೆ–ಎಳೆಗಳಲ್ಲಿ ಹಾಸುಹೊಕ್ಕಾಗಿದ್ದು, ಸಾಮಾಜಿಕ ಸಂಸ್ಥೆಗಳ ಮೌಲ್ಯಗಳಲ್ಲಿ ಆಚರಣೆಗಳಲ್ಲಿನ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾಣಿಸಿಕೊಳ್ಳುತ್ತದೆ. ಇಂದಿಗೂ ಅನೇಕ ಕುಟುಂಬಗಳಲ್ಲಿ ಪುರುಷ ಮತ್ತು ಮಹಿಳೆಯರು ವಿಭಿನ್ನ ರೀತಿಯ ಜೀವನವನ್ನು ನಡೆಸಲು ಅಥವಾ ಎದುರಿಸಲು ತರಬೇತಿಯನ್ನು ಕೊಡಲಾಗುತ್ತದೆ. ಸ್ತ್ರೀ ಪಾತ್ರಗಳನ್ನು ಹಂಚುವಾಗ, ಸ್ತ್ರೀಪುರುಷರ ಜವಾಬ್ದಾರಿಗಳನ್ನು ಅಧಿಕಾರವನ್ನು ಕುರಿತಂತೆ ಆಯಾ ಕುಟುಂಬದ ಧೋರಣೆಗಳು ಎಂಥವು ಎಂಬುದರ ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಾಸ್ತವವಾಗಿ ಹೇಳಬೇಕೆಂದರೆ ಮೂಲಭೂತವಾಗಿ ಹೆಣ್ಣು ಗಂಡು ಎನ್ನುವ ಬೇದ–ಭಾವಗಳ ಸೃಷ್ಟಿ ಸಾಮಾನ್ಯವಾಗಿ ಕುಟುಂಬದಲ್ಲಿಯೇ ಆಗುವಂತಹದು. ಮಹಿಳೆಯರಿಗೆ ವಿಭಿನ್ನ ರೀತಿಯ ಪಾತ್ರಗಳನ್ನು ಹಂಚುವುದು ಮತ್ತು ಧೋರಣೆಯನ್ನು ಬೆಳೆಸುವುದು ಲಿಂಗವ್ಯವಸ್ಥೆಯನ್ನು ಆಧರಿಸಿದ ಸಾಮಾಜೀಕರಣ ಉದಾ. ಮೇಲಿನ ಚರ್ಚಾ ವಿಷಯ ನಮ್ಮ ಇಂದಿನ ನಾಗರೀಕ ಸಮಾಜದಲ್ಲಿ ಅಥವಾ ಮುಂದುವರಿಯುತ್ತಿರುವ ಸಮಾಜದಲ್ಲಿ ಕಂಡೂ ಕಾಣದ ಹಾಗೆ ತೆರೆಮರೆಯಲ್ಲಿ ಹುದುಗಿದೆ. ಆದರೆ ಕೊಳಗೇರಿಗಳಲ್ಲಿ ಕಾಣುವ ಚಿತ್ರಣಗಳೇ ಬೇರೆ. ಇಲ್ಲಿನ ಕುಟುಂಬದಲ್ಲಿ ಯಾರು ಯಾವುದಾದರೂ ಪಾತ್ರಗಳನ್ನು ಹಂಚುವುದಿಲ್ಲ. ಏಕೆಂದರೆ ಕೊಳಗೇರಿ ನಿವಾಸಿಗಳು ಬಯಲು ಮಾಡುತ್ತಾರೆ. ಜಂಜಾಟಗಳಿಂದ ಬೇಗನೆ ಹೊರಬರುವ ಮಹಿಳೆಯರಾಗಿರುತ್ತಾರೆ. ಇವನ್ನೇ ನಾವು ಕೊಳಗೇರಿ ಮಹಿಳೆಯರ ಸಹಜ ಪ್ರವೃತ್ತಿ ಅಥವಾ ಸಹಜ ಗುಣವೆಂದೇ ಕರೆಯಬಹುದಾಗಿದೆ. ಇಲ್ಲಿನ ಮಹಿಳೆಯರು ತಮ್ಮ ಬಂಧು–ಬಾಂಧವರೊಂದಿಗೆ ಸರಿಸಮಾನವಾಗಿ ನಡೆದುಕೊಳ್ಳುತ್ತಾರೆ. ಸಹಜ ಪ್ರವೃತ್ತಿ ಅಥವಾ

ಸಹಜಗುಣವೆಂದು ಕರೆಯಬಹುದಾದರೆ ಮಹಿಳೆಯರು ಯಾವ ಕುಟುಂಬದ ಘನತೆ ಗೌರವಗಳ ಆದಿಯಾಗಿ ತಮ್ಮ ಆಸೆ-ಆಕಾಂಕ್ಷೆಗಳನ್ನು ಒತ್ತೆಯಾಗಿಡಬೇಕಾಗಿಲ್ಲ. ಇದಕ್ಕೆ ಸಂಬಂಧಿಸಿದಂತೆ ಅವರು ಯಾವುದೇ ರೀತಿಯ ನಿರ್ಧಿಕ ಮತ್ತು ನಿಬಂಧನೆಗಳಾಗಲಿ ಅಥವಾ ನೀತಿ ಸಂಹಿತೆಗಳಾಗಲೀ ಹೋರಾಡಬೇಕಾಗಿ ಬರುವುದಿಲ್ಲ.

ಕುಟುಂಬ ಎಂಬ ಒಂದು ಸಂಸ್ಥೆಯಿಂದ ನಾವು ನಿರೀಕ್ಷಿಸುವುದು ಎರಡು ಬಗೆಯ ಸಂಪನ್ಮೂಲಗಳನ್ನು. ಮೊದಲನೆಯದಾಗಿ ಪ್ರೀತಿ, ವಿಶ್ವಾಸ, ಭಾವನಾತ್ಮಕ ಸುರಕ್ಷತೆ ಹಾಗೂ ನಮಗೆ ಆಶ್ರಯ ನೀಡುವಂಥ ಬಗೆಯನ್ನು.

ಮಧ್ಯಪಾನ ಮತ್ತು ಕೌಟುಂಬಿಕ ವಿಘಟನೆಗಳು

ಕುಡಿತದಿಂದ ಕುಟುಂಬದ ಆರ್ಥಿಕ ದುರಾವಸ್ಥೆಯಾಗುತ್ತಿರುವುದು ಗಮನಾರ್ಹ. ಕುಡಿತದ ಚಟಕ್ಕೆ ಬಲಿಯಾಗಿ ಅದರ ದಾಸನಾದ ವ್ಯಕ್ತಿಯು ತನ್ನ ಕೌಟುಂಬಿಕ ಜೀವನದಲ್ಲಿಯ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ ಹಾಗೂ ಇತರ ಕೌಟುಂಬಿಕರಿಗೂ ತೊಂದರೆ ನೀಡಿ ಹಿಂಸಿಸುತ್ತಾನೆ. ಕುಡಿತದ ಚಟಕ್ಕೆ ಕುಟುಂಬವು ಜಗಳ, ಅಶಾಂತಿ, ಅಸಮಧಾನ, ಅಸಂತೃಪ್ತಿಗಳು ಬಲಿಯಾಗುತ್ತವೆ. ಕುಡಿತದ ಚಟಕ್ಕೆ ಬಲಿಯಾದಾತ ಕುಟುಂಬ ಆಸ್ತಿ, ಪಾಸ್ತಿ, ವಸ್ತು, ಒಡವೆ ಆಭರಣಗಳನ್ನೆಲ್ಲಾ ಮಾರಾಟ ಮಾಡಲು ಹಿಂಜರಿಯುವುದಿಲ್ಲ. ಕೌಟುಂಬಿಕ ಅಶಾಂತಿ ಗೊಂದಲ ಕುಡಿತದ ಚಟದಿಂದ ಕೊಳಚೆ ಪ್ರದೇಶದಲ್ಲಿ ಅಶಾಂತಿಗೊಂಡ ಅವ್ಯವಸ್ಥೆ, ಅಶಿಸ್ತು ಮತ್ತು ಗೊಂದಲದ ಬೀಡಾಗುತ್ತವೆಯಲ್ಲದೆ ಕುಟುಂಬ ಕಲಹಗಳು ದಿನನಿತ್ಯದ ಮಾತಾಗುತ್ತದೆ. ಗಂಡ-ಹೆಂಡತಿಯರಲ್ಲಿ, ಅಣ್ಣ-ತಮ್ಮಂದಿರಲ್ಲಿ, ತಾಯಿ-ತಂದೆ ಮತ್ತು ಮಕ್ಕಳಲ್ಲಿ ಕುಡಿತದ ಕಾರಣಕ್ಕಾಗಿ ಜಗಳಗಳು ಹುಟ್ಟಿಕೊಳ್ಳುತ್ತವೆ. ವೈಮನಸ್ಸು ಆರಂಭವಾಗುತ್ತದೆ. ಅತಿಯಾದ ಮಧ್ಯಪಾನ ಸೇವನೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮಗಳು ಕುಟುಂಬದ ಹಿರಿಯರ ಕುಡಿತದ ಚಟದಿಂದಾಗಿ ಮಕ್ಕಳ ಜೀವನ ಹಾಳಾಗುತ್ತದೆ. ಬೆಳೆಯುವ ಮಕ್ಕಳಿಗೆ ಬೇಕಾದ ಉತ್ತಮ ಮಾರ್ಗದರ್ಶನ ಬಂಧುಮಿತ್ರರ ಪ್ರೋತ್ಸಾಹ ನೆರೆ-ಹೊರೆಯವರ ಸಹಕಾರ ಅವರ ಸಾಮಾಜೀಕರಣ ಅಸಮರ್ಪಕವಾಗುವುದು.

ಉದಾ. ಕೊಳಚೆ ಪ್ರದೇಶದಲ್ಲಿ ಮಧ್ಯಪಾನ ದುಶ್ಚಟಗಳು ಕುಡಿತದ ವೃತ್ತಿಗಳು ಕುಡಿತ ಅಮಲಿನಲ್ಲಿ ಕೆಟ್ಟ ಕೆಲಸ ಮಾಡಲು ಹಿಂಜರಿಯುವುದಿಲ್ಲ.

ಕೊಳಚೆ ಪ್ರದೇಶದಲ್ಲಿನ ಮಧ್ಯಪಾನ ಸಮಸ್ಯೆ

ಕುಟುಂಬವನ್ನು ನಿರ್ವಹಿಸುವ ಮಹಿಳೆಯರನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುವುದರ ಜೊತೆಗೆ ಮಹಿಳೆಯರ ಮೇಲೆ ಸಂಶಯ ಪಟ್ಟು ಹಿಂಸೆಯನ್ನು ನೀಡುವುದು ಕಂಡುಬಂದಿದೆ. ಇಂತಹ ಮಹಿಳೆಯರು ತಮ್ಮ ಗಂಡಂದಿರು ಕುಡಿದರೂ ಹೊಡೆಯುವುದಿಲ್ಲ. ಇಡೀ ದಿನ ದುಡಿದು ದಣಿದಿರುವುದರಿಂದ ಕುಡಿದು ಊಟ ಮಾಡಿ ಮಲಗುತ್ತಾರೆ. ಯಾವುದೇ ರೀತಿಯ ಹಿಂಸೆಯನ್ನು ಕೊಡುವುದಿಲ್ಲ ಎಂದು ತಿಳಿಸಿರುವರು.

ಒಟ್ಟಿನಲ್ಲಿ ಕೊಳಚೆ ಪ್ರದೇಶದ ಪುರುಷರು ಸಾಮಾನ್ಯವಾಗಿ ಕುಡಿಯಲು ಕಾರಣಗಳೆಂದರೆ ಕೊಳಚೆ ಪರಿಸರ. ಚಟ ಬೇಜವಾಬ್ದಾರಿತನ, ಚಿಂತೆ, ಬಡತನ ಹೀಗೆ ಹಲವಾರು ಕಾರಣಗಳಿಂದ ಕುಡಿಯುತ್ತಾರೆ. ಪುರುಷರು ತಮ್ಮ ಸಮಸ್ಯೆಯಿಂದ ಹೊರಬರಲು ಕುಡಿತಕ್ಕೆ ದಾಸರಾಗಿದ್ದಾರೆ. ಪುರುಷರು ಕುಡಿದು ಮಹಿಳೆಯರನ್ನು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ಮಾಡುತ್ತಾರೆ. ಈ ಹಿಂಸೆ, ಗಂಡನ ಹೊಡೆತ ಎಂಬುದು ಮಹಿಳೆಯರ ವೈವಾಹಿಕ ಬದುಕಿನಲ್ಲಿ ಕೇವಲ ಕೊಳಚೆ ಪ್ರದೇಶದ ಮಹಿಳೆಯರಿಗೆ, ಕೆಳವರ್ಗದ ಮಹಿಳೆಯರಿಗೆ ಅವಿದ್ಯಾವಂತ ಮಹಿಳೆಯರಿಗೆ ಮಾತ್ರ ಅನ್ವಯಿಸುವುದಿಲ್ಲ. ಆದರೆ ಕುಡುಕ ಕೆಡುಕರು ಮಾತ್ರ ಮಹಿಳೆಯರನ್ನು ಹೊಡೆಯುತ್ತಾರೆ ಎಂಬ ತಪ್ಪು ಕಲ್ಪನೆಗಳು ನಮ್ಮಲ್ಲಿವೆ. ಆದರೆ ವಾಸ್ತವದಲ್ಲಿ ಹಿಂಸೆ ಎಂಬುದು ಎಲ್ಲ ಮಹಿಳಾ ವರ್ಗಕ್ಕೆ ಅನ್ವಯಿಸುತ್ತದೆ. ಅಂದರೆ ಮಹಿಳೆಯು ವೈವಾಹಿಕ ಬದುಕಿನಲ್ಲಿ ಈ ಹಿಂಸೆ ಸ್ಫೋಟವಾಗುತ್ತದೆ. ಹಾಗೂ ಇಂಥ ಅನೇಕ ಸಮಸ್ಯೆಗಳನ್ನು ಗಮನಿಸಹುದು.

ಕುಟುಂಬಗಳಲ್ಲಿ ಸೌಖ್ಯವಲ್ಲದ ಅತೃಪ್ತಿಯ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ನಿತ್ಯ ನಡೆಯುವ ಕಲಹಗಳು ಬೆಳೆಯುವ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತವೆ. ಕುಡಿತವು ಸಮಾಜದಲ್ಲಿ ತಲೆ ತಗ್ಗಿಸುವಂತೆ ಮಾಡುವುದಲ್ಲದೆ ಬದುಕಿಗೆ ಕೊಡಲಿ ಪೆಟ್ಟು ಕೊಡುತ್ತದೆ.

ಕೌಟುಂಬಿಕ ಸಮಸ್ಯೆ ಅವಿಭಕ್ತ ಕುಟುಂಬಗಳಿಂದ ನಗರೀಕರಣ, ಜಾಗತೀಕರಣದಿಂದ ನಗರ ಆಕರ್ಷಣೆಯಿಂದ ಗ್ರಾಮೀಣ ಪ್ರದೇಶದಲ್ಲಿ ಅವಿಭಕ್ತ ಕುಟುಂಬ ಉದ್ಭವಿಸುತ್ತಿರುವುದು. ಕುಟುಂಬದ ಮೊದಲ ಸಮಸ್ಯೆ ವೃದ್ಧರ ನಿರ್ಲಕ್ಷ್ಯ ಮನೋಭಾವನೆ. ನಗರ ಪ್ರದೇಶದಲ್ಲಿ ವಾಸಿಸುವಂಥ ಜನರ ಒಂದು ಕುಟುಂಬ ಪದ್ಧತಿ ಬೇರೆ. ಮತ್ತು ಪರಸ್ಪರ ಸಂಬಂಧಗಳ ತಮ್ಮ ಬಾಂಧವ್ಯವನ್ನು ಕಳೆದುಕೊಂಡು ಪ್ರತ್ಯೇಕ ಸಂಸಾರ ಸಾಗಿಸುವ ವ್ಯವಸ್ಥೆಯನ್ನು ಕಂಡುಕೊಂಡಿವೆ. ಪ್ರಚಲಿತದಲ್ಲಿ ಒಂದೇ ಕುಟುಂಬ ಪದ್ಧತಿ ಮಾಯವಾಗಿದೆ. ಕುಟುಂಬದಲ್ಲಿದ್ದ ವಯೋವೃದ್ಧರು ಸಮಸ್ಯೆಗಳಿಗೆ ಸಿಲುಕಿದ್ದಾರೆ.


ಕೊಳಚೆ ಪ್ರದೇಶದಲ್ಲಿ ವಾಸಿಸುವಂತಹ ಕುಟುಂಬಗಳಲ್ಲಿಯೂ ಕೌಟುಂಬಿಕ ಅಸಮಾನತೆ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಎರಡನೇ ದರ್ಜೆಯವಳನ್ನಾಗಿ ಕಾಣುತ್ತಿದೆ. ಕೌಟುಂಬಿಕ ಜೀವನದಲ್ಲಿಯೂ ಅವರ ಸ್ಥಾನಕ್ಕೆ ಅನುಗುಣವಾಗಿದೆ. ಕೇವಲ ಗೃಹಕೃತ್ಯಗಳಿಗೆ ಮೀಸಲಾಗಿದ್ದು ಮಕ್ಕಳನ್ನು ಹೆರುವ ಯಂತ್ರವೆನಿಸಿಕೊಂಡಿರುವ ಸ್ತ್ರೀಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಮಗು ಜನಿಸಿದ ದಿನದಿಂದಲೇ ಮನೆಯವರು ಆಕೆಯ ಬಗ್ಗೆ ಜಿಗುಪ್ಸೆ ಮನೋಭಾವ ಹೊಂದಿರುತ್ತಾರೆ. ಒಂದೇ ಒಂದು ಕುಟುಂಬದಲ್ಲಿ ಜನಿಸಿದ ಗಂಡು ಮಗುವಿನ ಬಗ್ಗೆ ಕುಟುಂಬದ ಮುಖ್ಯಸ್ಥರು ಧನಾತ್ಮಕವಾಗಿ ಚಿಂತನೆ ನಡೆಸಿದರೆ ಹೆಣ್ಣಿನ ಬಗ್ಗೆ ತಾತ್ಸಾರದ ಮನೋಭಾವನೆ ಹೊಂದಿದ ಆಕೆಯ ಬಗ್ಗೆ ಋಣಾತ್ಮಕವಾಗಿ ಯೋಚಿಸುತ್ತಾರೆ.

ಕುಡಿಯುವುದಕ್ಕೋಸ್ಕರ ಮನುಷ್ಯ ೧೦೦ ರೂಪಾಯಿ ತನ್ನ ತಾಯಿಯನ್ನೇ ಕೊಂದು ಹಾಕಿರುವ ಯುವಕರನ್ನು ನೋಡಬಹುದು. ಕೊಳಚೆ ಪ್ರದೇಶದ ಮಹಿಳೆಯರ ಮೇಲಾಗುತ್ತಿರುವ ಹಿಂಸೆಗಳಿಗೆ ಕುಡಿತ ಮಹಿಳೆಯರಿಗೆ ಸಮಸ್ಯೆ ಎದುರಿಸಿದ್ದಾರೆ. ಕುಡಿಯುವ ಕುಟುಂಬ ಮಹಿಳೆಯರ ಮೇಲಿನ ದೌರ್ಜನ್ಯದ ಹಿಂಸೆ ಕುಡಿತದಿಂದ ಪ್ರಮುಖವಾದ ಕಾರಣವಾಗಿದೆ.

ಕೋಷ್ಟಕ ೫.೪೭

ಕೊಳಚೆ ಪ್ರದೇಶದಲ್ಲಿ ಮಧ್ಯಪಾನ ಮಾಡುವವರ ಸಂಖ್ಯೆ

ಕ್ರ. ಸಂ.	ಮಾಹಿತಿದಾರರು	ಪ್ರಕ್ರಿಯೆ	ಶೇಕಡ
೧	ಕುಡಿಯುತ್ತಾರೆ	೨೪೯	೮೦.೩೩
೨	ಕುಡಿಯುವುದಿಲ್ಲ	೫೯	೧೯.೬೭
	ಒಟ್ಟು	೩೦೦	೧೦೦.೦೦



ಈ ಮೇಲಿನ ಕೋಷ್ಟಕದಲ್ಲಿ ಮಾದರಿ ಮಾಹಿತಿದಾರರು ಶೇಕಡಾ ೮೦.೩೩ ರಷ್ಟು ಮಧ್ಯಪಾನ ಮಾಡುತ್ತಾರೆ. ೧೯.೬೭ ರಷ್ಟು ಕುಡಿಯುವುದಿಲ್ಲ. ಒಟ್ಟು ಮೂಲ ಸಹಾಯಕರು ಮಾಹಿತಿ ನೀಡಿದರು.

ಕೌಟುಂಬಿಕ ಸಮಸ್ಯೆಯಿಂದ ಕೆಲವರು ಮಾನಸಿಕ ಹಾಗೂ ದೈಹಿಕ ದೌರ್ಬಲ್ಯಕ್ಕೆ ಒಳಗಾಗುತ್ತಾರೆ. ಕಾರಣ, ಕೌಟುಂಬಿಕ ಅವ್ಯವಸ್ಥೆ, ಬಡತನ, ನಿರುದ್ಯೋಗ, ಸಾಮಾಜಿಕ ಹಾಗೂ ಭೌಗೋಳಿಕ ಬದಲಾವಣೆಯಾಗುತ್ತವೆ. ಕೆಟ್ಟ ಸಹವಾಸದಿಂದ ಕೌಟುಂಬಿಕ ಸಮಸ್ಯೆ

ಮತ್ತು ದಾಂಪತ್ಯದಲ್ಲಿ ವಿರಸ ಉಂಟಾಗುತ್ತದೆ. ಕೊಳಚೆ ಪ್ರದೇಶದ ನಿವಾಸಿಗಳಲ್ಲಿ ಕುಟುಂಬ ಒಂದೇ ಮನೆಯಲ್ಲಿ ವಾಸಿಸುವ ಸದಸ್ಯರ ಸಮಸ್ಯೆಗಳಲ್ಲಿ ಕೆಲವೊಮ್ಮೆ ಕುಡಿತಕ್ಕೆ ಅವಕಾಶ ಮಾಡಿಕೊಡುತ್ತದೆ. ಅತ್ತೆ-ಸೊಸೆ ಜಗಳ, ಅಣ್ಣ-ತಮ್ಮಂದಿರ ವ್ಯಾಜ್ಯ, ಗಂಡ-ಹೆಂಡಿರ ಮುನಿಸು, ಕಳೆದುಕೊಂಡ ಶಾಂತಿಯಿಂದ ಕೌಟುಂಬಿಕ ಜಗಳ ಜೀವನದಲ್ಲಿ ಜಿಗುಪ್ಸೆ ತಂದು ಕುಡಿತಕ್ಕೆ ಪ್ರೇರಣೆ ನೀಡುತ್ತವೆ.

ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರ ಸಮಸ್ಯೆಗಳಲ್ಲಿ ಸಾಮಾಜಿಕ, ಆರ್ಥಿಕ, ಆರೋಗ್ಯ, ಕೌಟುಂಬಿಕ ವಸತಿ ಸಮಸ್ಯೆಗಳೇ ಹೆಚ್ಚು. ಜೀವನ ವಿಧಾನಗಳು ಶೈಕ್ಷಣಿಕ ಪ್ರಗತಿಯ ಮೇಲೆ ಪ್ರಭಾವವನ್ನು ತಿಳಿಯುವುದು ಸಂಶೋಧನೆಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿದೆ. ಈ ಹಿಂದೆ ತಿಳಿಸಿದ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಅವರ ಜೀವನ ಕ್ರಮ ಸ್ಪಷ್ಟವಾಗಿ ತಿಳಿಯುವುದು. ಕೊಳಚೆ ಪ್ರದೇಶ ನಿವಾಸಿಗಳ ಪ್ರಗತಿಯ ಮೇಲೆ ಪ್ರಭಾವ ಬೀರಿವೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಸಂಶೋಧನಾ ಅಧ್ಯಯನ ಕ್ಷೇತ್ರದಲ್ಲಿ ಹಲವು ಧರ್ಮಗಳು ವಿವಿಧ ಜಾತಿಯ ಹಾಗೂ ವಿಭಿನ್ನ ಭಾಷೆಗಳು ಜನರು ವಾಸವಾಗಿರುವುದು ಈ ಅಧ್ಯಯನದಲ್ಲಿ ದೃಢಪಟ್ಟಿದೆ. ಮನೆಯಲ್ಲಿ ಮಾತನಾಡುವ ಮಾತೃಭಾಷೆ ಮಾತನಾಡುವರು ಹೆಚ್ಚು ಕಂಡುಬರುತ್ತಾರೆ. ಮಕ್ಕಳ ಶೈಕ್ಷಣಿಕ ಸಮಸ್ಯೆ ಎದುರುದಾರೆ ಪೋಷಕರ ಶೈಕ್ಷಣಿಕ ಮಟ್ಟವು ಬಹಳ ಕೆಳಸ್ತರದಲ್ಲಿರುವುದು ತಿಳಿಯುತ್ತದೆ. ಬಹಳಷ್ಟು ಪೋಷಕರು ಅನಕ್ಷರಸ್ಥರಾಗಿರುವುದು ಕೂಡ ಕಂಡುಬರುತ್ತದೆ. ಇದರಿಂದ ಮನೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾದ ಕೊಳಚೆ ಪ್ರದೇಶದ ನಿವಾಸಿಗಳ ಕುಟುಂಬ ರಚನೆಯಲ್ಲಿ ಕುಟುಂಬದ ಗಾತ್ರವು ದೊಡ್ಡದಾಗಿದಂತೆ ಸದಸ್ಯರ ಬೇಡಿಕೆಗಳು ಹೆಚ್ಚಾಗುತ್ತವೆ. ಹೆಚ್ಚಾದಂತೆ ಪೂರೈಸುವುದು ಕಷ್ಟವಾಗುತ್ತದೆ.

ಕೊನೆ ಟಿಪ್ಪಣಿಗಳು

1. Anderson and May Ann, "Reproductive and Child health Nutrition and HIV/AIDS Programme (RACHANA) final evaluation CARE, New Delhi, 2006, Pg No.108
2. Ahuja Ram, "Research Methods" 2009, Pg No. 192
3. Clinard Marshall, "Slums and Community Development" The free press New York, 1966, Pg No.166
4. Desai.A.R., "A Profile of the India Slum" Mittal Publication, New Delhi, 1972, Pg No. 79
5. Desai.A.R., "A Profile of the India Slum" Mittal Publication, New Delhi, 1972, Pg No. 19
6. Paramr Y.A., "Urbanization in the Third World Countries the India Journal of Social Work", Department of the Tata Insiutes of Social Science, Bombay, 1992, Vol II (4)

❖❖❖

ಅಧ್ಯಾಯ : ಐದು

ಕೊಳಚೆ ಪ್ರದೇಶ ನಿವಾಸಿಗಳಿಗೆ ಲಭ್ಯವಿರುವ ಅಭಿವೃದ್ಧಿ ಕಾರ್ಯಕ್ರಮಗಳು

ಅಧ್ಯಾಯ: ಐದು

ಕೊಳಚೆ ಪ್ರದೇಶದ ನಿವಾಸಿಗಳಿಗೆ ಲಭ್ಯವಿರುವ ಅಭಿವೃದ್ಧಿ ಕಾರ್ಯಕ್ರಮಗಳು

ಕೊಳಚೆ ಪ್ರದೇಶಗಳ ಎಲ್ಲಾ ಮೂಲಭೂತ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಮತ್ತು ರಾಜ್ಯಸರ್ಕಾರಗಳು ತಮ್ಮದೇ ಆದ ಯೋಜನೆಗಳನ್ನು ಸುಧಾರಣೆಗೆ ತರಲು ಪ್ರಯತ್ನಿಸಿವೆ. ಕೊಳಚೆ ಪ್ರದೇಶದ ನಿವಾಸಿಗಳ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆ ಬಗ್ಗೆ ಅಧಿವೇಶನದಲ್ಲಿ ಸಚಿವರು, ಸದಸ್ಯರು, ಶಾಸಕರು ಇತ್ಯಾದಿ ಜನಪ್ರತಿನಿಧಿಗಳು ಸೇರಿ ಯೋಜನೆಗಳನ್ನು ರೂಪಿಸುತ್ತಾರೆ. ಯೋಜನೆ ಎಂದರೆ ಯಾವುದೋ ಒಂದು ಆಥವಾ ಅನೇಕ ಗುರಿಗಳನ್ನಿಟ್ಟುಕೊಂಡು ಅವುಗಳನ್ನು ಈಡೇರಿಸಲು, ಸೂಕ್ತಮಾರ್ಗಗಳು ಅನುಸರಿಸಿ ಸಾಧನಗಳ ಮೂಲಕ ಕಾರ್ಯ ಪ್ರವೃತ್ತರಾಗುವ ವಿಧಾನಕ್ಕೆ ಯೋಜನೆ ಎಂದು ಸ್ಥೂಲವಾಗಿ ಹೇಳಬಹುದು. ಡಿಕೆನ್‌ಸನ್ ಅಭಿಪ್ರಾಯಪಡುವಂತೆ ಒಂದು ನಿರ್ದಿಷ್ಟ ಅಧಿಕಾರ ಜಾಗೃತ ನಿರ್ಧಾರದ ಏನನ್ನು ಮತ್ತು ಎಷ್ಟನ್ನು ಉತ್ಪಾದಿಸಬೇಕು ಮತ್ತು ಸಮೀಕ್ಷೆಯ ಆಧಾರದ ಮೇಲೆ ಪ್ರಮುಖ ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವುದೇ ಯೋಜನೆಯಾಗಿದೆ. ಇಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿಯ ಜವಾಬ್ದಾರಿ ಹೊತ್ತ ಕೇಂದ್ರಯೋಜನಾ ಆಯೋಗವಿದೆ. ಇದು ೧೯೫೦ ರಿಂದಲೂ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ನಿರ್ವಹಿಸುವ ಸಂಸ್ಥೆಯಾಗಿ ಕೆಲಸ ಮಾಡಿಕೊಂಡು ಬಂದಿದೆ. ಸಾಂಸ್ಥಿಕವಾಗಿ ಪ್ರಧಾನಮಂತ್ರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಅಭಿವೃದ್ಧಿ ಯೋಜನಾಕ್ಷೇತ್ರದಲ್ಲಿ ತಜ್ಞರೆನಿಸಿದ ಅರ್ಥಶಾಸ್ತ್ರಜ್ಞರನ್ನು ಅದರ ಉಪಾಧ್ಯಕ್ಷರಾಗಿ ನೇಮಿಸಲಾಗುತ್ತದೆ. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಜವಾಬ್ದಾರಿಯನ್ನು ಸಹ ಇದು ನಿರ್ವಹಿಸುತ್ತಾ ಬಂದಿದೆ. ನಗರದ ಬಡಜನರಿಗೆ ಹಲವಾರು ಯೋಜನೆಗಳಿಗೆ ಇವುಗಳಲ್ಲಿ ಕೊಳಚೆ ಪ್ರದೇಶದ ಜನರ ಅಭಿವೃದ್ಧಿ ಮತ್ತು ಬಡತನ ನಿರ್ಮೂಲನೆಗಾಗಿ ಪ್ರತ್ಯೇಕ ಯೋಜನೆಗಳನ್ನು ಸರ್ಕಾರ ರೂಪಿಸಿದೆ. ಈ ಎಲ್ಲಾ ಯೋಜನೆಗಳನ್ನು ಜಾರಿಗೊಳಿಸಲು ಅಧಿಕ ಪ್ರಮಾಣದ ಹಣವನ್ನು ಸಹ ಮಂಜೂರು ಮಾಡಲಾಗುತ್ತದೆ.

ಇವುಗಳಲ್ಲಿ ಕೇಂದ್ರ ಮತ್ತು ಸ್ಥಳೀಯ ಸರ್ಕಾರಗಳ ಯೋಜನೆಗಳು ಇವೆ. ಪ್ರಸ್ತುತ ಕೆಲವು ಯೋಜನೆಗಳು ಜಾರಿಯಲ್ಲಿದ್ದರೆ ಮತ್ತು ಕೆಲವು ಯೋಜನೆಗಳು ಈಗಾಗಲೇ ಪೂರ್ಣಗೊಂಡಿರುತ್ತದೆ.

ಕೊಳಚೆ ಪ್ರದೇಶ ಅಭಿವೃದ್ಧಿ ಸಂಬಂಧ ಸರ್ಕಾರದಿಂದ ಹೊಸ ಯೋಜನೆಗಳು ಹುಟ್ಟಿಕೊಳ್ಳುತ್ತವೆ. ಹಳೆಯ ಯೋಜನೆಗಳನ್ನು ಅರ್ಧಕ್ಕೆ ನಿಲ್ಲಿಸುವುದಾಗಲಿ ಅಥವಾ ಸಂಪೂರ್ಣವಾಗಿ ಕೈಬಿಡುವುದಾಗಲಿ ನಡೆಯುತ್ತಿರುತ್ತದೆ. ಸರ್ಕಾರದ ಯೋಜನೆಗಳು ಹಲವು ಇದ್ದರೂ ಜಾರಿಗೆ ತರುವಲ್ಲಿ ಕೊಳಚೆ ಪ್ರದೇಶಗಳ ಜನರ ಸ್ಥಿತಿಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಲಾಖೆ ಬಡತನ ನಿರ್ಮೂಲನೆ, ಪ್ರತ್ಯೇಕವಾದ ಮಂಡಳಿ, ನಿಗಮ, ಆಯೋಗ, ನಿಯೋಗ ಮುಂತಾದವುಗಳನ್ನು ಆರಂಭಿಸಿ ಅವುಗಳ ಪ್ರಚಾರ ಮಾಡುವುದನ್ನು ಸರ್ಕಾರವು ಸರಿಯಾಗಿ ಸ್ಪಂದಿಸದೇ ಇದ್ದುದರಿಂದ ಅವು ನೆನೆಗುದಿಗೆ ಬಿದ್ದು ಕೊನೆಗೊಳ್ಳುತ್ತವೆ. ಇವುಗಳ ಕುರಿತಾಗಿ ವ್ಯವಸ್ಥಿತವಾಗಿ ಯೊಜನೆಗಳನ್ನು ರೂಪಿಸಿದರೆ ಕೊಳಚೆಪ್ರದೇಶದ ಜನರ ಜೀವನಾಭಿವೃದ್ಧಿಯಲ್ಲಿ ಬದಲಾವಣೆ ಗೋಚರಿಸಲು ಸಾಧ್ಯ

ನಗರೀಕರಣದಿಂದ ಇತ್ತೀಚಿಗೆ ಬೆಳವಣಿಗೆಯ ಜೊತೆಗೆ ಹೆಚ್ಚಿನ ಸಂಖ್ಯೆಯ ಜನರು ನಗರಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಈ ಜನರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕೊಳಚೆಪ್ರದೇಶಗಳ ಸಮಸ್ಯೆಗಳು ಕೂಡಸೇರಿ ಗ್ರಾಮೀಣ ಪ್ರದೇಶದಿಂದ ನಗರದ ಕಡೆಗೆ ಜನರು ವಲಸೆ ಹೋಗುತ್ತಾರೆ. ಆರ್ಥಿಕವಾಗಿ ತುಂಬ ತಳಮಟ್ಟದಲ್ಲಿ ದುರ್ಬಲವಾಗಿ ಇರುತ್ತಾರೆ. ತಮ್ಮ ಜೀವನ ಬದುಕನ್ನು ಕಟ್ಟಿಕೊಳ್ಳಲು ಕೊಳಚೆ ಪ್ರದೇಶಗಳಲ್ಲಿ ನೆಲೆಸಲು ಪ್ರಯತ್ನಿಸುತ್ತಾರೆ. ಇದರಿಂದ ಕೊಳಚೆ ಪ್ರದೇಶದಲ್ಲಿ ಹಲವು ಸಮಸ್ಯೆಗಳು ಉದ್ಭವಿಸುತ್ತದೆ. ಇವುಗಳ ಪರಿಹಾರಕ್ಕಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ಮಹತ್ವದ ಯೋಜನೆಗಳನ್ನು ರೂಪಿಸಿ ಇವರ ಅಭಿವೃದ್ಧಿಯ ಕಡೆಗೆ ಕೊಳಚೆಪ್ರದೇಶಗಳ ಸಮಸ್ಯೆಗಳ ಬಗ್ಗೆ ಸ್ವಾತಂತ್ರ್ಯ ನಂತರದ ೨೦-೨೫ ವರ್ಷಗಳವರೆಗೆ ಯಾವುದೇ ವಿಶೇಷ ಗಮನ ಹರಿಸದೇ ಇದ್ದರೂ ಕೂಡಾ ೧೯೭೨ ರಲ್ಲಿ ಕೊಳಚೆ ಪ್ರದೇಶಗಳಲ್ಲಿನ ಪರಿಸರ ಸುಧಾರಣೆಗಾಗಿ ಕೇಂದ್ರೀಯ (Central Scheme For Environment improvement in slum areas) ಯೋಜನೆಯನ್ನು ಯೋಜನಾ ಆಯೋಗ ಮತ್ತು ಕೇಂದ್ರ ಅರ್ಥಶಾಸ್ತ್ರ ವಿಭಾಗಗಳ ಸಂಯುಕ್ತ ಸಮಲೋಚನೆಯ ಮೇರೆಗೆ ಜಾರಿಗೊಳಿಸಲಾಯಿತು.

ಈ ಯೋಜನೆಯ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಅವುಗಳೆಂದರೆ, ಕುಡಿಯುವ ನೀರು ಸರಬರಾಜು, ಚರಂಡಿ, ಶೌಚಾಲಯ, ವಸತಿ, ಅಂಗನವಾಡಿಗಳನ್ನು ಆರಂಭಿಸುವುದಾಗಿದೆ. ಇದಕ್ಕಾಗಿ ಸಂಬಂಧಪಟ್ಟ ರಾಜ್ಯಸರಕಾರಗಳಿಗೆ ಪೂರ್ಣ ಆರ್ಥಿಕ ಸಹಾಯವನ್ನು ಒದಗಿಸಲಾಗಿದೆ. ೧೯೭೪ ಏಪ್ರಿಲ್ ೧ ರಿಂದ ಈ ಯೋಜನೆಯನ್ನು ಕೇಂದ್ರದಿಂದ ರಾಜ್ಯಗಳಿಗೆ ವರ್ಗಾಯಿಸಲಾಯಿತು. ಈ ರಾಜ್ಯಸರ್ಕಾರಗಳು ಈ ಯೋಜನೆಯನ್ನು

ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮವಾಗಿ ಮುಂದುವರಿಸಿಕೊಂಡು ಅಭಿವೃದ್ಧಿ ಹೊಂದುವಂತಹ ಅಗತ್ಯವಿದೆ.

ನಗರ ಕೊಳಚೆ ಪ್ರದೇಶಗಳು ಒಂದು ದಶಕದಲ್ಲಿ ರಾಜ್ಯದ ಕೊಳಚೆ ಪ್ರದೇಶ ಜನಸಂಖ್ಯೆ ೧೪.೦೨ ಲಕ್ಷದಿಂದ ೧೩.೯೧ ಲಕ್ಷಗಳಿಗೆ ೨೦೧೧) ಹೆಚ್ಚಳವಾಗಿದೆ. ೨೦೦೧ ನೇ ಗಣತಿಯ ಪ್ರಕಾರ ೭.೮ ರಷ್ಟು ಕೊಳಚೆ ನಿವಾಸಿಗಳ ಜನಸಂಖ್ಯೆಯು ಪ್ರಸ್ತುತ ಶೇ ೧೩.೯ ರಷ್ಟಿದೆ. ಬೆಂಗಳೂರು ಜಿಲ್ಲೆಯಲ್ಲಿ ೨೧.೫ ರಷ್ಟು ಕೊಳಚೆ ನಿವಾಸಿಗಳಿದ್ದಾರೆ. ಇದರಲ್ಲಿ ಪ್ರತಿ ೫ ಜನರಲ್ಲಿ ಒಬ್ಬರು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದಾರೆ. ೨೦೧೧ ನೇ ಸಾಲಿನ ಗಣತಿಯ ವಿಶ್ಲೇಷಣೆಯನ್ವಯ ಬೆಂಗಳೂರಿನ ಜೊತೆಗೆ ಬಳ್ಳಾರಿ ನಗರಗಳು ೬.೧ ಮತ್ತು ೬% ರಷ್ಟು ನಗರ ಕೊಳಚೆ ನಿವಾಸಿಗಳಿದ್ದಾರೆ. ಉಡುಪಿ, ದಕ್ಷಿಣಕನ್ನಡ, ಕೊಡಗು ಜಿಲ್ಲೆಗಳಲ್ಲಿ ಶೇ ೧ ರಷ್ಟು ಕೊಳಚೆ ನಿವಾಸಿಗಳಿದ್ದಾರೆ (ಅನುಬಂಧ ೬-೩). ರಾಜ್ಯದ ೨೨೦ ಪಟ್ಟಣಗಳಲ್ಲಿ ೨೦೬ (೯೪%) ಪಟ್ಟಣಗಳ ಕೊಳಚೆ ಪ್ರದೇಶಗಳಲ್ಲಿ ಲಿಂಗಾನುಪಾತವನ್ನು ಗಮನಿಸಿದಾಗ ೧೦೦೦ ಪುರುಷರಿಗೆ ೧೦೧೫ ಮಹಿಳೆಯರು ಕೊಳಚೆ ಪ್ರದೇಶಗಳಲ್ಲಿರುವುದು ಕಂಡುಬಂದಿದೆ. (ಕರ್ನಾಟಕದಲ್ಲಿ ೯೭೩ ಮಹಿಳೆಯರಿದ್ದಾರೆ) ರಾಜ್ಯದಲ್ಲಿ ೦-೬ ವರೆಗೆ ಲಿಂಗಾನುಪಾತದಲ್ಲಿ ೯೭೩ರ ಬದಲಾಯಿಸಿ ೯೪೮ ಹೆಣ್ಣುಮಕ್ಕಳಿರುವುದು ಕಂಡುಬಂದಿದ್ದು, ಈ ಅನುಪಾತ ಕೊಳಚೆ ಪ್ರದೇಶಗಳಲ್ಲಿ ೯೬೪ ರಷ್ಟಿದ್ದು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಕೊಳಚೆ ಪ್ರದೇಶದಲ್ಲಿ ಈ ಲಿಂಗಾನುಪಾತವು ಕೇವಲ ೮೮೩ ರಷ್ಟಿದೆ. ಕೊಳಚೆ ಪ್ರದೇಶದಲ್ಲಿನ ಅಕ್ಷರಸ್ಥರ ಸಂಖ್ಯೆ ೬೭.೫ (೨೦೦೭)ರಿಂದ ೨೦೧೧ಕ್ಕೆ ೭೫.೬ ಹೆಚ್ಚಾಗಿದ್ದು ಆದರೆ ಗುಲ್ಬರ್ಗ (೫೭.೧%) ಮತ್ತು ಬಳ್ಳಾರಿಯಲ್ಲಿ ೮೧% ರಷ್ಟಿರುವುದು ಕಂಡುಬಂದಿದೆ.

೫.೧ ಕೊಳಚೆ ಪ್ರದೇಶಗಳ ಸುಧಾರಣಾ ಕಾರ್ಯಕ್ರಮ

೨೦೧೨-೧೩ರ ಸಾಲಿನ ಆಯವ್ಯಯದಲ್ಲಿ ರೂ ೭೫೦೦ ಲಕ್ಷಗಳ ಅನುದಾನವನ್ನು ಮೂಲಸೌಕರ್ಯಗಳಿಗಾಗಿ ಅನುಮೋದಿಸಿದ್ದು ಸದರಿ ಮೊತ್ತವನ್ನು ಕೊಳಚೆಪ್ರದೇಶಗಳ ಸುಧಾರಣೆಗೆ ಬಳಸಿಕೊಳ್ಳಲಾಗಿದೆ. ೨೦೧೩-೧೪ ನೇ ಸಾಲಿನ ಬಜೆಟ್‌ನಲ್ಲಿ ರೂ ೮೫೬೦ ಒದಗಿಸಲಾಗಿದ್ದು ಅಕ್ಟೋಬರ್ ೨೦೧೩ ರವರೆಗೆ ರೂ ೨೭೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಕಾರ್ಯಕ್ರಮವನ್ನು ನಗರ ಮತ್ತು ಪಟ್ಟಣಗಳಲ್ಲಿರುವ ಬಡವರಿಗೆ ವಸತಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮ ಇಡಿ ದೇಶದ ೬೫ ನಗರಗಳಲ್ಲಿ ಆಯ್ಕೆ ಮಾಡಲಾಗಿದೆ.

ಈ ಕಾರ್ಯಕ್ರಮದ ಮೇಲ್ವಿಚಾರಣೆಗೆ ಕೆ.ಯು.ಐ.ಡಿ ಎಫ್ ಸಿಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ಕಾರ್ಯಕ್ರಮವನ್ನು ಕೆ.ಎಫ್.ಡಿ.ಬಿ.ಯ ಅನುಷ್ಠಾನಗೊಳಿಸಲಿದೆ. ಈ

ಕಾರ್ಯಕ್ರಮದ ಮುಖ್ಯ ಉದ್ದೇಶ ನಗರದ ಬಡವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಾಗಿದ್ದು, ವಾಸವಿರುವ ಅವಧಿಯಲ್ಲಿ ಭದ್ರತೆ ಸುಧಾರಿತ ವಸತಿ, ನೀರು, ಸರಬರಾಜು ನೈರ್ಮಲ್ಯ ಈಗಾಗಲೇ ಸರ್ಕಾರದಿಂದ ಸಾರ್ವತ್ರಿಕವಾಗಿ ಲಭ್ಯವಿರುವ ಸೇವೆಗಳಾದ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸುರಕ್ಷತಾ ಸೇವೆಗಳ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವುದು ವಸತಿ ಮತ್ತು ನಗರ ಬಡತನ ನಿರ್ಮೂಲನೆ ಮುಂತಾದ ಕೇಂದ್ರ ಅನುಮೋದಿತ ಮತ್ತು ಮಾನಿಟರಿಂಗ್ ಆಯ್ದ ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣಕ್ಕೆ ೨೦೩.೯೭ ಕೋಟಿಗಳನ್ನು ವಿವಿಧ ಸಿ.ಎಮ್.ಎಮ್.ಸಿ ಸಭೆಗಳಲ್ಲಿ ಅನುಮೋದಿಸಿದೆ. ಬೆಂಗಳೂರು, ಬಳ್ಳಾರಿ ನಗರಕ್ಕೆ ಹಣಕಾಸಿನ ಹಂಚಿಕೆ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರವು ೫೦-೫೦ ಪ್ರಮಾಣದಲ್ಲಿ ಕೊಟ್ಟಿರುತ್ತದೆ. ರಾಜ್ಯದ ಪಾಲು ಎಸ್.ಸಿ/ಎಸ್.ಟಿ ವಂತಿಗೆ ಶೇ ೧೦% ಹಾಗೂ ಇತರರಿಗೆ ಶೇ೧೨% ಇದರಲ್ಲಿ ಸೇರಿರುತ್ತದೆ. ಮೈಸೂರು ನಗರಕ್ಕೆ ಕೇಂದ್ರಸರ್ಕಾರ ಶೇ ೮೦%ರಷ್ಟು ಭರಿಸಲಿದ್ದು ಉಳಿದ ೨೦ರಷ್ಟು ಸರ್ಕಾರ ಭರಿಸಲಿದೆ. ಕೆ.ಎಸ್.ಡಿ.ಬಿ.ಯ ದೇಶದಲ್ಲಿಯ ಮೊದಲ ಬಾರಿಗೆ ಕಡಿಮೆ ಖರ್ಚು ಮತ್ತು ತ್ವರಿತ ನಿರ್ಮಾಣವನ್ನು ಟೈಟಲ್ ಮಾದರಿಯಲ್ಲಿ ಅಳವಡಿಸಿಕೊಂಡಿದೆ. ಬಿ.ಎಸ್.ಯು.ಡಿ ಯೋಜನೆ ಕೈಗೊಳ್ಳಲಾಗುತ್ತದೆ. ಈ ತಾಂತ್ರಿಕತೆಯ ಪರಿಸರ ಸ್ನೇಹಯಾಗಿದ್ದು ನಿರ್ಮಾಣ ವೆಚ್ಚದಲ್ಲಿ ಶೇ ೧೦ ರಿಂದ ೨೫ ರಷ್ಟು ಕಡಿಮೆಯಾಗಲಿದೆ ಮನೆಗಳು ದೀರ್ಘಕಾಲ ಬಾಳಿಕೆ ಬರಲಿವೆ.

ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆ (ಐ.ಹೆಚ್.ಎಸ್.ಡಿ.ಪಿ).

ಬಿ.ಎಸ್ ಯು.ಪಿ.ಗೆ ಸೇರ್ಪಡೆಯಾಗಿದ್ದ ನಗರಗಳಲ್ಲಿ ವಸತಿ ಮತ್ತು ಕೊಳಚೆ ಪ್ರದೇಶಗಳ ಮೇಲ್ದರ್ಜೆಗೆ ಬಿ.ಎಸ್.ಯು.ಡಿ ಜೊತೆಗೆ ಐ.ಹೆಚ್.ಎಸ್.ಡಿ.ಪಿ. ಯೋಜನೆಯನ್ನು ಡಿಸೆಂಬರ್ ೨೦೦೫ ರಲ್ಲಿ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವಾಲ್ಮೀಕಿ-ಅಂಬೇಡ್ಕರ್ ಆವಾಸ್‌ಯೋಜನೆ (ವಿ.ಎ.ಎಮ್ ಯೋಜನೆ ಎನ್ ಎಸ್.ಡಿ.ಪಿ) ಗಳ ಸಂಯೋಜನೆಯಾಗಿದ್ದು ಸಾರ್ವಜನಿಕ ಹೂಡಿಕೆಯನ್ನು ನಗರ ಪ್ರದೇಶಗಳ ವಸತಿ ಮತ್ತು ಅಭಿವೃದ್ಧಿಗೆ ಹೆಚ್ಚಿಸುವುದಾಗಿದೆ. ಆ ಮೂಲಕ ಕೊಳಚೆಪ್ರದೇಶಗಳಲ್ಲಿರುವ ವಸತಿ ಹೀನರಿಗೆ ಮನೆಗಳನ್ನು ಹೊಂದಲು ಅವಕಾಶ ಕಲ್ಪಿಸಿದೆ. ಕೊಳಚೆರಹಿತ ನಗರಗಳನ್ನಾಗಿಸಿ ಆರೋಗ್ಯಕರ ವಾತಾವರಣ ಮತ್ತು ಉತ್ತಮ ಪರಿಸರವನ್ನು ಇದು ನಿರ್ಮಿಸುವುದಾಗಿದೆ.

ಎಮ್.ಬಿ.ಹೆಚ್ ಯು.ಪಿ.ಎದ ಕೇಂದ್ರ ಅನುಮೋದಿಸಿ ಮತ್ತು ಮೇಲ್ವಿಚಾರಣ ಸಮಿತಿಯು (ಸಿ.ಎಸ್.ಎಮ್.ಸಿ) ೪೧೦.೮೦ ಕೋಟಿಗಳ ೩೪ ಯೋಜನೆಗಳಿಗೆ ೨ ಹಂತಗಳಲ್ಲಿ ೧೭೭೭೭ ಮನೆಗಳನ್ನು ನಿರ್ಮಿಸಲು (ಕೇಂದ್ರ ಪಾಲು ೮೦% ರಾಜ್ಯ ೨೦%) ಅನುಮೋದನೆ ನೀಡಿದೆ. ರಾಜ್ಯದ ಪಾಲಿನ ಜೊತೆ ಫಲಾನುಭವಿಗಳು ಶೇ ೧೦ ರಷ್ಟು ವಂತಿಗೆಯನ್ನು ಭರಿಸಬೇಕಾಗುತ್ತದೆ. ಅಕ್ಟೋಬರ್ ೨೦೧೩ರ ಅಂತ್ಯಕ್ಕೆ ೧೬೨೮೦ ಮನೆಗಳು ಪೂರ್ಣಗೊಂಡಿದ್ದು ೭೪೩ ಮನೆಗಳ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.

೫.೨ ರಾಜೀವ್‌ಗಾಂಧಿ ವಸತಿ ಯೋಜನೆ

ಕೊಳಗೇರಿಗಳಲ್ಲಿ ಮೂಲಸೌಕರ್ಯಗಳನ್ನು ಒದಗಿಸಿ ದೇಶವನ್ನು ಕೊಳಚೆ ಪ್ರದೇಶಗಳಿಂದ ಮುಕ್ತಗೊಳಿಸಲು ಕೇಂದ್ರಸರ್ಕಾರವು ಇಂದಿರಾ ಆವಾಸ್ ಯೋಜನೆಯ ಮಾದರಿಯಲ್ಲಿಯೇ ರಾಜೀವ್ ಆವಾಸ್ ಯೋಜನೆಯನ್ನು ೨೦೦೯-೧೦ ರ ಬಜೆಟ್‌ನಲ್ಲಿ ಪರಿಚಯಿಸಲಾಯಿತು. ಈ ಯೋಜನೆ ಕರ್ನಾಟಕ ರಾಜ್ಯವನ್ನು ೨೦೧೭ರೊಳಗೆ ಕೊಳಗೇರಿ ಮುಕ್ತ ರಾಜ್ಯವನ್ನಾಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯು ೨೦೦೯-೧೦ರಲ್ಲಿ ಜಾರಿಯಾಯಿತು. ಪೌರಾಡಳಿತ ನಿರ್ದೇಶನಾಲಯವು ಸಮೀಕ್ಷೆ ನಿರ್ವಹಣೆಯು ನೋಡಲ್ ಸಂಸ್ಥೆಯಾಗಿದೆ. ಪೌರಾಡಳಿತ ನಿರ್ದೇಶನಾಲಯವು ಸಮೀಕ್ಷೆ ಕಾರ್ಯವನ್ನು ಕೈಗೊಂಡಿದೆ. ಮೊದಲನೆಯೇ ಹಂತದಲ್ಲಿ ೧೦ ನಗರಗಳು, ಪಟ್ಟಣಗಳನ್ನು ಅನುಮೋದಿಸಿದೆ. ವಿವರವಾದ ಯೋಜನಾ ವರದಿ ತಯಾರಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಮೊದಲನೆ ಹಂತದಲ್ಲಿ ೩ ಲಕ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಹೊಂದಿರುವ ನಗರ ಸಭೆಗಳಾದ ಬೆಂಗಳೂರು, ಮೈಸೂರು, ಮಂಗಳೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ ನಗರವನ್ನು ವಸತಿ ಮತ್ತು ಮೂಲಸೌಕರ್ಯಗಳನ್ನು ಒದಗಿಸಲು ಆಯ್ದುಕೊಳ್ಳಲಾಗಿದೆ. ಈ ಯೋಜನೆಗೆ ಕೇಂದ್ರಸರ್ಕಾರವು ೩೧೪.೮೪ ಕೋಟಿ ರೂ ೫ ಯೋಜನೆಗಳಡಿಯಲ್ಲಿ ೫೫೪೯ ಮನೆಗಳನ್ನು ಬಿಡುಗಡೆ ಮಾಡಲಾಗಿದೆ.

ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ: ರಾಷ್ಟ್ರವನ್ನು ಕೊಳಚೆ ಪ್ರದೇಶದ ಮುಕ್ತದೇಶವನ್ನಾಗಿ ಮಾಡಲು ಇಂದಿರಾ ಆವಾಸ್ ಯೋಜನೆ ಮಾದರಿಯಲ್ಲಿ ನಗರ ಪ್ರದೇಶಗಳ ಕೊಳಚೆ ನಿವಾಸಿಗಳಿಗೆ ವಸತಿ ಮತ್ತು ಮೂಲಭೂತ ಸೌಕರ್ಯ ಒದಗಿಸಲು "ರಾಜೀವ್ ಆವಾಸ್ ಯೋಜನೆ" ಎಂಬ ಹೊಸಯೋಜನೆಯನ್ನು ೨೦೦೯-೧೦ರಲ್ಲಿ ಘೋಷಿಸಲಾಗಿದೆ. ಈ ಯೋಜನೆಯಡಿ ರಾಜ್ಯವನ್ನು ಆಯ್ಕೆ ಮಾಡಿಕೊಂಡು ೨೦೧೭ ರೊಳಗೆ ಕೊಳಚೆ ಪ್ರದೇಶದ ಮುಕ್ತ ರಾಜ್ಯವನ್ನಾಗಿ ಮಾಡಲು ಉದ್ದೇಶ ಹೊಂದಿದೆ. ರಾಜೀವ್ ಆವಾಸ್ ಯೋಜನೆಯಡಿ ೨೫ ಚದರ ಮೀಟರ್ ಕಾರ್ಪೆಟ್ ವಿಸ್ತೀರ್ಣವನ್ನೊಳಗೊಂಡ ವಸತಿ ಗೃಹವನ್ನು ಕೊಳಚೆ ಪ್ರದೇಶದ ಎಲ್ಲಾ ಕುಟುಂಬಗಳಿಗೆ ಅವಶ್ಯಕ ಮೂಲಭೂತ ಸೌಕರ್ಯಗಳೊಂದಿಗೆ ಒದಗಿಸಲಾಗುತ್ತದೆ. ಈ ಯೋಜನೆಯಡಿ ಪ್ರತಿಶತ ೫೦ ರಷ್ಟು ಪಾಲಿನ ಅನುದಾನದ ಪೈಕಿ ಪ್ರತಿಶತ ೪೦ರಷ್ಟು ರಾಜ್ಯಸರ್ಕಾರ ಹಾಗೂ ಪ್ರತಿಶತ ೧೦ರಷ್ಟು ಫಲಾನುಭವಿಗಳ ವಂತಿಕೆ ಮೂಲಕ ಭರಿಸಲಾಗುವುದು.

* ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ಇಂದಿರಾ ಆವಾಸ್ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ.
* ೨೦೧೦-೧೧- ನೇ ಸಾಲಿನಲ್ಲಿ ಆಶ್ರಯ ಯೋಜನೆಯನ್ನು ವಾಜಪೇಯಿ ನಗರ ವಸತಿಯೋಜನೆಯೆಂಬುದು ಮರುನಾಮಂಕಿತಗೊಳಿಸಲಾಗಿದೆ.

* ವಸತಿ ನಿರ್ದೇಶನ ಕಾರ್ಯಕ್ರಮ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ೧೧೮೦೦ ರೂಗಳಿಗಿಂತ ಕಡಿಮೆವಾರ್ಷಿಕ ವರಮಾನವಿರುವ ಫಲಾನುಭವಿಗಳಿಗೆ ವಸತಿ ನಿವೇಶನಗಳನ್ನು ವೆಚ್ಚ ರಹಿತವಾಗಿ ವಿತರಿಸಲಾಗುತ್ತಿದೆ. ಈ ಯೋಜನೆಯನ್ನು ೧೯೯೨-೯೩ ಸಾಲಿನಲ್ಲಿ ಪರಿಚಯಿಸಲಾಗಿದೆ.

* ಆರ್ಥಿಕವಾಗಿ ಹಿಂದುಳಿದ ಜನರ ವಸತಿ ಸೌಕರ್ಯದ ಸಲುವಾಗಿ ಭರಿಸಲಾಗುತ್ತಿರುವ ವೆಚ್ಚವು ೨೦೦೦-೦೨ ರಿಂದ ೨೦೧೨-೧೩ ರವರೆಗೆ ನಿರಂತರವಾಗಿ ಅಧಿಕವಾಗುತ್ತಾ ಬಂದಿರುತ್ತದೆ. ರಾಜ್ಯ ಸರ್ಕಾರವು ೭೪೮೦.೯೩ ಕೋಟಿ ರೂಗಳನ್ನು ವೆಚ್ಚ ಮಾಡಲಾಗಿ ಈ ಪೈಕಿ ೧೭೬೮.೯೪ ಕೋಟಿ ರೂಗಳು ಕೇಂದ್ರ ಪರಿಸ್ಥಿತಿ ಇಂದಿರಾ ಆವಾಸ್ ಆಯೋಜನೆ ಸೇರಿರುತ್ತದೆ.

* ನಗರದ ಬಡಜನರಿಗಾಗಿ ಮೂಲಭೂತ ಸೇವೆ ಯೋಜನೆ (೧೯೯೦-೯೧ UBSP Scheme at urban basic Services of the poverty)

ಇದು ಸರ್ಕಾರದ ಮಹತ್ವಯೋಜನೆಯಾಗಿದೆ. ನಗರಗಳಲ್ಲಿ ನೆಲೆನಿಂತ ಕೆಳವರ್ಗಗಳ ಅಭಿವೃದ್ಧಿಗಾಗಿ ರೂಪಿತವಾದ ಯೋಜನೆ. ೧೯೯೦-೧೯೯೧ ರಲ್ಲಿ ಜಾರಿಗೆ ಬಂದಿದೆ. ಈ ಯೋಜನೆಯ ಮೂಲಕ ನಗರದ ಬಡವರ್ಗದ ನೆರೆಹೊರೆಗಳಲ್ಲಿ ವಾಸಿಸುವ ಸಾಮೂಹಿಕ ಸಕ್ರಿಯೆ ಸಹಭಾಗಿತ್ವದೊಂದಿಗೆ ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಅನನ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿತ್ತು. ನಗರದ ಕೊಳಚೆ ಪ್ರದೇಶದ ನಿವಾಸಿಗಳ ಜೀವನಮಟ್ಟವನ್ನು ಸುಧಾರಿಸುವಂತೆ ನೋಡಿಕೊಳ್ಳುವುದೇ ಈ ಯೋಜನೆಯ ಪ್ರಧಾನ ಉದ್ದೇಶವಾಗಿತ್ತು. ೮ನೇ ಯೋಜನೆಯ ಅವಧಿಯಲ್ಲಿ ಕೇಂದ್ರ ಮಂತ್ರಿಮಂಡಲ ಅನುಮೋದನೆಯೊಂದಿಗೆ ಅನುಷ್ಠಾನದಿಂದ ಬಂದ ಈ ಯೋಜನೆಯ ಖರ್ಚನ್ನು ಕೇಂದ್ರ ಹಾಗೂ ರಾಜ್ಯಗಳು ೩೦-೪೦ರ ಪ್ರಮಾಣದಲ್ಲಿ ವಹಿಸಿಕೊಳ್ಳಬೇಕೆಂದು ನಿರ್ಧರಿಸಲಾಗಿತ್ತು. ಯೋಜನೆಯ ಅನುಷ್ಠಾನದ ಮೊದಲ ವರ್ಷ ವ್ಯಕ್ತಿಯೊಬ್ಬನ ಮೇಲೆ ರೂ ೭೫ರಂತೆ ಹಾಗೂ ಎರಡನೆಯ ವರ್ಷ ರೂ ೫೦ ರಂತೆ ಮಾಡುವುದರಿಂದ ನಿರ್ಧರಿಸಲಾಗಿದ್ದು ಈ ಬಗ್ಗೆ ಕೇಂದ್ರ ಬಜೆಟ್‌ನಲ್ಲಿ ೮ನೇ ಯೋಜನೆಯ ಪೂರ್ವ ಅವಧಿಗೆ ೧೦೦ ಕೋಟಿ ರೂಗಳನ್ನು ತೆಗೆದಿರಿಸಲಾಗಿತ್ತು. ಈ ಯೋಜನೆಯನ್ನು ರಾಜ್ಯಮಟ್ಟದ "ಕೊಳಚೆಪ್ರದೇಶ ಪರಿಸರ ಸುಧಾರಣಾ ಯೋಜನೆಯ" ಹಾಗೂ ಕೇಂದ್ರಸರ್ಕಾರ ಪ್ರಾಯೋಜಿತ ನೆಹರೂ ರೋಜಗಾರ್ ಯೋಜನೆ ಇವುಗಳ ಸಹಯೋಗದೊಂದಿಗೆ ಕಾರ್ಯಗತಗೊಳಿಸಲು ನಿಶ್ಚಯಿಸಲಾಯಿತು.

S.U.D.P (Slurn Upgradation Development Programme) ಕೊಳಗೇರಿ ಜನರ ಅಭಿವೃದ್ಧಿಗಾಗಿ ಕೊಳಚೆ ಪ್ರದೇಶದ ನಿರ್ಮೂಲನೆ ಮಂಡಳಿಯ ಮಹತ್ವದ ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿದೆ. ಇಷ್ಟೆಲ್ಲಾ ಸಮಸ್ಯೆ ಪರದಾಟ ಮತ್ತು ಗೊಂದಲಗಳ ಮಧ್ಯೆ ಕೊಳಚೆ ಪ್ರದೇಶದ

ಜನರಲ್ಲಿ ಆಶಾಭಾವನೆ ಮೂಡಿಸುವಂತಹ ಬೆಳವಣಿಗೆಯೂ ಸಹ ಈ ಮಂಡಳಿಯಿಂದ ಆಗುತ್ತಲಿವೆ. ನಗರಗಳ ಎಲ್ಲಾ ಸ್ಲಂ (ಕೊಳಗೇರಿ)ಗಳು ಕೂಡ ಬೆಳವಣಿಗೆ ಆಗುತ್ತಿವೆ ಎಲ್ಲಾ ಕೊಳಚೆ ಪ್ರದೇಶದ ಸಮಸ್ಯೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಸಲು ಈ ಯೋಜನೆಯನ್ನು ಸರ್ಕಾರ ರೂಪಿಸಿದೆ. ಈ ಯೋಜನೆಯ ಅಡಿಯಲ್ಲಿ ಮೂಲಭೂತ ಸೌಲಭ್ಯವಾದ ಕುಡಿಯುವ ನೀರು ಸಮುದಾಯ ಶೌಚಾಲಯ ರಸ್ತೆ ದುರಸ್ತಿ ಚರಂಡಿ ಮತ್ತು ಒಳಚರಂಡಿ ಬೀದಿದೀಪ ಮತ್ತು ಮನೆಗಳಿಗೆ ಪ್ರತ್ಯೇಕವಾಗಿ ಕುಡಿಯುವ ನೀರು ವೈಯಕ್ತಿಕ ಶೌಚಾಲಯ ಮತ್ತು ವಿದ್ಯುತ್ ಸೌಲಭ್ಯ ಸೇವೆಗಳನ್ನು ಯಾರು ಪಡೆಯಲು ಇಚ್ಛಿಸುತ್ತಾರೆಯೇ ಅಂಥವರಿಗೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತದೆ. ಜನಸಾಮಾನ್ಯರು ಯಾವುದೇ ರೋಗರುಜಿನಗಳಿಗೆ ಒಳಗಾದ ವ್ಯವಸ್ಥಿತವಾದ ಬದುಕನ್ನು ರೂಪಿಸಿಕೊಳ್ಳಲು ಇಂತಹ ಮಹತ್ತರ ಕೆಲಸಗಳನ್ನು ಮಂಡಳಿಯು ರೂಪಿಸುತ್ತದೆ. ಆದರೆ ವಾಸ್ತವವಾಗಿ ನೋಡಿದರೆ ಇವುಗಳಿಂದ ಕೊಳಚೆ ನಿವಾಸಿಗಳ ಬದುಕಿನಲ್ಲಿ ಯಾವುದೇ ರೀತಿಯ ಬದಲಾವಣೆಯು ಕಂಡುಬಂದಿಲ್ಲ.

ವಾಂಬೆಯೋಜನೆ: (Vambay :valmiki Ambedkar Avas Yojana)

೨೦೦೧-೨೦೦೨ ರಲ್ಲಿ ನಗರ ಕೊಳಚೆ ನಿವಾಸಿಗಳಿಗೆ ಗುಡಿಸಲುಗಳಲ್ಲಿ ವಾಸಿಸುತ್ತಿರುವವರಿಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ಅವರ ವಸತಿಯನ್ನು ಉತ್ತಮಗೊಳಿಸುವುದಕ್ಕಾಗಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದನ್ನು ಅಂಬೇಡ್ಕರ್ ಅವರ ಜನ್ಮದಿನದಂದು ಜಾರಿಗೆ ತರಲಾಗಿದೆ. ಇದರ ಅಡಿಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು ಶೇಕಡ ೫೦ರಷ್ಟು ಹಿಂದುಳಿದ ವರ್ಗಕ್ಕೆ ಶೇಕಡ ೩೦ರಷ್ಟು ಬೇರೆ ಅಶಕ್ತ ವರ್ಗಕ್ಕೆ ಶೇಕಡ ೧೫ ರಷ್ಟು ದೈಹಿಕ ಮತ್ತು ಮಾನಸಿಕ ದೌರ್ಬಲ್ಯವಿರುವ ಅಂಗವಿಕಲ ವ್ಯಕ್ತಿಗೆ ಶೇಕಡ ೩ರಷ್ಟು ಯೋಜನೆ ಫಲಾನುಭವಿಯಾಗಲು ಅವಕಾಶವಿದೆ. ಈ ಯೋಜನೆಯನ್ನು ಭಾರತ ಸರ್ಕಾರವು ಎಲ್ಲಾ ರಾಜ್ಯಗಳಿಗೆ ಅನ್ವಯವಾಗುವಂತೆ ಪ್ರಾರಂಭಿಸಿತು. ಇದರಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಸಮವಾಗಿ ಹಣಕಾಸು ವ್ಯವಸ್ಥೆಯನ್ನು ನೋಡಿಕೊಳ್ಳುತ್ತವೆ. ಇದರ ಅಡಿಯಲ್ಲಿ ಗೃಹ ನಿರ್ಮಾಣಕ್ಕಾಗಿ ಒಟ್ಟು ೪೦,೦೦೦ ರೂಪಾಯಿಗಳನ್ನು ಕೊಡಲಾಗುತ್ತದೆ. ೨೦,೦೦೦ ರೂಪಾಯಿಗಳನ್ನು ಕೇಂದ್ರಸರ್ಕಾರ ಸಬ್ಸಿಡಿ (ರಿಯಾಯಿತಿ) ನೀಡುತ್ತದೆ. ಉಳಿದ ೨೦,೦೦೦ ರೂಪಾಯಿಗಳನ್ನು ರಾಜ್ಯಸರ್ಕಾರ ಸಾಲದ ರೂಪದದಲ್ಲಿ ಫಲಾನುಭವಿಗಳಿಗೆ ನೀಡುತ್ತದೆ.

ಹುಡ್ಕೋ (ಹೌಸಿಂಗ್ ಮತ್ತು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್

ಈ ಹುಡ್ಕೋ ಯೋಜನೆಯು ೧೯೭೦ ರಲ್ಲಿ ಆರಂಭವಾಗಿ ೧೯೭೧ಕ್ಕೆ ಕೆಲಸವನ್ನು ಪ್ರಾರಂಭಿಸಿತು. ಈ ಯೋಜನೆಯು ಗೃಹನಿರ್ಮಾಣಕ್ಕೆ ಮತ್ತು ಕಟ್ಟಡದ ಸಮಗ್ರ ಯೋಜನೆಗಳಿಗೆ ಹಣ ಒದಗಿಸುತ್ತದೆ. ದೇಶದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಆಶ್ರಯ ಒದಗಿಸುವುದಕ್ಕೆ ಹುಡ್ಕೋ ಹೆಚ್ಚು ಒತ್ತುಕೊಟ್ಟಿದೆ. ಗೃಹ ನಿರ್ಮಾಣಕ್ಕೆ ಒದಗಿಸಿದ ನಿಧಿಗಳಲ್ಲಿ ಶೇಕಡ ೫೫ ರಷ್ಟು

ಅಂದರೆ ತಿಂಗಳಿಗೆ ೨೦೦ ರೂಪಾಯಿಗಳಿಗೆ ಮೀರದಂತೆ ಅತಿಕಡಿಮೆ ಆದಾಯ ಇರುವವರಿಗೆ ಪ್ರಯೋಜನವಾಗುವಂತೆ ಅದು ತನ್ನ ನೀತಿಯನ್ನು ರೂಪಿಸಿದೆ.

ರೂಪಾಯಿಗೆ ಮೀರದಂತೆ ಅತಿಕಡಿಮೆ ಆದಾಯ ಇರುವವರಿಗೆ ಪ್ರಯೋಜನವಾಗುವಂತೆ ಅದು ತನ್ನ ನೀತಿಯನ್ನು ರೂಪಿಸಿದೆ. ಹುಡ್ಕೋ ಯೊಜನೆಯು ನಗರದ ವಸತಿ ಸಮಸ್ಯೆಯ ಪರಿಹಾರಕ್ಕೆ ವರವಾಗಿ ಪರಿಣಮಿಸಿದೆ. ಇದು ಕೇಂದ್ರ ಮಟ್ಟದಲ್ಲಿ ವಸತಿ ಸಮಸ್ಯೆ ನಿವಾರಣೆಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ಮತ್ತು ರಾಜ್ಯ ಹಾಗೂ ನಗರಗಳು ಮಟ್ಟದಲ್ಲಿ ವಸತಿ ನಿರ್ಮಾಣ ಯೊಜನೆಗಳಿಗೆ ವಸತಿ ಅಭಿವೃದ್ಧಿಗಾಗಿ ಸಹಾಯವನ್ನು ನೀಡುತ್ತದೆ. ಹುಡ್ಕೋ ರಾಷ್ಟ್ರದ್ಯಂತ ಎಲ್ಲಾ ನಗರಗಳಲ್ಲಿ ವಸತಿಗಳನ್ನು ನಿರ್ಮಿಸಲು ತಾಂತ್ರಿಕ ಸಲಹೆ ಮತ್ತು ಹಣಕಾಸು ಸಹಾಯವನ್ನು ನೀಡುತ್ತದೆ. ಇದು ನೂರಾರು ವಸತಿಯೋಜನೆಗಳನ್ನು ರೂಪಿಸಿದೆ. ೧೯೭೮ ವೇಳೆಗೆ ರಾಷ್ಟ್ರಾದ್ಯಂತ ಎಂಟು ಸಾವಿರ ಕೋಟಿ ರೂಪಾಯಿಗಳ ಬೆಲೆ ಬಾಳುವ ಮನೆಗಳನ್ನು ನಿರ್ಮಿಸಿದೆ. ಸುಮಾರು ೪೪ ಸಾವಿರ ಕೋಟಿ ರೂಪಾಯಿಯ ವಸತಿನಿರ್ಮಾಣದ ಯೊಜನೆಗಳನ್ನು ೧೪೨ ನಗರಗಳಲ್ಲಿ ರೂಪಿಸಿದೆ. ಈ ಯೋಜನೆಗಳಲ್ಲಿ ಒಂದು ದಶಲಕ್ಷ ಮನೆಗಳುಳ್ಳ ವಸತಿ ಸಮುಚ್ಚಯಗಳ ನಿರ್ಮಿಸಿದ ವಾರ್ಷಿಕವಾಗಿ ಭಾರತದ ನಗರಗಳಲ್ಲಿ ಹೆಚ್ಚುತ್ತಿರುವ ೪ ಲಕ್ಷ ಮನೆಗಳ ಬೇಡಿಕೆಯನ್ನು ಪೂರೈಸಲು ಹುಡ್ಕೋ ಯೋಜನೆಯನ್ನು ರೂಪಿಸಿದೆ. ಪ್ರತಿ ಒಂದು ಸಾವಿರ ನಗರ ಜನಸಂಖ್ಯೆಗೆ ಕನಿಷ್ಠ ೧೦ ಮನೆಗಳನ್ನಾದರೂ ನಿರ್ಮಿಸಬೇಕೆಂಬ ನಿಯಮವಿದೆ. ಆದರೆ ಭಾರತದಲ್ಲಿ ಈ ಪ್ರಮಾಣವು ೨೦ ಮತ್ತು ಹುಡ್ಕೊ ೩.೪ ಮಾತ್ರವಿದೆ. ಹುಡ್ಕೋ ರಾಜ್ಯಸರ್ಕಾರಗಳಿಗೆ ಕೈಗಾರಿಕಾ ಮಂಡಳಿಗಳಿಗೆ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ವಸತಿ ಅಭಿವೃದ್ಧಿ ಹಣಕಾಸು ನಿಗಮದ ಮೂಲಕ ಒದಗಿಸುತ್ತದೆ. ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗಳಿಗೆ ಸಾಲ ಸೌಲಭ್ಯವನ್ನು ವಾರ್ಷಿಕ ಆದಾಯ ರೂಪಾಯಿ ೧೫೦೦೦ ಇರುವವರಿಗೆ ಗೃಹನಿರ್ಮಾಣಕ್ಕೆ ಸಾಲವನ್ನು ಒದಗಿಸುತ್ತದೆ. ಈ ಸೌಲಭ್ಯವನ್ನು ವಾರ್ಷಿಕ ಆದಾಯ ರೂಪಾಯಿ ೬೦,೦೦೦ ಇರುವವರಿಗೂ ವಿಸ್ತರಿಸುವುದೊಳಗೆ ನಗರಗಳ ವಸತಿ ಯೋಜನೆಗಾಗಿ ಹುಡ್ಕೋ ವತಿಯಿಂದ ಅನೇಕ ಯೋಜನೆಗಳನ್ನು ರೂಪಿಸಿ ಮಾರ್ಪಾಡುಗೊಳಿಸಲಾಗಿದೆ.

ಈ ಹಿಂದೆ ತಿಳಿಸಿದ ಕೋಷ್ಟಕದ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ, ಕೊಳಚೆ ಪ್ರದೇಶದ ನಿವಾಸಿಗಳ ವಸತಿ ಕ್ರಮೇಣ ಅಸಮರ್ಪಕವಾಗಿ ಹಂಚಿಕೆಯಾಗಿದೆ. ಕೆಲವೊಂದು ಭಾಗಗಳಲ್ಲಿ ಹುಡ್ಕೋ ವಾಂಬೆಯಂತಹ ಆಶ್ರಯದ ಮನೆಗಳು ಬೆರಳೆಣಿಕೆಯಾಗಿವೆ. ಇನ್ನಿತರೆ ಶೌಚಾಲಯ ಸೌಲಭ್ಯಗಳನ್ನು ಕೆಲವು ಪ್ರದೇಶಗಳಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ಈ ಸೌಲಭ್ಯಗಳಿಂದ ವಂಚಿತವಾಗಿರುವ ಕೊಳಗೇರಿಗಳು ಗೋಚರಿಸುತ್ತದೆ. ಈ ಕೊಳಚೆ ನಿರ್ಮೂಲನಾ ಮಂಡಳಿಯು ಸ್ಥಾಪನೆಯಾಗಿನಿಂದಲೂ ಈ ಮೇಲಿನ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇನ್ನು ಅನೇಕ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಯಾವುದೇ ಮೂಲಭೂತ ಸೌಕರ್ಯ ಒದಗಿಸಿರುವುದಿಲ್ಲ. ಅವುಗಳೆಂದರೆ ಜಾಗೃತಿನಗರ ಕೋಟೆಪ್ರದೇಶ, ಬಂಡಿಮಟ್ಟಿ ರಸ್ತೆ, ಬಾಪೂಜಿನಗರ, ಕೌಲ್‌ಬಜಾರ್,

ವಿಶಾಲನ ಪ್ರದೇಶಗಳಲ್ಲಿ ಯಾವುದೇ ರೀತಿಯ ಸೌಲಭ್ಯ ಒದಗಿಸಿಲ್ಲ. ಈ ಪ್ರದೇಶಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಈ ಮಂಡಳಿಯು ಆಮೆಗತಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಈ ರೀತಿ ಕೆಲಸವನ್ನು ನಿರ್ವಹಿಸಿದರೆ ಇನ್ನು ಮುಂದಿನ ೫೦ ವರ್ಷಗಳವರೆಗೆ ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಕಾರ್ಯ ನಿರತವಾಗಿರುವುದರಲ್ಲಿ ಅನುಕೂಲವಾಗುತ್ತದೆ. ಇದು ಕೇವಲ ಘೋಷಣೆಯಾದಂತಹ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಿದ್ದನ್ನು ಕಾಬಹುದಾಗಿದೆ. ಘೋಷಣೆಯಾದ ಪ್ರದೇಶಗಳ ಸ್ಥಿತಿಯೇ ಹೀಗಾದರೆ ಇನ್ನು ಅಘೋಷಿತ ಕೊಳಚೆ ಪ್ರದೇಶಗಳನ್ನು ಸ್ಥಿತಿ ಊಹಿಸುವುದು ಕಷ್ಟಸಾಧ್ಯ. ಕೊಳಚೆ ನಿರ್ಮೂಲನಾ ಮಂಡಳಿಯ ಗುರುತಿಸಿದ ಕೊಳಚೆ ಪ್ರದೇಶಗಳಲ್ಲಿ ಸರಿಯಾದ ಮುಲಭೂತ ಸೌಲಭ್ಯಗಳನ್ನು ಒದಗಿಸಲು ವಿಫಲವಾಗುತ್ತದೆ. ಇನ್ನು ಅಘೋಷಿತ ಪ್ರದೇಶಗಳಲ್ಲಿ ಕಡೆಗೆ ಮಂಡಳಿ ಗಮನಹರಿಸುತ್ತದೆಯೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ(ಐ.ಹೆಚ್.ಎಸ್.ಡಿ.ಪಿ)

ಕೇಂದ್ರ ಸರ್ಕಾರದ ಹಿಂದಿನ ಯೋಜನೆಗಳಾದ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ, ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ಒಗ್ಗೂಡಿಸಿ ಕೊಳಚೆ ನಿವಾಸಿಗಳಿಗೆ ಸಮಗ್ರವಾಗಿ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ಕೊಳಚೆ ನಿವಾಸಿಗಳ ಶೋಚನೀಯ ಸ್ಥಿತಿಗತಿಗಳನ್ನು ನಿವಾರಿಸಲು ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

ಈ ಯೋಜನೆಯು ೨೦೦೧ರ ಜನಗಣತಿಯನ್ವಯ ಎಲ್ಲಾ ನಗರ ಪಟ್ಟಣಗಳಿಗೆ ಅನ್ವಯವಾಗುವುದಿಲ್ಲ. ಜವಹರ್‌ಲಾಲ್‌ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆಯ ನಗರಗಳನ್ನು ಹೊರತುಪಡಿಸಿದ ನಗರಗಳಿಗೆ ಈ ಯೋಜನೆ ಅನ್ವಯವಾಗುತ್ತದೆ. ಈ ಯೋಜನೆಯು ಖಾಸಗಿ/ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಿ ನಗರದಲ್ಲಿನ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅನುವು ಮಾಡಿಕೊಟ್ಟಿದೆ.

ನಗರ ಯೋಜನೆಯ ಧ್ಯೇಯಗಳು

ನಗರ ಪ್ರದೇಶಗಳಲ್ಲಿನ ಕೊಳಚೆ ನಿವಾಸಿಗಳು ಯೋಗ್ಯಕರವಾದ ಮತ್ತು ಪರಿಸರದಲ್ಲಿ ಜೀವನವನ್ನು ನಡೆಸಲು ಇವರಿಗೆ ಅಗತ್ಯ ವಸತಿ ಮತ್ತು ಮೂಲಭೂತ ಸೌಲಭ್ಯವನ್ನು ಒದಗಿಸುವುದು ಹಾಗೂ ಈ ಯೋಜನೆಯಡಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ವಿಮುಕ್ತಿಗೊಳಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಮಂಡಳಿಗೆ ಮೊದಲನೇ ಹಂತದಲ್ಲಿ ೨೫ ನಗರ/ಪಟ್ಟಣಗಳ ಯೋಜನಾ ವರದಿಗಳೇ ಕೇಂದ್ರ ಮಂಜೂರಾತಿ ಸಮಿತಿಯು ಅನುಮೋದನೆ

ನೀಡಿದೆ. ಇದರಲ್ಲಿ ೧೩೦೫೩ ಮನೆಗಳ ನಿರ್ಮಾಣಕ್ಕೆ ಅಂದಾಜು ಮೊತ್ತ ರೂ ೨೭೭ ೯೦ ಕೋಟಿ ಮಂಜೂರಾಗಿದ್ದು ಕೇಂದ್ರ ಸರ್ಕಾರದ ಪಾಲು ಶೇ ೮೦ ಮತ್ತು ರಾಜ್ಯ ಸರ್ಕಾರದ ಪಾಲು ಶೇ ೨೦ ರಷ್ಟಾಗಿರುತ್ತದೆ.

ಈ ಯೋಜನೆಯ ಅಡಿಯಲ್ಲಿ ನಿರ್ವಹಿಸಲ್ಪಟ್ಟ ಕಾರ್ಯಕ್ರಮಗಳ ವಿವರ

ಕೊಳವೆ, ಬಾವಿ, ಕೈಪಂಪ್, ಹಾಗೂ ನಲ್ಲಿಯ ಮೂಲಕ ನೀರು ಸರಬರಾಜು ವ್ಯವಸ್ಥೆಯನ್ನು ಮಾಡುವುದು.

ಕೊಳಚೆ ಪ್ರದೇಶದ ನಿವಾಸಿಗಳಿಗೆ ಲಭ್ಯವಿರುವ ಅಭಿವೃದ್ಧಿ ಕಾರ್ಯಕ್ರಮಗಳು

* ಜಲ್ಲಿ ಕಲ್ಲಿನಿಂದ ಕೂಡಿದ ಕಚ್ಚಾ ರಸ್ತೆಗಳ ನಿರ್ಮಾಣ ಮಾಡುವುದು
* ಅಗತ್ಯವಿರುವ ಕಡೆ "ಐ"ಆಕಾರದ ಚರಂಡಿ ವ್ಯವಸ್ಥೆಗೊಳಿಸುವುದು.
* ಅಗತ್ಯವಿರುವಲ್ಲಿ ಸಮುದಾಯ ಸ್ಥಾನದ ಮನೆ ಶೌಚಾಲಯಗಳನ್ನು ನಿರ್ಮಿಹಿಸುವುದು.
* ಬೀದಿ ದೀಪಗಳನ್ನು ಅಳವಡಿಸುವುದು.
* ಕಸದ ತೊಟ್ಟಿಗಳನ್ನು ನಿರ್ಮಿಸುವುದು.

ಕೊಳಚೆ ಪ್ರದೇಶ ನೈರ್ಮಲ್ಯತೆಯನ್ನು ಕಾಪಾಡುವ ಸಲುವಾಗಿ ಉತ್ತಮೀಕರಣ ಯೋಜನೆ ಎಂಬ ಶೀರ್ಷಿಕೆ ಹೊತ್ತ ಈ ಯೋಜನೆ ಅಡಿಯಲ್ಲಿನ ಕಾರ್ಯಕ್ರಮಗಳಿಂದಾಗಿ ನಗರ ಕೊಳಚೆಪ್ರದೇಶಗಳು ಉತ್ತಮೀಕರಣ ಗೊಂಡಿರುವುದು ಸ್ಪಷ್ಟವಾಗಿದೆ.

ನಗರ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ

Development of women and Children

ಈ ಕಾರ್ಯಕ್ರಮವನ್ನು ಗುಂಪುಗೂಡಿ, ಜಂಟಿಯಾಗಿ ಸ್ವಂತ ಉದ್ಯಮಗಳನ್ನು ಸ್ಥಾಪಿಸಲಿಟ್ಟಿರುವ ನಗರ ಬಡ ಮಹಿಳೆಯರ ಸಮೂಹಗಳಿಗಾಗಿ ರೂಪಿಸಲಾಗಿದೆ. ನಗರದ ಬಡ ಮಹಿಳೆಯರ ಗುಂಪುಗಳು ಈ ಯೋಜನೆಯಡಿಯಲ್ಲಿ ತಮ್ಮ ಕೌಶಲ್ಯ ಅನುಭವವನ್ನು ಹೊಂದಿವೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಸುಧಾರಣೆ ಕಾರ್ಯಕ್ರಮ ಕೊಳಚೆ ಪ್ರದೇಶದ ಪರಿಸರ ಸುಧಾರಣಾ ಮತ್ತು ಅಭಿವೃದ್ಧಿ ಪಡಿಸಲು ಹಾಗೂ ಕೊಳಚೆ ನಿವಾಸಿಗಳು ಉತ್ತಮ ವಾತಾವರಣದಲ್ಲಿ ನೆಲೆಸುವಂತೆ ಸಮಸ್ಯೆಗಳು ಮಾಡಲು ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಸಾರ್ವಜನಿಕ ಶೌಚಾಲಯಗಳು ಮತ್ತು ಬೀದಿ ದೀಪಗಳು ಮುಂತಾದವುಗಳನ್ನು ನಿರ್ಮಾಣ ಮಾಡುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಂಡಳಿಯು ರಾಜ್ಯದಲ್ಲಿ ೨೭೨೨ ಕೊಳಚೆ

ಪ್ರದೇಶಗಳನ್ನು ಗುರುತಿಸಿದ್ದು ಈ ಕೊಳಚೆ ಪ್ರದೇಶಗಳಲ್ಲಿ ೬.೧೮ ಲಕ್ಷ ಕುಟುಂಬಗಳು ವಾಸಿಸುತ್ತಿದ್ದು ಸುಮಾರು ೪೦-೫೦ ಲಕ್ಷಜನಸಂಖ್ಯೆ ಇರುತ್ತದೆ.

ಮಂಡಳಿಯು ಕೇಂದ್ರ ಪುರಸ್ಕೃತ ಯೋಜನೆಗಳಾದ ನಗರ ಬಡಜನರ ಮೂಲಭೂತ ಸೌಕರ್ಯ ಯೋಜನೆಯನ್ನು ನಗರಗಳಲ್ಲಿ ಕೊಳಚೆ ನಿವಾಸಿಗಳಿಗಾಗಿ ಮನೆಗಳನ್ನು ನಿರ್ಮಿಸಲು ರೂಪಿಸಿದೆ ಮತ್ತು ಸಮಗ್ರವಸತಿ ಮತ್ತು ಕೊಳಚೆಪ್ರದೇಶದ ಅಭಿವೃದ್ಧಿ ಯೋಜನೆಯನ್ನು ಕೊಳಚೆ ನಿವಾಸಿಗಳಿಗೆ ಉತ್ತಮ ಪರಿಸರದಲ್ಲಿ ಜೀವನವನ್ನು ಸಾಗಿಸಲು ಮನೆಗಳನ್ನು ನಿರ್ಮಾಣ ಮಾಡುವ ಉದ್ದೇಶ ಹೊಂದಿದೆ. ಕೊಳಚೆ ಪ್ರದೇಶಗಳ ಸಮಗ್ರ ಸುಧಾರಣೆ ಯೋಜನೆ ಜವಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ, ನಗರ ಬಡ ಜನರ ಮೂಲಭೂತ ಸೌಕರ್ಯಯೋಜನೆ ಮತ್ತು ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಿಸುತ್ತದೆ. ಕೊಳಚೆ ನಿವಾಸಿಗಳ ಕ್ಷೇಮಾಭಿವೃದ್ಧಿಯನ್ನು ಈ ಯೋಜನೆ ೨೦೦೭-೦೮ನೇ ಹಂತದಲ್ಲಿ ರಾಜ್ಯದ ೨೧ ಪ್ರಥಮ ದರ್ಜೆ ನಗರಗಳಲ್ಲಿ ೨೬೫ ಕೊಳಚೆ ಪ್ರದೇಶಗಳನ್ನು ಆಯ್ಕೆಮಾಡಿ ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯನ್ನು ಡಿಸೆಂಬರ್ ೨೦೦೫ರಲ್ಲಿ ನಗರ ಬಡಜನರ ಮೂಲಭೂತ ಸೌಕರ್ಯ ಯೋಜನೆಯನ್ನು ಅನುಷ್ಠಾನಗೊಳಿಸುವ ನಗರಗಳಾದ ಬೆಂಗಳೂರು ಮೈಸೂರು/ಬಳ್ಳಾರಿ/ನಗರಗಳನ್ನು ಹೊರಪಡಿಸಲು ಉಳಿದ ನಗರ/ ಪಟ್ಟಣಗಳಲ್ಲಿ ಮನೆ ನಿರ್ಮಾಣ ಮಾಡಲು ಮತ್ತು ಕೊಳಚೆಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಯೋಜನೆಯು ಹಿಂದಿನ ಯೋಜನೆಗಳಾದ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ, ರಾಷ್ಟ್ರೀಯ ಕೊಳಚೆ ಪ್ರದೇಶ ರಾಷ್ಟ್ರೀಯ ಕೊಳಚೆ ಪ್ರದೇಶ ಮತ್ತು ಅಭಿವೃದ್ಧಿ ಯೋಜನೆಗಳನ್ನು ಒಗ್ಗೂಡಿಸಿ ಕೊಳಚೆ ನಿವಾಸಿಗಳಿಗೆ ಸಮಗ್ರವಾಗಿ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕೊಳಚೆ ನಿವಾಸಿಗಳ ಶೋಚನೀಯ ಸ್ಥಿತಿಗಳನ್ನು ನಿವಾರಿಸಲು ಈ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಈ ಅನುದಾನದಲ್ಲಿ ಕೇಂದ್ರಪಾಲು ಶೇ ೮೦% ರಷ್ಟು ಹಾಗೂ ಶೇ ೨೦%ರಷ್ಟು ರಾಜ್ಯಪಾಲಾಗಿರುತ್ತದೆ. ರಾಜ್ಯಸರ್ಕಾರದ ವಂತಿಕೆಯಲ್ಲಿ ಫಲಾನುಭವಿಗಳು ಶೇ ೧೦ ರಷ್ಟು ವಂತಿಕೆ ಪಾವತಿಸಬೇಕಾಗಿರುತ್ತದೆ. ಈ ಯೊಜನೆಯಡಿ ಇಲ್ಲಿಯವರೆಗೂ (ನವೆಂಬರ್ ೨೦೧೨ ಅಂತ್ಯಕ್ಕೆ) ಸುಮಾರು ೧೫.೩೧೨ ಮನೆಗಳ ನಿರ್ಮಾಣವಾಗಿರುತ್ತದೆ.

ರಾಷ್ಟ್ರವನ್ನು ಕೊಳಚೆ ಪ್ರದೇಶ ಮುಕ್ತದೇಶವನ್ನಾಗಿ ಮಾಡಲು ಇಂದಿರಾ ಆವಾಸ್ ಯೋಜನೆ ಮಾದರಿಯಲ್ಲಿ ನಗರ ಪ್ರದೇಶಗಳ ಕೊಳಚೆ ನಿವಾಸಿಗಳಿಗೆ ವಸತಿ ಮತ್ತು ಮೂಲಭೂತ ಸೌಕರ್ಯ ಒದಗಿಸಲು ರಾಜೀವ್ ಆವಾಸ್ ಯೋಜನೆ ಎಂಬ ಹೊಸ ಯೋಜನೆಯನ್ನು ಘೋಷಿತವಾಗಿದೆ. ಈ ಯೋಜನೆಯಡಿ ರಾಜ್ಯವನ್ನು ಆಯ್ಕೆಯೋಜನೆಯಡಿ ೨೫ ಚದರ

ಮೀಟರ್ ಕಾರ್ಪೆಟ್ ವಿಸ್ತೀರ್ಣವನ್ನೊಳಗೊಂಡ ವಸತಿ ಗೃಹವನ್ನು ಕೊಳಚೆ ಪ್ರದೇಶದ ಎಲ್ಲಾ ಕುಟುಂಬಗಳಿಗೆ ಅವಶ್ಯಕ ಮೂಲಭೂತ ಸೌಕರ್ಯಗಳೊಂದಿಗೆ ಒದಗಿಸಬೇಕಾಗುತ್ತದೆ. ಈ ಯೋಜನೆಯಡಿ ಪ್ರತಿಶತ ೫೦ರಷ್ಟು ಅನುದಾನವು ಕೇಂದ್ರ ಸರ್ಕಾರದಿಂದ ಒದಗಿಬಂದು ಬಾಕಿ ಪ್ರತಿಶತ ೫೦ರಷ್ಟು ರಾಜ್ಯಪಾಲಿನ ಅನುದಾನದ ಪೈಕಿ ಪ್ರತಿಶತ ೪೦ರಷ್ಟು ರಾಜ್ಯ ಸರ್ಕಾರವು ಹಾಗೂ ಪ್ರತಿಶತ ೧೦ರಷ್ಟು ಫಲಾನುಭವಿಗಳ ಮೂಲಕ ಭರಿಸಲಾಗುವುದು. ಯೋಜನೆಯ ಮೊದಲನೇ ಹಂತದಲ್ಲಿ ೧೦ನಗರ ಪಟ್ಟಣ ಪ್ರದೇಶಗಳನ್ನು ಆವೃತಗೊಳಿಸಲಾಗಿದೆ. ವಿವರವಾದ ಪ್ರಾಜೆಕ್ಟ್ ವರದಿಯೊಂದನ್ನು ತಯಾರಿಸಲಾಗಿ ಈ ಯೋಜನೆ ನಿರ್ವಹಣಾ ಜವಬ್ದಾರಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿಮಂಡಳಿ ವಹಿಸಿಕೊಂಡಿದೆ.

೫.೩ ಕೊಳಚೆ ಪ್ರದೇಶಗಳ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳು

[National Slum Development Programe NSDP]

ನಗರಗಳ ತ್ವರಿತಗತಿಯ ಬೆಳವಣಿಗೆಯ ಜೊತೆ ಜೊತೆಗೆ ಭಾರಿಸಂಖ್ಯೆಯ ಜನರು ನಗರಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸತೊಡಗಿರುವುದರಿಂದ ನಗರಗಳು ಎದುರಿಸುತ್ತಿರುವ ಸಮಸ್ಯೆಗಳು ಹಲವು. ಈ ಕೊಳಚೆ ಪ್ರದೇಶಗಳ ಬಗ್ಗೆ ಸ್ವಾತಂತ್ರ್ಯ ನಂತರದ ೨೦-೨೫ ವರ್ಷಗಳವರೆಗೆ ಯಾವುದೇ ವಿಶೇಷ ಗಮನ ಹರಿಸಲಾಗದೇ ಇದ್ದರೂ ೧೯೯೬ರಲ್ಲಿ ಕೋಳಚೆ ಪ್ರದೇಶಗಳ ರಾಷ್ಟ್ರೀಯ ಅಭಿವೃದ್ಧಿಗೆ ರಾಜ್ಯಸರ್ಕಾರಗಳಿಗೆ ಕೇಂದ್ರಿಯ ನೆರವನ್ನು ನೀಡುವ ನೀತಿಯನ್ನು ಘೋಷಿಸಲಾಯಿತು. ಸಮುದಾಯ ಸ್ನಾನಗೃಹ ಸ್ಥಾಪನೆ ಮುಂತಾದ ಚಟುವಟಿಕೆಗಳಿಂದ ಕೇಂದ್ರದ ನೆರವನ್ನು ಬಳಸಿಕೊಳ್ಳಬಹುದಾಗಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಏಪ್ರಿಲ್ ೨೦೦೪ವರೆಗೆ ಸುಮಾರು ೨೪೭೫ ಕೋಟಿ ನೆರವನ್ನು ಬಿಡುಗಡೆ ಮಾಡಿತ್ತು. ಇದರಲ್ಲಿ ೧೭೭೯ ಕೊಳಗೇರಿ ಕೋಟಿ ರೂ ಗಳನ್ನು ಮಾತ್ರ ಖರ್ಚು ಮಾಡಲಾಯಿತು. ೩.೭ ಕೋಟಿ ಕೊಳಚೆ ಪ್ರದೇಶ ನಿವಾಸಿಗಳು ಅದರ ಪ್ರಯೋಜನ ಪಡೆಯುವುದು ಸಾಧ್ಯವಾಯಿತು.

ಕೊಳಚೆ ಪ್ರದೇಶ ಪರಿಸರ ಸುಧಾರಣೆಗಾಗಿ ಕೇಂದ್ರ ಸಮಿತಿ ೧೯೭೨ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ಶುದ್ಧವಾದ ಕುಡಿಯುವ ನೀರು, ವಿದ್ಯುತ್, ಪೂರೈಕೆ, ಬೀದಿ ದೀಪ ವ್ಯವಸ್ಥೆ ಶೌಚಾಲಯ ಸೌಲಭ್ಯ, ಸ್ನಾನಗೃಹ ಹಾಗೂ ಚರಂಡಿ ವ್ಯವಸ್ಥೆ, ಬೀದಿಗಳ ವಿಸ್ತರಣೆ ಯೋಜನೆಯನ್ನು ೮.ಲಕ್ಷಕ್ಕೂ ಅಧಿಕ ಜನಸಂಖ್ಯೆ ನಗರಗಳ ಕೊಳಚೆ ಪ್ರದೇಶಗಳ ಪರಿಸರ ಸುಧಾರಣೆಯ ದೃಷ್ಟಿಯಿಂದ ಕೈಗೆತ್ತಿಕೊಳ್ಳುವುದೆಂದು ನಿಶ್ಚಯಿಸಲಾಯಿತು. ೧೯೭೪ರಲ್ಲಿ ರಾಜ್ಯ ಸರ್ಕಾರಗಳು ಈ ಯೋಜನೆಗಳು ಕನಿಷ್ಠ ಅವಶ್ಯಕತೆ ಕಾರ್ಯಕ್ರಮವಾಗಿ Minimum Needs Programs in nip] ಮುಂದುವರಿಸಿಕೊಂಡು ಹೋಗಬೇಕೆಂದು ಈ ಸಂಬಂಧಿಕವಾದ ಪೂರ್ಣ ಮಾಡಿಸಿದರು.

ಕೊಳಚೆ ಪ್ರದೇಶ ಪರಿಸರ ಸುಧಾರಣೆಗಾಗಿ ಕೇಂದ್ರೀಯ ಯೋಜನೆ ೧೯೭೨]Central Schemeal For Environment IMPORMENT IN Slum in Area]

ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ

ಈ ಕಾರ್ಯಕ್ರಮದಂತೆ ದೀಪ ವ್ಯವಸ್ಥೆ, ಶುದ್ಧವಾದ ಕುಡಿಯುವ ನೀರು, ವಿದ್ಯುತ್ ಪೂರೈಕೆ, ಬೀದಿದೀಪ ವ್ಯವಸ್ಥೆ, ಶೌಚಾಲಯ ಸೌಲಭ್ಯ, ಸ್ನಾನಗೃಹ ಹಾಗೂ ಚರಂಡಿ ವ್ಯವಸ್ಥೆ ಬೀದಿಗಳ ವಿಸ್ತರಣೆ ಹಾಗೂ ಶುದ್ಧೀಕರಣ ಮುಂತಾದ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ೮ ಲಕ್ಷಕ್ಕೂ ಅಧಿಕ ಸಂಖ್ಯೆಯುಳ್ಳ ನಗರಗಳ ಕೊಳಚೆ ಪ್ರದೇಶಗಳು ಪರಿಸರ ಈ ಯೋಜನೆಯನ್ನು ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮವಾಗಿ ಮುಂದುವರೆಸಿಕೊಂಡಿದೆ. ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮ ಮುಂದುವರೆಸಿಕೊಂಡು ಹೋಗಬೇಕೆಂದು ಈ ಸಂಬಂಧವಾದ ಪೂರ್ಣ ಅಧಿಕ ಸಹಾಯವನ್ನು ಕೇಂದ್ರ ಸರ್ಕಾರವು ನೀಡುವುದೆಂದು ನಿರ್ಧರಿಸಲಾಯಿತು.

೧೪೦ ಲಕ್ಷ ಹೊಸ ಮನೆಗಳ ಸ್ಥಾಪನೆಗಾಗಿ ರಾಜ್ಯಗಳಿಗೆ ಕೇಂದ್ರದ ನೆರವು:

ನಗರಗಳಲ್ಲಿನ ಬಡಜನರಿಗಾಗಿ ಹಾಗೂ ಕಡಿಮೆ ಆದಾಯದವರೊಂದಿಗೆ ಹೊಸಮನೆಗಳನ್ನು ಕಟ್ಟಲು ಮನೆಯೆಂದರೆ ರೂ ೫,೦೦೦ ದಂತೆ ಸಹಾಯವನ್ನು ನೀಡುವ ಆಶ್ವಾಸನೆಯೊಂದಿಗೆ ೧೪೦ ಲಕ್ಷ ಮನೆಗಳ ಅನುಷ್ಠಾನದ ಹೊಣೆಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಿತು. ರಾಜ್ಯ ಸರ್ಕಾರಗಳು ಮತ್ತು ನಗರಗಳ ಸ್ಥಳೀಯಾಡಳಿತ ಮಂಡಳಿಗಳು ಈ ಸಹಾಯಧನದ ಜೊತೆಗೆ ತಮ್ಮ ಶಕ್ತಾನುಸಾರ ಸಮೂಹಗಳಿಗೆ ಮನೆಗಳನ್ನು ಕಟ್ಟಲು ಸಾಲ ಸೌಲಭ್ಯ ಈ ಯೋಜನೆ ಈ ಸಂಬಂಧವಂತೆ ಹುಡ್ಕೋ ಸಂಸ್ಥೆ ಅಥವಾ ಗೃಹ ಹಾಗೂ ನಗರಾಭಿವೃದ್ಧಿ ನಿಗಮದಿಂದ ಬಂದಂತಹ ಲಾಭವನ್ನು ನಗರದ ಬಡಜನರಿಗಾಗಿ ಮನೆಗಳ ಕಟ್ಟಡ ಕಾರ್ಯಕ್ಕಾಗಿ ನಡೆಸಿದೆ.

ರಾಷ್ಟ್ರೀಯ ಗೃಹ ಬ್ಯಾಂಕಿನ ಸ್ಥಾಪನೆ ೭ನೇ ಯೋಜನೆಯ ವಿಶ್ಲೇಷತೆ ಕೊಳಚೆ ಪ್ರದೇಶಗಳ ನಿರ್ಮೂಲನ ಸುರಕ್ಷಣಾ ಯೊಜನೆಯು ಅನುಷ್ಠಾನದಲ್ಲಿ ಕೇಂದ್ರ ಸರ್ಕಾರವು ನೀಡಿದ ೧೦೦ ಕೋಟಿ ರೂ ಗಳ ನೆರವಿನೊಂದಿಗೆ ರಾಷ್ಟ್ರೀಯ ಕೊಳಚೆ ಗೃಹ ಬ್ಯಾಂಕ್‌ವೊಂದರ [National Housing bank N.H.B] ರಚನೆಯಾಯಿತು. ತನ್ನ ಉದ್ದೇಶ ಪೂರೈಕೆ ಮತ್ತು ಕೊಳಚೆ ಪ್ರದೇಶಗಳ ಜನರಿಗೆ ಹಾಗೂ ನಗರದ ಬಡವರಿಗೆ ಹೆಚ್ಚು ಉಪಯೋಗವಾಗುವಂತೆ ಬದ್ದತೆಯು ಈ ಸಂಸ್ಥೆಯು ಹೊಂದಿರುವುದು ನೋಡಬಹುದು.

ಪಂಚವಾರ್ಷಿಕ ಯೋಜನೆಯಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ

ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ೭೮೦– ಮಿಲಿಯನ್ ದಶಲಕ್ಷ ರೂಪಾಯಿಗಳನ್ನು ೧.೨೦೦,೦೦೦ ಮನೆಗಳ ನಿರ್ಮಾಣಕ್ಕೆ ಕಾದಿರಿಸಲಾಯಿತು. ಆಗಲೂ ಈ ಕೊಳಚೆ ಪ್ರದೇಶಗಳಲ್ಲಿ ಸರ್ಕಾರದ ಈ ಯೋಜನೆ ಸಮರ್ಪಕವಾಗಿ ಕಾರ್ಯಗತವಾಗಲಿಲ್ಲ.

ಎರಡನೆಯ ಪಂಚವಾರ್ಷಿಕ ಯೋಜನೆಯ ವೇಳೆಗೆ ಸರ್ಕಾರ ತನ್ನ ದೀರ್ಘ ಮಂದಗತಿಯಿಂದ ಎಚ್ಚೆತ್ತು ಕೊಳಚೆ ಪ್ರದೇಶಗಳು ನಿರ್ಮೂಲನಕ್ಕಾಗಿ ೨೦೦ ಮಿಲಿಯನ್

ರೂಪಾಯಿಗಳನ್ನು ಕಾದಿರಿಸಿ ಅದರಿಂದ ೧,೧೦೦೦ ಮನೆಗಳನ್ನು ಕಟ್ಟುವ ಯೋಜನೆ ಹಾಕಿತು.

ಮೂರನೆಯ ಯೋಜನೆಯಲ್ಲಿ ಇದನ್ನು ಸ್ವಲ್ಪ ಮಟ್ಟಿಗೆ ತಿದ್ದುಪಡಿಗೊಳಿಸಲು ಕೊಳಚೆ ಪ್ರದೇಶದ ನಿರ್ಮೂಲನಾ ಹಾಗೂ ೮೦೦ ಮಿಲಿಯನ್ ರೂಪಾಯಿಗಳನ್ನು ಭಾರತ ಸರ್ಕಾರ ಮಂಜೂರು ಮಾಡಿತು. ಕೊಳಚೆ ಪ್ರದೇಶಗಳ ನಿರ್ಮೂಲನದ ಕಾರ್ಯಕ್ರಮಕ್ಕಾಗಿ ಬಾಂಬೆ ಕಲ್ಕತ್ತಾ, ಮದ್ರಾಸ್, ಡೆಲ್ಲಿ, ಕಾನ್ಪುರ, ಅಹಮದಾಬಾದ್ ಪಟ್ಟಣಗಳನ್ನು ಆರಿಸಿಕೊಂಡಿತು. ಈ ಯೋಜನೆಯ ಪ್ರಕಾರ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಧನ ಸಹಾಯ ಮಾಡುವುದೆಂದರೆ ಹಣವನ್ನು ರಾಜ್ಯ ಸರ್ಕಾರಗಳು ಸ್ಥಳೀಯ ಸಂಸ್ಥೆ ಹಾಗೂ ನಗರಗಳಿಗೆ ಸಭೆಯನ್ನು ಮಾಡಿ ಕಾರ್ಯಗತಗೊಳಿಸುವಂತೆ ಯೋಜಿಸಲಾಯಿತು. ಕೊಳಚೆ ಪ್ರದೇಶದ ಜನಗಳ ಪುನರ್ವಸತಿಗಾಗಿ ಧನಸಹಾಯ ನೀಡಬೇಕೆಂದು ನಿಗದಿ ಮಾಡಲಾಯಿತು.

ಪಂಡಿತ್ ನೆಹರೂರವರು ಪ್ರಕಾರ "ಜನಗಳಲ್ಲಿ ಜಾಗೃತಿ ಮೂಡಬೇಕಾದರೆ ಮೊದಲು ಸ್ತ್ರೀಯನ್ನು ಜಾಗೃತಿಗೊಳಿಸಿರಿ ಒಮ್ಮೆ ಅವಳು ಜಾಗೃತಳಾದರೆಂದರೆ ಅವಳಿಗೆ ತನ್ನ ಪರಿಸರ ಅನಂತರ ವಾರ್ಡ್, ಹಳ್ಳಿ, ನಗರ ಜಾಗೃತಿ ಆಗುತ್ತದೆ" ಎಂದಿದ್ದಾರೆ.

೧ Sudp Slum upgradation Development Programme

ಈ ಕಾರ್ಯಕ್ರಮದಡಿಯಲ್ಲಿ ಕೊಳಚೆಪ್ರದೇಶಗಳಗಳಲ್ಲಿ ರಸ್ತೆಯ ಸೌಲಭ್ಯಗಳನ್ನು ಮತ್ತು ಶೌಚಾಲಯಗಳಿಗೆ ಅನುಕೂಲವಾದ ಡ್ರೈನೇಜ್‌ಗಳ ಸೌಲಭ್ಯಗಳನ್ನು ಮಾಡಿಕೊಡಲಾಗುತ್ತದೆ.

೨ N.S.D.P National Slum Development Programme

ರಾಷ್ಟ್ರೀಯ ಕೊಳಚೆ ಅಭಿವೃದ್ಧಿ ಕಾರ್ಯಕ್ರಮಗಳು ಯೋಜನೆ ಕೊಳಚೆ ಪ್ರದೇಶವೆಂದು ಘೋಷಿಸಿರುವಂತಹ ಪ್ರದೇಶಗಳಿಗೆ ಅನುಕೂಲವಾಗಲು ಈಗ ಚಾಲ್ತಿಯಲ್ಲಿರುವಂತಹ ತಯಾರಿಸಲಾಗುತ್ತದೆ. ಮತ್ತು ಶೌಚಾಲಯಗಳಿಗಾಗಿ ಡ್ರೈನೇಜ್‌ಗಳನ್ನು ಕಟ್ಟಲಾಗುತ್ತದೆ.

೩ Vambay: Valmiki Ambedkar Avas yojana

ಯೋಜನೆಯಡಿಯಲ್ಲಿ ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗಾಗಿ ಸರಕಾರ ವಾಲ್ಮೀಕಿ ಅಂಬೇಡ್ಕರ್ ವಸತಿಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ೪೦,೦೦೦ ಮೊತ್ತದಿಂದ ಕೂಡಿದ್ದು ೨೦,೦೦೦ ಸಾವಿರ ಮೊತ್ತವನ್ನು ಕಟ್ಟುವುದಕ್ಕಿಂತ ಮುಂಚೆ ೧೦೦ ಮೊತ್ತವನ್ನು ಖಾಯಂ ಮಾಡಿಕೊಳ್ಳಲು ಕೂಡ ಆಗುತ್ತದೆ. ಉಳಿದ ೧೪-೦೦ ಮೊತ್ತವನ್ನು ಮನೆಯ ಮಾಲಿಕತ್ವವನ್ನು ರದ್ದುಗೊಳಿಸಲಾಗುತ್ತದೆ. ಈ ಪ್ರದೇಶದಲ್ಲಿ ವಾಸಿಸುವ ಜನರಿಗೆ ಅನುಕೂಲವಾಗಲು ಮಾಡಿಕೊಡಲಾಗಿದೆ. ಹೆಚ್ಚಿನ ಆದಾಯವನ್ನು ತರುವರಾಗಿದ್ದರೇ ಹೆಚ್ಚಿನ ಮಾಸಿಕ ಶುಲ್ಕವನ್ನು ಕಟ್ಟಬಹುದಾಗಿದೆ.

೭ನೇ ಪಂಚವಾರ್ಷಿಕ ಯೋಜನೆಗಳಲ್ಲಿ ೨೬೯.೫೫ ಕೋಟಿ ರೂಗಳ ಅಂದಾಜು ವೆಚ್ಚದಲ್ಲಿ ೬೦ (ವೆಚ್ಚ) ಲಕ್ಷ ಕೊಳಚೆ ಪ್ರದೇಶ ನಿವಾಸಿಗಳಿಗೆ ಈ ಯೋಜನೆಯ ಲಾಭ ಲಭ್ಯವಾಗುವಂತೆ ಮಾಡಲು ಉದ್ದೇಶಿಸಲಾಗಿದ್ದು, ಈ ಪಂಚವಾರ್ಷಿಕ ಯೋಜನೆಯು ಜಾರಿಗೆ ಬಂದ ಮೊದಲ ೩ ವರ್ಷಗಳಲ್ಲಿ ಸುಮಾರು ೫೭.೩ ಲಕ್ಷ ನಿವಾಸಿಗಳು ಇದರ ಲಾಭವನ್ನು ಪಡೆಯುವುದರಲ್ಲಿ ಸಫಲರಾಗಿದ್ದರು. ಈ ವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ಗೃಹಬ್ಯಾಂಕಿನ ಸ್ಥಾಪನೆಯಾಗಿ ಕೊಳಚೆಪ್ರದೇಶಗಳ ನಿರ್ಮೂಲನೆ ಸುಧಾರಣಾ ಯೊಜನೆಯ ಅನುಷ್ಠಾನದಲ್ಲಿ ಹಣದ ಅಭಾವವು ಎದ್ದು ಕಾಣಸಿದ್ದರಿಂದ ಈ ಬಗ್ಗೆ ವಿಶೇಷವಾದ ಗಮನ ಹರಿಸಲಾಯಿತು. ಅಂತೆಯೇ ಕೇಂದ್ರ ಸರ್ಕಾರವು ನೀಡಿದ ೧೦೦ ಕೋಟಿ ರೂಗಳ ನೆರವಿನೊಂದಿಗೆ ರಾಷ್ಟ್ರೀಯ ಬ್ಯಾಂಕ್‌ವೊಂದರ ರಚನೆಯಾಯಿತು. ಇದು ನಾಲ್ಕು ಮುಖ್ಯ ಉದ್ದೇಶಗಳನ್ನು ಒಳಗೊಂಡಿದೆ.

೧. ಮನೆಗಳ ನಿರ್ಮಾಣದ ಏಕಮಾತ್ರ ಉದ್ದೇಶಕ್ಕಾಗಿ ಆರ್ಥಿಕ ನೆರವು ಒದಗಿಸಲು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರಾಷ್ಟ್ರೀಯ ಸ್ತರದ ಸಂಸ್ಥೆಯೊಂದನ್ನು ರಚಿಸುವುದು.

೨. ಮನೆಗಳ ನಿರ್ಮಾಣದ ಉದ್ದೇಶಕ್ಕಾಗಿ ವಿಭಿನ್ನ ಮೂಲಗಳಿಂದ ಹೆಚ್ಚು-ಹೆಚ್ಚು ಹಣವನ್ನು ಒಟ್ಟುಗೂಡಿಸಿ ಅದರ ಪರಿಣಾಮಕಾರಿ ಬಳಕೆಯಾಗುವಂತೆ ನೋಡಿಕೊಳ್ಳುವುದು.

೩. ಮನೆಗಳ ನಿರ್ಮಾಣಕ್ಕಾಗಿ ಸಾಲವನ್ನು ಕೊಡಿಸುವುದಕ್ಕಾಗಿ ರಾಜ್ಯ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಆರ್ಥಿಕ ಸಂಸ್ಥೆಗಳು ಲಭ್ಯವಿರುವಂತೆ ಇಲ್ಲವೇ ಹೊಸದಾಗಿ ಸ್ಥಾಪನೆಯಾಗುವಂತೆ ನೋಡಿಕೊಳ್ಳುವುದು.

೪. ಮನೆಗಳ ನಿರ್ಮಾಣ ಕಾರ್ಯಕ್ಕಾಗಿ ಹಾಗೂ ಉದ್ದೇಶಗಳಿಗಾಗಿ ಸಾಲ ನೀಡುವ ಸಂಸ್ಥೆಗಳ ನಡುವೆ ಅರ್ಥಪೂರ್ಣವಾದ ಸಂಬಂಧವೇರ್ಪಡುವಂತೆ ನೋಡಿಕೊಳ್ಳುವುದು. ಈ ಸಂಸ್ಥೆಯು ನಗರದ ನಡುವೆ ಅರ್ಥಪೂರ್ಣವಾದ ಸಂಬಂಧವೇರ್ಪಡುವಂತೆ ನೋಡಿಕೊಳ್ಳುವುದು. ಈ ಸಂಸ್ಥೆಯು ನಗರದ ಕೊಳಚೆ ಪ್ರದೇಶಗಳ ಜನರಿಗೆ ಮತ್ತು ನಗರದ ಬಡ ಜನರಿಗೆ ಉಪಯುಕ್ತವಾಗುವಂತೆ ನೋಡಿಕೊಳ್ಳುವ ಉದ್ದೇಶವನ್ನು ಹೊಂದಿರುವುದು.

ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೊಂದು ಅತಿಮುಖ್ಯವಾದ ನಗರ ಕೊಳಗೇರಿಗಳ ಪರಿಸರ ಉತ್ತಮೀಕರಣ ಯೋಜನೆಯಾಗಿದೆ. ಈ ಯೋಜನೆಯನ್ನು ಏಪ್ರಿಲ್ ೧೯೭೪ರಲ್ಲಿ ಕೇಂದ್ರಸರ್ಕಾರವು ರಾಜ್ಯಸರ್ಕಾರಗಳಿಗೆ ಕನಿಷ್ಠ ಅವಶ್ಯಕತೆಯ ಕಾರ್ಯಕ್ರಮವಾಗಿ ಮುಂದುವರೆಸಿಕೊಂಡು ಹೋಗಬೇಕೆಂದು ತಿಳಿಸಿತು. ಈ ಯೋಜನೆಯನ್ನು ಕೊಳಚೆ ಪ್ರದೇಶಗಳಿಗೆ ಜನರಿಗೆ ಕನಿಷ್ಠ ಮೂಲಭೂತ ಸೌಲಭ್ಯ ಒದಗಿಸಿದ ಜೀವನ ಮಟ್ಟವನ್ನು ಉತ್ತಮಗೊಳಿಸುವ ಉದ್ದೇಶವನ್ನು ಹೊಂದಿದೆ. ಈ ಯೋಜನೆಯಲ್ಲಿ ಕೇಂದ್ರಸರ್ಕಾರವು ನಿರ್ಧರಿಸಿದ ಕನಿಷ್ಠ ಪ್ರಮಾಣದ ಸೌಲಭ್ಯಗಳು ಕುಡಿಯುವ ನೀರಿನ ಸರಬರಾಜು, ಮಳೆನೀರು, ಬಂದರೆ ಹರಿದು ಹೋಗುವಂತೆ ದೊಡ್ಡದೊಡ್ಡ ಚರಂಡಿಗಳ ನಿರ್ಮಾಣ ಚರಂಡಿಯ ಕೊಳಚೆ ನೀರು ಬಂದು

ಕಡೆ ನಿಲ್ಲದೆ ಹರಿದು ಹೋಗುವಂತೆ ತೆರೆದ ಚರಂಡಿಗಳು ನಿರ್ಮಾಣ ಅಗತ್ಯತೆಯ ಆಧಾರದ ಮೇಲೆ ಸಾಮೂಹಿಕ ಶೌಚಾಲಯಗಳ ನಿರ್ಮಾಣ, ಬೀದಿಗಳಿಗೆ ದೀಪದ ವ್ಯವಸ್ಥೆ ಕೊಳಗೇರಿಗಳ ರಸ್ತೆಗಳನ್ನು ಪಾದಚಾರಿಗಳಿಗೆ, ಸೈಕಲ್ ಸವಾರರಿಗೆ, ಕೈಗಾಡಿಗಳ ಸಂಚಾರಗಳಿಗೆ ಸುಗಮವಾಗಿ ಸಾಗುವಂತೆ ದುರಸ್ತಿ ಮಾಡುವುದು. ಸಮುದಾಯ ಅಥವಾ ಉತ್ಪಾದನಾ ಕೇಂದ್ರಗಳನ್ನು ಬಡವರಿಗೆ ಅನುಕೂಲವಾಗುವಂತೆ ನಿರ್ಮಿಸುವುದಕ್ಕೆ ಈ ಯೋಜನೆಯ ಅಡಿಯಲ್ಲಿ ಅವಕಾಶವಿದೆ. ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ತಲಾ ೮೦,೦೦೦ ರೂಪಾಯಿಗಳಂತೆ ಖರ್ಚು ಮಾಡುವ ಅವಕಾಶ ಈ ಯೋಜನೆಯಲ್ಲಿದೆ. ಕೇಂದ್ರಸರ್ಕಾರದಿಂದ ಶೇಕಡ ೭೫ರಷ್ಟು ರಾಜ್ಯ ಸರ್ಕಾರದಿಂದ ಶೇ ೨೫ರಷ್ಟು ಹಣವನ್ನು ಈ ಕೆಲಸಗಳಿಗೆ ತೊಡಗಿಸಲಾಗುತ್ತದೆ. ಇದರ ಅನುಷ್ಠಾನದ ಜವಾಬ್ದಾರಿಯನ್ನು ಕೊಳಚೆ ನಿರ್ಮೂಲನೆ ಮಂಡಳಿ, ನಗರಸಭೆ, ಪಾಲಿಕೆ, ಪುರಸಭೆಗಳು ಹಾಗೂ ಅಭಿವೃದ್ಧಿ ಪ್ರಾಧಿಕಾರಿಗಳಿಗೆ ವಹಿಸಲಾಗಿದೆ. ಆದರೆ ಈ ಯೋಜನೆ ಕಳೆದು ಹೋಗಿದೆ. ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆ ನಿರ್ಮಿಸಿದ ವಸತಿ ವಿನ್ಯಾಸಕ್ಕೆ ಹೊಂದಾಣಿಕೆಯಲ್ಲಿ ನಾಗರಿಕ ನಗರಗಳು ವಾಣಿಜ್ಯ ಸಂಕೀರ್ಣಗಳ ನಿರ್ಮಾಣದತ್ತ ಹೆಚ್ಚು ಒಲವು ಕೋರುತ್ತವೆ. ನಗರಗಳ ನೆಲದ ಸದ್ಬಳಕೆಯನ್ನು ಇದು ಗಮನ ಹರಿಸಲ್ಲ. ಜನಸಂದಣಿ ಕಡಿಮೆಗೊಳಿಸುವಲ್ಲಿ ಹುಡ್ಕೋ ಯೋಜನೆ ವಿಫಲವಾಗಿದೆ. ಯೋಜನೆಯನ್ನು ಆದ್ಯತೆಯ ಪ್ರಕಾರ ಲಭ್ಯವಿರುವ ಸಂಪನ್ಮೂಲಗಳ ಸದ್ಬಳಕೆಯತ್ತ ಹುಡ್ಕೋ ಗಮನಹರಿಸಬೇಕು. ಕೊಳಚೆ ನಿವಾಸಿಗಳ ಅತಿ ಬಡವರಿಗೆ ನಿರ್ಮಿಸಲಾದ ವಸತಿಗಳು ನಗರಗಳ ಅಂಚಿನಲ್ಲಿದ್ದು ವಾಸಿಸುತ್ತಿರುವ ನಾಗರಿಕರಿಗೆ ರಸ್ತೆ ಸಾರಿಗೆ ಸೌಲಭ್ಯ ನೀರು, ಸರಬರಾಜು,ಚರಂಡಿವ್ಯವಸ್ಥೆ, ನ್ಯಾಯಬೆಲೆ ಅಂಗಡಿಗಳು, ಶಾಲೆಗಳು, ಆಸ್ಪತ್ರೆಗಳು, ಮುಂತಾದ ನಾಗರಿಕ ಸೌಲಭ್ಯಗಳಿಲ್ಲ. ಅನೇಕ ವೇಳೆ ಹುಡ್ಕೋ ವಸತಿಗಳ ಬೆಲೆ ಹೆಚ್ಚಿದ್ದು ಬಡವರಿಗೆ ಕೈಗೆಟುಕದಾಗಿದೆ. ಆದಾಯಕ್ಕೂ ಹೆಚ್ಚಿನ ಮಿತಿಮೀರಿದ ವೆಚ್ಚದ ಮನೆಗಳಾಗಿವೆ. ನಿರ್ಮಾಣ ಕಾರ್ಯ ಪ್ರಾರಂಭಗೊಂಡಿದೆ. ಅಂದಾಜು ವೆಚ್ಚವು ನಿರ್ಮಾಣ ಕಾರ್ಯ ಮುಗಿಯುವ ವೇಳೆಗೆ ನಾಲ್ಕು ಪಟ್ಟು ಹೆಚ್ಚಿನ ಸಾಧಾರಣಾ ಕುಟುಂಬ ವರ್ಗದವರೆಗೆ ನಿಲುಕದಾಗಿವೆ.

ಆ. ಸ್ವರ್ಣ ಜಯಂತಿ ಶಹರಿ ರೋಜುಗಾರ್ ಯೋಜನೆ

ಕೇಂದ್ರ ಸರಕಾರ ಪ್ರಾಯೋಜಿಸಿರುವ ಈ ಯೋಜನೆಯನ್ನು ರಾಜ್ಯಸರಕಾರ ಸ್ಥಳೀಯ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತದೆ. ೧೯೯೭ ರಿಂದಲೂ ಈ ಯೋಜನೆ ಜಾರಿಯಲ್ಲಿದ್ದು ೧೧೬ ಸ್ಥಳೀಯ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳ್ಳುತ್ತದೆ. ಕೊಳಚೆನಿವಾಸಿಗಳು ಮತ್ತು ಬಡತನರೇಖೆಗಿಂತ ಕೆಳಗಿನ ಕುಟುಂಬಗಳು ಈ ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ ಈ ಯೋಜನೆಯಲ್ಲಿನ ವಿಶೇಷ ಕಾರ್ಯಕ್ರಮಗಳೆಂದರೆ.

೧. **ನಗರ ಸ್ವಯಂ ಉದ್ಯೋಗ ಕಾರ್ಯಕ್ರಮ:** ಬಡಜನರಿಗೆ ಲಾಭದಾಯಕ ಸ್ವಯಂ ಉದ್ಯೋಗಕ್ಕಾಗಿ ಮಹಿಳಾ ಗುಂಪುಗಳಿಗೆ ಸಹಾಯ ಫಲಾನುಭವಿಗಳಿಗೆ ವೃತ್ತಿಪರ ಹಾಗೂ

ಉದ್ಯಮಶೀಲತೆಯನ್ನು ಹೆಚ್ಚಿಸಲು ತರಬೇತಿಯನ್ನು ನೀಡುವುದು. ಇದರ ಸೌಲಭ್ಯವನ್ನು ಪಡೆಯಲು ೯ನೇ ತರಗತಿಗಿಂತ ಕಡಿಮೆ ಶಿಕ್ಷಣ ಪಡೆದವರು ಬಡತನ ರೇಖೆಗಳಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೭೬,೦೦೦ ಮೀರಿರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು. ಮತ್ತು ಈ ಮೊದಲು ಕುಟುಂಬದ ಸದಸ್ಯರು ಧನಸಹಾಯವನ್ನು ಪಡೆದಿರಬಾರದು. ಇಂಥವರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲಮಂಜೂರಾತಿ ನೀಡಿದ ನಂತರ ಯೋಜನಾವೆಚ್ಚಕ್ಕೆ ಶೇ ೨೫ ರಷ್ಟು ಅಥವಾ ಗರಿಷ್ಟ ೫೦,೦೦೦ ರೂಗಳವರೆಗೆ ಸಹಾಯಧನವನ್ನು ನೇರವಾಗಿ ಬ್ಯಾಂಕುಗಳಿಗೆ ಸಲ್ಲಿಸುತ್ತದೆ. ಸಹಾಯಧನವನ್ನು ಬ್ಲಾಕ್ ಎಂದೆ ರೂಪದಲ್ಲಿ ಸಂಬಂಧಿಸಿದ ಬ್ಯಾಂಕುಗಳು ಸಾಲವನ್ನು ಪಡೆದ ಫಲಾನುಭವಿಗಳಿಗೆ ನೀಡುತ್ತದೆ.

೨. ನಗರ ಉದ್ಯೋಗ ವೇತನ ಕಾರ್ಯಕ್ರಮ: ಇದು ಬಡತನ ರೇಖೆಗಿಂತ ಕೆಳಗಿರುವ ಬಡಜನರಿಗಾಗಿ ರೂಪಿಸಲಾಗಿರುವ ಕಾರ್ಯಕ್ರಮವಾಗಿದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಉಪಯುಕ್ತವಾದ ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸುವ ಯೋಜನೆಗಳಲ್ಲಿಯ ಫಲಾನುಭವಿಗಳ ಗುಂಪನ್ನು ರಚನೆ ಮಾಡಿಕೊಳ್ಳಬಹುದಾಗಿದೆ. ರಚನೆಯ ಗುಂಪಿಗೆ ಒಂದು ರಚನೆಯ ಗುಂಪುಗಳನ್ನು ನೋಡಿ ೨೦,೦೦೦ ರೂಪಾಯಿಯವರೆಗೆ ಆವರ್ತಕ ನಿಧಿಯನ್ನು ಈ ಯೋಜನೆಯ ಫಲಾನುಭವಿಗಳಾಗಲು ಮೀಸಲಿಡಲಾಗಿದೆ.ಬಡತನ ರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಿರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು.

೩. ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು: ಈ ಯೋಜನೆಯ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ ಸ್ವಯಂ ಉದ್ಯೋಗ ಮಾಡಲು ತರಬೇತಿಯನ್ನು ನೀಡಲಾಗುತ್ತದೆ. ಅದರ ಮೇಣದ ಬತ್ತಿಯನ್ನು ತಯಾರಿಕೆ ಮಾಡುವುದು. ಟೈಲರಿಂಗ್, ಕಂಪ್ಯೂಟರ್‌ತರಬೇತಿ, ಭಾರಿ ವಾಹನ ತರಬೇತಿ, ಲಘವಾಹನ ತರಬೇತಿ, ಮುಂತಾದವುಗಳನ್ನು ಕುರಿತು ತರಬೇತಿಯನ್ನು ಪಡೆಯಬಹುದಾಗಿದೆ. ಈ ಯೋಜನೆ ಫಲಾನುಭವಿಗಳಾಗಲು ಬಡತನರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಬಾರದು ಮತ್ತು ನಗರ ಖಾಯಂ ನಿವಾಸಿಯಾಗಬೇಕು. ೧೮ರಿಂದ ೩೫ ವರ್ಷ ವಯಸ್ಸಿನವರಾಗಿರಬೇಕು.

೪. ನಗರ ಸಮುದಾಯ ಅಭಿವೃದ್ಧಿ ಜಾಲ: ಈ ಯೋಜನೆಯ ಅಡಿಯಲ್ಲಿ ಸಮುದಾಯ ಜಾಲ ಈ ಯೋಜನೆಯ ಅಡಿಯಲ್ಲಿ ಸಮುದಾಯ ಅಭಿವೃದ್ಧಿ ಸಂಘ–ನೆರೆಹೊರೆ ಗುಂಪು ನೆರಹೊರೆ ಸಮಿತಿ ಹಾಗೂ ಸಮುದಾಯ ಜನರಿಗೆ ಸರಕಾರದ ಯೋಜನೆಗಳ ಬಗ್ಗೆ ಮತ್ತು ಪ್ರಚಲಿತ ವಿದ್ಯುನ್ಮಾನಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿದೆ. ಉದಾ: ಆರೋಗ್ಯ ಶಿಕ್ಷಣ ಮತ್ತು ಆರೋಗ್ಯ ಹಾಗೂ ನೈರ್ಮಲ್ಯವನ್ನು ಹೇಗೆ ಕಾಪಾಡಿಕೊಂಡು ಹೋಗಬೇಕು ಎಂಬುದನ್ನು ಸಂಪನ್ಮೂಲ ವ್ಯಕ್ತಿಗಳನ್ನು ಆರೋಗ್ಯ ಆಹ್ವಾನಿಸಿ ಅವರಿಂದ

ಮೂಡಿಸುವುದಾಗಿದೆ. ಕೊಳಚೆ ಪ್ರದೇಶ ಜನರಿಗೆ ಶಿಕ್ಷಣ, ಕೊಡಿಸುವುದರಿಂದ ಮಕ್ಕಳ ಭವಿಷ್ಯವು ಹೇಗೆ ಉಜ್ವಲಗೊಳ್ಳುತ್ತದೆ ಮತ್ತು ಶಿಕ್ಷಣವನ್ನು ಕೊಡಿಸದಿದ್ದರೆ ಮಕ್ಕಳು ಅದೇ ಕೊಳಚೆಯಲ್ಲಿ ವಾಸಿಸಬೇಕಾಗುತ್ತದೆ ಎಂಬುದರ ಕುರಿತು ಫಲಾನುಭವಿಗಳ ಕೌಶಲ್ಯಗಳು ಆಧಾರ ಮೇಲೆ ಸಂದಾಯ ಮಾಡಲಾಗುತ್ತದೆ. ಇದರ ಫಲಾನುಭವಿಗಳಾಗಲು ಬಡತನ ರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೭೬,೦೦೦ ಮೀರಿರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು ೧೮ ರಿಂದ ೪೫ ವರ್ಷದವರಾಗಿರಬೇಕು.

೫. ನಗರ ಮಹಿಳಾ ಸ್ವಸಹಾಯ ಉದ್ಯೋಗ: ನಿರುದ್ಯೋಗಿಗಳು ನಗರಗಳಲ್ಲಿ ಯಾವ ಕೆಲಸವನ್ನು ಮಾಡಲು ಇಚ್ಛಿಸುತ್ತಾರೆಯೋ ಅಂತಹ ಕೆಲಸಕ್ಕೆ ಅಥವಾ ಸಣ್ಣ ಉದ್ಯಮಕ್ಕೆ ಪ್ರೋತ್ಸಾಹವನ್ನು ನೀಡುವುದಾಗಿದೆ. ಈ ಯೋಜನೆಯಡಿಯಲ್ಲಿ ಮೊದಲು ಪ್ರತಿ ಉದ್ಯಮದ ಗರಿಷ್ಠ ಘಟಕ ವೆಚ್ಚ ರೂ ೫೦,೦೦೦ ಗಳಾಗಿದ್ದು ಘಟಕದ ವೆಚ್ಚದ ಶೇ ೫ರಷ್ಟನ್ನು ಪ್ರತಿ ಫಲಾನುಭವಿಯ ಸ್ವಂತ ಮಾರ್ಜಿನ್ ಹಣವನ್ನು ನೀಡಬೇಕಾಗುತ್ತದೆ. ಸ್ಲಂ ಜಗತ್ತು ೩.೨ ಆದರೆ ಇದನ್ನು ೧-೪-೨೦೦೯ ರಂದು ತಿದ್ದುಪಡಿ ಮಾಡಿ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಮಂಜೂರಾತಿ ನೀಡಿದ ನಂತರ ಯೋಜನೆ ವೆಚ್ಚಕ್ಕೆ ಶೇ ೩೫ರಷ್ಟು ಅಥವಾ ಗರಿಷ್ಠ ೩ ಲಕ್ಷ ರೂ ಗಳವರೆಗೆ ಸಹಾಯಧನವನ್ನು ಬ್ಯಾಂಕ್ ಎಂಡ್ ರೂಪದಲ್ಲಿ ಸಂಬಂಧಿಸಿದ ಬ್ಯಾಂಕುಗಳು ಸಾಲವನ್ನು ಪಡೆದು ಗುಂಪಿಗೆ ವಿನಿಯೋಗಿಸುತ್ತದೆ. ಈ ಯೋಜನೆಯ ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು. ಇದಕ್ಕಿಂತ ಮೊದಲು ಕುಟುಂಬದ ಸದಸ್ಯರು ಸಹಾಯಧನವನ್ನು ಪಡೆದಿರಬಾರದು ಒಟ್ಟು ವೆಚ್ಚದ ಶೇಕಡಾ ೫ ರಷ್ಟು ವಂತಿಕೆಯನ್ನು ಪಾವತಿಸಬೇಕು. ಪ್ರತಿಯೊಂದು ಘಟಕಕ್ಕೆ ಕನಿಷ್ಠ ೫ ಜನ ಮಹಿಳಾ ಸದಸ್ಯರು ಇರಬೇಕು. ಇಲ್ಲಿ ಮಹಿಳಾ ಉಳಿತಾಯ ಗುಂಪುಗಳಿಗೆ ಪ್ರಥಮ ಆದ್ಯತೆಯನ್ನು ನೀಡುತ್ತದೆ.

೬. ನಗರ ಮಹಿಳಾ ಸ್ವಸಹಾಯ ಕಾರ್ಯಕ್ರಮ: ಈ ಕಾರ್ಯಕ್ರಮವು ಕೇವಲ ಮಹಿಳೆಯರಿಗಾಗಿ ಇರುವರು ಕಾರ್ಯಕ್ರಮವಾಗಿದೆ. ಇದರ ಅಡಿ ೧೦ ರಿಂದ ೨೦ ಜನ ಮಹಿಳಾ ಪ್ರತಿನಿಧಿಗಳು ಮಹಿಳಾ ಸ್ವಸಹಾಯ ಗುಂಪನ್ನು ರಚನೆ ಮಾಡಿಕೊಳ್ಳಬಹುದಾಗಿದೆ. ರಚನೆಯಾದ ಒಂದು ವರ್ಷದ ಲೆಕ್ಕಪತ್ರಗಳನ್ನು ನೋಡಿ ೨೦,೦೦೦ ರೂಪಾಯಿಗಳವರೆಗೆ ಆವರ್ತಕ ನಿಧಿಯನ್ನು ನೀಡಲಾಗುತ್ತದೆ. ಈ ಯೋಜನೆಯ ಫಲಾನುಭವಿಗಳಾಗಲು ಬಡತನರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಿರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು.

೭. ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು: ಈ ಯೋಜನೆಯ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ ಸ್ವಯಂ ಉದ್ಯೋಗ ಮಾಡಲು ತರಬೇತಿಯನ್ನು

ನೀಡಲಾಗುತ್ತದೆ. ಅಂದರೆ ಮೇಣದ ಬತ್ತಿಯನ್ನು ತಯಾರಿಕೆ ಮಾಡುವುದು ಟೈಲರಿಂಗ್, ಕಂಪ್ಯೂಟರ್ ತರಬೇತಿ, ಭಾರಿವಾಹನ ತರಬೇತಿ, ಲಘ ವಾಹನ ತರಬೇತಿ, ಮುಂತಾದವುಗಳ ಕುರಿತು ತರಬೇತಿಯನ್ನು ಪಡೆಯಬಹುದಾಗಿದೆ. ಈ ಯೋಜನೆಯ ಫಲಾನುಭವಿಗಳಾಗಲು ಬಡತನ ರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಿರಬಾರದು ಮತ್ತು ನಗರದ ಖಾಯಂ ನಿವಾಸಿಯಾಗಿರಬೇಕು ೧೮ ರಿಂದ ೩೫ ವರ್ಷ ವಯಸ್ಸಿನವ ರಾಗಿರಬೇಕು.

೮. ನಗರ ಸಮುದಾಯ ಅಭಿವೃದ್ಧಿ ಜಾಲ: ಈ ಯೋಜನೆಯ ಅಡಿಯಲ್ಲಿ ಸಮುದಾಯ ಅಭಿವೃದ್ಧಿ ಸಂಘ, ನೆರೆಹೊರೆ, ಗುಂಪು, ನೆರೆಹೊರೆ ಸಮಿತಿ ಹಾಗೂ ಸಮುದಾಯದ ಜನರಿಗೆ ಸರಕಾರದ ಯೋಜನೆಗಳ ಬಗ್ಗೆ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವದಾಗಿದೆ. ಉದಾ: ಆರೋಗ್ಯ, ಶಿಕ್ಷಣ ಮತ್ತು ನೈರ್ಮಲ್ಯದ ಕುರಿತು ಜನರಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ನಗರದಲ್ಲಿ ಅತಿ ಹಿಂದುಳಿದ ಪ್ರದೇಶಗಳಲ್ಲಿ ಅಥವಾ ಕೊಳಚೆ ಪ್ರದೇಶಗಳಲ್ಲಿನ ಜನರಿಗೆ ಶಿಕ್ಷಣ, ಆರೋಗ್ಯ ಹಾಗೂ ನೈರ್ಮಲ್ಯವನ್ನು ಹೇಗೆ ಕಾಪಾಡಿಕೊಂಡು ಹೋಗಬೇಕು ಎಂಬುದನ್ನು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಅವರಿಂದ ಅರಿವು ಮೂಡಿಸುವುದಾಗಿದೆ. ಕೊಳಚೆ ಪ್ರದೇಶದ ಜನರಿಗೆ ಅವರ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಮಕ್ಕಳ ಭವಿಷ್ಯವು ಹೇಗೆ ಉಜ್ವಲಗೊಳ್ಳುತ್ತದೆ. ಮತ್ತು ಶಿಕ್ಷಣ ಕೊಡಿಸುವುದು ಮಕ್ಕಳು ಅದೇ ಕೊಳಚೆಯಲ್ಲಿ ವಾಸಿಸಬೇಕಾಗುತ್ತದೆ. ಎಂಬುದರ ಕುರಿತು ಅವರಲ್ಲಿ ಅರಿವನ್ನು ಮೂಡಿಸುವುದರ ಜೊತೆಗೆ ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ಹೇಗೆ ಕಾಪಾಡಿಕೊಂಡು ಹೋಗಬೇಕೆಂದು ಎಂಬುದನ್ನು ಕೂಡ ತಿಳಿಸಿ ಕೊಡುವುದಾಗಿದೆ.

ಈ ಯೋಜನೆಯ ಅಡಿಯಲ್ಲಿ ಬಡಜನರಿಗಾಗಿ ಬ್ಯಾಂಕಿನ ಮೂಲಕ ನೀಡಲಾಗುತ್ತದೆ. ಉದಾ: ಒಂದು ಲಕ್ಷ ರೂಪಾಯಿ ಸಾಲವನ್ನು ಪಡೆದರೆ ಅದಕ್ಕೆ ೨೫ ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಬ್ಯಾಂಕಿನ ಮೂಲಕನೇ ನೀಡಲಾಗುತ್ತದೆ. ಅಲ್ಲಿ ಬ್ಯಾಂಕ್ ಅಧಿಕಾರಿಗಳು ಸಾಲವನ್ನು ಪಡೆದವರಿಗೆ ಸಾಲ ಮರುಪಾವತಿಯಾಗುವವರಿಗೆ ಒಂದು ಲಕ್ಷ ರೂಪಾಯಿಯ ಬಡ್ಡಿಯನ್ನು ತುಂಬಿಸಿಕೊಳ್ಳುತ್ತಾರೆ ಸಾಲದ ಕೊನೆಗೆ ೨೫ ಸಾವರ ರೂಪಾಯಿಗಳನ್ನು ಸಹಾಯ ಧನವಾಗಿ ನಿರ್ಧರಿಸುತ್ತಾರೆ. ಅಷ್ಟೇ ಕಂತಿನ ಮೂಲಕವೇ ಮರುಪಾವತಿ ಮಾಡಬೇಕಾಗುತ್ತದೆ. ಹಣವಿದ್ದಾಗ ಎಲ್ಲ ಹಣವನ್ನು ತಿರಿಸುತ್ತೇನೆಂದರೆ ಬ್ಯಾಂಕ್‌ನವರು ಪಡೆದುಕೊಳ್ಳುವುದಿಲ್ಲ ಏಕೆಂದರೆ ಬ್ಯಾಂಕಿನವರಿಗೆ ಬಡ್ಡಿ ಸಿಗುವುದಿಲ್ಲವೆಂದುಕೊಂಡ ಬಡಜನರನ್ನು ಬ್ಯಾಂಕ್‌ಗಳು ಮತ್ತಷ್ಟು ಸಾಲಗಾರರನ್ನಾಗಿ ಮಾಡಲು ಹೊರಟಿವೆ. ಈ ರೀತಿಯ ಧೋರಣೆಯನ್ನು ಬ್ಯಾಂಕುಗಳು ಬದಲಿಸುವುದು ಅತಿ ಅವಶ್ಯಕವಾಗಿದೆ.

೫.೪ ನಿರ್ಮಲ ಭಾರತ ಅಭಿಯಾನ

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಹೆಚ್ಚಿನ ಪ್ರಯತ್ನ ಹಾಗೂ ಒತ್ತು ನೀಡುವಲ್ಲಿ ಕರ್ನಾಟಕ ಸರ್ಕಾರವು ಯಾವತ್ತು ಮುಂಚೂಣೆಯಲ್ಲಿರುತ್ತದೆ. ೧೯೮೫ ರಿಂದಲೂ ಭಾರತ ಸರ್ಕಾರದ ಹಾಗೂ ವಿದೇಶಿ ಸಂಸ್ಥೆಗಳಾದ ಡ್ಯಾನಿಡಾ, ರಾಯಲ್ ನೆದರ್‌ಲ್ಯಾಂಡ್, ವಿಶ್ವಬ್ಯಾಂಕ್, ಯುಸೆನಿಫ್, ಮುಂತಾದ ಸಂಸ್ಥೆಗಳ ನೆರವಿನೊಂದಿಗೆ ರಾಜ್ಯವು ಹಲವಾರು ಸ್ವಚ್ಛತಾ ಕಾರ್ಯಕ್ರಮಗಳ ಯೋಜನೆಯನ್ನು ಜಾರಿಗೆ ತಂದಿದ್ದು ೮ ವರ್ಷಗಳ ಕಾಲ ಅನುಷ್ಠಾನಗೊಳಿಸಿತು. ಪ್ರಸ್ತುತ ಕೇಂದ್ರ ಸರ್ಕಾರ ರೂಪಿಸುವ ಸ್ವಚ್ಛತಾ ಆಂದೋಲನವನ್ನು ರಾಜ್ಯದ ೩೦ ಜಿಲ್ಲೆಗಳಲ್ಲಿ ತೀವ್ರವಾಗಿ ಅನುಷ್ಠಾನಗೊಳಿಸಲಾಗಿದ್ದು ರಾಜ್ಯದ ಎಲ್ಲಾ ಬಯಲು ವಿಸರ್ಜನಾ ಮುಕ್ತ ಹಳ್ಳಿಗಳನ್ನಾಗಿ ರೂಪಿಸಲು ಗುರಿ ಹೊಂದಲಾಗಿದೆ. ವೈಯಕ್ತಿಕ ಸ್ವಚ್ಛತೆ, ಗೃಹಸ್ವಚ್ಛತೆ, ಸುರಕ್ಷಿತ ನೈರ್ಮಲ್ಯ ಸೂಕ್ತ ವಿಲೇವಾರಿ ಕಸ ಮತ್ತು ಬಳಸಿದ ಗಲೀಜು ನೀರಿನ ವಿಲೇವಾರಿ ವಿಸ್ತೃತ ಸ್ವರೂಪವನ್ನು ಹೊಂದಿದೆ.

ನಿರ್ಮಲ ಭಾರತ್ ಅಭಿಯಾನ ಗ್ರಾಮೀಣ ಪ್ರದೇಶದ ಸ್ವಚ್ಛತೆಗಾಗಿ ರಾಜ್ಯವು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ. ಗ್ರಾಮೀಣ ಜನರನ್ನು ಸ್ವಚ್ಛತೆಯ ಸೌಲಭ್ಯಗಳಿಗಾಗಿ ಉತ್ತೇಜಿಸುವುದು ಹಾಗೂ ಈ ನಿಟ್ಟಿನಲ್ಲಿ ಸಮುದಾಯವನ್ನು ಸಂಘಟಿಸುವುದು ಮುಂತಾದ ಯೋಜನೆಗಳನ್ನು ಈ ಆಂದೋಲದಲ್ಲಿ ರೂಪಿಸಿಕೊಳ್ಳಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಈ ಆಂದೋಲನದಲ್ಲಿ ಭಾಗವಹಿಸುವಂತೆ ಯೋಜನೆಗಳನ್ನು ರೂಪಿಸಿಕೊಂಡು ಪ್ರಗತಿಯನ್ನು ಸಾಧಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಜನ ಕೇಂದ್ರಿತ ಬೇಡಿಕೆ ಆಧಾರಿತ ಸಮುದಾಯ ಸಹಭಾಗಿತ್ವದ ಯೋಜನೆಯಿಂದಲೇ ಸಂಪೂರ್ಣ ಸ್ವಚ್ಛತಾ ಆಂದೋಲನ ರೂಪಗೊಂಡಿರುತ್ತದೆ. ಶಾಲಾ ಶೌಚಾಲಯ, ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ ಸಮುದಾಯ ಶೌಚಾಲಯಗಳ ನಿರ್ಮಾಣಗಳನ್ನು ಈ ಆಂದೋಲನದಲ್ಲಿ ಅಳವಡಿಸಿಕೊಂಡಿದ್ದು ಮಕ್ಕಳಲ್ಲಿ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ದಿನಾಂಕ ೧/೦೪/೨೦೧೨ ರಿಂದ ಜಾರಿಗೆ ಬರುವಂತೆ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ನಿರ್ಮಲ್ ಭಾರತ ಅಭಿಯಾನ ಎಂದು ಪುನರ್‌ನಾಮಕರಣ ಮಾಡಲಾಗಿದೆ. ಹಾಗೂ ದಿನಾಂಕ ೧/೦೪/೨೦೧೨ ರಿಂದ ಅನ್ವಯವಾಗುವಂತೆ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ (ಅನುಸೂಚಿತ ಜಾತಿ ಅನುಸೂಚಿತ ಪಂಗಡ ಕುಟುಂಬಗಳ ಸಣ್ಣ ಮತ್ತು ಅತಿಸಣ್ಣ ಕುಟುಂಬಗಳ ಭೂರಹಿತ ಕುಟುಂಬಗಳಿಗೆ ಅಂಗವಿಕಲರಿಗೆ ಮಹಿಳಾ ಪ್ರಧಾನ ಕುಟುಂಬಗಳೆರಡಕ್ಕೂ ಶೌಚಾಲಯ ಕಟ್ಟಿಕೊಂಡಲ್ಲಿ ಕೇಂದ್ರಸರ್ಕಾರ ೩೨೦೦% ರಾಜ್ಯ ಸರ್ಕಾರ ೧೫೦೦% ಒಟ್ಟು ರೂ ೪೭೦೦ ಗಳು ಅಡಿಯಲ್ಲಿ ೨೬ ದಿನಗಳ ಮಾನವಕೂಲಿ ರೂ ೪೫೦೦ ಮತ್ತು ಫಲಾನುಭವಿಗಳ ವಂತಿಕೆ ರೂ ೮೦೦% ಸೇರಿ ಒಟ್ಟು ರೂ ೧೦,೦೦೦ ಹಾಗೂ ಹಣದಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಲು

ಕ್ರಮ ಜರುಗಿಸಲಾಗುತ್ತದೆ. ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳಿಗೆ ಈ ಆಂದೋಲನದಲ್ಲಿ ಆದ್ಯತೆಯನ್ನು ನೀಡಲಾಗಿದೆ. ಆಂದೋಲನವನ್ನು ಜನಾಂದೋಲನವಾಗಿಸಲು ಹಾಗೂ ತಾಂತ್ರಿಕವಾಗಿ ಉತ್ತಮ ಗುಣಮಟ್ಟದ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳಲು ವಿಭಿನ್ನ ಕ್ಷೇತ್ರಗಳ ಜನರಿಗೆ ಅಗತ್ಯ ರೀತಿಯ ತರಬೇತಿಗಳನ್ನು ಈ ಆಂದೋಲನದಡಿಯಲ್ಲಿ ನೀಡಲಾಗುತ್ತದೆ. ಶೌಚಾಲಯ ಎಂದರೆ ದುಬಾರಿ ಎಂಬ ಕಲ್ಪನೆಯಿರುವ ಗ್ರಾಮಸ್ಥರಿಗೆ ಸರಳ ಶೌಚಾಲಯ ಮಾದರಿಗಳನ್ನು ಪರಿಚಯಿಸಲಾಗುತ್ತದೆ. ಸಂವಿಧಾನದ ೭೩ನೇ ತಿದ್ದುಪಡಿ ಕಾಯಿದೆ ೧೯೯೨ ರ ಪ್ರಕಾರ ಗ್ರಾಮೀಣ ಸ್ವಚ್ಛತೆಯ ಸಂಪೂರ್ಣ ಜವಾಬ್ದಾರಿಯ ಗ್ರಾಮಪಂಚಾಯಿತಿಗಳಿಗೆ ಸೇರಿದೆ ಅದರಂತೆ ಈ ಆಂದೋಲನದ ಅನುಪಾತದಲ್ಲಿ ಎಲ್ಲಾ ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಪಾಲ್ಗೊಳ್ಳುತ್ತವೆ.

* ಆಂದೋಲನದ ಗುರಿಗಳು
* ಗ್ರಾಮೀಣ ಪ್ರದೇಶಗಳಲ್ಲಿ ಜನರ ಜೀವನಮಟ್ಟ ಹಾಗೂ ಆರೋಗ್ಯ ಸುಧಾರಣೆ
* ಕಸದ ಹಾಗೂ ಬಳಸಿದ ಗಲೀಜು ನೀರಿನ ಸೂಕ್ತ ವಿಲೇವಾರಿ ಮಾಡುವುದು.
* ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ ಸ್ವಚ್ಛತೆ ಕಾಪಾಡುವುದು ಹಾಗೂ ಮಕ್ಕಳಲ್ಲಿ ಶುಚಿತ್ವ ಹಾಗೂ ಸ್ವಚ್ಚತೆಯ ವಿಷಯಗಳನ್ನು ರೂಢಿಸುವುದು.
* ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಅಥವಾ ಉತ್ಪಾದನೆ ಕೇಂದ್ರಗಳ ನಿರ್ವಹಣೆ
* ಸಮುದಾಯ ಶೌಚಾಲಯ ನೀರಿನ ಮೂಲಗಳ ಸುತ್ತಲಿನ ಸ್ವಚ್ಛತೆ ಚರಂಡಿಗಳು ಇತ್ಯಾದಿಗಳ ನಿರ್ವಹಣೆ ಮತ್ತು ಉಸ್ತುವಾರಿ ಮಾಡುವುದು.

ನಿರ್ಮಲ ಭಾರತ ಅಭಿಯಾನ ಯೋಜನೆ

ಈ ಯೋಜನೆಯಡಿಯಲ್ಲಿ ಕೇಂದ್ರಸರ್ಕಾರ ನಗರ ನೈರ್ಮಲ್ಯದ ದೃಷ್ಟಿಯಿಂದ ಕೈಗೊಂಡ ಸೀಟರ್ ಶೌಚಾಲಯ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ-೧

ನಿರ್ಮಲ ಭಾರತ ಅಭಿಯಾನ ಯೋಜನೆ

ಕ್ರಸಂ	ಕೊಳಚೆ ಪ್ರದೇಶದ ಹೆಸರು	ಶೌಚಾಲಯ	ಖರ್ಚಾದ ಮೊತ್ತ ಲಕ್ಷಗಳಲ್ಲಿ
೧	ಉಮಾಶಂಕರ ಕಾಲೊನಿ	೦೧	೪.೦೦
೨	ಭಗತ್‌ಸಿಂಗ್‌ನಗರ	೦೧	೪.೦೦
೩	ಕಮಲನಗರ	೦೧	೪.೦೦
೪	ಮಿಲ್ಲರ್‌ಪೇಟೆ	೦೧	೪.೦೦
೫	ಬಸವಕುಂಟೆ	೦೧	೪.೦೦
೬	ಕೊರಚರ ಕಾಲೋನಿ	೦೧	೪.೦೦
೭	ಬಂಡಿಮಟ್ಟಿ ಪ್ರದೇಶ	೦೧	೪.೦೦
೮	ಡಿ.ಸಿ ಕಾಲೋನಿ	೦೧	೪.೦೦
೯	ಚಲುವಾದಿ ಕೇರಿ	೦೧	೪.೦೦
೧೦	ಗೋಪಾಲ ಸ್ವಾಮಿನಗರ	೦೧	೪.೦೦

[ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ,ಬಳ್ಳಾರಿ] = ೪೦.೦೦೦ ಲಕ್ಷ

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ನಿರ್ಮಲ್ ಭಾರತ ಅಭಿಯಾನ ಯೋಜನೆಯಡಿಯಲ್ಲಿ ೧೦ ಸೀಟರ್‌ನ ಸಾಮಾಜಿಕ ಶೌಚಾಲಯಗಳನ್ನು ಸ್ವಚ್ಛ ನಿರ್ಮಲ ದೃಷ್ಟಿಯಿಂದ ನಗರದ ಪ್ರತಿಯೊಂದು ಕೊಳಚೆ ಪ್ರದೇಶಗಳಿಗೆ ನಿರ್ಮಿಸಲಾಯಿತು.

* ರಾಷ್ಟ್ರೀಯ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಯೋಜನೆ

ಈ ಯೋಜನೆಯು ಕೇಂದ್ರಸರ್ಕಾರ ಯೋಜನೆಯಾಗಿದ್ದು ಈ ಕಾರ್ಯಕ್ರಮದಲ್ಲಿ ೧೬ ಕೊಳಚೆ ಪ್ರದೇಶಗಳಲ್ಲಿ ೬೯೭ ವಾಂಬೆಗಳಿವೆ. ಹಮಾಮಾ ಪದರು ಹಾಕುವ ಕಾಮಗಾರಿಯನ್ನು ೨೦.೭೫ ಲಕ್ಷ ರೂಪಾಯಿಗಳನ್ನು ವ್ಯಯಿಸಲಾಗಿದೆ.

* ವಾಂಬೆ ಯೋಜನೆ ಮನೆಗಳು:

ಈ ಯೋಜನೆಯ ಸಹಾಯದಿಂದ ನಗರದ ಹಲವೆಡೆ ಮನೆಗಳು ನಿರ್ಮಾಣಗೊಂಡಿವೆ.

೫.೫ ಸ್ವಚ್ಛ ಭಾರತ ಅಭಿಯಾನ

ಭಾರತ ದೇಶ ಸಬಲೀಕರಣ ಎನ್ನುವ ವಿಷಯದಲ್ಲಿ ಸುಮಾರು ಸಾಧನೆಯ ಹಾದಿಕ್ರಮಿಸಿ ಇಡೀ ಜಗತ್ತಿನ ಹಲವು ಸಂಪನ್ಮೂಲಗಳನ್ನು ತನ್ನಲ್ಲಿರಿಸಿಕೊಂಡಿದೆ. ಸುಮಾರು ನೂರಕ್ಕೂ ಶತಮಾನಗಳ ಇತಿಹಾಸ ಹೊಂದಿರುವ ಭಾರತ ಹಲವು ಮಹತ್ವದ ಹೆಜ್ಜೆಗಳನ್ನು ಇಟ್ಟಿದೆ. ರಾಜಕೀಯ, ತಂತ್ರಜ್ಞಾನ, ಸಂಶೋಧನೆ, ವಿಜ್ಞಾನ ಹೀಗೆ ಭಾರತೀಯರು ಪ್ರತಿಯೊಂದು ರಂಗದಲ್ಲಿ ಮುಂದುವರೆದಿದ್ದಾರೆ. ಭಾರತವು ಅನೇಕ ದಶಕಗಳ ನಂತರ ಮುಂದುವರೆದ ರಾಷ್ಟ್ರಗಳಿಗೆ ಗುರುತಿಸಿಕೊಂಡಿದ್ದು ಅತಿವೇಗದಲ್ಲಿ ಬೆಳವಣಿಗೆಯ ಶಿಖರ ಮುಟ್ಟಿದೆ. ಇಂತಹ ಸಮೃದ್ಧ ಭಾರತದಲ್ಲಿ ಅಭಿವೃದ್ಧಿಯ ಮೇಲೆ ಹೊಸ ಯೋಜನೆಗಳಿಗೆ ನಾಂದಿ ಹಾಡಿ ಭಾರತವನ್ನು ಇನ್ನು ಮಂದುವರೆಯುವ ರಾಷ್ಟ್ರವಾಗಿ ಮಾಡುವ ಬಹುದೊಡ್ಡ ಕನಸು ಅದೇ ಮಹಾತ್ಮ ಗಾಂಧೀಜಿಯ ಕನಸು. ಸ್ವಚ್ಛ ಭಾರತದಲ್ಲಿ ಮಹಾತ್ಮಗಾಂಧಿ ಹೇಳಿದಂತೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ನಿರ್ಮಲ ಗ್ರಾಮ ನಿರ್ಮಾಣವಾಗಿ ನಿರ್ಮಾಣ ಮಾಡಬೇಕು. ಎಂಬ ಕನಸು ಕಂಡ ಬಾಪೂಜಿ ಈ ದೇಶಕ್ಕಾಗಿ ಹೊಸ – ಚಿಗುರು ಹಳೆ ಬೇರು ಎನ್ನುವ ಹಾಗೆ ಸ್ವಚ್ಛ ಭಾರತ ಯೋಜನೆ ಹೊರತಂದಿದ್ದು ಇಂದು ಇಡೀ ಪ್ರಪಂಚವೇ ಕಣ್ಣರಳಿಸಿ ನೋಡುತ್ತಿದೆ. ಬಗೆ ಬಗೆಯ ವಿಮರ್ಶೆಗಳು ಕೇಳಿ ಬರುತ್ತವೆ. ಪ್ರತಿಯೊಂದು ಯೋಜನೆಗೆ ವಿಮರ್ಶೆಗಳು ಬರುವುದು ಸಹಜ. ಅದರಂತೆ ಸ್ವಚ್ಛ ಭಾರತ ಅಭಿಯಾನ ಯೋಜನೆಗೆ ಹಲವು ರೀತಿಯ ವಿಮರ್ಶೆಗಳು ಕೇಳಿಬಂದಿವೆ.

ಪ್ರಪಂಚದಲ್ಲಿ ಸ್ವಚ್ಛತೆಗೆ ಸ್ವಯಂ ಕಾರ್ಯಕ್ಕೆ ಅನೇಕ ದೇಶಗಳು ಹೆಸರುವಾಸಿಯಾಗಿವೆ. ರಾಷ್ಟ್ರಗಳಲ್ಲಿ ಇಂತಹ ಅನೇಕ ಭಾಗಗಳನ್ನು ಕಾಣಬಹುದು. ಆ ದೇಶಗಳಂತು ಭಾರತವನ್ನು ಬಹುವಾಗಿ ಅಡಿಕೊಂಡವು ಎನ್ನುವುದು ಈಗಾಗಲೇ ಭಾರತದಂತಹ ಜನಸಂಖ್ಯೆ ಹೊಂದಿದೆ.

ಸ್ವಚ್ಛ ಭಾರತ ಅಭಿಯಾನ ಯೋಜನೆ

ಭಾರತ ಸರಕಾರವು ಗ್ರಾಮೀಣ ಭಾಗದ ಜನರ ಜೀವನ ಮಟ್ಟ ಸುಧಾರಣೆಗಾಗಿ ಮತ್ತು ಗ್ರಾಮೀಣ ಭಾಗದ ಮಹಿಳೆಯರ ಗೌರವ ಘನತೆಯನ್ನು ಕಾಪಾಡುವ ಉದ್ದೇಶದೊಂದಿಗೆ ಕಾರ್ಯಕ್ರಮವನ್ನು ೯೯ ರಿಂದ ದೇಶದಾದ್ಯಂತ ಸಂಪೂರ್ಣ ಸ್ವಚ್ಛತಾ ಆಂದೋಲನ ಎಂಬ ಹೆಸರಿನಿಂದ ೧೧ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ ಮಂದುವರೆಸಲಾಯಿತು. ಈ ಕಾರ್ಯಕ್ರಮವನ್ನು ೨೦೧೨ರ ಏಪ್ರಿಲ್‌ನಿಂದ ನಿರ್ಮಲ ಭಾರತ ಅಭಿಯಾನ ಎಂದು ಪುನರ್ ನಿರ್ಮಾಣ ಮತ್ತು ನಾಮಕರಣ ಮಾಡಿ ೧೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಮುಂದುವರಿಸಲಾಯಿತು.

೨೦೧೪ ಅಕ್ಟೋಬರ್ ೨ರಂದು ನೈರ್ಮಲ್ಯೀಕರಣ ಕೇಂದ್ರಿತ ಸಮಗ್ರ ನೈರ್ಮಲೀಕರಣವನ್ನು ಸಾಧಿಸಲಿಕ್ಕೆ ಹೆಚ್ಚಿನ ವೇಗ ತುಂಬಲು ಭಾರತದ ಪ್ರಧಾನಮಂತ್ರಿಗಳು ಭಾರತ ಮಿಷನನ್ನು

ಜಾರಿಗೊಳಿಸಿದರು. ಈ ಸ್ವಚ್ಛ ಭಾರತ ಮಿಷನ್ ಮತ್ತು ನಗರ ಸ್ವಚ್ಛ ಭಾರತದ ಮಿಷನ್‌ನೊಂದಿಗೆ ಅಂದರೆ ಗ್ರಾಮೀಣ ಸ್ವಚ್ಛ ಭಾರತ ಮಿಷನ್‌ಗಳ ಸಹಯೋಗದೊಂದಿಗೆ ೨೦೧೯ನೇ ಇಸ್ವಿಯ ಹೊತ್ತಿಗೆ ಸ್ವಚ್ಛ ಭಾರತದ ಗುರಿಯನ್ನು ಸಾಧಿಸುವುದು ತನ್ಮೂಲಕ ಗಾಂಧೀಜಿಯವರ ೧೫೦ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಗೂ ಗ್ರಾಮೀಣ ಸಮುದಾಯಗಳಲ್ಲಿ ಗ್ರಾಮ ಪಂಚಾಯಿತಿಗಳ ಸಹಯೋಗದೊಂದಿಗೆ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಮೂಲಕ ಬಯಲು ಮಲವಿಸರ್ಜನೆ ನಿಷೇಧಿಸುವುದು. ಹಾಗೂ ಸ್ವಚ್ಛತೆ ಮತ್ತು ನೈರ್ಮಲ್ಯತೆಯನ್ನು ಸಾಧಿಸುವುದಾಗಿದೆ. ಸ್ವಚ್ಛ ಭಾರತ ಮಿಷನ್ ಈ ಉದ್ದೇಶವನ್ನು ಸಾಧಿಸುವ ಮೂಲಕ ಪ್ರಗತಿಯನ್ನು ಹೊಂದಲು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ಎಮ್.ಎನ್.ಆರ್.ಈ ಜೆ.ಏ) ಯೋಜನೆಯ ಮೂಲಕ ಪ್ರತಿಕುಟುಂಬಗಳಿಗೂ ವೈಯಕ್ತಿಕ ಶೌಚಾಲಯ ನಿರ್ಮಿಸುವ ಮೂಲಕ ಗ್ರಾಮೀಣ ಸಮುದಾಯಗಳಲ್ಲಿ ಸ್ವಚ್ಛತೆಯ ಪರಿಕಲ್ಪನೆ ಸಾಧಿಸಲು ಪ್ರಯತ್ನಿಸುತ್ತದೆ. ಸ್ವಚ್ಛ ಭಾರತಮಿಷನ್ ಮಾರ್ಗದರ್ಶಿ ಸೂತ್ರಗಳು ೦೨/೧೦/೨೦೧೪ ರಿಂದ ಅಧಿಕೃತವಾಗಿ ಇಡೀ ದೇಶಾದ್ಯಂತ ಜಾರಿಗೊಂಡಿದೆ.

ಸ್ವಚ್ಛ ಭಾರತ ಅಭಿಯಾನದ ಗುರಿಗಳು :

1. ವೈಯಕ್ತಿಕ ಶುಚಿತ್ವ ಕಾಪಾಡುವುದು.
2. ಎಲ್ಲಾ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡ ಬಳಸುವಂತೆ ಪ್ರೇರೇಪಿಸುವುದು ಹಾಗೂ ಬಯಲು ಮಲವಿಸರ್ಜಜನೆ ಮುಕ್ತ ಮಾಡುವುದರ ಬಗ್ಗೆ ತಿಳಿಸುವುದು:
3. ನಗರ/ಗ್ರಾಮೀಣ ಸಮುದಾಯಕ್ಕೆ ನೈರ್ಮಲ್ಯದ ಮಹತ್ವ ಕುರಿತು ಜಾಗೃತಿ ಮೂಡಿಸುವುದು.
4. ಅಂಗನವಾಡಿ ಶೌಚಾಲಯ ನಿರ್ಮಾಣದ ಮುಖಾಂತರ ಮಗುವಿನ ಮನಸ್ಸಿನಲ್ಲಿ ನೈರ್ಮಲ್ಯದ ಬಗ್ಗೆ ಅಭ್ಯಾಸಗಳನ್ನು ರೂಢಿಸುವುದು.
5. ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುವುದು.
6. ಅಕ್ಟೋಬರ್ ೨.೨೦೧೯. ರ ಹೊತ್ತಿಗೆ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯಗಳನ್ನು ಹೆಚ್ಚಿಸಿ ಸ್ವಚ್ಛ ಭಾರತ ಅಭಿಯಾನದ ಗುರಿಯನ್ನು ಸಾಧಿಸುವುದು.

ಸ್ವಚ್ಛ ಭಾರತ ಅಭಿಯಾನದ ಉದ್ದೇಶಗಳು:

೧. ಬಯಲು ಮಲವಿಸರ್ಜನೆಯನ್ನು ನಿರ್ಮೂಲನೆಗೊಳಿಸುವುದು ಮತ್ತು ಸ್ವಚ್ಛತೆ ನೈರ್ಮಲ್ಯವನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಜನ ಜೀವನ ಗುಣಮಟ್ಟವನ್ನು ಸುಧಾರಿಸುವುದು.

೨. ಬಯಲು ಶೌಚಾಲಯ ನಿರ್ಮೂಲನೆ

೩. ಮಲ ಹೊರುವ ಪದ್ಧತಿಯ ಸಂಪೂರ್ಣ ನಿರ್ಮೂಲನೆ

೪. ಸಾರ್ವಜನಿಕರಲ್ಲಿ ನಿರ್ಮಲೀಕರಣಕ್ಕಾಗಿ ಮಾನಸಿಕ ಬದಲಾವಣೆ

೫. ಸಂಪೂರ್ಣ ಕೊಳಗೇರಿ ನಿರ್ಮೂಲನೆ

೬. ಸಾರ್ವಜನಿಕರಲ್ಲಿ ನಿರ್ಮಲೀಕರಣ ಮತ್ತು ಸಾಮಾಜಿಕ ಸ್ವಾಸ್ಥ್ಯದ ನಡುವಿರುವ ಸಂಬಂಧದ ಬಗ್ಗೆ ಜಾಗೃತಿ ಮೂಡಿಸುವುದು.

೭. ಪ್ರತಿಯೊಂದು ಮನೆ ಮತ್ತು ಪ್ರತಿಯೊಂದು ವ್ಯಕ್ತಿಯ ಒಳಗಿನ ಮನುಷ್ಯ ಜಾಗೃತನಾಗಬೇಕು. ಸ್ವಚ್ಛತೆಯ ಅರಿವು ಮೂಡಬೇಕು.

೮. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸ್ವಚ್ಛತೆಯ ಅವಶ್ಯಕತೆ ದೇಶದ ಯುವಜನತೆಗೆ ಹೇಗೆ ಸಹಕಾರಿ ಎಂಬ ವಿಷಯ ತಿಳಿಸುವುದು.

* ಮನೆ, ಶಾಲೆ, ಆಸ್ಪತ್ರೆ, ಹಳ್ಳಿ, ನಗರ, ರಾಜ್ಯ, ದೇಶ ಎಲ್ಲಿ ನೋಡಿದ್ದರು ಸ್ವಚ್ಛತೆ ಇರಬೇಕು. ಸುತ್ತ-ಮುತ್ತಲಿನ ಪರಿಸರ ಸ್ವಚ್ಛವಾಗಿದ್ದಲ್ಲಿ ಮನುಷ್ಯರಿಗೆ ತಗಲುವ ರೋಗಗಳಿಂದ ಮುಕ್ತಿ ದೊರೆಯುತ್ತದೆ.

* ಗಾಂಧೀಜಿ ಕಂಡ ಕನಸು ನನಸು ಮಾಡುವುದು. ಸುತ್ತ-ಮುತ್ತಲಿನ ಪರಿಸರ ಸ್ವಚ್ಛವಾಗಿದ್ದಲ್ಲಿ ಮುನುಷ್ಯರಿಗೆ ತಗಲುವ ರೋಗಗಳಿಂದ ಮುಕ್ತಿ ದೊರೆಯುತ್ತದೆ.

* ದೇಶದಲ್ಲಿ ದಾರಿದ್ರ್ಯ ಬಡತನ ಹೋಗಲಾಡಿಸಿ ಎಲ್ಲರಿಗೂ ಸಮಬಾಳು ಸಮಪಾಲು ನೀಡುವುದು. ನಮ್ಮೊಳಗಿನ ಸ್ವಚ್ಛತೆಯ ಭಾವ ದೇಶಕ್ಕಾಗಿ ದುಡಿದು ಉತ್ತಮ ರಾಷ್ಟ್ರ ನಿರ್ಮಾಣ ಮಾಡಲು ಪಣತೊಡುವುದು.

ಸಾಂಸ್ಕೃತಿಕ ವಿಮರ್ಶೆ

ಸ್ವಚ್ಛ ಭಾರತ ಅಭಿಯಾನ ಯೋಜನೆ ಭಾರತದಂತಹ ಅತಿದೊಡ್ಡ ಜನಸಂಖ್ಯೆ ಹೊಂದಿರುವ ಕಾರಣ ಅತೀ ಅವಶ್ಯಕತೆ ಇದೆ. ಕಲ್ಪನೆ ಹಳೇಯದಾಗಿರಬಹುದು. ಅದು ಇಟ್ಟಿರುವ ಹೆಜ್ಜೆ ನವೀನವಾಗಿದೆ. ದೇಶದ ಯುವಜನತೆಯಲ್ಲಿ ದೇಶದ ಅಭಿವೃದ್ಧಿಯ ಸಲುವಾಗಿ ದುಡಿಯುವ ಕಿಚ್ಚು ಹೆಚ್ಚಿರುವ ಕೇಂದ್ರ ಸರಕಾರದ ಈ ಯೋಜನೆಯ ಮೂಲಕ ಹೊಸ ಆಯಾಮದಲ್ಲಿ ಯೋಚಿಸಲು ಯುವಜನತೆಗೆ ಅನುವು ಮಾಡಿಕೊಟ್ಟಿದೆ. ತನ್ನ ತಾನು ಅರಿತುಕೊಳ್ಳುವ ಒಂದು ಹೊಸ ರೀತಿಯ ನಂಬಿಕೆಗೆ ಯೋಚನೆ ದಾರಿಮಾಡಿಕೊಟ್ಟಿದೆ.

ಮಹಾತ್ಮಗಾಂಧಿ ಜಯಂತಿಯಂದು ಸಾಮಾನ್ಯವಾಗಿ ಸಾರ್ವತ್ರಿಕ ರಜೆ ಇದ್ದು, ಅದರ ಲಾಭದ ಪ್ರಕಾರ ಎಲ್ಲಾ ಸರಕಾರ ನೌಕರರೂ ರಜೆಯನ್ನು ಮಜವಾಗಿ ಆಚರಿಸುವ ಒಂದು ಕಾರ್ಯಕ್ರಮ. ಗಾಂಧಿಜೀಯವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಜಯಂತಿಯನ್ನು ಆಚರಿಸುವ ಪರಿಯನ್ನು ಸ್ವಚ್ಛ ಭಾರತ ಅಭಿಯಾನ ಈ ಬಾರಿ ತಳ್ಳಿಹಾಕಿದೆ. ಈ ದಿನದಂದು

ಎಲ್ಲಾ ನೌಕರರು ತಮ್ಮ ತಮ್ಮ ಕಚೇರಿಗಳನ್ನು ಸ್ವಚ್ಛತೆಗೊಳಿಸಲಾಗುತ್ತದೆ. ಇದೊಂದು ಸ್ವಾಗತಾರ್ಹವಾದ ವಿಚಾರವಾಗಿದೆ. ಮಹಾತ್ಮಗಾಂಧೀಜಿಯವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಕೇಂದ್ರಸರಕಾರ ಒಂದು ಉತ್ತಮವಾದ ಹೆಜ್ಜೆ ಇಟ್ಟಿರುವುದು ಎಲ್ಲರೂ ಪಕ್ಷಭೇದ ಮರೆತು ಸ್ವಂಧಿಸಬೇಕಾದ ಅಗತ್ಯವಿದೆ.

ಈ ಸ್ವಚ್ಛ ಭಾರತ ಯೋಜನೆ ಸರಕಾರಿ ನೌಕರರಿಗೆ ಹಾಗೂ ಇಂತಹ ಸರಕಾರಿ ರಜೆಗಳಿಗೆ ಹೊಸ ಆಯಾಮವನ್ನು ನೀಡಿ ಮತ್ತಷ್ಟು ಅರ್ಥಪೂರ್ಣವಾದ ರಾಷ್ಟ್ರಸಬಲೀಕರಣದ ಹೆಜ್ಜೆ ಹಾಕುವಲ್ಲಿ ಯಶಸ್ವಿಯಾಗಿದೆ. ಎತ್ತ ಸಾಗಿದೆ ಭಾರತ ಎಂಬ ಆತಂಕ ಜನರ ಮನಸ್ಸಲ್ಲಿ ಮನೆಮಾಡಿತ್ತು. ದೇಶ ಈ ಅನುವಂಶೀಯ ರಾಜಕಾರಣದಿಂದ ಮುಕ್ತಿ ಯಾವಾಗ ಎಂದು ಕಾಯಿತ್ತಿದ್ದರು. ಇದೀಗ ದೇಶದ ಕನಸೊಂದು ನನಸಾಗಿ ಹೊಸದೊಂದು ರಾಜಕೀಯ ಭವಿಷ್ಯ ಬರೆದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶದಲ್ಲಿ ಸ್ವಚ್ಛತೆ ತರುವ ನಿಟ್ಟಿನಲ್ಲಿ ಗಣನೀಯವಾದ ಹೆಜ್ಜೆಹಾಕಿದ್ದಾರೆ. ಹೊಸದೊಂದು ಆಶಾಕಿರಣ ಮೂಡಿಸಲಿರುವ ಸ್ವಚ್ಛಭಾರತ ಅಭಿಯಾನ ಜನಪರವಾಗಲಿದೆ. ದೇಶದಲ್ಲಿ ಪ್ರತಿಯೊಬ್ಬರೂ ಎಲ್ಲ ಬಗೆಯ ಸ್ವಚ್ಛತೆಯ ಸೌಲಭ್ಯಗಳನ್ನು ಕಲ್ಪಿಸುವುದೇ ಯೋಜನೆಯ ಮುಖ್ಯ ಮತ್ತು ಮೊದಲ ಗುರಿ ಎಂಬ ಧ್ಯೇಯವಾಕ್ಯದೆಡೆಗೆ ಜನರನ್ನು ಕರೆದೊಯ್ಯುವ ಮಹತ್ವದ ಹೆಜ್ಜೆಗೆ ಅಣಿಯಾಗಿರುವ ಮಾನ್ಯ ಪ್ರಧಾನಮಂತ್ರಿಗಳು ದೇಶದಲ್ಲಿಯ ಅನಾರೋಗ್ಯ ಹೊಡೆದೋಡಿಸಲು ಶ್ರಮವಹಿಸುತ್ತಿದ್ದಾರೆ.

ಈ ಯೋಜನೆಯೂ ನಗರ ಮತ್ತು ಗ್ರಾಮೀಣ ಜನತೆಯನ್ನು ಒಳಗೊಳ್ಳಲಿದ್ದು ಎಲ್ಲರಿಗೂ ಸ್ವಚ್ಛತೆಯ ಮಹತ್ವ ಹೇಳಿಕೊಡಲಿದೆ. ನರೇಂದ್ರ ಮೋದಿಯ ಕಲ್ಪನೆಯಂತೆ ಸ್ವಚ್ಛಭಾರತ ಕನಸಿಗೆ ಪೂರಕವಾಗಿ ದೇಶದಲ್ಲಿ ಸ್ವಚ್ಛತೆಯ ಅಡಿಪಾಯ ಹಾಕಲಿದೆ.

ಈ ಯೋಜನೆಯೂ ತನ್ನ ಸ್ಪಷ್ಟವಾಗಿ ಗುರಿ ಮತ್ತು ಉದ್ದೇಶ ಹೊಂದಿದೆ. ದೇಶದ ಕೊಳೆಯನ್ನು ತೊಳೆಯುವ ಕೆಲಸದಲ್ಲಿ ಪ್ರಧಾನಿ ನಿರತರಾಗಿದ್ದಾರೆ. ಗಾಂಧೀಜಿಯವರು ಕನಸು ನನಸು ಮಾಡುವಲ್ಲಿ ಶ್ರಮಸುತ್ತಿದ್ದಾರೆ. ಮೋದಿ ಕನಸಿನ ಹಾಗೆ ಮಹತ್ವದ ಯೋಜನಾ ಜಾರಿಯಾಗಿದ್ದು ಅಕ್ಟೋಬರ್ ೦೨ ರಿಂದ ಸ್ವತಃ ಪ್ರಧಾನಮಂತ್ರಿಯವರೇ ಚಾಲನೆ ನೀಡಿದ್ದರು. ದೇಶದ ಪ್ರಮುಖ ನಗರಗಳಲ್ಲಿನ ಸ್ವಚ್ಛಗೊಳಿಸುವ ಕೆಲಸ ಮಾಡಲಾಯಿತು. ಗ್ರಾಮೀಣ ಜನರಲ್ಲಿ ಜಾಗೃತ ಮೂಡಿಸಲು ಶಿಬಿರಗಳನ್ನು ಹಮ್ಮಿಕೊಳ್ಳಲಾಯಿತು.

ಈ ಮಹತ್ವದ ಯೋಜನೆಯನ್ನು ಜಾರಿಗೆ ತರಲು ಮೂಲಕಾರಣ ದೇಶವನ್ನು ಸ್ವಚ್ಛಗೊಳಿಸುವುದು ದೇಶದಲ್ಲಿ ಸ್ವಚ್ಛತೆಯಿಂದ ದೇಶದ ಅಭಿವೃದ್ಧಿಯಾಗಲಿದೆ. ಮತ್ತು ಜನರು ಮುಖ್ಯವಾಹಿನಿಗೆ ಕರೆತರುವಲ್ಲಿ ಯೋಜನೆ ಸಹಕಾರಿಯಾಗಲಿದೆ ಎಂಬ ಬಲವಾದ ನಂಬಿಕೆಯೊಂದಿಗೆ ಯೋಜನೆ ಚಾಲನೆಗೊಂಡಿದೆ. ಈ ಯೋಜನೆಯಲ್ಲಿ ದೇಶದ ಸ್ವಚ್ಛತೆಯ

ಮಹತ್ವದ ಘಟ್ಟವೊಂದು ಹೊರ ಬರಲಿದೆ. ಹಲವು ಉತ್ತಮ ಅಂಶಗಳನ್ನು ಒಳಗೊಂಡ ಈ ಸ್ವಚ್ಛಭಾರತ ಅಭಿಯಾನವು ನಮ್ಮ ನಮ್ಮ ಮನೆಗಳಿಂದ ಜಾರಿಯಾಗಲಿ ಎಂಬುವುದು ಆಶಯ.

ಮಹಿಳೆಯರಿಗೆ ಸಂಬಂಧಿಸಿದ ಕೆಲವು ಯೋಜನೆಗಳು

೧. **ಜನನಿ ಸುರಕ್ಷಾ ಯೋಜನೆ:** ಈ ಯೋಜನೆಯು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮ ಅಡಿಯಲ್ಲಿ ನಡೆಯುತ್ತಿದೆ. ಈ ಕಾರ್ಯಕ್ರಮ ೨೦೦೫ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯ ಉದ್ದೇಶ ರಾಜ್ಯದಲ್ಲಿ ತಾಯಂದಿರ ಮರಣ ಮತ್ತು ಶಿಶುಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದಲ್ಲದೆ ಕಡುಬಡತನದಲ್ಲಿ ಇರುವಂತಹ ಗರ್ಭಿಣಿಯರ ಮನೆಯಲ್ಲಿ ಹೆರಿಗೆ ಮಾಡಿಸಿಕೊಂಡರೆ ರೂ ೫೦೦/- ಸಹಾಯಧನ ನೀಡುತ್ತದೆ. ಸಂಸ್ಥೆಗಳಲ್ಲಿ ಆದ ನಗರ/ಪಟ್ಟಣಗಳಲ್ಲಿ ಹೆರಿಗೆ ಮಾಡಿಸಿಕೊಂಡರೆ ರೂ ೭೦೦/- ಸಹಾಯಧನ ನೀಡಲಾಗುತ್ತದೆ. ನೋಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಸಿಜರಿನ್ ಹೆರಿಗೆ ಆದರೆ ೭೫೦೦ ರೂಗಳನ್ನು ನೀಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಸಿಜರಿನ್ ಹೆರಿಗೆ ಮಾಡಿಸಿಕೊಂಡರೆ ೭೦೦ ಸಹಾಯಧನ ನೀಡಲಾಗುತ್ತದೆ. ನೋಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಸಿಜರಿನ್ ಹೆರಿಗೆ ಮಾಡಿಸಿಕೊಂಡರೆ ೭೦೦ ರೂಗಳನ್ನು ನೀಡಲಾಗುತ್ತದೆ. ಆರೋಗ್ಯ ವಿಷಯದಲ್ಲಿ ರಾಜ್ಯದ ಹಿಂದುಳಿದ ಏಳು ಜಿಲ್ಲೆಗಳಾದ ಬಳ್ಳಾರಿ, ಬಾಗಲಕೋಟೆ, ವಿಜಾಪುರ, ಬೀದರ್, ಗುಲ್ಬರ್ಗಾ, ರಾಯಚೂರು, ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಹೆಚ್ಚಿನ ಮಟ್ಟದ ಆಸ್ಪತ್ರೆಯ ಸೇವೆ ಅಗತ್ಯವಿದ್ದಲ್ಲಿ ಸಾರಿಗೆ ಭತ್ಯೆ ೭೦೦ ರೂ ಗಳನ್ನು ನೀಡಲಾಗುತ್ತಿದೆ. ಈ ಸೌಲಭ್ಯವು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದೊರೆಯುತ್ತದೆ. ಈ ಸೇವೆಯನ್ನು ವಾರದ ೭ ದಿನಗಳಲ್ಲಿ ೨೪ ಗಂಟೆಗಳ ಸೇವೆಸೌಲಭ್ಯವನ್ನು ಪಡೆಯಬಹುದಾಗಿದೆ.

೨. **ಪ್ರಸೂತಿ ಆರೈಕೆ:** ಈ ಯೋಜನೆಯು ೨೦೦೮-೦೯ ಸಾಲಿನಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಗರ್ಭಿಣಿಯರಿಗೆ ಉತ್ತಮ ಆರೈಕೆಗೆ ಹೆರಿಗೆಗೆ ಮುನ್ನ ಆಯಾ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಲ್ಲಿ ನೋಂದಾಯಿಸಿಕೊಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಗರ್ಭಿಣಿ ಮಹಿಳೆಯರು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ. ಈ ಯೋಜನೆಯಲ್ಲಿ ವೈದ್ಯರಿಂದ ಗರ್ಭಿಣಿ ಮಹಿಳೆಯರಿಗೆ ಏಳನೇ ತಿಂಗಳಲ್ಲಿ ತ್ರೈಮಾಸಿಕ ೧೦೦೦ ರೂಗಳನ್ನು ಚೆಕ್ ರೂಪದಲ್ಲಿ ನೀಡಲಾಗುವುದು. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ನಂತರ ೧೦೦೦ ರೂಗಳ ಚೆಕ್‌ನ್ನು ನೀಡಲಾಗುತ್ತದೆ.

ಆ ಹಣದಿಂದ ಗರ್ಭಿಣಿ ಮಹಿಳೆಯರು ಉತ್ತಮ ಪೌಷ್ಟಿತ ಆಹಾರವನ್ನು ಪಡೆದು ಗುಣವಂತಳಾಗಲೆಂದು ಸುಸೂತ್ರವಾಗಿ ಹೆರಿಗೆಯಾಗಬೇಕೆಂದು ಹಾಗೂ ಸಕಾಲಿಕರೋಗ ತಪಾಸಣ ಮಾಡಿಸುವುದು ಗರ್ಭಿಣಿ ಸ್ತ್ರಿಯರಿಗೆ ಪೌಷ್ಠಿಕಾಂಶವುಳ್ಳ ಆಹಾರವನ್ನು ಖರೀದಿಸಲು ಹಣಕಾಸಿನ

ನೆರವು ನೀಡುವುದರ ಜೊತೆಗೆ ನವಜಾತಿ ಶಿಶುವಿನ ಆರೋಗ್ಯ ಉತ್ತಮ ಪಡಿಸಬೇಕೇಂಬುದು ಈ ಯೋಜನೆಯ ಉದ್ದೇಶವಾಗಿದೆ.

೩. ಮಡಿಲು ಯೋಜನೆ: ಕರ್ನಾಟಕ ಸರ್ಕಾರದ ಆರೋಗ್ಯದ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಾಯಿಭಾಗ್ಯ ಯೋಜನೆ ಪ್ರಾರಂಭಿಸಿದ ನೂತನ ಕಾರ್ಯಕ್ರಮವನ್ನು ಮಡಿಲು ಯೋಜನೆ ೨೦೦೭-೦೮ನೇ ಸಾಲಿನಲ್ಲಿ ಜಾರಿಗೆ ಬಂದಿತ್ತು. ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡ ನಂತರ ಬಡತನರೇಖೆಗಿಂತ ಕೆಳಗಿರುವ ಕುಟುಂಬದ ಮಹಿಳೆಯರಿಗೆ ಹೆರಿಗೆಯ ನಂತರ ಒಂದು ಮಡಿಲು ಕಿಟ್ಟನ್ನು ನೀಡಲಾಗುವುದು. ಇದರಲ್ಲಿ ತಾಯಿ ಮತ್ತು ಮಗುವಿಗೆ ಬೇಕಾದ ೧೯ ವಸ್ತುಗಳನ್ನು ನೀಡಿರುತ್ತಾರೆ.

ಈ ಮೇಲಿನ ಆರೋಗ್ಯ ಸಂಬಂಧಿಯೋಜನೆಗಳ ಉಪಯೋಗವನ್ನು ೮೦೦ ಮಹಿಳೆಯರಲ್ಲಿ ಕೇವಲ ೮ ಜನ ಕೊಳಚೆ ನಿವಾಸಿ ಮಹಿಳೆಯರು ಪಡೆದುಕೊಂಡಿರುತ್ತಾರೆ. ಈ ಯೋಜನೆಗಳು ಇತ್ತೀಚಿಗೆ ಬಂದಿರುವುದರಿಂದ ಇತ್ತೀಚಿನ ಮಹಿಳೆಯರು ಈ ಯೋಜನೆಗಳ ಲಾಭವನ್ನು ಪಡೆದುಕೊಂಡಿದ್ದಾರೆ. ಕೆಲ ಮಹಿಳೆಯರ ಈ ಯೋಜನೆಗಳ ಲಾಭ ಪಡೆದುಕೊಳ್ಳಬೇಕೆಂದರೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸುವುದಿಲ್ಲ. ಕೊಡುವ ಹಣಕ್ಕಿಂತ ಹೆಚ್ಚು ಹಣ ತಿರುಗಾಡಿ ಕಳೆದುಕೊಳ್ಳಬೇಕಾಗುತ್ತದೆ. ಕೊಳಚೆ ನಿವಾಸಿಗಳು ಮೊದಲೇ ಬಡತನದ ಬೇಗೆಯಲ್ಲಿ ಬೆಂದಿರುವವರು ಅವರಿಗೆ ಫಲಾನುಭವಿಯ ಸಮಸ್ಯೆಗಳು ಅರಿವಾಗುವುದಿಲ್ಲ.

೪. ಭಾಗ್ಯಲಕ್ಷ್ಮಿ ಯೋಜನೆ: ೨೦೦೧ರ ಜನಗಣತಿಯ ಅನುಸಾರ ಕರ್ನಾಟಕದಲ್ಲಿ ಲಿಂಗ ಅನುಪಾತವು ೨೦೦೬-೨೦೦೭ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಎಂಬ ಹೊಸ ಕಲ್ಯಾಣ ಯೋಜನೆಯನ್ನು ರೂಪಿಸಿದೆ. ಈ ಯೋಜನೆ ಉದ್ದೇಶ ಲಿಂಗ ಅನುಪಾತವನ್ನು ಉತ್ತಮ ಪಡಿಸುವುದು. ಹೆಣ್ಣು ಭ್ರೂಣಹತ್ಯೆಯನ್ನು ತಡೆಯುವುದು, ಬಾಲ್ಯವಿವಾಹವನ್ನು ತಡೆಯುವುದು, ಹೆಣ್ಣು ಮಗುವಿನ ಶಿಕ್ಷಣ ಮಟ್ಟ ಆರೋಗ್ಯ ಮಟ್ಟ ಉತ್ತಮಪಡಿಸಿ ಸರ್ವಾಂಗೀಣ ಅಭಿವೃದ್ಧಿ ಪಡಿಸುವುದು ಹೆಣ್ಣುಮಗುವನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಉದ್ದೇಶಗಳನ್ನು ಮಾಡುವಂತಹ ಉದ್ದೇಶಗಳನ್ನು ಹೊಂದಿದೆ. ಈ ಯೋಜನೆಯ ಒಂದು ದಂಪತಿಗೆ ಕೇವಲ ೨ ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತವಾಗಿರುವಂತಹದ್ದಾಗಿದೆ. ಈ ಯೋಜನೆಯ ಫಲಾನುಭವಿಗಳಾಗಲು ಕೆಲವೊಂದು ಅರ್ಹತೆಗಳಿಗೆ ಬಡತನರೇಖೆಗಿಂತ ಕೆಳಗಿರುವಂತಹ ಕುಟುಂಬದಲ್ಲಿ ಹೆಣ್ಣು ಮಗು ಜನಿಸಿರಬೇಕು. ಕುಟುಂಬವು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ನೀಡುವ ಬಿ.ಪಿ.ಎಲ್ ಕಾರ್ಡನ್ನು ಹೊಂದಿರಬೇಕು. ಕುಟುಂಬದ ೨ ಹೆಣ್ಣುಮಕ್ಕಳಿಗೆ ಮಾತ್ರ ಸೌಲಭ್ಯದೊರೆಯುತ್ತದೆ. ಕುಟುಂಬ ಮಕ್ಕಳ ಸಂಖ್ಯೆ ೩ನ್ನು ಮೀರಬಾರದು. ಪೋಷಕರು ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡಿರಬೇಕು. ಮಗುವಿನ ಜನನ ಪ್ರಮಾಣಪತ್ರವನ್ನು ಹೊಂದಿರಬೇಕು. ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗನಿರೋಧಕ ಲಸಿಕೆಯನ್ನು ಹಾಕಿಸಿರಬೇಕು. ಮಗು ಜನಿಸಿದ

ಒಂದು ವರ್ಷದೊಳಗಾಗಿ ಮಂಜೂರುಗಾಗಿ ಅರ್ಜಿಸಲ್ಲಿಸಿ ಭಾರತೀಯ ಜೀವವಿಮಾ ನಿಗಮಕ್ಕೆ ಮಾಹಿತಿ ನೀಡಬೇಕು. ಈ ಯೋಜನೆಯ ಲಾಭವನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳು ಪಡೆಯಬಹುದಾಗಿದೆ. ಈ ಎಲ್ಲಾ ಅರ್ಹತೆಯನ್ನು ಹೊಂದಿದ್ದರೆ ಮಾತ್ರ ಈ ಯೋಜನೆಯ ಫಲಾನುಭವಿಯನ್ನಾಗಿ ಮಾಡಲು ಅರ್ಹತೆ ಹೊಂದಿರುತ್ತಾರೆ.

೫. ಬಾ ಮರಳಿ ಶಾಲೆಗೆ ಕಾರ್ಯಕ್ರಮ: ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರುರವರ ಸುತ್ತೋಲೆ ೨೦೦೨-೨೦೦೩ ದಿ.೭/೧೦/೨೦೦೨ ರಂತೆ ೬ರಿಂದ೧೪ ವರ್ಷವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ಹಾಜರಾಗುವಂತೆ ಮಾಡಲು "ಬಾ ಮರಳಿ ಶಾಲೆಗೆ" ಎಂಬ ಆಂದೋಲನವನ್ನು ೨೦೦೨ರ ನವೆಂಬರ್ ತಿಂಗಳಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಂತೆ ಶಾಲೆಯ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ (School Development Monitoring Committee) ಯವರು ಸ್ತ್ರೀ ಶಕ್ತಿ ಹಾಗೂ ಯುವಕ ಯುವತಿ ಮಂಡಳಿಯವರೊಂದಿಗೆ ಸೇರಿ ತಮ್ಮ ಶಾಲಾ ವ್ಯಾಪ್ತಿಯಲ್ಲಿ ದೀರ್ಘಕಾಲ ಗೈರು ಹಾಜರಾದ ಮಕ್ಕಳ ಪಟ್ಟಿಯೊಂದಿಗೆ ಮನೆಮನೆಗೆ ತೆರಳಿ ಪೋಷಕರ ಹಾಗೂ ಮಕ್ಕಳ ಮನವೊಲಿಸಿ ಮಗುವನ್ನು ಶಾಲೆಗೆ ಕರೆತರುವರು. ಈ ಕಾರ್ಯಕ್ರಮವು ನವೆಂಬರ್ ತಿಂಗಳಲ್ಲಿ ನಡೆಯುವುದು.

೬. ಬೀದಿಯಿಂದ ಶಾಲೆಗೆ: ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇದರ ಸುತ್ತೋಲೆ ಸಂ ೦೧/೨೦೦೩-೦೪ ೧೮-೭-೨೦೦೩ ರಂತೆ ಬೀದಿಯಲ್ಲಿ ಬದುಕುವ ೬-೧೪ ವರ್ಷ ವಯಸ್ಸಿನ ಮಕ್ಕಳಿಗೆ ಅವರ ಮೂಲಭೂತ ಹಕ್ಕಾದ ಶಿಕ್ಷಣ ದೊರಕಿಸಿಕೊಡುವ ಉದ್ದೇಶದಿಂದ ಬೀದಿಯಿಂದ ಶಾಲೆಗೆ ಎಂಬ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಇದರಂತೆ ಬೀದಿ ಮಕ್ಕಳ ಸಮೀಕ್ಷೆ ನಡೆಸಿ ಅವರನ್ನು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಶಿಕ್ಷಕರು ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಹಾಗೂ ಇಲಾಖೆಯ ಅಧಿಕಾರಿಗಳು ಉತ್ತಮ ಸಹಕಾರದೊಂದಿಗೆ ಯಶಸ್ಸಿಗೆ ಸಹಕರಿಸುವರು.

೭. ಸ್ತ್ರೀಶಕ್ತಿ ಯೋಜನೆ: ಸ್ವ-ಸಹಾಯ ಗುಂಪುಗಳ ಮೂಲಕ ಗಾಮೀಣ ಮಹಿಳೆಯರ ಸಬಲೀಕರಣದ ಧ್ಯೇಯದೊಂದಿಗೆ ೨೦೦೦-೦೧ ನೇ ಸಾಲಿನಲ್ಲಿ ಸ್ತ್ರೀ ಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಸ್ತ್ರೀ ಶಕ್ತಿ ಯೋಜನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಸಮಾಜದ ಬಡತನ ಕುಟುಂಬದ ಸಾಮಾಜಿಕ ಅಥವಾ ಆರ್ಥಿಕವಾಗಿ ಹಿಂದುಳಿದ ಸಮಾನ ಮನಸ್ಸಿನ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು ಪರಿಶಿಷ್ಟಜಾತಿ ಅಥವಾ ವರ್ಗಕ್ಕೆ ಸೇರಿದ ೧೫-೨೦ ಮಹಿಳೆಯರನ್ನು ಒಟ್ಟು ಸೇರಿಸಿ ೧.೩೦ಲಕ್ಷ ಗುಂಪುಗಳನ್ನು ರಚಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ೧.೪೦ ಲಕ್ಷ ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳು ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನದಲ್ಲಿದ್ದು ಸುಮಾರು ೨೦.೦೦ ಲಕ್ಷ ಮಹಿಳಾ ಸದಸ್ಯರನ್ನು ಒಗ್ಗೂಡಿಸಲಾಗಿದೆ. ಗುಂಪಿನ ಸದಸ್ಯರು

ಪ್ರತಿದಾರ ಸಭೆ ಸೇರುತ್ತಿದ್ದು ಕನಿಷ್ಟ ರೂ ೧೦% ನ್ನು ಉಳಿತಾಯ ಮಾಡುತ್ತಿದ್ದಾರೆ. ಉಳಿತಾಯದ ಮೊತ್ತದಿಂದ ಸದಸ್ಯರು ಆಂತರಿಕ ಸಾಲ ಪಡೆದು ತಮ್ಮದಿನನಿತ್ಯದ ಅವಶ್ಯಕತೆಗಳಿಗೆ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬಳಸುತ್ತಾರೆ. ಗುಂಪುಗಳು ಪ್ರಾರಂಭದಿಂದ ಸೆಪ್ಟೆಂಬರ್ -೨೦೧೩ರ ಅಂತ್ಯದವರೆಗೆ ರೂ ೧೩೮೩.೫೪ ಕೋಟಿ ಉಳಿತಾಯ ಮಾಡಿರುತ್ತಾರೆ. ೧೨೪೬೨೦ ಗುಂಪುಗಳು ರೂ ೧೪೪೦.೬೦ ಕೋಟಿಯನ್ನು ಬ್ಯಾಂಕ್‌ಗಳಿಂದ ಸಾಲ ಪಡೆದುಕೊಂಡಿರುತ್ತಾರೆ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ರೂ ೩೬೮೮.೬೨ ಕೋಟಿಗಳ ಆಂತರಿಕ ಸಾಲದ ವ್ಯವಹಾರ ಮಾಡಿರುತ್ತಾರೆ.

೮. **ದೇವದಾಸಿ ಪುನರ್ವಸತಿ ಯೋಜನೆ:** ಈ ಯೋಜನೆಯಡಿ ರಾಜ್ಯದ ೧೪ ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಯಾದಗಿರಿ, ದಾವಣಗೆರೆ ಮತ್ತು ಗದಗ ಜಿಲ್ಲೆಗಳಲ್ಲಿದೆ. ಇಲ್ಲಿನ ಮಾಜಿ ದೇವದಾಸಿ ಮಹಿಳೆಯರಿಗೆ ಘಟಕ ವೆಚ್ಚ ರೂ ೨೦ ಸಾವಿರ ಗಳವರೆಗೆ ವಿವಿಧ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಂಡು ಸ್ವಾವಲಂಬಿಗಳಾಗಲು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳ ಮೂಲಕ ಶೇಕಡ ೫೦ರಷ್ಟು ಸಾಲವನ್ನು ಒದಗಿಸಿದೆ. ಈ ಸಾಲದ ಶೇಕಡ ೫೦ರಷ್ಟು ಸಹಾಯಧನವನ್ನು ನಿಗಮದಿಂದ ನೀಡಲಾಗುತ್ತಿದೆ. ಇದಲ್ಲದೆ ಈ ಪದ್ಧತಿಯನ್ನು ಹೋಗಲಾಡಿಸಲು ಜಾಗೃತಿ ಶಿಬಿರವನ್ನು ಹಾಗೂ ಸ್ವಸಹಾಯ ಗುಂಪುಗಳನ್ನು ರಚಿಸಲು ಕಿರುಸಾಲದ ಯೋಜನೆಯಡಿಯಲ್ಲಿ ಶೇಕಡ ೬ರ ಬಡ್ಡಿದರದಲ್ಲಿ ಸಾಲ ವಿತರಿಸಲಾಗುತ್ತಿದೆ. ಹಾಗೂ ಆರೋಗ್ಯ ಶಿಬಿರಗಳನ್ನು ಸಹ ಕೈಗೊಳ್ಳಲಾಗಿದೆ.

೯. **ವಿಧವಾ ವೇತನ:** ವಿಧವಾ ವೇತನವನ್ನು ೧೯೮೪ ರಾಜ್ಯ ಸರ್ಕಾರವು ಜಾರಿಗೊಳಿಸಿದೆ. ಇದನ್ನು ಮುಖ್ಯವಾಗಿ ಗಂಡ-ತೀರಿಕೊಂಡ ನಿರ್ಗತಿಕ ವಿಧವೆಯರಿಗೆ ಮಾತ್ರ ನೀಡಲಾಗುತ್ತದೆ. ಈ ಯೋಜನೆಯ ಫಲಾನುಭವಿಯಾಗಲು ಮಹಿಳೆಗೆ ಕನಿಷ್ಠ ೧೮ ವರ್ಷವಾಗಿರಬೇಕು. ವಿಧವೆಯರ ವಾರ್ಷಿಕ ಆದಾಯ ೨೦೦೦ ರೂಪಾಯಿಗಿಂತ ಕಡಿಮೆ ಇರಬೇಕು. ಈ ವಿಧಾವಾ ವೇತನ ಮೊದಲು ಕೇವಲ ೭೫ ರೂಪಾಯಿಗಳನ್ನು ನೀಡುತ್ತಿದ್ದರು. ೧೯೯೦ ರಲ್ಲಿ ಅದನ್ನು ೨೦೦ ರೂಪಾಯಿಗಳಿಗೆ ಏರಿಕೆ ಮಾಡಿದರು. ನಂತರ ಕೆಲವು ವರ್ಷಗಳ ಬಳಿಕೆ ಪ್ರತಿಯೊಬ್ಬರಿಗೆ ೫೦೦ ರಿಂದ ೬೦೦ಗೆ ನೀಡಲಾಗುತ್ತಿದೆ. ಇತ್ತೀಚಿಗೆ ರಾಜ್ಯ ಸರ್ಕಾರವು ನಿರ್ಗತಿಕ ವಿಧವೆಯರಿಗೆ ಪ್ರತಿ ತಿಂಗಳಿಗೆ ೧೦೦೦ ರೂಪಾಯಿಗಳನ್ನು ಕೊಡುವಂತೆ ಆದೇಶವಾಗಿದೆ.

ಈಗಾಗಲೇ ವಿಧವಾ ವೇತನ ಪಡೆಯುತ್ತಿರುವ ಮಹಿಳೆಯರಲಿ ಕೆಲವು ಮಹಿಳೆಯರ ವೇತನ ನಿಂತು ಹೋಗಿದೆ. ಈ ವಿಚಾರವು ಸಂದರ್ಶನದ ವೇಳೆಯಲ್ಲಿ ಹಂಚಿಕೊಂಡರು. ಮಕ್ಕಳು ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂದು ತುಂಬ ಮಹಿಳೆಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ವೇತನ ನೀಡುವುದನ್ನು ನಿಲ್ಲಿಸಿದ್ದರಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ದೇಶದ ಕೊಳಚೆ ಪ್ರದೇಶದ ಮಹಿಳೆಯರ ಜೀವನ ಇಂದು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಪ್ರತಿಯೊಂದು ಕೆಲಸಕಾರ್ಯಗಳಲ್ಲಿ ನೋಡಬಹುದು. ಮಹಿಳೆ ಹೇಗೆ ಕೌಟುಂಬಿಕ ಅಭಿವೃದ್ಧಿಗೆ ಕಾರಣ. ಮಹಿಳೆ ಕೊಳಚೆ ಪ್ರದೇಶದಲ್ಲಿ ಅನೇಕ ಬಗೆಯ ಸಮಸ್ಯೆಗಳಲ್ಲಿ ಸಿಲುಕಿದ್ದಾಳೆ. ಸರ್ಕಾರ ಮಹಿಳೆಯರ ಅಭಿವೃದ್ಧಿ ರೂಪಿಸಿದ ಹಲವು ಯೋಜನೆಗಳು ಯಶಸ್ಸು ಕಾಣದೇ ನಗರ ಪ್ರದೇಶ ಕೊಳಗೇರಿಯಲ್ಲಿ ನೆಲೆ ನಿಂತ ಮಹಿಳೆಯರ ಪಾಲಿಗೆ ಸರ್ಕಾರ ಯೋಜನೆಗಳು ಕೇವಲ ದಾಖಲೆಗಳಲ್ಲಿ ಯೋಜನೆಗಳಾಗಿ ಉಳಿದಿದೆ. ಅವು ಕಾರ್ಯರೂಪಕ್ಕೆ ಬಂದರೂ ಸಹ ಅಸಮರ್ಪಕವಾಗಿವೆ. ಬಳಕೆಯಾಗಿ–ಕೊಳಗೇರಿ ಮಹಿಳೆಯರಿಗೆ ಪ್ರಯೋಜನವಾಗಿದೆ.

ಕೊಳಗೇರಿ ಮಹಿಳೆಯರು ವಿಧಿವೇ ವೇತನ ಅಸಮರ್ಪವಾಗಿ ಬಳಿಕೆಯಾಗಿ ಯಾವುದೇ ರೀತಿಯಲ್ಲಿ ಕೊಳಗೇರಿ ಮಹಿಳೆಯರಿಗೆ ಪ್ರಯೋಜನವಾಗದೆಯಿರುವ ಸಾಧ್ಯತೆಯನ್ನು ನೋಡಬಹುದು. ಕೊಳಗೇರಿ ಪ್ರದೇಶದ ಮಹಿಳೆಯರ ಸಹ ತಮ್ಮ ಕುಟುಂಬದ ಆರ್ಥಿಕ ಲಾಭವನ್ನು ಪಡೆಯಲು ಕುಟುಂಬದಲ್ಲಿ ಜೀವನ ನಡೆಸಲು ಆರ್ಥಿಕ ಪ್ರಗತಿಗೆ ಅಭಿವೃದ್ಧಿ ಪಡಿಸಲು ಕುಲಕಸುನೊಂದಿದೆ. ಬೀಡಿ ಕಟ್ಟುವುದು, ಹಗ್ಗ ಹೊಸೆಯುವುದು, ಹೂಕಟ್ಟುವುದು, ಮನೆಕೆಲಸ ಮಾಡುವುದು, ಕಟ್ಟಡ ನಿರ್ಮಾಣ ಕೆಲಸ ಇತ್ಯಾದಿ ಕಡಿಮೆ ಆದಾಯ ಬರುವ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರಿಗೆ ಬೇರೊಂದು ಉದ್ಯೋಗ ಅನಿವಾರ್ಯ. ಇಂತಹ ಕೊಳಚೆ ಪ್ರದೇಶದ ಮಹಿಳೆಯರ ಮನೆಯ ಹೊರಗೂ ದುಡಿಯಬೇಕಾದ ಅನಿವಾರ್ಯದ ಸಂಗತಿಯಾಗಿದೆ.

ಕುಟುಂಬದಲ್ಲಿ ಮಹಿಳೆಯರ ಮನೆಯ ಅಡಿಗೆಕೆಲಸ ಮತ್ತು ಕುಟುಂಬ ಕಾಳಜಿ ಸಂಸಾರ ಬಗ್ಗೆ ಯೋಜನೆ ಸಂದರ್ಭದಲ್ಲಿ ಮಕ್ಕಳ ಪಾಲನೆ ಕುಟುಂಬದ ಜಾವಾಬ್ದಾರಿ ಮಹಿಳೆಯರ ಮೇಲಿರುತ್ತದೆ. ಸಾಮಾನ್ಯವಾಗಿ ಕೊಳಚೆ ಪ್ರದೇಶದಲ್ಲಿ ಇರುವ ಕುಟುಂಬಗಳ ಎಲ್ಲಾ ಜವಾಬ್ದಾರಿಗಳು ಮಹಿಳೆಯರ ಮೇಲಿರುತ್ತವೆ. ಸಾಮಾನ್ಯವಾಗಿ ಕೆಳವರ್ಗದ ಕುಟುಂಬಗಳಲ್ಲಿ ಈ ಮೇಲಿನ ವ್ಯವಸ್ಥೆಯಲ್ಲಿ ಮಹಿಳೆಯರು ಬದುಕುತ್ತಿದ್ದಾರೆ.

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶಗಳ ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ: ನಗರದಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಇವೆ. ಸಂಸ್ಥೆಗಳ ಉದ್ದೇಶ ಸ್ವಯಂ ಸೇವಾ ಸಂಸ್ಥೆಗಳ ಉಲ್ಲೇಖನಾರ್ಹ ಕೆಲಸ ಮಾಡಿರುವುದನ್ನು ಕಾಣಬಹುದು.

ಕರ್ನಾಟಕ ಸರಕಾರದ ನಗರಾಭಿವೃದ್ಧಿ ಇಲಾಖೆ ಮಾರ್ಗ ಸೂಚಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಪರ ಕಲ್ಯಾಣ ಯೋಜನೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರು ಕಲ್ಯಾಣಕ್ಕಾಗಿ ಕರ್ನಾಟಕ ಸರಕಾರವು ಶೇ. ೨೨.೭೫ರ ಈ ಯೋಜನೆಯನ್ನು ಜಾರಿಗೆ ತಂದಿದೆ. ಇದು ನಗರದ ಬಡವರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ಕೈಗೊಂಡಿರುತ್ತದೆ. ಈ ಯೋಜನೆಯ ಅಡಿಯಲ್ಲಿ ಕೆಲವು ಕಾರ್ಯಕ್ರಮಗಳು ಜಾರಿಗೊಳ್ಳುತ್ತಿವೆ. ಅವುಗಳೆಂದರೆ,

ವಸತಿ ಯೋಜನೆ : ಈ ಯೋಜನೆಯ ಫಲಾನುಭವಿಯಾಗಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದು ಅವರ ಕುಟುಂಬದ ಆದಾಯ ೩೬೦೦೦ ರೂಗಳನ್ನು ಮೀರತಕ್ಕದ್ದಲ್ಲ. ನಿವೇಶನವು ಫಲಾನುಭವಿಯ ಹೆಸರಿನಲ್ಲಿದ್ದು, ಆಸ್ತಿತೆರಿಗೆಯನ್ನು ಪಾವತಿಸಿದ ದಾಖಲೆಗಳು ಇರತಕ್ಕದ್ದು. ನಿವೇಶವು ೨೨.೫ ಚದರ ಅಡಿಯಿಂದ ೪೦೦ ಚದರ ಅಡಿಗೂ ಹೆಚ್ಚು ಇರತಕ್ಕದು. ಇಂತಹ ಫಲಾನುಭವಿಗೆ ೭೦,೦೦೦ ರೂಪಾಯಿಗಳು ಮೊತ್ತವನ್ನು ಮೂರು ಹಂತಗಳಲ್ಲಿ ತಳಪಾಯ, ಲಿಂಟರ್ ಮೇಲ್ಚಾವಣೆ ಮುಕ್ತಾಯದ ನಂತರ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

ಭಾರಿ ಶಸ್ತ್ರ ಚಿಕಿತ್ಸೆಗೆ ಸಹಾಯ ಧನ : ಈ ಯೋಜನೆಯ ಅಡಿಯಲ್ಲಿ ಭಾರಿ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡ ನಗರದ ಖಾಯಂ ನಿವಾಸಿಯಾಗಿರುವ ಮಹಿಳೆ ಅಥವಾ ಪುರಷ ಫಲಾನುಭವಿಗೆ ನೀಡಲಾಗುತ್ತದೆ. ೨೬,೦೦೦ ರೂಪಾಯಿ ವಾರ್ಷಿಕ ಆದಾಯವನ್ನು ಮೀರಬಾರದು ಮತ್ತು ಇತರೆ ಇಲಾಖೆಯಿಂದ ಸಹಾಯಧನವನ್ನು ಪಡೆದಿರಬಾರದು. ಅಂಥವರಿಗೆ ಯಶಸ್ವಿನಿ ಯೋಜನೆಯಡಿ ನಿಯಾಮಾನುಸಾರವಾಗಿ ಒಂದು ಬಾರಿ ಸಹಾಯಧನವನ್ನು ನೇರವಾಗಿ ಆಸ್ಪತ್ರೆಗೆ ಬಿಡುಗಡೆ ಮಾಡಲಾಗುತ್ತದೆ. ಕೊಳಗೇರಿ ನಿವಾಸಿಗಳಿಗೂ ಇದು ಅನ್ವಯವಾಗುತ್ತದೆ.

ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ನೆರವು : ಈ ಯೋಜನೆಯಡಿಯಲ್ಲಿ ಪಿಯುಸಿ ಬಿ.ಎ. ಬಿ.ಎಸ್.ಸಿ ಬಿ.ಕಾಂ ಎಂ.ಎ. ಎಂ.ಕಾಂ. ಎಂ.ಎಸ್ಸಿ, ಎಂ.ಎಡ್. ಬಿ.ಇ. ಎಲ್.ಎಲ್.ಬಿ. ಎಂ.ಬಿ.ಬಿ.ಎಸ್. ಮತ್ತು ಎಂ.ಫಿಲ್ ಪಿಎಚ್.ಡಿ. ಯಲ್ಲಿ ಓದುತ್ತಿರುವ ಹೆಚ್ಚು ಅಂಕಗಳನ್ನು ಗಳಿಸಿದವರಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಈ ಯೋಜನೆಯ ಫಲಾನುಭವಿಯಾಗಲು ಬಡತನ ರೇಖೆಗಿಂತ ಕೆಳಗಿದ್ದು ಕುಟುಂಬದವರ ವಾರ್ಷಿಕ ವರಮಾನ ರೂ. ೨ ಲಕ್ಷಕ್ಕಿಂತ ಕಡಿಮೆ ಇದ್ದು ನಗರ ಖಾಯಂ ನಿವಾಸಿಯಾಗಿರಬೇಕು.

ವೈಯಕ್ತಿಕ ಶೌಚಾಲಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿದ್ದು ಅವರ ವಾರ್ಷಿಕ ಆದಾಯ ೩೬,೦೦೦ ಮೀರಿಬಾರದು. ನಗರ ಖಾಯಂ ನಿವಾಸಿಯಾಗಿರಬೇಕು ಮತ್ತು ಮನೆ ಪತ್ರವನ್ನು ಲಗತ್ತಿಸಬೇಕಾಗುತ್ತದೆ. ಆಗ ಎರಡು ಸಮಾನ ಕಂತುಗಳಲ್ಲಿ ೧೫,೦೦೦ ರೂ ಗಳನ್ನು ಬಿಡುಗಡೆ ಮಾಡಲಾಯಗುತ್ತದೆ.

ಅಡುಗೆ ಅನಿಲ : ಈ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಪಂಗಡದವಿಗೆ ನೇರವಾಗಿ ಅಡುಗೆ ಅನಿಲ ಸಂರ್ಪ ಪಡೆಯಲು ಸಹಾಯಧನವನ್ನು ನೀಡಲಾಗುತ್ತದೆ.

ತರಬೇತಿ ಕಾರ್ಯಕ್ರಮದ ನಂತರ ಯಂತ್ರೋಪಕರಣಗಳ ಪೂರೈಕೆ : ಈ ಯೋಜನೆಯಡಿಯಲ್ಲಿ ಸರ್ಕಾರಿ ಸಂಸ್ಥೆ ಅಥವಾ ಸರ್ಕಾರೇತರ ಸಂಸ್ಥೆಗಳಲ್ಲಿ ಕನಿಷ್ಠ ಆರು ತಿಂಗಳ ತರಬೇತಿಯನ್ನು ಪೂರ್ಣಗೊಳಿಸಿದಂತಹ ಮಹಿಳೆ ಅಥವಾ ಪುರುಷರಿಗೆ ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು

ಯಂತ್ರೋಪಕರಣಗಳನ್ನು ನೀಡಲಾಗುತ್ತದೆ. ಬಡತನರೇಖೆಗಿಂತ ಕೆಳಗಿದ್ದು ವಾರ್ಷಿಕ ಆದಾಯ ೨೬,೦೦೦ ಮೀರಿರದ ನಗರದ ಖಾಯಂ ನಿವಾಸಿಯಾಗಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದವರು ಈ ಯೋಜನೆಯ ಫಲಾನುಭವಿಗಳಾಗಲು ಅರ್ಹರು.

ಸ್ಲಂ ಅಭಿವೃದ್ಧಿ ಕೇಂದ್ರ: ಬಳ್ಳಾರಿ ನಗರ ಕೊಳಗೇರಿ ಸ್ಲಂ ಅಭಿವೃದ್ದಿ ಕೇಂದ್ರವು ಸ್ಲಂ ಜನರ ಅಭಿವೃದ್ಧಿ ಕುರಿತು ಕಾರ್ಯವನ್ನು ನಿರ್ವಹಿಸುತ್ತಿದೆ. ಸ್ಲಂ ಜನರು ಸಮಸ್ಯೆಗಳು ನಿರ್ವಹಣೆ ಅಭಿವೃದ್ಧಿಯೇ ಇದರ ಮುಖ್ಯ ಉದ್ದೇಶವಾಗಿದೆ. ಈ ಸಂಸ್ಥೆಯ ಒಟ್ಟು ೬೦ ಸ್ಲಂಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ೨೦ ಜನರು ಸಮಸ್ಯೆ ನಿರ್ವಹಣೆಗೆ ಪರಿಹಾರ ಕೆಲಸವನ್ನು ನಿರ್ವಹಿಸುತ್ತಾರೆ. ಈ ಸಂಸ್ಥೆಯ ಕಾರ್ಯಕ್ರಮಗಳು.

೧. ಜನರಿಗೆ ಆರೋಗ್ಯ ಬಗ್ಗೆ ಜಾಗೃತಿ ಕಾರ್ಯಕ್ರಮ.

೨. ಮಹಿಳೆಯರಿಗೆ ಟೈಲರಿಂಗ್ ತರಬೇತಿ.

೩. HIV/ADIS ಬಗ್ಗೆ ಜಾಗೃತಿ ಕಾರ್ಯಕ್ರಮ ಮಾಡುವುದು.

೪. ಕ್ಷಯರೋಗ ಬಗ್ಗೆ ಜಾಗೃತಿ ಕಾರ್ಯಕ್ರಮ ಮಾಡುವುದು.

೫. ಬಾಲಕಾರ್ಮಿಕರ ನಿರ್ಮೂಲನೆಗಾಗಿ ರ‍್ಯಾಲಿ ಮಾಡುವುದು.

೬. ಸ್ವಯಂ ಉದ್ಯೋಗ ಕಾರ್ಯಕ್ರಮ ಮಾಡುವುದು.

೭. ಬಾಲ್ಯ ವಿಹಾಹವನ್ನು ತಡೆಯಲು ಜಾಗೃತಿ ಮೂಡಿಸುವುದು.

೮. ಪೋಲಿಯ ಜಾಗೃತಿ ಕಾರ್ಯಕ್ರಮ ಮಾಡುವುದು.

೯. ಮಹಿಳೆಯ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು.

೧೦. ಕ್ಯಾನ್ಸರ್ ರೋಗದ ಬಗ್ಗೆ ಬೀದಿ ನಾಟಕ ಕಾರ್ಯಕ್ರಮ ಮಾಡಿದವರ ಮೂಲಕ ಅರಿವು ಮೂಡಿಸುವುದು.

೧೧. ಸ್ವಚ್ಚ ಮತ್ತು ಕಾಯಿಲೆ ಬಗ್ಗೆ ಜಾಥ ಮಾಡುವುದು.

೧೨. ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ, ಮೆಹಂದಿ ಕಾರ್ಯಕ್ರಮ ಮಾಡುವುದು.

೧೩. ಅಂಗನವಾಡಿಗೆ ಮಕ್ಕಳನ್ನು ಕಳಿಸುತ್ತಾರೆ. ಅರಿವು ಮಾಡಿಸಲು ಮನೆಗಳಿಗೆ ಭೇಟಿ ಮಾಡಿ ತಿಳಿಸುವುದು.

* ಚರಂಡಿ ಮತ್ತು ಬಯಲು ಶೌಚಾಲಯದಿಂದ ಹರಡುವಂತ ಕಾಯಿಲೆ ಬಗ್ಗೆ ಕಾರ್ಯಕ್ರಮ ಏರ್ಪಡಿಸುವುದು.

* ಆರೋಗ್ಯ ಶಿಬಿರ ಹಾಕಿಕೊಳ್ಳುವು / ಏಡ್ಸ್ / ಎಚ್.ಐ.ವಿ / ತಪಾಸಣೆಗೆ ಒಳಪಡಿಸುವುದು.

* ಕಣ್ಣು ಪರೀಕ್ಷೆ ಮಾಡಿಸುವುದು.
* ಗರ್ಭಿಣಿ ಮತ್ತು ಬಾಣತಿಯರ ಅಪೌಷ್ಠಿಕತೆ ಆಹಾರ ಬಗ್ಗೆ ಜಾಗೃತಿ ಮೂಡಿಸುವುದು.
* ಮಾಹಿತಿ ಹಕ್ಕು ಕಾಯ್ದೆ ೨೦೦೫ ರ ಕುರಿತು ಅಕ್ಷರಸ್ಥ ಮುಖಂಡರಿಗೆ ತರಬೇತಿಯನ್ನು ನೀಡುವುದು.
* ಗೃಹ ಕಾರ್ಮಿಕ ಹಕ್ಕುಗಳಿಗಾಗಿ ಜಾಥಾ ಮತ್ತು ಅವರಿಗೆ ನಾಯಕತ್ವದ ತರಬೇತಿಯನ್ನು ನೀಡುವುದು.
* ಸ್ವಯಂ ಸಹಾಯ ಸಂಘಗಳನ್ನು ಕಟ್ಟುವುದು.
* ವಸತಿಯೋಜನೆಯ ಬಗ್ಗೆ ಜನರಿಗೆ ಮನವರಿಕೆ ಕಾರ್ಯಕ್ರಮ.
* ಮಕ್ಕಳ ಶಿಕ್ಷಣ ಮತ್ತು ವಯಸ್ಕ ಶಿಕ್ಷಣದ ಕುರಿತು ಗಮನ ಹರಿಸುವುದು ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವುದು.

ಸ್ಲಂ ಅಭಿವೃದ್ಧಿ ಕೇಂದ್ರವು ಮೇಲಿನ ಕಾರ್ಯಕ್ರಮಗಳನ್ನು ಒಂದು ವರ್ಷದ ಅವಧಿಯಲ್ಲಿ ಮಾಡುವಂತಹವುಗಳಿವೆ. ಇವುಗಳ ಜೊತೆಗೆ ವಯೋವೃದ್ಧರ ಸಂಘ ಸ್ಲಂ ಅಭಿವೃದ್ಧಿ ಒಕ್ಕೂಟ ಗೃಹ ಕಾರ್ಮಿಕರು ಒಕ್ಕೂಟ, ಮಹಿಳಾ ಸ್ವಸಹಾಯ ಮಹಿಳೆಯರಿಗೆ ಟೈಲರಿಂಗ್ ತರಬೇತಿಕಾರ್ಯ, HIV/ADIS ಬಗ್ಗೆ ಜಾಗೃತಿ ಕೆಲವೊಂದು ಉದ್ದೇಶಗಳನ್ನು ಹೊಂದಿದೆ.

ಈ ಸರ್ಕಾರೇತರ ಸಂಸ್ಥೆಗಳು ಆರೋಗ್ಯ ಸಮಸ್ಯೆ ವಿಚಾರದಲ್ಲಿ ಮಹಿಳೆಯರು ಮಕ್ಕಳಿಗೆ ಗರ್ಭಿಣಿಯರಿಗೆ ಬಾಣಂತಿಯರಿಗೆ, ಕಿಶೋರಿಯರಿಗೆ ಆರೋಗ್ಯ ಹಾಗೂ ಕೊಳಚೆ ಪ್ರದೇಶದಲ್ಲಿ ಸ್ವಚ್ಛತೆಯ ಬಗ್ಗೆ ಸಾಂಕ್ರಾಮಿಕದ ಮಾಹಿತಿ ನೀಡುತ್ತದೆ. ಅನೇಕ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳುತ್ತವೆ. ಮಕ್ಕಳಿಗೆ ಸಮತೋಲನ ಆಹಾರ ನೀಡುವುದು. ಹದಿವಯಸ್ಸಿನ ಮಕ್ಕಳಿಗೆ ಲೈಂಗಿಕೆ ವಿಷಯದ ಬಗ್ಗೆ ಸೂಕ್ತ ಮಾಹಿತಿ, ಬಾಲ್ಯವಿವಾಹ ಸಮಸ್ಯೆ ಬಗ್ಗೆ ಅರಿವು ಹೀಗೆ ಅನೇಕ ವಿಷಯಗಳ ಕುರಿತು ಮಾಹಿತಿ ನೀಡಿ ಜನಸಮುದಾಯವನ್ನು ಆರೋಗ್ಯವಂತರಾನ್ನಾಗಿ ಮಾಡುವಲ್ಲಿ ಪ್ರಯತ್ನಿಸುತ್ತಿವೆ. ಕೆಲವು ಸಮಾಜದ ಮನೆಗಳಲ್ಲಿ ಮಹಿಳೆಯರು ಶಿಕ್ಷಣದಿಂದ ವಂಚಿತರರಾಗಿದ್ದಾರೆ.

ಸಂಶೋಧನೆಯಲ್ಲಿ ಕೈಗೊಂಡ ಕಾರ್ಯಗಳ ಪಟ್ಟಿ

* ಕೊಳಗೇರಿ ಮಹಿಳೆಯರಿಗೆ ಪೌಷ್ಠಿಕ ಆಹಾರ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.
* ಕೊಳಚೆ ಪ್ರದೇಶದಲ್ಲಿ ಶಿಕ್ಷಣ, ಆರೋಗ್ಯ ಮತ್ತು ನೈರ್ಮೂಲ ಶೌಚಾಲಯ ಕುರಿತು ಅರಿವು ಕಾರ್ಯಕ್ರಮ.
* ಅಂಗವಿಕಲರಿಗೆ ಇರುವಂತಹ ಸೌಲಭ್ಯಗಳಿಗೆ ಮಾಹಿತಿ ನೀಡಲಾಯಿತು.

* ಆಧಾರ್ ಕಾರ್ಡ್/ಪಡಿತರ ಚೀಟಿಗಾಗಿ ಸಹಾಯ.

* ಕೌಟುಂಬಿಕ ವಿವಾಹ ಕಾಯ್ದೆ ಬಗ್ಗೆ ಮಾಹಿತಿ ನೀಡಲಾಗಿದೆ.

ಕೊಳಗೇರಿ: ಮಹಿಳಾ ಸ್ವಯಂ ಸಹಾಯ ಗುಂಪಿನ ಕಾರ್ಯಗಳು

ಚಿತ್ತವಾಡ್ಗಿ ಸ್ಲಂ: ಹೊಸಪೇಟೆ ನಗರದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ವಾಯುವ್ಯಕ್ಕೆ ಚಿತ್ತವಾಡಗಿ ಇದೆ. ವಿಜಯನಗರ ಕಾಲದ ರಾಣಿಯಿಂದ ಈ ಹೆಸರು ಬಂದಿದೆ.

೧. ಮರದಾಂಬಿ: ಕೊಳಚೆ ಪ್ರದೇಶದ ನಿವಾಸಿಯ ಮಹಿಳೆ. ಇವಳು ವಿಧುವೆಯಾಗಿದ್ದು, ಮಗಳ ಮದುವೆಗಾಗಿ ಸ್ವ-ಸಹಾಯ ಗುಂಪುನಿಂದ ೧ ಲಕ್ಷ ಸಾಲ ಪಡೆದಿದ್ದಾಳೆ. ಕಡಿಮೆ ಬಡ್ಡಿಯಲ್ಲಿ ಈ ಮಹಿಳೆ ಮನೆಕೆಲಸ ಮುಸೆರೆ ತೊಳಯಲವು ಬಟ್ಟೆ ಹೋಗೆಯುವ ಕೆಲಸ ಮಾಡಿ ಒಂದು ದಿನಕ್ಕೆ ೩ ಮನೆ ಕೆಲಸ ನಿರ್ವಹಿಸುತ್ತಾರೆ. ಒಂದು ವಾರಕ್ಕೊಮ್ಮೆ ನಡೆಯುವ ಸಂಘದ ಸಮಿತಿಯಲ್ಲಿ ಬಡ್ಡಿಯನ್ನು ಕಟ್ಟುವ ಮೂಲಕ ಮರುಪಾವತಿ ಮಾಡಲು ಸ್ವಸಹಾಯ ಗುಂಪಿನ ಸಹಾಯ ಪಡೆದಿದ್ದಾರೆ.

ಸ್ವಯಂ ಸಹಾಯ ಗುಂಪಿನ ನಿಯಮಗಳು : ಗುಂಪುಕಾರ್ಯ ಉದ್ದೇಶ ಫಲಾನುಭವಿಯ, ಸಭೆಯಲ್ಲಿ ಏಳು ಜನರು ಸಲಹಾ ಸಮಿತಿ ರಚನೆ ಸಮಿತಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಮತ್ತು ಕಾರ್ಯದರ್ಶಿ ಆಯ್ಕೆಯಾದ ಒಬ್ಬ ಸದಸ್ಯೆ, ಸಂಸ್ಥೆಯ ನಿರ್ದೇಶಕರು, ಅವರ ಒಬ್ಬ ಕಾರ್ಯದ ಉಪಸ್ಥಿತರಿಬೇಕು. ೨. ಪ್ರತಿ ತಿಂಗಳ ಸಭೆ ಸೇರಬೇಕು. ೩. ಪ್ರತಿ ತಿಂಗಳು ಸಭೆ ಸೇರಬೇಕು. ೪. ಸಾಲವನ್ನು ಅರ್ಜಿಯ ಮೂಲಕ ಕೇಳುವುದು. ಅದು ಸಭೆಸೇರುವ ದಿನ ಮುಂಚೆ ಅಧ್ಯಕ್ಷರಿಗೆ ಕೊಡಬೇಕು. ಸಾಲವನ್ನು ನಾಲ್ಕು ಕಂತಿನಲ್ಲಿ ಹಿಂದಿರುಗಿಸಬೇಕು ೧ ಸಲಕ್ಕೆ ೧೦೦ ರೂಪಾಯಿಗೆ ಶೇ ೨ ರಂತೆ ಬಡ್ಡಿ ಪ್ರತಿ ತಿಂಗಳು ಕಟ್ಟಬೆಕು. ಸಾಲಕ್ಕೆ ಪಡೆದ ಹಣ ದುರುಪಯೋಗವನ್ನು ಮಾಡಬಾರದು. ಒಂದು ವೇಳೆ ಮಾಡಿದರೆ ಸಂಘದಿಂದ ಹೊರಹಾಕುವುದು. ಎರಡು ಕಂತಿನಲ್ಲಿ ಮಹಿಳೆ ಸಂಘದಿಂದ ಹೊರ ಬಂದರೆ ಅವರಿಗೆ ಅವಳ ಹಣ ಮತ್ತು ಅವಳು ತುಂಬಿದ ಹಣದ ಬಡ್ಡಿಯನ್ನೇ ಕೊಡುವುದು.

ಮಹಿಳೆಯರಿಗೆ ಮಾರುಕಟ್ಟೆ ನೆರವು ಯೋಜನೆ: ಈ ಯೋಜನೆಯಡಿ ಮಹಿಳಾ ಉದ್ದಿಮೆದಾರರು ಮತ್ತು ನಗರ ಸ್ತ್ರೀಶಕ್ತಿಗುಂಪುಗಳು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಜಿಲ್ಲೆಮಟ್ಟದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ವೇದಿಕೆಯ ಕಲ್ಪಿಸಲಾಗುತ್ತದೆ. ೨೦೧೨-೨೦೧೩ ಸಾಲಿನಲ್ಲಿ ೧೦೦.೦೦ ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು. ೧೫೨೦ ಮಹಿಳೆಯರಿಗೆ ಪ್ರಯೋಜನೆ ಕಲ್ಪಿಸಲು ಉದ್ದೇಶಿಸಿದೆ. ಈ ಯೋಜನೆಯಡಿ ಸಪ್ಟೆಂಬರ್ ೨೦೧೨ ಅಂತ್ಯದವರೆಗೆ ರೂ. ೫೧೮ ಲಕ್ಷಗಳನ್ನು ವೆಚ್ಚ ಮಾಡಿ ಮಹಿಳೆಯರಿಗೆ ಪ್ರಯೋಜನ ನೀಡಲಾಗಿದೆ.

ಕಿರುಸಾಲದ ಮರು ಪಾವತಿ ಯೋಜನೆ: ಇದು ಒಂದು ಹೊಸ ಯೋಜನೆಯಾಗಿದ್ದು, ೨೦೧೧-೨೦೧೨ ಸಾಲಿನಿಂದ ಜಾರಿಗೊಳಿಸಲಾಗಿದೆ. ಸ್ತ್ರೀ ಶಕ್ತಿ ಗುಂಪುಗಳು ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಾಗಿ ಶೇಖಡ ೬ರ ಬಡ್ಡಿ ದರದಲ್ಲಿ ಪ್ರತಿ ಸದಸ್ಯರಿಗೆ ಕನಿಷ್ಠ ರೂ. ೫,೦೦೦/- ರಿಂದ ೧೦,೦೦೦/- ಗಳ ಸಾಲವನ್ನು ಪ್ರತಿ ಗುಂಪಿಗೆ ಗರಿಷ್ಠ ರೂ. ೧೦೦೦ ಲಕ್ಷಗಳವರೆಗೆ ಸ್ವಸಹಾಯ ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳಲು ಸಾಲವನ್ನು ಒದಗಿಸಲಾಗುತ್ತದೆ. ೨೦೧೧-೧೨ ನೇ ಸಾಲಿನಲ್ಲಿ ರೂ. ೩೦೦.೦೦ ಲಕ್ಷಗಳ ಅನುದಾನ ನಿಗದಿಪಡಿಸಿದ್ದು ೫೬೦೦ ಮಹಿಳೆಯರಿಗೆ ಪ್ರಯೋಜನ ಕಲ್ಪಿಸಲು ಉದ್ದೇಶಸಿದೆ.

ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು: ಕರ್ನಾಟಕ ಜನ ಸಂಖ್ಯೆಯಲ್ಲಿ ಶೇಖಡ ೧೧.೨೧ ರಷ್ಟು ಮಕ್ಕಳು ಇದ್ದಾರೆ ೨೦೦೧ ನೇ ಇಲಾಖೆಯ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮತ್ತು ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದ್ದು, ಇದರಿಂದಾಗಿ ರಾಜ್ಯದ ಒಟ್ಟಾರೆ ಸಾಮಾಜಿಕ, ಅರ್ಥಿಕ ಬೆಳವಣೆಗೆಗೆ ಅನುವು ಮಾಡಿದಂತಾಗಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಸದರಿ ಯೋಜನೆಯಡಿ ೬ ಸೇವೆಗಳನ್ನು ನೀಡಲಾಗುತ್ತಿದೆ. ಅಂದರೆ ಪೂರಕ ಪೌಷ್ಠಿಕ ಆಹಾರ ಚುಚ್ಚು ಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ ಪೌಷ್ಠಿಕ ಮತ್ತು ತಾಯಂದಿರಿಗೆ ಆರೋಗ್ಯ ಶಿಕ್ಷಣ ಹಾಗೂ ೩-೬ ವರ್ಷದ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ನೀಡಲಾಗುತ್ತಿದೆ. ಈ ಯೋಜನೆಯಡಿ ೬೧೧೮೭ ಅಂಗನವಾಡಿ ಕೇಂದ್ರಗಳು ಮತ್ತು ೩೩೩೧ ಮಿನಿ ಅಂಗನವಾಡಿ ಕೇಂದ್ರಗಳೂ ಮಂಜೂರಾಗಿದ್ದು ಸೆಪ್ಟೆಂಬರ್ ೨೦೧೨ ಅಂತ್ಯಕ್ಕೆ ೬೦೭೬೯ ಅಂಗನವಾಡಿ ಕೇಂದ್ರಗಳು ಮತ್ತು ೩೩೩೧.

೧. ೬ ತಿಂಗಳಿಂದ ೬ ವರ್ಷದ ಮಕ್ಕಳಿಗೆ ೫೦ ಕ್ಯಾಲೋ ಮತ್ತು / ೨-೧೮ ಗ್ರಾಂ ಪ್ರೋಟಿನ್ ನೀಡಲಾಗುತ್ತದೆ.

೨. ಗರ್ಭಿಣೆ / ಬಾಣಂತಿ / ಪ್ರಾಯಪೂರ್ವ ಬಾಲಕಿಯರಿಗೆ ೬೦೦ / ಕ್ಯಾಲೋರಿ ಮತ್ತು ೧೮-೨೦ ಗ್ರಾಂ ಪ್ರೋಟಿನ್.

೩. ತೀವ್ರತರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ೮೦೦ ಕಾಲ್ಯೋರಿ ಮತ್ತು ೨೦-೨೫ ಗ್ರಾಂ ಪ್ರೋಟೀನ್ ನೀಡುವುದು. ರಾಜ್ಯದ ಜವಾಬ್ದಾರಿಯಾಗಿರುತ್ತದೆ. ಸಮಾಜಕ್ಕೆ ಅವರು ನೀಡುತ್ತಿರುವ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗೌರವಧನದೊಡನೆ ಹೆಚ್ಚುವರಿಯಾಗಿ ಅಂಗನವಾಡಿ ಕಾರ್ಯಕರ್ತರಿಗೆ ರೂ. ೧೫೦೦ ಹಾಗೂ ಸಹಾಯಕಿಯರಿಗೆ ಮಾಹೆಯಾನ ರೂ. ೩೦೦೦/- ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಮಾಹೆಯಾನ ರೂ.೧೫೦೦೮/- ಗಳನ್ನು ಕೇಂದ್ರ ಸರ್ಕಾರದ ಪಾಲಿನ ಅನುದಾನದ ಜೊತೆಯಲ್ಲಿ ನೀಡುತ್ತಿದೆ.

ರಾಜ್ಯದಲ್ಲಿ ಮಕ್ಕಳ ಪೌಷ್ಠಿಕ ಮಟ್ಟವು ಮಾರ್ಚ್ ೨೦೧೨ ಅಂತ್ಯಕ್ಕೆ ಶೇ. ೬೫.೮೮ರಷ್ಟು ಮಕ್ಕಳು ಸಾಮಾನ್ಯ ಶೇ. ೩೫.೫೨ರಷ್ಟು ಸುಧಾರಣ ಅಪೌಷ್ಟಿಕ ಹಾಗೂ ಶೇ ೧.೬೦ರಷ್ಟು ತೀವ್ರ ಅಪೌಷ್ಠಿಕತೆ ಹೊಂದಿರುತ್ತಾರೆ. ಸೆಪ್ಟಂಬರ್ ೨೦೧೨ರ ಅತ್ಯಂಕ್ಕೆ ಸಾಮಾನ್ಯ ಪೌಷ್ಠಿಕತೆಯುಳ್ಳ ಮಕ್ಕಳ ಪ್ರಮಾಣವು ಶೇ. ೬೮.೪೫ ಇದ್ದು ಸುಧಾರಣ ಅಪೌಷ್ಟಿಕತೆಯುಳ್ಳ ಮಕ್ಕಳ ಸಂಖ್ಯೆಯು ಕಡಿಮೆಯಾಗಿದ್ದು ಶೇ. ೨೯.೬೯ ಇರುತ್ತದೆ. ಮಕ್ಕಳ ಪ್ರಮಾಣವು ಶೇ. ೬೮.೪೫ ಇದ್ದು ಸುಧಾರಣ ಅಪೌಷ್ಠಿಕತೆಯುಳ್ಳ ಮಕ್ಕಳ ಸಂಖ್ಯೆಯು ಕಡಿಮೆಯಾಗಿದ್ದು, ಶೇ. ೨೯.೬೯ ಇರುತ್ತದೆ. ಮಕ್ಕಳ ಸಂಖ್ಯೆಯ ಪ್ರಮಾಣದಲ್ಲಿ ಶೇ. ೧.೬೦ ರಿಂದ ಶೇ. ೧.೮೭ ಏರಿಕೆಯಾಗಿರುತ್ತದೆ.

ಸಬಲ : ಭಾರತ ಸರ್ಕಾರದ ರಾಜೀವ್‌ಗಾಂಧಿ ಪ್ರಾಯಪೂರ್ವ ಬಾಲಕಿಯ ಸಬಲೀಕರಣ ಅಥವಾ ಸಬಲ ಎಂಬ ಹೊಸ ಯೋಜನೆಯನ್ನು ರಾಜ್ಯದ ೯ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಇದು ಶೇ. ೧೦೦ ರಷ್ಟು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಇದರ ಉದ್ದೇಶವು ೧೧-೧೮ ವರ್ಷದ ಪ್ರಾಯ ಪೂರ್ವ ಬಾಲಕಿಯರನ್ನು ಸಬಲರನ್ನಾಗಿ ಮಾಡುವುದು ಅವರ ಆರೋಗ್ಯ ಮತ್ತು ಪೌಷ್ಠಿಕ ಮಟ್ಟವನ್ನು ಹೆಚ್ಚಿಸುವುದು. ವಿವಿಧ ಕೌಶಲ್ಯಗಳು ಅಂದರೆ ಗೃಹ ಕೌಶಲ್ಯ ಜೀವನ ವೃತ್ತಿ ತರಬೇತಿ ನೀಡಲಾಗುತ್ತಿದೆ. ಸುಮಾರು ೭೦೨೨೨೫ ಪ್ರಾಯ ಪೂರ್ವ ಬಾಲಕಿಯರನ್ನು ಈ ಯೋಜನೆಯಡಿ ಸೌಲಭ್ಯ ಪಡೆಯಲು ಗುರಿ ಹೊಂದಿರುತ್ತದೆ. ೨೦೧೨-೧೩ನೇ ಸಾಲಿನಲ್ಲಿ ರೂ. ೪೩೩.೬೦ ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು ರೂ. ೧೩.೪೦ ಲಕ್ಷಗಳ ವೆಚ್ಚವನ್ನು ಸೆಪ್ಟಂಬರ್ ೨೦೧೨ ಅತ್ಯಂದವರೆಗೆ ಭರಿಸಲಾಗಿರುತ್ತದೆ.

ಕೊಳಗೇರಿ ಮಕ್ಕಳ ಅಪ್ಶೌಷಿಕತೆ ಸಮಸ್ಯೆ ನಿರ್ವಹಣೆ : ಬಾಲ ಸಂಜೀವಿನಿ ಯೋಜನೆಯು ೨೦೧೦-೨೦೧೧ನೇ ಸಾಲಿನಿಂದ ಪ್ರಾರಂಭವಾದ ಹೊಸ ಯೋಜನೆಯಾಗಿದ್ದು, ತೀವ್ರ ಅಪೌಷ್ಟಿಕ ಮಕ್ಕಳು ಪುನರ್‌ವಸತಿ ಚಿಕಿತ್ಸೆ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ತೀವ್ರ ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಪೌಷ್ಠಿಕ ಆಹಾರಕ್ಕಾಗಿ ರೂ. ೭೫೦.೦೦ಗಳನ್ನು ನೀಡಲಾಗುತ್ತಿದೆ. ೨೦೧೧-೧೨ನೇ ಸಾಲಿನಲ್ಲಿ ಬಾಲಸಂಜೀವಿನಿ ಯೋಜನೆಗೆ ರೂ. ೧೬೦೦.೦೦ ಲಕ್ಷಗಳನ್ನು ನಿಗದಿಪಡಿಸಿದ್ಧ ಅಪೌಷ್ಠಿಕ ಆಹಾರಕ್ಕಾಗಿ ರೂ. ೪.೪೫ ಕೋಟಿಗಳ ವೆಚ್ಚ ಭರಿಸಲಾಗಿದೆ. ಬಾಲ ಸಂಜೀವಿನಿ ಯೋಜನೆಯಡಿ ೬೧೨೭ ಮಕ್ಕಳ ಚಿಕಿತ್ಸೆಗಾಗಿ ರೂ. ೧೧.೫೫ ಕೋಟಿ ವೆಚ್ಚ ಭರಿಸಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆ-ಐ.ಸಿ.ಪಿ.ಎಸ್: ರಾಜ್ಯದಲ್ಲಿ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳು ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅವರಿಗೆ ಸುರಕ್ಷಿತ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ ೨೦೧೦-೧೧ನೇ ಸಾಲಿನಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಐ.ಸಿ.ಪಿ.ಎಸ್. ಅನುಷ್ಠಾನಗೊಳಿಸಲಾಗಿದೆ. ಅನಾಥರಾಗಿ ಮಾದಕ ವ್ಯವಸ್ಥೆ ದೌರ್ಜನ್ಯಕ್ಕೆ ಒಳಪಟ್ಟು, ಭಿಕ್ಷಾಟನೆಯಲ್ಲಿ

ತೊಡಗಿರುತ್ತಾರೆ. ಕಳ್ಳ ಸಾಗಣಿಕೆ ಹಾಗೂ ಲೈಂಗಿಕ ಕಿರುಕುಳಕ್ಕೆ ಒಳಪಟ್ಟು ವಲಸೆ ಬಂದಂತಹ ಮಕ್ಕಳು ಬಡತನ ಎದುರಿಸುತ್ತಾರೆ. ಸಮಾಜದ ಶೋಷಿತ ವರ್ಗದ ಮಕ್ಕಳು ದುರ್ಬಲ ಸ್ಥಿತಿಗೆ ತಲುಪುವುದನ್ನು ತಡೆಗಟ್ಟಿ ಅವರಿಗೆ ಶಾಸನ ಬದ್ಧ ಪೋಷಣೆ ಹಾಗೂ ಪನರ್ವಸತಿ ಸೇವೆಯನ್ನು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ನೀಡುತ್ತದೆ. ಸಂಸ್ಥೆಗಳಲ್ಲಿ ಸರಿ ಸುಮಾರು ೬೦ ರಿಂದ ೧೨೦ ಮಕ್ಕಳ ಆಶ್ರಯ ಪಡೆದಿರುತ್ತಾರೆ.

ಆರ್ಥಿಕ ಸಹಾಯವನ್ನು ಒದಗಿಸುವ ಮೂಲಕ ಮಕ್ಕಳ ಕುಟುಂಬ ವಾತಾವರಣದಲ್ಲಿ ಬೆಳೆದು ಶಿಕ್ಷಣವನ್ನು ಮುಂದುವರೆಸಲು ಅನೂಕೂಲವಾಗುವಂತೆ ಮಕ್ಕಳಿಗೆ ಪ್ರಾಯೋಜಿತ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇದರಿಂದ ಮಕ್ಕಳು ನಿರ್ಗತಿಕರಾಗುವುದು, ದುರ್ಬಲವಾಗಿ ಓಡಿಹೋಗುವುದು ಬಾಲ್ಯವಿವಾಹ ಬಾಲ ಕಾರ್ಮಿಕ ಇತ್ಯಾದಿಗಳನ್ನು ತಪ್ಪಿಸಬಹುದಾಗಿದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಮಾಜಕಾರ್ಯತರು ಔಟ್‌ರೀಚ ಕಾರ್ಯತಕರ್ತರು ಸ್ವಯಂ ಸೇವಕರು ಇವರುಗಳ ಸಹಾಯದಿಂದ ಹಾಗೂ ಗ್ರಾಮ ಮಕ್ಕಳ ರಕ್ಷಣಾ ಸಮಿತಿಯ ದುರ್ಬಲ ಕುಟುಂಬಗಳು ಅಥವಾ ಮಕ್ಕಳನ್ನು ಗುರುತಿಸಿ ಪ್ರಾಯೋಜಿತ ಯೋಜನೆಯ ಬೆಂಬಲವನ್ನು ಒದಗಿಸುವುದು.

ಬಾಲಮಂದಿರದಿಂದ ಹೊರಬಂದ ಮಕ್ಕಳಿಗೆ ಪುನರ್ವವಸತಿ ಕಲಿಸುವ ಉದ್ದೇಶದಿಂದ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅನುಪಾಲನ ಕಾರ್ಯಕ್ರಮಗಳನ್ನು ಜಾರಿಗೆ ತರಲು ಉದ್ದೇಶವನ್ನು ಬಾಲನ್ಯಾಯ ಕಾಯ್ದೆಯು ಹೊಂದಿದೆ.

೧೨ನೇ ಪಂಚವಾರ್ಷಿಕ ಯೋಜನೆಯಡಿ ಗಮನಹರಿಸಬೇಕಾದ ಇತರ ಕ್ಷೇತ್ರಗಳು:

೧. ಸ್ತ್ರೀ ಶಕ್ತಿಗಳ ಗುಂಪುಗಳ ಸದಸ್ಯರ ಕೌಶಲ್ಯವನ್ನು ಸುಧಾರಿಸುವ ಮೂಲಕ ಉತ್ತಮಗುಣ ಮಟ್ಟದ ವಸ್ತುಗಳ ಉತ್ಪಾದನೆಯನ್ನು ಮಾಡಿ ಪ್ರಸುತ್ತ ಮಾರುಕಟ್ಟೆಯಲ್ಲಿ ಹೊಂದಿಕೊಳ್ಳಲು ಅವರನ್ನು ಸಶಕ್ತರನ್ನಾಗಿಸುವುದು.

೨. ಸ್ವ ಸಹಾಯ ಗುಂಪುಗಳನ್ನು ರಚಿಸುವಾಗ ಕೇವಲ ಆರ್ಥಿಕ ಸಬಲೀಕರಣಕ್ಕೆ ಮಿತಿಗೊಳಿಸದೆ ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣದ ಕಡೆ ಒತ್ತು ನೀಡುವುದು.

೩. ಮಹಿಳೆಯರ ಮೇಲೆ ನಡೆಯುವ ಅಪರಾಧ ಹಾಗೂ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಸಾದ್ಯವಾಗುವಂತೆ ಕೌಟುಂಬಿಕ ದೌರ್ಜನ್ಯ ಕಾಯ್ದೆಯನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಖಚಿತಪಡಿಸಿಕೊಳ್ಳುವುದು.

೪. ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಹಾಗೂ ಸ್ತ್ರೀ ಶಕ್ತಿ ಯೋಜನೆಯ ಅನುಷ್ಠಾನಕ್ಕೆ ಉತ್ತಮ ಸೌಲಭ್ಯವನ್ನು ಅಭಿವೃದ್ಧಿ ಪಡಿಸುವುದು.

೫. ಅಪೌಷ್ಠಿಕತೆಯು ಸಹ ಕಾಳಜಿ ವಹಿಸಬೇಕಾಗಿರುವ ಕ್ಷೇತ್ರವಾಗಿರುತ್ತದೆ. ಈ ನಿಟ್ಟಿನಲ್ಲಿ ಐ.ಸಿ.ಡಿ.ಎಸ್. ಯೋಜನೆಯ ಸಮರ್ಪಕ ಅನುಷ್ಠಾನ ಗ್ರಾಮ ಮಟ್ಟದಲ್ಲಿ ಮಕ್ಕಳು ಅಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭಿಸುವ ಮೂಲಕ ಅಪೌಷ್ಠಿಕತೆಯನ್ನು ನಿಭಾಯಿಸ ಬಹುದಾಗಿರುತ್ತದೆ. ಪ್ರಾಯ ಪೂರ್ವ ಬಾಲಕಿಯರಿಗಾಗಿ ಸಬಲ ಯೋಜನೆ ಇತರೆ ಜಿಲ್ಲೆಗಳಿಗೂ ವಿಸ್ತರಿಸಬಹುದಾಗಿದೆ.

೬. ಬಾಲ್ಯ ವಿವಾಹವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಅನುವಾಗುವಂತೆ ಪ್ರಧಾನ ಕಛೇರಿಯಲ್ಲಿ ಬಾಲ್ಯ ವಿವಾಹ ನಿಷೇಧ ಕೋಶವನ್ನು ಸ್ಥಾಪಿಸಲಾಗಿದೆ.

ತಾಯಿ ಭಾಗ್ಯ ಯೋಜನೆ: ಇದು ಗರ್ಭಿಣ ಸ್ತ್ರೀಯರ ಹಾಗೂ ನವಜಾತ ಶಿಶುಗಳ ಮರಣ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರಿಗೆ ಮನ್ನಣೆ ಪಡೆದ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ನೀಡುವ ಯೋಜನೆಯಾಗಿದೆ. ಖಾಸಗಿ ವೈದ್ಯಕೀಯ ಸಂಸ್ಥೆಗೆ ೧೦೦ ಹೆರಿಗೆಗಳಾದಲ್ಲಿ ೩ ಲಕ್ಷ ರೂಪಾಯಿಗಳನ್ನು ಪಾವತಿಸಲಾಗುತ್ತದೆ. ಇದುವರೆಗೂ ೧,೩೧,೯೮೦ ಫಲಾನುಭವಿಗಳು ಸೌಲಭ್ಯವನ್ನು ಪಡೆದಿರುತ್ತಾರೆ.

ಶಾಲಾ ಆರೋಗ್ಯ ಕಾರ್ಯಕ್ರಮ: ಶಾಲಾ ವಯಸ್ಸಿನ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಆರಂಭಿಸಿದ. ಮಹತ್ವದ ಒಂದು ಕಾರ್ಯಕ್ರಮವೆಂದರೆ ಶಾಲಾ ಆರೋಗ್ಯ ಕಾರ್ಯಕ್ರಮ. ಶಾಲಾ ಶೈಲಿಯನ್ನು ಗುರಿ ಹಾಗೂ ಗಮನದಲ್ಲಿಟುಕೊಂಡು ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರೋಗಗಳನ್ನು ತಡೆಗಟ್ಟುವ, ಆರೋಗ್ಯವನ್ನು ಪೋಷಿಸುವ ಮತ್ತು ಗುಣಪಡಿಸಬಹುದಾದ ಯೋಜನೆ ರೂಪಿಸಿದೆ. ಆರೋಗ್ಯ ಸೇವೆಯನ್ನು ಜನತೆಗೆ ನೀಡುವುದಕ್ಕೆ ಇದು ಸೂಕ್ತವಾದ ಸಾಧನೆವೆಂದು ಭಾವಿಸಲಾಗಿದೆ. ಈ ಕಾರ್ಯಕ್ರಮವನ್ನು ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಆ ಮೂಲಕ ಈ ಯೋಜನೆಯನ್ನು ಅನುಷ್ಠಾನ ಗೊಳಿಸುವ ರಾಜ್ಯಗಳಿಗೆ ಮತ್ತು ಅನುಷ್ಠಾನಗೊಳಿಸುವುದಕ್ಕೆ ಸಿದ್ಧವಾಗಿರುವ ರಾಜ್ಯಗಳಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಈ ಶಾಲಾ ಆರೋಗ್ಯ ಕಾರ್ಯಕ್ರಮದ ಸಾಧನೆಯನ್ನು ಬಹುತೇಕ ಪ್ರಮಾಣದ ಗುರಿಯನ್ನು ತಲುಪಿದೆ.

ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು: ಕರ್ನಾಟಕ ಜನ ಸಂಖ್ಯೆಯಲ್ಲಿ ಶೇ. ೧೧.೨೭ ರಷ್ಟು ಮಕ್ಕಳು ಇದ್ದಾರೆ. ೨೦೧೧ನೇ ಜನಗಣತಿ ಇಲಾಖೆಯ ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮತ್ತು ಮಕ್ಕಳ ಅಭಿವೃದ್ದಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಸಾಮಾಜಿಕ ಆರ್ಥಿಕ ಬೆಳವಣಿಗೆಗೆ ಅನುವು ಮಾಡಿದಂತಾಗಿದೆ.

ಕೊಳಚೆ ಪ್ರದೇಶದ ನಿವಾಸಿಗಳು ತಮ್ಮ ಸಮಸ್ಯೆಗಳಿಗೆ, ಸರ್ಕಾರಿಯೋಜನೆ ಅಭಿವೃದ್ಧಿ ಬಗ್ಗೆ ಕುರಿತು ಮಾಹಿತಿ ಕಡಿಮೆ ಅರಿವು ಇದೆ. ಕೊಳಗೇರಿಯಲ್ಲಿ ಅನಕ್ಷರಸ್ಥರು ಇರುತ್ತಾರೆ.

ಜಾಗತೀಕ ಮಟ್ಟ ಮುಂದುವರಿದ್ದರು. ನಿವಾಸಿಗೆ ಯೋಜನೆ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡಿದರೂ ಅವರಿಗೆಗೆ ಸರ್ಕಾರಿ ಯೋಜನೆ ಬಗ್ಗೆ ನಮಗೆ ಏನೂ ಗೊತ್ತಿಲ್ಲ ಎಂದು ಹೇಳಿದ್ದಾರೆ. ೪೮% ೧೨ ರಷ್ಟು ಜನರು ಮಾತ್ರ ಸರ್ಕಾರಿ ಯೋಜನೆಗಳ ಕೇಳಿದ್ದಾರೆ. ಕುರಿತು ಮಾಹಿತಿ ತಿಳಿದಿದೆ ಎಂದು ಹೇಳಿದ್ದರು. ಕೊಳಗೇರಿ ನಿವಾಸಿಗಳಲ್ಲಿ ಮಹಿಳೆಯರು/ನಿವಾಸಿಗಳು/ಯುವಕರು/ವೃದ್ಧರು ನಗರ ಸಭೆಯಿಂದ ಮತ್ತು ಸ್ಲಂ ಅಭಿವೃದ್ಧಿ ಕೇಂದ್ರದಿಂದ ಸ್ವಸೇವಾ ಸಂಘಟನೆಯಿಂದ ಸ್ವಲ್ಪ ಸ್ಲಂ ಅಭಿವೃದ್ಧಿ ಇರುವಂತಹ ಸೌಲಭ್ಯ ಬಗ್ಗೆ ಕೇಳಿದ್ದಾರೆ ತಿಳಿಸಿದ್ದರು. ವಸತಿ ಯೋಜನೆಗಳಾದ ಅಂಬೇಡ್ಕರ್ ವಾಲ್ಮೀಕಿ ವಸತಿ ಯೋಜನೆ, ಇಂದಿರಾ ಆವಾಸ್‌ಯೋಜನೆ, ಅಂಗವಿಕರು ವೇತನ, ವೃದ್ಧರು ವೇತನ ಬಗ್ಗೆ ಮಾಹಿತಿ ಖಚಿತ ಇರುವಂತೆ ಯೋಜಿಸಲಾಗಿದೆ. ಅಂಗವಾಡಿ ಸೌಲಭ್ಯಗಳ ಬಗ್ಗೆ ಹಾಗೂ ಸ್ವಯಂ ತರಬೇತಿ ಕಂಪ್ಯೂಟರ್ ತರಬೇತಿ ಸ್ಲಂ ಬೋರ್ಡ್‌ನಿಂದ ಮನೆ ವೃತ್ತ ತರಬೇತಿ ಕುರಿತು ಯೋಜನೆ ಬಗ್ಗೆ ಮಾಹಿತಿ ಸರಿಯಾಗಿ ಮಾಹಿತಿ ದೊರಕಿಲ್ಲ ಎಂದು ಹೇಳಿದ್ದರು.

ಕೊಳಚೆ ನಿವಾಸಿ ಜನರಿಗೆ ಸರ್ಕಾರದಿಂದ ಯಾವ ರೀತಿ ಸಹಾಯವನ್ನು ಪಡೆಯಲು ಕೇಳಿದಾಗ ಮೊದಲು ಮನೆ ಕಟ್ಟಿಸಿ ಕೊಡಲಿ, ಕುಡಿಯುವ ನೀರಿನ ಸಮಸ್ಯೆ ತುಂಬಾ ಇದೆ. ಶುದ್ಧ ಕುಡಿಯುವ ನೀರಿನ ಸೌಲಭ್ಯಬೇಕು. ಚರಂಡಿ ವ್ಯವಸ್ಥೆ, ಬೀದಿ ದೀಪ, ಶೌಚಾಲಯ, ಅಂಗನವಾಡಿಕೇಂದ್ರಗಳು ಬಾಡಿಗೆಮನೆಯಲ್ಲಿವೆ. ಹೊಸ ಕೇಂದ್ರ ಸ್ಥಾಪಿಸಬೇಕು. ಮಹಿಳೆಯರು ಆರೋಗ್ಯ ಸೌಲಭ್ಯ ವ್ಯವಸ್ಥೆ ಇದ್ದರು. ಸರಿಯಾಗಿ ದೊರಕುತ್ತಿಲ್ಲ. ಈ ವ್ಯವಸ್ಥೆ ಕಸಹಾಕಲು ಸ್ಥಳ ನಿರ್ವಹಿಸಬೇಕು. ಓದುವ ಮಕ್ಕಳಿಗೆ ಬಸ್ ವ್ಯವಸ್ಥೆ ಸ್ಲಂಗಳಿಗೆ ಇಲ್ಲ. ಈ ವ್ಯವಸ್ಥೆ ಬೇಕು ಎಂದರು.

ಕೊಳಚೆ ಪ್ರದೇಶದ ಜನರ ಅಭಿವೃದ್ಧಿಗಾಗಿ ವಿವಿಧ ಅನೇಕ ಯೋಜನೆಗಳು ಅನುಷ್ಠಾನವಾಗಿವೆ. ಅವುಗಳಲ್ಲಿ ನಗರದ ಬಡಜನರಿಗಾಗಿ ಮೂಲಭೂತ ಸೇವೆಗಳನ್ನು ಕರ್ನಾಟಕ ಸರ್ಕಾರ ಮಾಡಿದೆ. ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಕೈಗೊಂಡಿರುವ ಯೋಜನೆಗಳು ಅಲ್ಲದೆ ಬಳ್ಳಾರಿ ಜಿಲ್ಲೆಯ ನಗರ ಸಭೆಯ ಅಡಿ ಜಾರಿಗೊಳ್ಳುತ್ತಿರುವ ಯೋಜನೆಗಳಿವೆ. ಹೀಗೆ ಅನೇಕ ಕಾರ್ಯಕ್ರಮಗಳ ಮಹತ್ವದ ಯೋಜನೆಗಳನ್ನು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ರೂಪಿಸಿದರೂ ಇಂದಿಗೂ ಜಿಲ್ಲೆಯ ಹೈದ್ರಬಾದ್ ಕರ್ನಾಟಕ ಕೊಳಚೆ ಪ್ರದೇಶಗಳು ಸಮಸ್ಯೆ ಬದಲಾಗಿಲ್ಲ. ನಿಷ್ಠೆ ಸ್ವಯಂ ನೆಲೆಯನ್ನು ಇಲ್ಲದೆ ಜನರು ಕೊಳಚೆ ಪ್ರದೇಶದಲ್ಲಿ ನಿವಾಸಿಗಳಾಗಿರುತ್ತಾರೆ. ಆದ್ದರಿಂದ ಸರ್ಕಾರ ಕೈಗೊಂಡಿರುವಂತ ಮಹತ್ವ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತರಬೇಕು. ಆ ಭಾಗದ ಜನತೆಗಾಗಿ ಪ್ರಾಮಾಣಿಕತೆಯಿಂದ ಸ್ವಯಂ ವಿನಿಯೋಗಿಸಿದರೆ ಕೊಳಚೆ ಪ್ರದೇಶಗಳು ಅಭಿವೃದ್ದಿ ಹೊಂದಲು ಸಾಧ್ಯವಾಗುತ್ತದೆ. ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ ಬಗ್ಗೆ ಪ್ರಮುಖವಾಗಿ ಕೊಳಚೆ ಪ್ರದೇಶ ನಿರ್ಮೂಲನೆ ಮಂಡಳಿ ಕೆಲಸದ ಕೋಷ್ಟಕ ಮಾಡಿತೋರಿಸಿವೆ. ಸರ್ಕಾರದ ಯೋಜನೆಗಳು ಸರಿಯಾದ

ಪ್ರಮಾಣದಲ್ಲಿ ಬಳಕೆಯಾಗಿಲ್ಲ ಎಂಬುದು ತಿಳಿಯುತ್ತಿದೆ. ಕೊಳಗೇರಿಗಳು ಹಿಂದುಳಿಯಲು ಮುಖ್ಯಕಾರಣ ಅಧಿಕಾರಿಗಳು ನಿರ್ಲಕ್ಷ. ಈ ಕಾರಣದಿಂದ ಕೊಳಚೆ ಪ್ರದೇಶದಲ್ಲಿ ಆರ್ಥಿಕವಾಗಿ ಸಬಲರಾದ್ದರಿಂದ ಕೊಳಚೆ ಪ್ರದೇಶದ ನಿರ್ಲಕ್ಷ್ಯ ಮನೋಭಾವನೆ ಹೀಗಾಗಿ ಜಿಲ್ಲೆಯ ಹೆಚ್ಚು ಕೊಳಚೆ ಪ್ರದೇಶ ಕುಟುಂಬಗಳು ತಮಗೆ ಹೊಂದಾಣಿಕೆಯಾಗುವ ಕೆಲಸ ಕಾರ್ಯಗಳಲ್ಲಿ ಕೂಡ ತೊಡಗಿಕೊಂಡಿರುತ್ತಾರೆ.

ಕೊಳಚೆ ಪ್ರದೇಶದಲ್ಲಿ ಜನರಿಗೆ ಆರ್ಥಿಕ ಸಬಲೀಕರಣದ ಬಗ್ಗೆ ಚರ್ಚಿಸಲಲಾಗಿದೆ. ಆರ್ಥಿಕ ಸಮಸ್ಯೆ ಇಲ್ಲಿನ ಜನರಲ್ಲಿ ಕಾಣಬಹುದು. ಮಹಿಳೆಯ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಬೇಕು ಹಾಗೂ ಇವರು ಉನ್ನತ ಮಟ್ಟದಲ್ಲಿ ಹುದ್ದೆ ನೀಡಬೇಕೆಂದು ಆಸೆ ಮನೋಭಾವನೆ ಇರುವುದು ಸಹಜ. ಆ ಮೂಲಕ ಸರ್ಕಾರದ ಯೋಜನೆಗಳು ಸ್ಪಂದಿಸಿದರೆ ಮಾತ್ರ ಕೊಳಚೆ ಜನರು ಸಬಲೀಕರಣಗೊಳ್ಳುತ್ತಾರೆ.

ಕೊನೆ ಟಿಪ್ಪಣಿಗಳು

೧. ಕೊಳಚೆ ನಿರ್ಮೂಲನ ಮಂಡಳಿ ನೀಡಿದ ಮಾಹಿತಿ ಪ್ರಕಾರ, ೨೦೧೩, ಪು. ೨೩

೨. ಕರ್ನಾಟಕ ರಾಜ್ಯ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ, ಬೆಂಗಳೂರು, ೨೦೧೫, ಪು. ೧೪

೩. ಸ್ಲಂ–ಸ್ವಯಂ ಸೇವ ಸಂಘಟನೆ, ಹೊಸಪೇಟೆ (ರಾಮಚಂದ್ರ), ೨೦.೧೨.೨೦೧೪ ಮತ್ತು ೧೭.೮.೨೦೧೮

೪. ಕೊಳಗೇರಿ ಅಭಿವೃದ್ಧಿಯ ಬಗ್ಗೆ ಕರ್ನಾಟಕ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು.

೫. ವೆಂಕಟೇಶ ಸಿ.ಡಿ. ಆಶ್ರಯ ಯೋಜನೆ ಶ್ರೀ ಶಿರಡಿ ಸಾಯಿ ಎಂಟರ್ ಪ್ರೈಸಸ್, ಬೆಂಗಳೂರು, ೨೦೧೦, ಪು. ೨೦

೬. ಶಂಕರರಾವ್ ಚ.ನ. ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘಟನೆಗಳು, ಜೈ ಭಾರತ ಪ್ರಕಾಶನ, ಮಂಗಳೂರು, ೧೯೬೬, ಪು. ೫೩

೭. ಮರುಳುಸಿದ್ದಯ್ಯ ಎಚ್.ಎಂ. ಸಮಾಜಕಾರ್ಯ ಸಂಪುಟ–೨, ಪು. ೧೦೮,

೮. ಕಾವೇರಿ, ಗುಲ್ಬರ್ಗಾ ಕೊಳಚೆ ಪ್ರದೇಶದ ಮಹಿಳಾ ಬದುಕು, ಅಪ್ರಕಟಿತ ಸಂಪ್ರಬಂಧ, ಪು. ೨೮

೯. www. nammamane yojane.in

೧೦. ಕೃಷ್ಣಯ್ಯಗೌಡ ಹೆಚ್.ಆರ್. ಯೋಜನಾ ಅರ್ಥಶಾಸ್ತ್ರ, ಪು. ೧೦

ಅಧ್ಯಾಯ : ಆರು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಆರು

ಸಮಾರೋಪ

ಪ್ರಸ್ತುತ ಸಂಶೋಧನಾ ಮಹಾಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದ ಜನರ ಸಮಸ್ಯೆಗಳನ್ನು ಸಮಾಜಕಾರ್ಯ ಶಿಸ್ತಿನ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಕೊಳಚೆ ಪ್ರದೇಶದಲ್ಲಿನ ಜನರಸಮಸ್ಯೆ ಹಾಗೂ ಪ್ರಭಾವ ಬೀರಿರುವ ಅಂಶಗಳ ಮೇಲೆ ಕೇಂದ್ರೀಕರಿಸಲಾಗಿದೆ. ಕೊಳಚೆ ನಿವಾಸಿಗಳು ತಮ್ಮ ಮೂಲಭೂತ ಸೌಲಭ್ಯಗಳಿಂದ, ಅವಕಾಶಗಳಿಂದ ವಂಚಿತರಾಗಿರುವ ವರ್ಗದ ಸ್ಥಿತಿ–ಗತಿಗಳನ್ನು, ವಂಚಿತರಾಗಿರುವಂತ ನಿವಾಸಿಗಳನ್ನು ಅಧ್ಯಯನಕ್ಕಾಗಿ ಈ ಸಂಶೋಧನೆಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ. ಕೊಳಚೆ ಪ್ರದೇಶಗಳ ಪರಿಕಲ್ಪನೆಯು ನಗರ ಆಕರ್ಷಣೆಗೆ ಒಳಗಾಗಿರುತ್ತಾರೆ. ಹಾಗಾಗಿ ನಗರೀಕರಣ, ಕೈಗಾರಿಕರಣದಿಂದ ಜನರು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಹೋಗಲು ಮುಂದಾಗಿದ್ದಾರೆ. ದಿನದಿನಕ್ಕೆ ನಗರದ ಜನಸಂಖ್ಯೆ ಏರಿಕೆಯಾಗುತ್ತಿದೆ. ಭೂಮಿಯ ಬೆಲೆ–ಮನೆಬಾಡಿಗೆ ವಸ್ತುಗಳ ಬೆಲೆ ಗರಿಷ್ಠ ಏರಿಕೆ ಆಗಿದೆ. ಹಾಗೆಯೇ ಜನರು ಆರ್ಥಿಕವಾಗಿ ತುಂಬ ತಳಮಟ್ಟದಲ್ಲಿ ವಾಸಿಸುವ ಕೊಳಗೇರಿ ನಿವಾಸಿಗಳು ಹಣ ಪಾವತಿಸಿ ದುಬಾರು ಮನೆಬಾಡಿಗೆ ಕಟ್ಟಲು ಆಗುವುದಿಲ್ಲ. ಕಾರಣ ಸಂಬಳ ಕಡಿಮೆ ಬಡ ಕುಟುಂಬ ನಿರ್ವಹಣೆಗೆ ಮಕ್ಕಳ ದಿನ ನಿತ್ಯ ಖರ್ಚು ವೆಚ್ಚದಿಂದ ನಗರ ಹೊರ–ವಲಯ ಜಾಗಗಳಲ್ಲಿ ಮನೆಗುಡಿಸಲು, ವಠಾರ, ಗುಡಾರ, ರೈಲ್ವೆ ನಿಲ್ದಾಣದಲ್ಲಿ, ಕೈಗಾರಿಕ ಪ್ರದೇಶದ ಅಕ್ಕ ಪಕ್ಕ ವಾಸಿಸುತ್ತಾರೆ.

ಭಾರತೀಯ ಸಮಾಜದ ಜ್ವಲಂತ ಸಮಸ್ಯೆಗಳಲ್ಲಿ ಕೊಳಚೆ ಪ್ರದೇಶದಲ್ಲಿ ನೆಲೆಸಿರುವ ಜನರ ಅನುಭವಿಸುವ ತೊಂದರೆಗಳೇ ಸಮಸ್ಯೆಯಾಗಿದೆ. ಒಟ್ಟಾರೆ ದೇಶದ ಅಭಿವೃದ್ಧಿಗೆ ಇದು ಮಾರಕವಾದ ಅಂಶವಾಗಿದೆ. ಕೊಳಚೆ ಪ್ರದೇಶದಲ್ಲಿನ ನಿವಾಸಿಗಳ ಸಮಸ್ಯೆ ಅಲ್ಲಿನ ಅಭಿವೃದ್ಧಿಗೆ ಅಡ್ಡಿಯಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿ ವಾಸಿಸುವವರೇ ಅಲ್ಲದೆ ಇತರರ ಆರೋಗ್ಯದ ಮೇಲೆಯೂ ಕೊಳಚೆ ಪ್ರಭಾವವನ್ನು ಬೀರುತ್ತದೆ. ಕೊಳಚೆ ಪ್ರದೇಶವು ಪಟ್ಟಣ ಅಥವಾ ನಗರಗಳಲ್ಲಿ ಅನಾರೋಗ್ಯಕರವಾದ ವಾತಾವರಣವನ್ನು ನಿರ್ಮಿಸಿದೆ. ದಿನನಿತ್ಯ ಅವಶ್ಯಕತೆಗಳಾದ ನೀರು, ವಿದ್ಯುತ್, ಸ್ವಚ್ಛ ಚರಂಡಿ, ಮುಕ್ತ ವಾಯುಸಂಚಾರ, ಉತ್ತಮ

ವಸತಿ ಇವುಗಳ ಪೂರೈಕೆಯ ಕೊರತೆಯಿರುತ್ತದೆ. ಆದ್ದರಿಂದ ಈ ಕೊಳಚೆ ಪ್ರದೇಶಗಳು ಹಲವಾರು ರೋಗರುಜಿನಗಳು ಮತ್ತು ಅತಿಯಾದ ಸಾಮಾಜಿಕ, ಆರ್ಥಿಕ, ಕೌಟುಂಬಿಕ ಆರೋಗ್ಯ, ಮಹಿಳೆಯ ಸಮಸ್ಯೆ, ಮಕ್ಕಳ ಶೈಕ್ಷಣಿಕ ಸಮಸ್ಯೆ, ಸ್ವಚ್ಛ ಶೌಚಾಲಯ ಸಮಸ್ಯೆಗಳ ತಾಣವಾಗಿರುತ್ತವೆ.

ಈ ರೀತಿಯ ಜೀವನ ಪರಿಸ್ಥಿತಿಯು ಪ್ರತಿಯೊಬ್ಬ ವ್ಯಕ್ತಿಯ ದೈಹಿಕ, ಮಾನಸಿಕ, ಆರೋಗ್ಯ ಮೇಲೆ ತುಂಬ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಕೊಳಚೆ ಪ್ರದೇಶಗಳ ನಿರ್ಮೂಲನೆಗೆ ಪ್ರಮುಖವಾಗಿ ಜಾಗತಿಕಮಟ್ಟದ ಕಾರ್ಯಕ್ರಮಗಳು ಅವಶ್ಯವಾಗಿದ್ದು, ಈ ಕೊಳಚೆ ಪ್ರದೇಶದಿಂದ ಮುಕ್ತಿಯನ್ನು ಹೊಂದುವಂತೆ ಮಾಡಬೇಕಾಗಿದೆ.

'ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಮೇಲೆ ಪ್ರಭಾವ ಬೀರುವ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳಿಗೆ ಮೂಲಕಾರಣ ಅವರ ಪೋಷಕರು. ಕೊಳಚೆ ಪ್ರದೇಶಗಳಲ್ಲಿ ಕೆಳಮಟ್ಟದ ಅರ್ಥಿಕ ಸ್ಥಿತಿ–ಗತಿಗಳು ಕುಟುಂಬದ ಜೀವನವನ್ನು ಪೂರ್ಣವಾಗಿ ವಿಕಾಸಗೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ. ಬಡತನ, ಕುಟುಂಬದ ಅಸ್ತವ್ಯಸ್ತತೆ ಹಾಗೂ ಕೆಲವೊಮ್ಮೆ ಕುಟುಂಬ ವಿಘಟನೆ, ಮಕ್ಕಳ ನಿರ್ಲಕ್ಷ್ಯ ಮನೋಭಾವನೆ, ಲೈಂಗಿಕ ಅಸಭ್ಯತೆ, ವ್ಯಭಿಚಾರ, ಅಪರಾಧ, ಕುಡಿತ, ಜೂಜಾಡುವುದು, ಸೋಮಾರಿತನ, ಸಮಾಜ ವಿರೋಧಿ ನಡುವಳಿಕೆಗಳು ಹಾಗೂ ಚಟುವಟಿಕೆಗಳು ಸಹಜವಾಗಿ ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಪ್ರಭಾವ ಬೀರುವುದನ್ನು ಕಾಣುಬಹುದಾಗಿದೆ. ಸ್ಲಂ ಜನರು ನಾನಾ ಬಗೆಯ ಕೆಟ್ಟ ಚಟ ಹಾಗೂ ವ್ಯಸನಗಳಿಗೆ ದಾಸರಾಗಿರುವುದರಿಂದ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಇವರು ಹಿಂದೆ ಉಳಿದಿರುವುದು ಕಂಡುಬರುತ್ತದೆ. ಕೊಳಚೆ ಪ್ರದೇಶಗಳು ಭಾರತದಲ್ಲಿ ಅಲ್ಲದೇ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಕಂಡುಬರುತ್ತವೆ. ಎಲ್ಲಿ ನಗರ ಪಟ್ಟಣಗಳಿರುತ್ತವೆಯೋ ಅಲ್ಲಿ ಹಲವು ಮಾದರಿಯ ಕೊಳಗೇರಿಗಳು ಇರುತ್ತವೆ. ಭೌತಿಕವಾಗಿ ಕೊಳಗೇರಿಗಳು ಅಲ್ಲಿ ಸರಿಯಾದ ಮೂಲಭೂತ ವ್ಯವಸ್ಥೆ ಇಲ್ಲದೇ ಹಾಗೂ ಮಲಮೂತ್ರ ವಿಸರ್ಜನೆ, ಚರಂಡಿ ನೀರು ಹರಿಯುವಿಕೆ, ಸೊಳ್ಳೆಗಳು, ಮನೆಮುಂದೆ ವಾಸನೆ ಈ ಭಾಗದಲ್ಲಿರುತ್ತದೆ. ಸ್ನಾನಗೃಹ, ಶೌಚಾಲಯಕ್ಕೆ, ಬಟ್ಟೆ ತೊಳಯಲಿಕ್ಕೆ ಯಾವುದೇ ವ್ಯವಸ್ಥೆ ಈ ಪ್ರದೇಶಗಳಲ್ಲಿರುವುದಿಲ್ಲ. ಹೀಗಾಗಿ ನಗರ ಪ್ರದೇಶದಲ್ಲಿರುವ ಕೊಳಗೇರಿಯ ಅಭಿವೃದ್ಧಿಗೆ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಪ್ರಯತ್ನಿಸುವುದು ಕಂಡುಬರುತ್ತದೆ. ಇದು ಭಾರತದ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿರುವುದು ಗಮನಾರ್ಹವಾಗಿದೆ.

ಕೊಳಚೆ ಪ್ರದೇಶಗಳಲ್ಲಿ ಮಹಿಳೆಯರ ಸಮಸ್ಯೆ ತುಂಬ ಚಿಂತಾಜನಕವಾಗಿದೆ. ನಗರದಲ್ಲಿರುವ ಮಹಿಳೆಯರು ಕೊಳಗೇರಿ ಆರ್ಥಿಕವಾಗಿ ಕುಟುಂಬವನ್ನು ಸಾಕುವುದು/ಗಂಡ/ಹೆಂಡತಿ ಇಬ್ಬರು ಕೆಲಸಕ್ಕೆ ಹೋಗುವಂತದು ಕಾಣಬಹುದು. ಅತ್ತೆ, ಮಾವ, ಗಂಡ ಹಾಗೂ ಮಕ್ಕಳ ಪಾಲನೆ ಪೋಷಣೆಯ ಕಡೆಗೆ ಸೂಕ್ತ ಗಮನ ಹರಿಸುವಳು ಮನೆಯ ಸೊಸೆ ಎಂಬುದು ನಿಜ.

ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರ ಸಮಸ್ಯೆಗಳು ತುಂಬ ತಳಮಟ್ಟದ ಆರ್ಥಿಕ ಸ್ಥಿತಿಯನ್ನು ಹೊಂದಿವೆ. ದೋಷಪೂರಿತ ಮನೆಗಳಲ್ಲಿ ಕನಿಷ್ಠ ಅವಶ್ಯಕತೆಯ ದಿನ ಬಳಕೆಯ ವಸ್ತುಗಳು ಇಲ್ಲದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ದಿನ ನಿತ್ಯ ಅಡುಗೆಮಾಡಲು ಬಳಸಲು ಪಾತ್ರೆ ಪರಿಕರಗಳು, ಕೊಳಕಿನಿಂದ ಕೂಡಿದ ಅಡುಗೆ ಮನೆ, ಸಮಯ, ಪರಿಪಾಲನೆಗೆ ಗಡಿಯಾರವಿಲ್ಲದಿರುವುದು ಕಂಡುಬಂದಿದೆ. ಆಹಾರ ಕ್ರಮದ ವಿಚಾರದಲ್ಲಿ ಇಲ್ಲಿನ ಬಹುತೇಕ ಕುಟುಂಬಗಳು ಹೆಚ್ಚಾಗಿ ಮಾಂಸಹಾರವನ್ನು ಬಳಸುತ್ತಿದ್ದಾರೆ. ಹೆಚ್ಚು ಹಣವನ್ನು ವ್ಯಯ ಮಾಡಬೇಕಾಗುತ್ತದೆ. ಕಡಿಮೆ ಬೆಲೆಗೆ ಸಿಗುವ ದೋಷಪೂರಿತ ಮಾಂಸವನ್ನು ಸೇವಿಸಿ ರೋಗಗಳಿಗೆ ಬಲಿಯಾಗುತ್ತಾರೆ. ಕೊಳಚೆ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳು ಆರ್ಥಿಕವಾಗಿ ತುಂಬ ಹಿಂದುಳಿದಿರುವುದು ಸಂಶೋಧನೆಯಲ್ಲಿ ಸ್ಪಷ್ಟವಾಗಿದೆ. ಆದರೆ ನಿವಾಸಿಗಳ ಸಾಮಾಜಿಕ ಆರ್ಥಿಕ ಸ್ಥಾನಮಾನಗಳು ಅವರ ಹೊಂದಿರುವ ಆದಾಯದ ಜೊತೆಗೆ ಅವರ ಸಾಲದ ಮೇಲೆ ನಿರ್ಧಾರಿತವಾಗುತ್ತದೆ. ಕೊಳಗೇರಿ ನಿವಾಸಿಗಳು ಹೆಚ್ಚು ಸಾಲವನ್ನು ಹೊಂದಿರುವುದು ಕಂಡುಬರುತ್ತದೆ. ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆರ್ಥಿಕ ಮುಗ್ಗಟ್ಟು ಉಂಟಾದಾಗ ಇವರು ಸಾಲದ ಮೊರೆ ಹೋಗುತ್ತಾರೆ. ಹೀಗಿರುವ ಕೊಳಚೆ ನಿವಾಸಿಗಳು ಸಾಲದ ಹೊರೆಯ ಪರಿಣಾಮದಿಂದ ಜೀವನ ಕುಂಠಿತವಾಗಿರುವುದು ಕಂಡುಬರುತ್ತದೆ.

ಕೊಳಚೆ ಪ್ರದೇಶದಲ್ಲಿ ದುಡಿಯುವಂತಹ ಮಹಿಳೆಯರ ಸಮಸ್ಯೆಗಳನ್ನು ಗಮನಹರಿಸಿದ್ದಾರೆ. ಆರೋಗ್ಯ ಪೌಷ್ಠಿಕತೆ, ಮಕ್ಕಳ ಬೆಳವಣಿಗೆ ಕುಂಠಿತ ಸಮಸ್ಯೆ ಮಹಿಳೆಯರ ಬದುಕು ಮತ್ತಷ್ಟು ಚಿಂತಾಜನಕವಾಗಿದೆ. ಕುಟುಂಬದ ಪ್ರತಿಯೊಂದು ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಹೋಗುವ ಶಕ್ತಿಯಾಗಿ ಇಲ್ಲಿನ ಮಹಿಳೆ ಇದ್ದಾಳೆ. ಓದು ಬರಹ ಬರಲಿಲ್ಲವಾದರೂ ಮಹಿಳೆಯರು ಕೂಲಿ ಕೆಲಸ, ಮತ್ತೊಬ್ಬರ ಮನೆಕೆಲಸ ಮಾಡಿ ಕುಟುಂಬ, ತನ್ನ ಸಂಸಾರವನ್ನು ಸಾಕುವರಾಗಿದ್ದಾರೆ. ಮಕ್ಕಳ ಪಾಲನೆ ಪೋಷಣೆಯ ಜೊತೆಗೆ ಕುಡಿಯುವಂತಹ ಗಂಡನ ಜೊತೆ ಜೀವನ ಸಾಗಿಸುವುದು ದೊಡ್ಡ ಸಮಸ್ಯೆಯಾಗಿದೆ. ಇಂಥ ಅನೇಕ ಸಮಸ್ಯೆಗಳ ತಾಣ ಕೊಳಗೇರಿಯದ್ದಾಗಿದ್ದು ಇದು ಚಿಂತಾಜನಕವಾಗಿದೆ.

ಭಾರತೀಯ ಸಮಾಜದಲ್ಲಿ ಯಾವುದೇ ಅಭಿವೃದ್ಧಿಗೂ ಪ್ರಮುಖವಾದುದು ಆರ್ಥಿಕ ಸಮಸ್ಯೆ. ಕೊಳಚೆ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳ ಮಾಸಿಕ ಆದಾಯ ಕಡಿಮೆ ಇದ್ದು, ಬಡತನ, ದಾರಿದ್ರ್ಯದ ನೈಜ ಪರಿಸ್ಥಿತಿಯನ್ನು ಗಮನಿಸಬಹುದು. ಇಲ್ಲಿ ವಾಸಿಸುವ ಕುಟುಂಬಗಳ ವಾರ್ಷಿಕ ಆದಾಯವು ಬಹಳ ಕಡಿಮೆಯಿರುವುದು ಕಂಡುಬರುತ್ತದೆ. ಒಂದು ಸಾವಿರದಿಂದ ಎರಡು ಸಾವಿರ ರೂಪಾಯಿ ಮಾಸಿಕ ಆದಾಯವನ್ನು ಶೇಕಡ ೬೦% ರಷ್ಟು ಕುಟುಂಬಗಳು ಹೊಂದಿರುವುದು ಪ್ರಸ್ತುತ ಸಂಶೋಧನೆಯಿಂದ ಬೆಳಕಿಗೆ ಬಂದಿದೆ.

ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರ ಮನೆಗಳು ಅವೈಜ್ಞಾನಿಕವಾಗಿ ನಿರ್ಮಿಸಿದ್ದು, ಅವ್ಯವಸ್ಥೆಯಿಂದ ಕೂಡಿರುವುದು ಕಂಡುಬರುತ್ತದೆ. ಇಕ್ಕಟ್ಟಾದ ಕೊಠಡಿಗಳಿದ್ದು, ಒಂದೇ ಕೊಠಡಿಯ

ಗುಡಾರ, ತೊಡಿಕೆ, ಗೋಣಿಚೀಲ, ತುಂಡುಬಟ್ಟೆ ಗುಡಿಸಲುಗಳಿಲ್ಲಿಯೂ ಶೇಕಡ ೩೦% ರಷ್ಟು ಕುಟುಂಬಗಳಿವೆ. ಹಂಚಿನ ಮನೆಗಳಲ್ಲಿ ಕೆಲವರು ವಾಸಿಸುತ್ತಿರುವುದು ಕಂಡುಬರುತ್ತದೆ. ಮನೆ ಇದ್ದರು ನೀರು, ವಿದ್ಯುತ್, ಶೌಚಾಲಯ, ಚರಂಡಿ ಸ್ವಚ್ಛ ಸೌಲಭ್ಯಗಳ ಸಮಸ್ಯೆಯಿಂದ ಮಕ್ಕಳ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ಮನೆ ತುಂಬ ಹಳೆಯದಾಗಿದ್ದು ಮಳೆ ಬಂದರೆ ಕೊಳಚೆ ಪ್ರದೇಶದಲ್ಲಿ ಮನೆಸೋರುವುದು, ಮನೆ ಒಳಗೆ ನೀರು ನುಗ್ಗುತ್ತದೆ. ಇಂತಹ ಸಮಸ್ಯೆಗೆ ಸರ್ಕಾರದ ಯೋಜನೆ ಅನುಷ್ಠಾನಗೊಂಡು ನಿವಾಸಿಗಳಿಗೆ ಸರಿಯಾದ ಸೌಲಭ್ಯ ದೊರಕಿಲ್ಲ. ಇಂಥ ಅನೇಕ ಸಮಸ್ಯೆಗಳು ಹಾಗೆಯೇ ಉಳಿದಿವೆ. ಬಳ್ಳಾರಿ, ಹೊಸಪೇಟೆ ಭಾಗದ ಕೊಳಗೇರಿಗಳಲ್ಲಿ ಈ ಸಮಸ್ಯೆಯನ್ನು ಇಂದಿಗೂ ನೋಡಬಹುದು.

ಕೊಳಚೆ ಪ್ರದೇಶದಲ್ಲಿ ವಾಸಿಸುವ ವಿದ್ಯಾರ್ಥಿಗಳ ಸಮಸ್ಯೆ ಶಿಕ್ಷಣದ ಮೇಲೆ ಪ್ರಭಾವ ಬೀರಿದೆ. ವೈಯಕ್ತಿಕ ವಿಚಾರಕ್ಕೆ ಬಂದರೆ, ಕೊಳಚೆ ಪ್ರದೇಶದಲ್ಲಿ ವಾಸಿಸುವ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಆಸಕ್ತಿಯು ಕೆಲವರಲ್ಲಿ ಹೆಚ್ಚಾಗಿರುವುದು ನೋಡಬಹುದು. ಆದರೆ ಪ್ರೋತ್ಸಾಹದ ಕೊರತೆಯಿರುವುದು ಕಂಡುಬಂದಿದೆ. ಕನ್ನಡ ಕಲಿತರೆ, ಉಳಿದ ಭಾಷೆಗಳಾದ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳು ಮೂಲಭೂತವಾಗಿ ಕಷ್ಟವಾಗಿವೆ. ಇವರಿಗೆ ಪ್ರೋತ್ಸಾಹ ಹಾಗೂ ತರಬೇತಿಯ ಕೊರತೆಯಿದೆ. ಮನೆಯಲ್ಲಿ ಅನಕ್ಷರಸ್ಥ ಪೋಷಕರು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಂಟಕ ಪ್ರಾಯವಾಗಿದ್ದಾರೆ. ಶಾಲೆಗೆ ಹೋಗಲು ಹೆಚ್ಚು ಆಸಕ್ತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಮನೆಯಲ್ಲಿನ ಒತ್ತಡಗಳು ಸಮಸ್ಯೆಯಾಗಿ ಪರಿಣಮಿಸಿರುವುದು ಅಧ್ಯಯನದಿಂದ ಕಂಡುಬರುತ್ತದೆ.

ಅಧ್ಯಯನದ ಫಲಿತಗಳು

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರ ಸಮಸ್ಯೆಗಳು ಅವರ ಪ್ರಗತಿಯ ಮೇಲೆ ಪ್ರಭಾವ ಬೀರುತ್ತವೆ. ಬೇರೆ ಬೇರೆ ಪ್ರದೇಶಗಳಲ್ಲಿರುವಂತೆ ಕೊಳಚೆ ಪ್ರದೇಶದಲ್ಲಿ ಕಂಡುಬರುವಂತಹ ಗುಣಲಕ್ಷಣಗಳು ಮತ್ತು ಸಮಸ್ಯೆಗಳು ಬಳ್ಳಾರಿಯ ಕೊಳಚೆ ಪ್ರದೇಶದಲ್ಲಿ ನೋಡಬಹುದು. ಬಳ್ಳಾರಿ ಜಿಲ್ಲೆ ಹೈದ್ರಾಬಾದ್ ಕರ್ನಾಟಕದ ವ್ಯಾಪ್ತಿಯಲ್ಲಿಯೇ ತುಂಬಾ ಹಿಂದುಳಿದ ಪ್ರದೇಶವಾಗಿದೆ. ಹಂಪಿ ಎಂಬ ಐತಿಹಾಸಿಕ ಸ್ಥಳವು ಮುಖ್ಯವಾಗಿದೆ. ಧಾರ್ಮಿಕ ಹಾಗೂ ಸಾಮಾಜಿಕವಾಗಿ ತನ್ನದೇಯಾದ ವೈಶಿಷ್ಟ್ಯತೆಯಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಗಣಿಗಾರಿಕೆಯು ಪ್ರಮುಖ ಆಕರ್ಷಕತೆಯನ್ನು ಹೊಂದಿದೆ. ಎಷ್ಟು ಶ್ರೀಮಂತ ಜಿಲ್ಲೆಯೋ ಅಷ್ಟೇ ಕೊಳಚೆ ಪ್ರದೇಶಗಳನ್ನು ಹೊಂದಿರುವುದು ಗಮನಾರ್ಹ.

ಉದಾ: ಹಂಪಿಯು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು, ಐತಿಹಾಸಿಕ ಹಾಗೂ ತನ್ನದೇಯಾದ ಪರಂಪರೆಯನ್ನು ಹೊಂದಿದೆ. ವಿಜಯನಗರ ಕಾಲದಲ್ಲಿ ಅಚ್ಯುತರಾಯ ಬಜಾರು, ಸೂಳೆ ಬಜಾರುಗಳಲ್ಲಿ ಹೀಗೆ ಮುಂತಾದ ಬಜಾರುಗಳು ಆ ಕಾಲದಲ್ಲಿಯೇ ಸ್ಲಂ/ ಕೊಳಚೆ ಪ್ರದೇಶಗಳಾಗಿ ಕಾಣಸಿಗುತ್ತವೆ. ಈ ಕಾರಣದಿಂದ ಕೊಳಚೆ ಪ್ರದೇಶಗಳು

ನಿರ್ಮಾಣಗೊಂಡಿರುವುದು ಈ ಪರಿಸರದಲ್ಲಿ ಕಂಡುಬರುತ್ತದೆ. ಬಳ್ಳಾರಿ ಪ್ರದೇಶ ಬರಗಾಲ ಪ್ರದೇಶವಾಗಿದೆ. ಇಲ್ಲಿ ಹೆಚ್ಚು ಮಳೆಬರುವುದಿಲ್ಲ. ಜನರು ಎಲ್ಲಾ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ಜಾಗತೀಕರಣಕ್ಕೊಳಗಾಗಿ ಕೈಗಾರಿಕರಣಕ್ಕೆ ವಲಸೆ ಬರುತ್ತಾರೆ. ನಾನಾ ಕಾರಣಗಳಿಂದ ಹೆಚ್ಚು ಜೀವನಸಾಗಿಸಲು ನಗರಕ್ಕೆ ಬರುವುದು ನೋಡಬಹುದು. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಹೀಗೆ ವಿಶ್ಲೇಷಿಸಲಾಗಿದೆ.

ಕೌಟುಂಬಿಕ ಫಲಿತಗಳು

ಕೊಳಚೆ ಪ್ರದೇಶದಲ್ಲಿನ ಕುಟುಂಬಗಳನ್ನು ಅವಲೋಕಿಸಿದಾಗ ಕುಟುಂಬದ ಸ್ಥಾಪಿತ ಮಹಿಳೆ ಪಾತ್ರಗಳು ನಿರ್ವಹಿಸುವುದು ಇಲ್ಲಿ ಹೆಚ್ಚು ಕಂಡುಬರುತ್ತದೆ.

ಕೊಳಚೆ ಪ್ರದೇಶ ನಿವಾಸಿಗಳ ಕುಟುಂಬದಲ್ಲಿ ಶೇ ೬೬% ರಷ್ಟು ಪುರುಷರು ಮದ್ಯಪಾನ ಸೇವಿಸುತ್ತಾರೆ. ಇದರಿಂದ ಇಡೀ ವ್ಯವಸ್ಥೆಗೆ ಆಘಾತ ಹಾಗೂ ಸವಾಲು ಒಡ್ಡುತ್ತದೆ. ಕುಟುಂಬದ ಮಕ್ಕಳ ಜವಾಬ್ದಾರಿ ಶಿಕ್ಷಣ, ಎಲ್ಲಾ ಮಹಿಳೆಯರು ಮನೆಗೆಲಸದಲ್ಲಿ ಮಾಡುತ್ತ ಟೈಲರಿಂಗ್ ಬಟ್ಟೆ ಹೊಲಿಯುವ ಕೆಲಸ ಮಾಡುತ್ತಾರೆ. ದುಡಿದು ಕೆಲಸ ಮಾಡಿದ ಕೂಲಿ ಹಣವನ್ನು ಕಿತ್ತುಕೊಂಡು ಕುಡುಕ ಗಂಡ ಹೋಗುವಂತ ಪ್ರಸಂಗಗಳು ಕಂಡುಬರುತ್ತವೆ.

ಒಂದು ಕುಟುಂಬದಲ್ಲಿ ಅಣ್ಣ-ಅಪ್ಪ-ಅಕ್ಕ ತಮ್ಮ ಮಕ್ಕಳು ಇದ್ದರು ದಿನನಿತ್ಯ ಕೌಟುಂಬಿಕ ಕಲಹಗಳು ನಡೆಯುತ್ತವೆ. ಆರ್ಥಿಕ ಪರಿಸ್ಥಿತಿ ಮೇಲೆ ಪರಿಣಾಮ ಬೀರುತ್ತವೆ. ದುಡಿಯುವವರು ಯಾರು ಇಲ್ಲ ಎಂದಾಗ ಕುಟುಂಬಗಳು ಬಡತನ ಹಾಗೂ ನಿರ್ಲಕ್ಷ್ಯೆಗೆ ಗುರಿಯಾಗುತ್ತವೆ.

ಕೊಳಚೆ ಪ್ರದೇಶದಲ್ಲಿ ವಿವಾಹ ಆದ ನಂತರ ಅನೇಕ ಮಹಿಳೆಯರಿಗೆ ಹಿಂಸೆ ಕಿರುಕಳ ನೋವು ಅವಮಾನವನ್ನು ಅನುಭವಿಸುತ್ತಾರೆ. ಲೈಂಗಿಕ ಕಿರುಕುಳ, ವಿಚ್ಛೇದನ ಆಗುವುದು, ನ್ಯಾಯ ಪಂಚಾಯ್ತಿ ಮಾಡುವುದು ಸರ್ವೇಸಾಮಾನ್ಯವಾಗಿವೆ.

ಅನೇಕ ಕುಟುಂಬದ ಮಹಿಳೆಯರು ಅತಿ ಬಡತನದಿಂದ ಜೀವನ ಸಾಗಿಸುತ್ತಾರೆ. ಜೀವನ ನಿರ್ವಹಣೆಗಾಗಿ ರೊಟ್ಟಿ ಮಾಡುವುದು, ಚಿಂದಿ ಆರಿಸುವುದು, ಕೂಲಿಗಾಗಿ ಮನೆಕೆಲಸಗಳಲ್ಲಿ ತೊಡಗಿರುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಫಲಿತಗಳು

ಕ್ಷೇತ್ರಕಾರ್ಯದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿದಾಗ ಕಂಡುಬಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಕೊಳಚೆ ನಿವಾಸಿಗಳಲ್ಲಿ ದುಡಿಯುವರು ಶೇ ೩೫.೪% ರಷ್ಟು ದುಡಿಮೆಯಲ್ಲಿ ತೊಡಗುತ್ತಾರೆ. ಶೇ. ೪೪.೪೧ರಷ್ಟು ಮಹಿಳೆಯರು ಮನೆಕೆಲಸ, ಟೈಲರಿಂಗ್, ಹೂವುಕಟ್ಟುವುದು, ತರಕಾರಿ ವ್ಯಾಪಾರ ಮಾಡುವುದು ಪಾತ್ರೆಗಳ ಮಾರಾಟ, ಕಾರ್ಖಾನೆ ದುಡಿಮೆ ಮಾಡುವುದು ಕೆಲಸ

ಶಾಲೆಗಳಲ್ಲಿ ಅಡಿಗೆ ಕೆಲಸ ಮಾಡುವುದು ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿರುವುದು ತಿಳಿಯುತ್ತದೆ.

ಕೊಳಚೆ ಪ್ರದೇಶದಲ್ಲಿ ಕೆಲಸ ಮಾಡುವಂತಹ ಮಹಿಳೆಯರಿಗೆ ಪುರುಷರಿಗೆ ೧೫೦ ಮಹಿಳೆಯರಿಗೆ ೧೦೦ ರೂ. ಗಳವರೆಗೆ ಪಡೆಯುತ್ತಾರೆ. ಆದಾಯದಿಂದ ಮೂಲಭೂತ ಅವಶ್ಯಕತೆ ಅವರಿಗೆ ಸಾಧ್ಯವಾಗುತ್ತಿಲ್ಲ. ಪುರುಷರು ಮನೆ ಕೆಲಸಕ್ಕೆ ಹೋಗುತ್ತಾರೆ. ಮನೆಕಟ್ಟುವ ಕೆಲಸಕ್ಕೆ ಹೋಗುತ್ತಿದ್ರೆ ಕನಿಷ್ಠ ದಿನದ ವೇತನಕ್ಕಿಂತಲೂ ಎರಡು ಪಟ್ಟು ಹೆಚ್ಚಿರುತ್ತದೆ. ಆದರೂ ಹೆಚ್ಚಿನ ಆರ್ಥಿಕ ಆದಾಯ ಸಾಧ್ಯತೆಗಳು ಕಂಡುಬರುವುದಿಲ್ಲ.

ಕೊಳಚೆ ಪ್ರದೇಶ ನಿವಾಸಿಗಳ ಕುಟುಂಬದ ಆರ್ಥಿಕ ಮಟ್ಟವು ತುಂಬ ತಳಮಟ್ಟದ್ದಾಗಿರುತ್ತದೆ. ಇವರ ಪರಿಸ್ಥಿತಿ ಇಂದು ಕೂಲಿ ಪ್ರಮಾಣವು ಕಡಿಮೆ ಪ್ರಮಾಣದಲ್ಲಿದೆ. ಮನೆಯ ದಿನ ನಿತ್ಯದ ಖರ್ಚು-ವೆಚ್ಚ ಹಾಗೂ ಅಗತ್ಯಕ್ಕೆ ಪೂರೈಸಿಕೊಳ್ಳಲು ಆಗದೇ ಪರದಾಡುವಂತ ಸ್ಥಿತಿ ಗೋಚರಿಸುತ್ತದೆ.

ಸಾಮಾಜಿಕ ಫಲಿತಗಳು

ಕೊಳಗೇರಿಗಳಲ್ಲಿ ಸಮಾಜ, ಕುಟುಂಬ, ವಿವಾಹ, ಹಬ್ಬ-ಹರಿದಿನ, ಬಂಧುತ್ವ ಆಚರಣೆ ಮತ್ತು ಸಂಪ್ರದಾಯಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆ ಅತ್ಯಂತ ಮಹತ್ವದಾಗಿರುತ್ತದೆ. ಸಾಮಾಜಿಕ ನಿಯಂತ್ರಣದಲ್ಲಿ ಮನುಷ್ಯ ಆದರ್ಶವೆಲ್ಲ ವಿವಾಹ ಕೇಂದ್ರಿತವಾಗಿದ್ದು, ಇಲ್ಲಿನ ರೂಢಿ ಸಾಂಪ್ರದಾಯಗಳನ್ನು ಮೌಢ್ಯ ಆಚರಣೆಗಳ ಸಾಮಾಜಿಕ ಸಮಸ್ಯೆಗಳನ್ನು ನೋಡಬಹುದು.

ಸಾಮಾಜಿಕವಾಗಿ ಕೊಳಚೆ ನಿವಾಸಿಗಳಿಗೆ ಸಮಾನತೆ, ಸ್ವಾತಂತ್ರ್ಯದ ಸ್ಥಾನಮಾನಗಳಿಲ್ಲ. ಇವರು ಸರಿಯಾದ ಸ್ಥಾನಮಾನ ಇಲ್ಲದೆ, ಬಡತನ ಮತ್ತು ನಿರೂದ್ಯೋಗ ಸಮಸ್ಯೆಯಿಂದ ತೊಂದರೆಗೊಳಗಾಗಿದ್ದಾರೆ.

ವಿವಿಧ ಕೂಲಿಕೆಲಸಗಳಲ್ಲಿ ಕೊಳಚೆ ನಿವಾಸಿಗಳ ಮಕ್ಕಳು ದುಡಿಯುವಲ್ಲಿ ತೊಡಗಿರುತ್ತಾರೆ. ಹಾಗಾಗಿ ಬಾಲಕಾರ್ಮಿಕರಾಗಿರುವುದು ಸಾಮಾಜಿಕ ಸಮಸ್ಯೆಯಾಗಿದೆ.

ಪುರುಷ ಕೊಳಗೇರಿಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದು, ಕುಟುಂಬ ಚಾಕರಿಯನ್ನು ಹೆಣ್ಣು ಮಕ್ಕಳು ಮಾಡುತ್ತಾರೆ. ಮಹಿಳೆಯ ಸ್ಥಿತಿ-ಗತಿಗಳು ಸಾಮಾಜಿಕವಾಗಿ ಕೆಳಹಂತದಲ್ಲಿದೆ.

ಕೊಳಚೆ ಪ್ರದೇಶದಲ್ಲಿ ಕಳ್ಳತನ, ಮದ್ಯಪಾನ, ಅಪರಾಧಕೃತ್ಯಗಳು ದಿನ-ದಿನಕ್ಕೆ ಹೆಚ್ಚಾಗುವಂತಹ ಸ್ಥಿತಿ ಕಂಡುಬರುತ್ತದೆ. ನಡತೆ ತಪ್ಪಿದ ಪುರುಷರು, ನಡತೆ ತಪ್ಪಿದ ಮಹಿಳೆಯರು ಈ ಕೃತ್ಯದಲ್ಲಿರುವುದನ್ನು ನಾಗರಿಕರು ತಿಳಿಸುತ್ತಾರೆ.

ಕೊಳಚೆ ಪ್ರದೇಶ ನಿವಾಸಿಗಳಲ್ಲಿ ಗಮನಿಸುವಂತೆ ಮಹಿಳೆಯರು ಬಾಲ್ಯ ವಿವಾಹ ಪದ್ಧತಿಗೆ ಒಳಗಾಗಿರುವುದು ತಿಳಿದುಬರುತ್ತದೆ. ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಬೇಗ ಮದುವೆ

ಮಾಡುವುದರಿಂದ ಅವರ ಆರೋಗ್ಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಪರಿಕಲ್ಪನೆಯು ಇರುವುದಿಲ್ಲ. ಕೆಲವರಲ್ಲಿ ದೇವದಾಸಿ ಪದ್ಧತಿ, ವೇಶ್ಯಾಪದ್ಧತಿಗೆ ಒಳಗಾಗಿರುವುದನ್ನು ಸರ್ಕಾರಿ ಕಚೇರಿ, ಪೋಲೀಸ್ ಠಾಣೆಗಳ ವರದಿಗಳಿಂದ ತಿಳಿಯುತ್ತದೆ.

ಶೈಕ್ಷಣಿಕ ಫಲಿತಗಳು

ಕೊಳಚೆ ಪ್ರದೇಶದಲ್ಲಿ ವಾಸಿಸುವವರ ಶೈಕ್ಷಣಿಕ ಪ್ರಗತಿ ತುಂಬಾ ಕಡಿಮೆ ಇದೆ. ಇವರ ಮೇಲೆ ಪ್ರಭಾವ ಬೀರುವ ಸಮಸ್ಯೆಗಳು ಹಲವು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದುಕೊಂಡರೂ ಕೆಲವರಿಗೆ ಓದಲು ಬರುವುದಿಲ್ಲ.

ಕೊಳಚೆ ಪ್ರದೇಶದಲ್ಲಿ ವಾಸಿಸುವ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಯು ಬೇರೆ ವಿದ್ಯಾರ್ಥಿಗಳ ಶೈಕ್ಷಣಿಕ ಸ್ಥಿತಿಗಿಂತ ಕೆಳಮಟ್ಟದಲ್ಲಿರುತ್ತದೆ. ಎಷ್ಟು ಜನ ವಿದ್ಯಾರ್ಥಿಗಳು ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಿರುವುದು ತಿಳಿಯಬಹುದಾಗಿದೆ. ಮಧ್ಯಕ್ಕೆ ಶಾಲೆ ಬಿಡುವುದು, ಅನುತ್ತೀರ್ಣರಾಗಿರುವುದು, ಶಾಲೆಗೆ ಸದಾ ಗೈರು ಹಾಜರಿ ಆಗುವುದು ಇವರಲ್ಲಿ ಅಪವ್ಯಯ ಮತ್ತು ಅನುತ್ತೀರ್ಣಗಳಿಗೆ ಕಾರಣವಾಗಿದೆ.

ಕೊಳಚೆ ಪ್ರದೇಶದಲ್ಲಿ ವಾಸಿಸುವರ ಸ್ಥಿತಿ ಆರ್ಥಿಕವಾಗಿ ತುಂಬ ತೊಂದರೆಯನ್ನು ಹೊಂದಿದ್ದಾರೆ. ಶೈಕ್ಷಣಿಕವಾಗಿ ಉತ್ತಮ ಕಲಿಕೆಯ ಆಸಕ್ತಿಯನ್ನು ಹೊಂದಿರುವ ಅವರ ತಂದೆ–ತಾಯಿಗಳ ಪ್ರೋತ್ಸಾಹದ ಕೊರತೆಯಿಂದ ಕಲಿಕೆಯಲ್ಲಿ ಹಿಂದುಳಿದಿರುವುದು ತಿಳಿದುಬರುತ್ತದೆ.

ಇಲ್ಲಿ ವಾಸಿಸುವಂತ ಹೆಣ್ಣು ಮಕ್ಕಳ ಶೈಕ್ಷಣಿಕ ಸ್ಥಿತಿ ಓದುವಂತಹ ಪರಿಸ್ಥಿತಿ ನಿರ್ಮಾಣ ವಾಗಿಲ್ಲ. ಬೇಗ ಮದುವೆ ಮಾಡುವುದರಿಂದ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ.

ಹೆಣ್ಣು ಮಕ್ಕಳಿಗೆ ಹೆಚ್ಚು ಶಿಕ್ಷಣ ಕೊಡಿಸಲ್ಲ. ಕಾರಣ ಮದುವೆ ಮಡುವುದು ಕಷ್ಟ. ಅವರಷ್ಟೇ ಓದಿದ ಹುಡಗ ಸಿಗುವುದು ಇವರಿಗೆ ಸಮಸ್ಯೆ. ಮನೆಯಲ್ಲಿ ಕೆಲಸ ಮಾಡಿಕೊಂಡು ಶಿಕ್ಷಣದಿಂದ ವಂಚಿತರನ್ನಾಗಿಸುತ್ತಾರೆ.

ಕೊಳಚೆ ಪ್ರದೇಶದಲ್ಲಿ ಗಮನಸಿದಂತೆ ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಹಂತದವರೆಗೆ ಮಾತ್ರ ಶಾಲೆಗೆ ಕಳಿಸುವರು. ಆಧುನಿಕ ಶಿಕ್ಷಣದ ಸೌಲಭ್ಯಗಳನ್ನು ಉಚಿತ ಪುಸ್ತಕ, ವಸ್ತ್ರ, ಬಸ್‌ಪಾಸ್, ಸೈಕಲ್, ಊಟ, ವಸತಿಗಳಿಂದ ಕೆಲವರು ಉಪಯೋಗ ಪಡೆದರೆ ಇನ್ನು ಕೆಲವರು ವಂಚಿತರಾಗಿದ್ದಾರೆ.

ಕೊಳಚೆ ಪ್ರದೇಶದಲ್ಲಿ ವಾಸಿಸುವ ವಿದ್ಯಾರ್ಥಿಗಳ ಕುಟುಂಬಗಳಲ್ಲಿ ಉತ್ತಮ ಸಾಮಾಜಿಕ ಪರಿಸರ ಹೊಂದಿರುವುದಿಲ್ಲ. ಮನೆಯಲ್ಲಿ ತಂದೆ, ಮಧ್ಯಪಾನ ಮಾಡಿ ಜಗಳ ಮಾಡುವುದರಿಂದ ಮಕ್ಕಳ ಶಿಕ್ಷಣಕ್ಕೆ ನಿರ್ಲಕ್ಷ್ಯ ಮನೋಭಾವನೆಯಿದೆ. ಮಧ್ಯಪಾನ, ಅನೈತಿಕ ಸಂಬಂಧ ಚಟುವಟಿಕೆ ಮೂಢನಂಬಿಕೆಗಳು, ಅಪರಾಧ ಕೃತ್ಯಗಳು ಮೊದಲಾದ ಅಂಶಗಳು ಚಿಕ್ಕ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವುದು ಸಂಶೋಧನೆಯಿಂದ ತಿಳಿದುಬಂದಿದೆ.

ಕೊಳಚೆ ಪ್ರದೇಶದ ಶಾಲೆಗಳಲ್ಲಿ ಗ್ರಂಥಾಲಯದ ಕೊರತೆ ಇದೆ. ದಿನಪತ್ರಿಕೆ ಓದುವುದು ಸಹಾ ಇವರಿಗೆ ಆಗುವುದಿಲ್ಲ. ಶಾಲೆಯ ಚಟುವಟಿಕೆಗಳಲ್ಲಿ ಕ್ರೀಡಾ ಸೌಲಭ್ಯವಿಲ್ಲದಿರುವುದು ಕಂಡುಬರುತ್ತದೆ.

ಆರೋಗ್ಯದ ಫಲಿತಗಳು

ಮಹಿಳೆಯರ ಆರೋಗ್ಯ ಸಮಸ್ಯೆಗಳು ಹಲವು. ತಮ್ಮ ಆರೋಗ್ಯದ ಬಗ್ಗೆ ಅರಿವು, ಕಾಳಜಿ ಇಲ್ಲದೆ ರೋಗಗಳಿಗೆ ತುತ್ತಾಗುತ್ತಾರೆ. ಪುರುಷ ಮತ್ತು ಮಕ್ಕಳಲ್ಲಿ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅರಿವು ಕಡಿಮೆ ಇದ್ದು ನೂರಾರು ಸಮಸ್ಯೆಗಳಿಗೆ ಬಲಿಯಾಗುವುದನ್ನು ನೋಡಬಹುದು.

ಕೊಳಚೆ ಪ್ರದೇಶದಲ್ಲಿ ವಾಸಿಸುವ ಮಹಿಳೆಯರು ಮತ್ತು ಪುರುಷರು ಅತ್ಯಂತ ಕಷ್ಟದ ಕೆಲಸಕ್ಕೆ ಹೋಗುತ್ತಾರೆ. ಅತ್ಯಂತ ಶ್ರಮದಾಯಕ ಕೆಲಸಗಳಾಗಿರುವುದರಿಂದ ಮೈಕೈ ನೋವು, ಸಣ್ಣ ಸಮಸ್ಯೆಗಳಿಗೆ ಸಂಬಂಧಿಸಿದ ಕಾಯಿಲೆಗಳಿಗೆ ಬಲಿಯಾಗಿದ್ದಾರೆ.

ಗರ್ಭಿಣಿ ಬಾಣಂತಿಯರಲ್ಲಿ ಸರಿಯಾದ ಆಹಾರ ಕ್ರಮಕ್ಕೆ ತೆಗೆದುಕೊಳ್ಳದೆ ನಿರ್ಲಕ್ಷ್ಯ ಮನೋಭಾವನೆಯಿದೆ. ಅನೇಕ ಮಹಿಳೆಯರಿಗೆ ಗರ್ಭಪಾತವಾಗಿ ಗರ್ಭಕೋಶದ ತೊಂದರೆಗೆ ಒಳಗಾಗಿದ್ದಾರೆ.

ಕೊಳಚೆ ಪ್ರದೇಶದಲ್ಲಿ ಜನರಿಗೆ ಕ್ಷಯ ರೋಗ ಹೆಚ್ಚು ಕಂಡುಬರುತ್ತದೆ.

ಕೊಳಚೆ ಪ್ರದೇಶದ ಜನರು HIV/AIDS ಕಾಯಿಲೆಗೆ ಬಲಿಯಾಗಿದ್ದಾರೆ. ೮/೧೧ ರಷ್ಟು ಮಾಹಿತಿ ತಿಳಿದುಬಂದಿದೆ.

ಕೊಳಚೆ ಪ್ರದೇಶದ ಮಕ್ಕಳಲ್ಲಿ ಜ್ವರ, ಜಾಂಡೀಸ್, ಮಲೇರಿಯಾ, ವಾಂತಿ ಭೇದಿ, ಡೆಂಗ್ಯೂ ಜ್ವರ, ಟೈಫಾಯಡ್, ದೃಷ್ಟಿ ಸಮಸ್ಯೆಗಳು, ಅಂಗವಿಕಲರು, ಬುದ್ಧಿಮಾಂದ್ಯ ಸಮಸ್ಯೆಯಿಂದ ಬಳಲುತ್ತಾರೆ. ಇಷ್ಟೇ ಅಲ್ಲದೇ ಸಾಮಾಜಿಕ ಕಾರಣವಾಗಿ ಹೆಚ್ಚು ಮಕ್ಕಳಿಗೆ ಪೌಷ್ಟಿಕತೆ ಕೊರತೆಯಿಂದ ಕಾರಣವಾಗಿರುವುದು. ಕುಂಟ, ಕುರುಡುತನ, ಮೂಕ, ಅಂಗವಿಕಲ, ಬುದ್ಧಿಮಾಂದ್ಯರು, ಹುಚ್ಚರು, ಅರೆ ಹುಚ್ಚರು ಸಹಾ ಕೊಳಗೇರಿಗಳಲ್ಲಿ ಕಂಡುಬರುತ್ತಾರೆ.

ಮಾಹಿತಿ ಫಲಿತಗಳು

ಸರ್ಕಾರವು ಕೊಳಗೇರಿ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರು ಫಲಕಾರಿಯಾಗಿಲ್ಲ. ಕೊಳಚೆ ಪ್ರದೇಶದ ನಿವಾಸಿಗಳು ನಿರ್ಲಕ್ಷ ಮನೋಭಾವನೆಯಲ್ಲಿ ತಮ್ಮ ನೋವುಗಲನ್ನು ತೋಡಿಕೊಳ್ಳುತ್ತಾರೆ.

ಕೊಳಚೆ ಪ್ರದೇಶದ ಒಂದು ಮನೆಯಲ್ಲಿ ೮-೫ ಜನರು ವಾಸಿಸುತ್ತಾರೆ. ಒಂದು ಕೊಠಡಿ ಇರುವಂತಹದು ನೋಡಬಹುದು.

ಕೊಳಗೇರಿ ಜನರು ಮನುಷ್ಯರು ಯೋಗ್ಯವಿಲ್ಲದಂತ, ಪಾಳುಬಿದ್ದಿರುವಂತಹ ಮನೆಯಲ್ಲಿ ವಾಸಿಸುತ್ತಾರೆ. ಆರ್ಥಿಕ ಸಮಸ್ಯೆಯಿಂದ ಜನರು ತುಂಬ ಕಷ್ಟ ಸ್ಥಿತಿಯಲ್ಲಿ ಜೀವನ ಮಾಡುತ್ತಾರೆ.

ಕೊಳಚೆ ಪ್ರದೇಶದಲ್ಲಿ ಸರ್ಕಾರ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯವರು ರೂಪಿಸಿಕೊಂಡಿರುವಂತಹ ವಸತಿ ಯೋಜನೆ ಅಡಿಯಲ್ಲಿ ಮನೆಗಳನ್ನು ಕೊಟ್ಟಿರುತ್ತಾರೆ. ಅದರಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೆ ಸ್ನಾನಗೃಹ, ಶೌಚಾಲಯದ ನೀರಿನ ವ್ಯವಸ್ಥೆ, ಬೀದಿ ವ್ಯವಸ್ಥೆ ಮೊದಲಾದ ಸಮಸ್ಯೆಗಳು ಅವ್ಯವಸ್ಥೆಯ ಆಗರವಾಗಿದೆ.

ಇಲ್ಲಿಯ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸಮಸ್ಯೆಗಳಾದ ಚರಂಡಿ ವ್ಯವಸ್ಥೆ, ದೀಪದ ವ್ಯವಸ್ಥೆ, ಶೌಚಾಲಯ, ಮನೆಮುಂದೆ ಚರಂಡಿ ವ್ಯವಸ್ಥೆ ಇಲ್ಲದೆ, ಮನೆ ಮುಂದೆ ನೀರು ನಿಂತಿರುವುದು, ಸೊಳ್ಳೆ ಮತ್ತು ದುರುವಾಸನೆಯಿಂದ ಕೂಡಿದೆ.

ಕೊಳಚೆ ನಿವಾಸಿಗಳು ಹೆಚ್ಚು ಗುಡಾರ ತೊಡಕೆ ಗೋಣಿಚೀಲ ಕಟ್ಟಿಕೊಂಡು ಸಣ್ಣ ಆಕಾರದಲ್ಲಿ ವಾಸಿಸುವುದು ನೋಡಬಹುದು. ಪ್ಲಾಸ್ಟಿಕ್ ನಿಷೇಧಿಸಿದರೂ ಇವರಿಗೆ ಅದು ಅಗತ್ಯವಾಗಿದ್ದು, ಅದರಿಂದ ಜೀವಿಸುತ್ತಾರೆ.

ಕೊಳಚೆ ಪ್ರದೇಶದಲ್ಲಿ ನೀರು ಸಮಸ್ಯೆ ವಾರಕ್ಕೆ ಒಂದುದಿನ ಬಿಡುತ್ತಾರೆ. ಸ್ವಚ್ಛತೆ ಇರುವುದಿಲ್ಲ ನೀರನ್ನು ಸುಮಾರು ದೂರ ಹೋಗಿ ಸಂಗ್ರಹಿಸುತ್ತಾರೆ. ಹೆಚ್ಚಾಗಿ ಬಾವಿ, ಕೆರೆ ನೀರನ್ನು ತರುತ್ತಾರೆ. ಇಂದು ನಲ್ಲಿಯಲ್ಲಿ ನೀರು ಹಿಡಿಯುತ್ತಾರೆ.

ಕೊಳಚೆ ಪ್ರದೇಶದ ಮಹಿಳೆಯರ ಮನೆಗಳಿಗೆ ಶೌಚಾಲಯ ವ್ಯವಸ್ಥೆಯಿಲ್ಲದಿರುವುದು ಕಂಡು ಬರುತ್ತದೆ. ಶೌಚಾಲಯ ವ್ಯವಸ್ಥೆಯಿಲ್ಲದೇ ಶೇಖಡ ೬೩% ರಷ್ಟು ಮಹಿಳೆಯರು ಮತ್ತು ಬಹಿರ್ದೆಸೆಗಾಗಿ ಬಯಲಿದೆ ಹೋಗುತ್ತಾರೆ. ಇವರು ಇತ್ತೀಚೆಗೆ ಸಾರ್ವಜನಿಕ ಶೌಚಾಲಯಕ್ಕೆ ಹೋಗುವುದು ತಿಳಿದು ಬರುತ್ತದೆ.

ಅಧ್ಯಯನ ಸಲಹೆ ಮತ್ತು ಶಿಫಾರಸ್ಸುಗಳು

ಕೊಳಚೆ ಪ್ರದೇಶಗಳ ನಗರೀಕರಣ ಪ್ರಕ್ರಿಯೆ ಪ್ರಾರಂಭವಾದಾಗಿನಿಂದ ಕ್ರಮೇಣ ಬೆಳವಣಿಗೆ ಪ್ರದೇಶಗಳ ಉದ್ಭವವಾಗುತ್ತಾ ಹೋದವು. ಕೊಳಚೆ ಪ್ರದೇಶದ ನಿರ್ಮೂಲನೆಗೆ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಮುಖ್ಯವಾಗಿ ವಸತಿ ಯೋಜನೆಗಳು. ಪ್ರಗತಿಗೆ ಪೂರಕವಾದಂತಹ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಕೊಳಚೆ ಪ್ರದೇಶಗಳ ಸಮಸ್ಯೆ ನಿವಾರಣೆಗಳು ಬೌದ್ಧಿಕ ವಲಯ ಸಂಘಟನಾತ್ಮಕ ಚಟುವಟಿಕೆಗಳು ಬದಲಾವಣೆಯಾಗದೇ ಹಾಗೆಯೇ ಅಭಿವೃದ್ಧಿಯ ಕಾರ್ಯವು ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲದಿರುವುದು ಆತಂಕಕ್ಕೆ ಎಡೆಮಾಡಿಕೊಟ್ಟಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕೆಲವು ಸಲಹೆಗಳನ್ನು ನೀಡಲಾಗಿದೆ.

೧. ಮೊದಲನೆಯದಾಗಿ ಕೊಳಚೆ ಪ್ರದೇಶ ಸಮಸ್ಯೆಗಳನ್ನು ನಿವಾರಿಸಲು ಅಥವಾ ಬದಲಾವಣೆಗೆ ಕಾರ್ಯಕ್ರಮಗಳನ್ನು ಸರ್ಕಾರ ಹಾಗೂ ಕೊಳಚೆ ನಿರ್ಮೂಲನ ಮಂಡಳಿ ವೈಜ್ಞಾನಿಕವಾಗಿ ಮತ್ತು ಸರ್ಮಪಕವಾಗಿ ಕಾರ್ಯಕ್ರಮಗಳನ್ನು ಕೈಗೊಳಬೇಕು. ಮಾನವ ವಾಸಿಸಲು ಯೋಗ್ಯವಲ್ಲದ ಸ್ಥಳದಲ್ಲಿ ವಾಸಿಸುತ್ತಿರುವ ಇವರಿಗೆ ಪರ್ಯಾಯ ವ್ಯವಸ್ಥೆ ಕೈಗೊಳ್ಳುವಂತೆ ಸರ್ಕಾರ ಗಮನಹರಿಸಬೇಕು.

೨. ನೈರ್ಮಲ್ಯತೆ ಮತ್ತು ಸ್ವಚ್ಛತೆ ಬಗ್ಗೆ ಈ ನಿವಾಸಿಗಳಿಗೆ ಹಾಗೂ ಕೊಳಚೆ ಪ್ರದೇಶದ ಶಾಲೆಯ ಮಕ್ಕಳಿಗೆ ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸರ್ಕಾರ ಮತ್ತು ಸಂಬಂಧಿತ ಸ್ಥಳೀಯ ಸಂಸ್ಥೆಗಳು ಮುಂದಾಗಬೇಕು.

೩. ಕೊಳಚೆ ಪ್ರದೇಶದ ನಿವಾಸಿಗಳಿಗೆ ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ಕುರಿತು ಹಾಗೂ ಯುವತಿಯರಿಗೆ ಆರೋಗ್ಯ ಇಲಾಖೆಯು ಜಾಗೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಕೊಳಚೆ ಪ್ರದೇಶದಲ್ಲಿ ಕೌಟುಂಬಿಕ ಕಲಹ, ಹಿಂಸೆ, ಮಧ್ಯಪಾನ, ಕೆಟ್ಟ ಪರಿಣಾಮಗಳಾದ ಕುಟುಂಬದಲ್ಲಿ ವಿಘಟನೆ ಮುಂತಾದವುಗಳನ್ನು ಕುರಿತು ಕುಟುಂಬ ಕಲ್ಯಾಣ ಇಲಾಖೆ ಜಾಗೃತಿ ಮೂಡಿಸಬೇಕು.

ಕೊಳಚೆ ಪ್ರದೇಶದಲ್ಲಿನ ನಿವಾಸಿಗಳಲ್ಲಿ ಯುವಕ/ಯುವತಿಯರು ತಮ್ಮ ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಾರೆ. ಹಲವು ಕಾರಣಗಳ ಒತ್ತಡದ ಹಿನ್ನೆಡೆಯಿಂದ ನಿರುದ್ಯೋಗ, ಬಡತನ, ದಾರಿದ್ರ್ಯವು ಕೊಳಚೆ ಪ್ರದೇಶದಲ್ಲಿ ವಾಸಿಸುವಂತೆ ಮಾಡಿವೆ. ಸರ್ಕಾರವು ಸ್ವಲ್ಪಮಟ್ಟಿಗಾದರು ಆರ್ಥಿಕ ಭದ್ರತೆಯನ್ನು ಒದಗಿಸುವಂತಹ ಉದ್ಯೋಗವನ್ನು ನೀಡುವಲ್ಲಿ ಮುಂದಾಗಬೇಕು.

ಕೊಳಚೆ ಪ್ರದೇಶದ ಜನರಿಗೆ ನಗರ ಸಭೆ, ಮಹಾನಗರ, ಪೌರಾಡಳಿತ ಸಂಸ್ಥೆಗಳಲ್ಲಿ ಕೆಲಸ ಕೊಟ್ಟರು, ಕಸ ಗುಡಿಸುವುದು, ಚರಡಿ ಸ್ವಚ್ಛಗೊಳಿಸುವುದು ಕೆಲಸ ಮಾಡುತ್ತಾರೆ. ಇಂಥ ಮಕ್ಕಳು ಶಿಕ್ಷಕರು, ತಹಶೀಲ್ದಾರರು, ಜಿಲ್ಲಾಧಿಕಾರಿಗಳು, ಎಸ್.ಪಿ. ಪೊಲೀಸ್ ಹೀಗೆ ಉನ್ನತ ಹುದ್ದೆಗಳನ್ನು ಅವಲಂಬಿಸಿದಾಗ ಸ್ಲಂ ಜನರ ನೋವುಗಳು ಅರ್ಥವಾಗುತ್ತವೆ.

ಬಳ್ಳಾರಿ ಜಿಲ್ಲೆಯ ಘೋಷಿತ ಮತ್ತು ಅಘೋಷಿತ ಕೊಳಚೆಗಳನ್ನು ಒಳಗೊಂಡಿವೆ. ಇಲ್ಲಿನ ಮೂಲಭೂತ ಸೌಲಭ್ಯಗಳ ಬಗೆಗೆ ಯಾವುದೇ ಸೂಚನೆಗಳನ್ನು ನೀಡಿದರೂ ಪ್ರಯೋಜನವಾಗಿಲ್ಲ. ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿ ದೀಪ, ರಸ್ತೆ, ಒಳಚರಂಡಿ, ಹೊರಚರಂಡಿ ಶೌಚಾಲಯ ಚರಂಡಿ ಸಮುದಾಯಿಕ ಮುಂತಾದ ಸೌಲಭ್ಯಗಳನ್ನು ಘೋಷಿತ ಕೊಳಚೆ ಪ್ರದೇಶಗಳಲ್ಲಿ ಸಲಹೆ ನೀಡಿದರೂ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸರ್ಕಾರವು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮುಂದಾಗಬೇಕಾಗಿದೆ.

ಕೊಳಗೇರಿಗಳಲ್ಲಿನ ಮಕ್ಕಳು ಬಾಲಾಪರಾಧ ಅಪರಾಧ ಕೃತ್ಯಗಳು, ಅನೈತಿಕ ಚಟುವಟಿಕೆ, ಮೂಢನಂಬಿಕೆಗಳಿಂದ ಬಳಲುತ್ತಾರೆ. ಇಂಥ ಸಮಸ್ಯೆಗಳ ತಾಣವಾಗಿರುವ ಕೊಳಚೆ ಪ್ರದೇಶದಲ್ಲಿ ಕೌನ್ಸಿಲಿಂಗ್ ಮಾಡಲು ಸಲಹಾ ಕೇಂದ್ರ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ಕೊಳಚೆ ಪ್ರದೇಶದಲ್ಲಿ ಶಾಲೆಗಳ ಉತ್ತಮ ಕಟ್ಟಡವನ್ನು ಕಟ್ಟಿಸಬೇಕು. ಹಾಗೆಯೇ ಉತ್ತಮ ಪರಿಸರ, ಮೂಲಭೂತ ಸೌಲಭ್ಯಗಳಾದ ನೀರಿನ ಅರವಟ್ಟಿಗೆ, ಶೌಚಾಲಯ, ಆಟದ ಮೈದಾನ, ಗ್ರಂಥಾಲಯ ಇವುಗಳನ್ನು ಸ್ಥಳೀಯ ಆಡಳಿತದಿಂದ ನಿರ್ವಹಿಸಬೇಕು.

ಕೊಳಚೆ ಪ್ರದೇಶದಲ್ಲಿರುವ ಶಾಲೆ ಮಕ್ಕಳಿಗೆ ವಿಶೇಷ ಕಲಿಕೆ ತರಬೇತಿಯನ್ನು ನೀಡಬೇಕು. ಕೊಳಚೆ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕೆಗೆ ಪ್ರೋತ್ಸಾಹದಾಯಕವಾದ ಕೌಶಲ್ಯ ತರಬೇತಿ ದೊರಕಿಸಬೇಕು.

ಹೀಗೆ ಸಂಶೋಧನಾ ಅಧ್ಯಯನದ ಉದ್ದೇಶಕ್ಕಾಗಿ ಸಂಶೋಧನಾ ಕ್ಷೇತ್ರಕ್ಕೆ ಭೇಟಿನೀಡಿದಾಗ ಹಲವು ಸತ್ಯಗಳು ಬೆಳಕಿಗೆ ಬಂದಿವೆ. ವಾಸ್ತವವಾಗಿ ಅವಲೋಕನ ಮಾಡಿ, ಚರ್ಚಿಸಿ ಅವರ ನೈಜತೆಯ ಸಮಸ್ಯೆಗಳನ್ನು ಕೊಳಚೆ ಪ್ರದೇಶ ನಿವಾಸಿಗಳ ಮೇಲೆ ಯಾವ ರೀತಿ ಹಾನಿ ಉಂಟಾಗಿವೆ ಎಂಬ ಕಾರಣಗಳನ್ನು ತಿಳಿಯಲಾಗಿದೆ. ಕೊಳಚೆ ಪ್ರದೇಶ ನಿವಾಸಿಗಳ ಅನಕ್ಷರತೆಯು ಪ್ರಮುಖವಾದ ಕಾರಣವಾಗಿರುವುದನ್ನು ಕಾಣಬಹುದು. ಸರ್ಕಾರ–ಸರ್ಕಾರೇತರ ಸಂಸ್ಥೆಗಳ ಸಂಬಂಧವು ಕಛೇರಿಯ ಪಾತ್ರ ತುಂಬ ಮುಖ್ಯವಾಗಿದೆ. ಸಮಸ್ಯೆಗಳಿಗೆ ಪೂರಕವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಮುಂದಿನ ಸಂಶೋಧನೆಯನ್ನು ಕೈಗೊಳ್ಳಬಹುದಾದ ಸಲಹೆಗಳು

೧. ಕೊಳಚೆ ಪ್ರದೇಶದ ಜನರ ಆರೋಗ್ಯ ಸಮಸ್ಯೆಗಳ ಅಧ್ಯಯನ

೨. ಕೊಳಚೆ ಪ್ರದೇಶದ ನಿವಾಸಿಗಳ ವಸತಿ ಸಮಸ್ಯೆ ಒಂದು ಅಧ್ಯಯನ

೩. ಕೊಳಚೆ ಪ್ರದೇಶದಲ್ಲಿನ ನಿವಾಸಿಗಳ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

೪. ಕೊಳಚೆ ಪ್ರದೇಶದಲ್ಲಿನ ನಿರುದ್ಯೋಗ ಸಮಸ್ಯೆ ಅಧ್ಯಯನ

೫. ಕೊಳಚೆ ಪ್ರದೇಶದಲ್ಲಿ ವೈಜ್ಞಾನಿಕ, ವೈಚಾರಿಕತೆ ಮೂಡಿಸುವ ಕಾರ್ಯಕ್ರಮಗಳ ಅಧ್ಯಯನ.

ಸಮಾಜದಲ್ಲಿರುವ ಸಾಮಾಜಿಕ ಸಮಸ್ಯೆಗಳು ಪಿಡುಗುಗಳಾಗುತ್ತವೆ. ಹೀಗೆ ಕೊಳಚೆ ಪ್ರದೇಶದ ನಿವಾಸಿಗಳ ವಾಸ ಯೋಗ್ಯ ಪ್ರದೇಶವನ್ನಾಗಿ ಮಾರ್ಪಡಿಸುವುದು ಅನಿವಾರ್ಯವಾಗಿದೆ. ಈ ಪ್ರದೇಶ ಇಲ್ಲಿ ವಾಸಿಸುವ ಕುಟುಂಬಗಳು ಹೆಚ್ಚು ಭಾಗ ಅನಕ್ಷರತೆಯಿಂದ ಕೂಡಿದೆ. ನಾಗರೀಕರು ವಿಸ್ತೃತ ಮನೋಭಾವದಿಂದ ವರ್ತಿಸಬೇಕಾಗಿದೆ. ನಾವೆಲ್ಲರೂ ಒಂದು ಎಂಬ

ಭಾವನೆ ಸಮಾಜದಲ್ಲಿ ಬರಬೇಕಿದೆ. ನಮ್ಮ ಜೊತೆಯಲ್ಲಿರುವ ಅವಕಾಶ ವಂಚಿತರಾಗಿರುವ ಕೊಳಚೆ ಪ್ರದೇಶ ನಿವಾಸಿಗಳು ಜೀವನ ಬದುಕನ್ನು ಉತ್ತಮ ಪಡಿಸುವುದು ಸಾಮಾಜಿಕ ಜವಾಬ್ದಾರಿಯೆಂದು ತಿಳಿಯಬೇಕಿದೆ. ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಕೈಗೊಂಡಿವೆ. ಅದು ಸರಿಯಾಗಿ ಫಲಾನುಭವಿಗಳಿಗೆ ಸಿಗುತ್ತಿಲ್ಲ ಎಂಬುದು ವಿಪರ್ಯಾಸವಾಗಿದೆ. ಇಂತಹ ಸೌಲಭ್ಯಗಳ ಸೋರಿಕೆಯನ್ನು ನಿವಾರಿಸುವ ಕೊಳಚೆ ಪ್ರದೇಶದಲ್ಲಿ ನಿರ್ಮೂಲನೆ ಮಂಡಳಿ, ಈ ಎಲ್ಲಾ ಅಂಶಗಳಿಗೆ ಸಮಾಜ ಸಂಪೂರ್ಣವಾದ ಸಹಕಾರದ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ ಸರ್ಕಾರ. ಒಂದು ಕೊಳಚೆ ಪ್ರದೇಶ ಜನರ ಸಮಸ್ಯೆ ತುಂಬ ತಳಮಟ್ಟ ಜೀವನದಲ್ಲಿ ಬದುಕುತ್ತಾರೆ. ಒಂದು ವಂಚಿತ ವರ್ಗವನ್ನು ಅಭಿವೃದ್ಧಿ ಕಡೆ ಕೊಂಡೊಯ್ಯುವ ಕಾಯಕ ಮಾಡುವುದೆನಿಸುತ್ತದೆ. ಹೀಗೆ ಜಿಲ್ಲಾಡಳಿತ, ಮಹಾನಗರ ಪಾಲಿಗೆ, ನಗರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿಗಳು ಈ ಬಗ್ಗೆ ಅರಿವು, ಜಾಗೃತಿ ಮೂಡಿಸುವ ಕಾರ್ಯಗಳನ್ನು ಕೈಗೊಂಡು ಕೊಳಗೇರಿಗಳ ಸಮಸ್ಯೆಗಳನ್ನು ಅಭಿವೃದ್ಧಿ ಪಡಿಸಬೇಕಿದೆ.

❖❖❖

ಅನುಬಂಧಗಳು

ಪ್ರಶ್ನಾವಳಿ ಮತ್ತು ಸಂದರ್ಶನ

ಪರಾಮರ್ಶನ ಗ್ರಂಥಗಳು

ಬಳ್ಳಾರಿ ಜಿಲ್ಲೆಯ ನಕ್ಷೆ

ಛಾಯಾಚಿತ್ರಗಳು

ಅನುಬಂಧಗಳು

ಬಳ್ಳಾರಿ ಜಿಲ್ಲೆಯ ಕೊಳಚೆ ಪ್ರದೇಶ ಜನರ ಸಮಸ್ಯೆಗಳು : ಒಂದು ಅಧ್ಯಯನ
(ಪ್ರಶ್ನಾವಳಿ ಮತ್ತು ಸಂದರ್ಶನ)

ಸಂಶೋಧಕರ ಹೆಸರು : ವಸಂತಕುಮಾರಿ ಟಿ.ಎಸ್.
ಮಾನವಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಒಪ್ಪಿಗೆ ಪತ್ರ

ನಾನು ಅಂದರೆ ವಸಂತಕುಮಾರಿ.ಟಿ.ಎಸ್. "ಕೊಳಚೆ ಪ್ರದೇಶದ ಜನರ ಸಮಸ್ಯೆಗಳು: ಒಂದು ಅಧ್ಯಯನ" ಕುರಿತು ಒಂದು ಸಂಶೋಧನಾ ಅಧ್ಯಯನವನ್ನು ಕೈಗೊಂಡಿದ್ದೇನೆ. ಅದಕ್ಕಾಗಿ ಈ ನಿಮ್ಮ ಜಿಲ್ಲೆಯಾದ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ ತಾಲೂಕು ಕೇಂದ್ರಗಳನ್ನು ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಈ ಕೊಳಚೆ ಪ್ರದೇಶ ಜನರ ಸಮಸ್ಯೆಗಳ ಬಗ್ಗೆ ಈ ಕೆಳಗಿನ ಮಾಹಿತಿಯನ್ನು ಪಡೆಯುತ್ತಿದ್ದೇನೆ. ಈ ರೀತಿಯಾಗಿ ಆಯ್ಕೆಯಾದ ಜನರಲ್ಲಿ ನೀವು ಕೂಡ ಒಬ್ಬರು. ಅದಕ್ಕಾಗಿ ನಾನು ಕೇಳುವ ಕೆಲವೊಂದು ಪ್ರಶ್ನೆಗಳಿಗೆ ಮಾಹಿತಿಯನ್ನು ಕೊಡಬೇಕಾಗಿ ವಿನಂತಿ. ನೀವು ಕೊಟ್ಟಿರುವ ಮಾಹಿತಿಯನ್ನು ಕೇವಲ ಸಂಶೋಧನೆಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತದೆ ಎಂಬುವುದರ ಮೂಲಕ ಪ್ರಮಾಣವನ್ನು ಮಾಡುತ್ತೇನೆ.

1. ಮಾಹಿತಿದಾರರ ವೈಯಕ್ತಿಕ ಮಾಹಿತಿ

ಎ) ತಂದೆಯ ಹೆಸರು

ಬಿ) ತಾಯಿಯ ಹೆಸರು

ಸಿ) ನಿಮ್ಮ ವಯಸ್ಸು ಎಷ್ಟು

ಡಿ) ನಿಮ್ಮ ಪತಿಯ/ಗಂಡನ ವಯಸ್ಸು

ಇ) ನೀವು ಎಲ್ಲಿಯವರೆಗೆ ಶಿಕ್ಷಣ ಪಡೆದಿದ್ದೀರಿ. ವಿವರ ಸಂಕೇತಗಳು ಕೂಡ ಸ್ಥಿತಿ

ವರ್ಷ

* ಅನಕ್ಷರಸ್ಥೆ–1
* ಪ್ರಾಥಮಿಕ ಶಿಕ್ಷಣ–2
* ಪ್ರೌಢಶಿಕ್ಷಣ–3
* ಪದವಿ–4
* ಸ್ನಾತಕೋತ್ತರ–5

* ತಾಂತ್ರಿಕ ಶಿಕ್ಷಣ–6

* ಇತರೆ–7

2. ನಿಮ್ಮ ಕುಟುಂಬದ ಧರ್ಮ ಯಾವುದು

* ಹಿಂದೂ

* ಮುಸ್ಲಿಂ

* ಕ್ರಿಶ್ಚಿಯನ್

* ಜೈನ್

* ಇತರೆ

3. ಕೌಟುಂಬಿಕ ಸಮಸ್ಯೆಗಳು :

4. ನಿಮ್ಮ ಮನೆಯಲ್ಲಿ ಮಧ್ಯಪಾನ ಸೇವನೆ ಮಾಡುತ್ತಾರೆಯೇ ? * ಹೌದು * ಇಲ್ಲ

5. ಕುಟುಂಬದಲ್ಲಿ ವಿವಾಹ ವಿಚ್ಛೇದನ ಆಗಿದ್ದಾರೆಯೇ ? * ಹೌದು * ಇಲ್ಲ

6. ಅವಿಭಕ್ತ ಕುಟುಂಬ ಅಥವಾ ವಿಭಕ್ತ ಕುಟುಂಬವೇ ? * ಹೌದು * ಇಲ್ಲ

7. ನಿಮ್ಮ ಮನೆಯಲ್ಲಿ ಹೊಂದಾಣಿಕೆ ಇದೆಯೇ ? * ಹೌದು * ಇಲ್ಲ

8. ನಿಮ್ಮ ಕುಟುಂಬದಲ್ಲಿ ಆರ್ಥಿಕ ಸಮಸ್ಯೆ ತೊಂದರೆಯಿದೆಯೇ ? * ಹೌದು * ಇಲ್ಲ

9. ವೈವಾಹಿಕ ಸಮಸ್ಯೆ ಇದೆಯೇ ?

1) ವಿವಾಹ

2) ಸಂತಾನೋತ್ಪತ್ತಿ

3) ಮಕ್ಕಳ ಪೋಷಣೆ

10. ನಿಮ್ಮ ಮನೆಯಲ್ಲಿ ವಿಧವೆಯರು ಇದ್ದಾರೆಯೇ ? * ಹೌದು * ಇಲ್ಲ

11. ನಿಮ್ಮ ಕುಟುಂಬದ ಸದಸ್ಯರು ಹತ್ತಿರದ ನಗರ ಅಥವಾ ನಗರಗಳಿಗೆ ವಲಸೆ ಹೋಗಿ ಕಾರ್ಮಿಕರಾಗಿ ಹೋಗುತ್ತಾರೆಯೇ ? * ಹೌದು * ಇಲ್ಲ

12. ನೀವು ಮಾಡುವ ಕೆಲಸ/ಉದ್ಯೋಗ ಯಾವುದು ?

ಎ) ಕೃಷಿ

ಬಿ) ಕಾರ್ಮಿಕರು

ಸಿ) ದಿನಗೂಲಿ

ಡಿ) ಮನೆಕೆಲಸ

ಇ) ಅರೆಕೂಲಿಕಾರ

ಎಫ್) ಇತರೆ

13. ನಿಮ್ಮದು ವಿಭಕ್ತ ಕುಟುಂಬವೇ ಅಥವಾ ಅವಿಭಕ್ತ ಕುಟುಂಬವೇ

* ವಿಭಕ್ತ ಕುಟುಂಬ

* ಅವಿಭಕ್ತ ಕುಟುಂಬ

14. ನಿಮ್ಮ ಮನೆಯಲ್ಲಿ ಒಟ್ಟು ಸದಸ್ಯರಿದ್ದಾರೆ ? ಸಂಖ್ಯೆ ಎಷ್ಟು?

15. ಮಹಿಳೆಯರ ಆರೋಗ್ಯ ಸಮಸ್ಯೆಗಳು :

16. ಸಾಮಾನ್ಯವಾಗಿ ಮಹಿಳೆಯರು ಅನುಭವಿಸುವ ಆರೋಗ್ಯ ಸಮಸ್ಯೆಗಳೇನು (ಸಂಕೇತಗಳು)

ಬಿಳಿಮುಟ್ಟು–1

ಅಲ್ಪರಕ್ತಸ್ರಾವ–2

ಅತೀರಕ್ತಸ್ರಾವ–3

ಋತುಚಕ್ರದ ವೇಳೆ ನೋವು ಸುಸ್ತು ಇತ್ಯಾದಿ

ಋತುಚಕ್ರದಲ್ಲಿ ಏರುಪೇರು ಇತರೆ ಇದ್ದರೆ ತಿಳಿಸಿ...

17. ನೀವು ಈ ಮೇಲಿನ ಆರೋಗ್ಯ ಸಮಸ್ಯೆಗಳನ್ನು ಅನುಭವಿಸಿದ್ದಾರೆಯೇ ?

* ಹೌದು–1

* ಇಲ್ಲ–2

* ಗೊತ್ತಿಲ್ಲ–3

18. ನೀವು ಅನುಭವಿಸಿರುವ ಆರೋಗ್ಯ ಸಮಸ್ಯೆಗಳು ಯಾವುವು ಮತ್ತು ಪಟ್ಟಿ ಮಾಡಿ

1.

2.

3.

4.

5.

6.

19. ಈ ಮೇಲಿನ ಸಮಸ್ಯೆಗಳಿಗೆ ನೀವು ಪಡೆದುಕೊಂಡ ಚಿಕಿತ್ಸೆಗಳೇನು?

1

2

3

4

20. ನೀವು ಈ ಮೇಲಿನ ಸಮಸ್ಯೆಗಳಿಂದ ಗುಣಮುಖರಾಗಿದ್ದೀರಾ? ಹೌದು ಅದು

1. ಸಂಪೂರ್ಣವಾಗಿ

2. ಇಲ್ಲ ತಕ್ಕಮಟ್ಟಿಗೆ

3. ಇಲ್ಲ ಗುಣಮುಖವಾಗಿಲ್ಲ

21. ನಿಮಗೆ ರಕ್ತಹೀನತೆಯ ಸಮಸ್ಯೆ ಇದೆಯೇ ?

ಹೌದು...

ಇಲ್ಲ...

ಗೊತ್ತಿಲ್ಲ...

22. ನಿಮಗೆ ಇರುವ ರಕ್ತ ಹೀನತೆಯ ಸಮಸ್ಯೆ ಹೇಗೆ ತಡೆಗಟ್ಟಬಹುದು ಎಂಬುದು ನಿಮಗೆ ಗೊತ್ತಿದೆಯೇ?

23. i) ಪೌಷ್ಠಿಕ ಆಹಾರವನ್ನು ಸೇವಿಸಬೇಕು–1

ii) ಅಂಗನವಾಡಿಯಿಂದ ನೀಡಿದ ಆಹಾರವನ್ನು ತೆಗೆದುಕೊಳ್ಳಬೇಕು–

iii) ಆಯ್.ಎಫ್.ಎ. ಮಾತ್ರೆಗಳನ್ನು ತೆಗೆದುಕೊಳ್ಳಬೇಕು

iv) ತೆಗೆದುಕೊಳ್ಳಬೇಕು... ? ಗೊತ್ತಿಲ್ಲ

v) ಇತರೆ (ಇದ್ದರೆ) ತಿಳಿಸಿ....5

24. 9. ನಿಮಗೆ ಈ ಕೆಳಗಿನ ಆರೋಗ್ಯ ಸಮಸ್ಯೆಗಳು ಇವೆಯೇ? ಹೌದು ಇಲ್ಲ

1) ಬಿ.ಪಿ.–1

2) ಸಕ್ಕರೆ ಕಾಯಿಲೆ–1

3) ಥೈರಾಯಿಡ್–1

4) ರಕ್ತಹೀನತೆ –1

5) ಇತರೆ ಇದ್ದರೆ ತಿಳಿಸಿ–1

6) ಮಾನಸಿಕ ಅಸ್ವಸ್ಥತೆ

* ಕ್ಯಾನ್ಸರ್

* ಹೃದಯಾಘಾತ

* ಹೆಚ್.ಐ.ವಿ./ಏಡ್ಸ್

* ಕ್ಷಯರೋಗ

* ಕಫರೋಗ

* ಮೈಕೈ ನೋವು ತಲೆನೋವು

25. 10. ಆರೋಗ್ಯ ಸಮ್ಯೆ ಬಂದರೆ ಯಾವ ಆಸ್ಪತ್ರೆಗೆ ಹೋಗುತ್ತೀರಿ ?

1) ಸರ್ಕಾರಿ ಆಸ್ಪತ್ರೆ 2) ಖಾಸಗಿ ಆಸ್ಪತ್ರೆ

3) ಬೇರೆ ಇತರೆ 4) ಮನೆಯಲ್ಲಿ

26. 11. ಆಸ್ಪತ್ರೆಗೆ ಎಷ್ಟು ಹಣ ಖರ್ಚು ಮಾಡುತ್ತೀರಿ ?

1) 1000

2) 2000–5000

3) 6000–10000

25. 12. ನಿಮ್ಮ ಮನೆಯಲ್ಲಿ ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ

1) ಗಂಡ

2) ಹೆಂಡತಿ

3) ಇತರೆ ಸಂಬಂಧಿಕರು

25.13. ಸರ್ಕಾರದ ಯೋಜನೆಗಳ ಸಹಾಯ ಪಡೆದಿದ್ದೀರಾ ? ಹೌದು ಇಲ್ಲ

29. ಮಹಿಳೆಯರ ನಿಮ್ಮ ಉದ್ಯೋಗ ಮಾಡುವ ಕಸುಬು ಯಾವುವು ?

* ಗೃಹಿಣಿ
* ಕೂಲಿ
* ವ್ಯಾಪಾರ
* ಮನೆಕೆಲಸ
* ಹೂ ಕಟ್ಟುವುದು
* ಬೀಡಿ ಕಟ್ಟುವುದು
* ಕಂಬಾರಿಕೆ
* ಶಾಲೆಯಲ್ಲಿ ಅಡುಗೆ ಕೆಲಸ
* ರೊಟ್ಟಿ ಮಾಡುವುದು
* ಖಾನಾವಳಿಯಲ್ಲಿ ಕೆಲಸ
* ಚಿಂದಿ ಆರಿಸುವುದು
* ಕಿರಾಣಿ ಅಂಗಡಿ
* ಆಯಾ ಕೆಲಸ
* ಜಾತ್ರೆಗಳ ವ್ಯಾಪಾರ
* ಹೂವಿನ ಹಾರ ಮಾಡುವುದು
* ತರಕಾರಿ ಮಾರಾಟ
* ಮಾಂಸ ವ್ಯಾಪಾರ
* ಅಂಗನವಾಡಿ ಟೀಚರ್
* ಕಂಪ್ಯೂಟರ್ ಆಪರೇಟರ್
* ಆಸ್ಪತ್ರೆ/ಆಯಾ ಕೆಲಸ
* ಬ್ಯೂಟಿಪಾರ್ಲರ್

ಸಂಖ್ಯೆ ಶೇಕಡ

30. ನಿಮ್ಮ ಮನೆಯಲ್ಲಿ ಮಕ್ಕಳು ಕೂಲಿ ಕೆಲಸ ಮಾಡಲು ಹೋಗುತ್ತಾರೆಯೇ ಹೌದು ಇಲ್ಲ

31. ಆರ್ಥಿಕವಾಗಿ ಉಳಿತಾಯ ಮಾಡಿದ್ದೀರಾ

* ಬ್ಯಾಂಕ್

* ಸಂಬಂಧಿಕರು

* ಸ್ವಯಂ

* ನೆರೆಹೊರೆ

* ಇತರೆ ಉಳಿತಾಯ

32. ಕೊಳಚೆ ಪ್ರದೇಶದಲ್ಲಿ ಮಹಿಳೆಯರ ಆರೋಗ್ಯ ಸ್ಥಿತಿ

ಕಾಯಿಲೆ

ಸಂಖ್ಯೆ ಶೇಕಡ

ಗರ್ಭಕೋಶ ತೊಂದರೆ

ಸಕ್ಕರೆ ಕಾಯಿಲೆ

ಮಾನಸಿಕ ಅಸ್ವಸ್ಥತೆ

ಹೊಟ್ಟೆನೋವಿನಿಂದ ಬಳಲುತ್ತಿರುವವರು

ರಕ್ತ ಒತ್ತಡ

ಮೈ ನೋವು ತಲೆನೋವು

ಅಶಕ್ತತೆ ರಕ್ತ ಹೀನತೆ

ಬೆಳವಣಿಗೆ ಕುಂಠಿತ

ಬುದ್ಧಿ ಮಾಂಧ್ಯತೆ

ಬಂಜೆತನ

ಕ್ಷಯಾ ರೋಗ

ಕುಷ್ಠರೋಗ

ಕಣ್ಣು ತೊಂದರೆ

33. ಕೊಳಚೆ ಪ್ರದೇಶದ ಮಹಿಳೆಯರು ಹೆರಿಗೆ ಹೋಗುವ ವಿವರ ?

1. ಸರ್ಕಾರಿ ಆಸ್ಪತ್ರೆ

2. ಖಾಸಗಿ ಆಸ್ಪತ್ರೆ

3. ಮನೆ

4. ಒಟ್ಟು

34. ಮಹಿಳೆಯರ ಆರೋಗ್ಯ ಯೋಜನೆಗಳ ಮಾಹಿತಿ

ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಇರುವಂತ ಸರ್ಕಾರಿ ಯೋಜನೆಗಳ ಬಗೆಗೆ ನಿಮಗೆ ತಿಳಿದಿವೆಯೇ ?

ಜೆ.ಎಸ್.ವೈ.

ಜೆ.ಎಸ್.ಎಸ್.ಕೆ.

ಪ್ರಸೂತಿ ಆರೈಕೆ

ಮಡಿಲು ಸೌಲಭ್ಯ

ತಾಯಿಭಾಗ್ಯ

ಬಾಲಸಂಜೀವಿನಿ

ಇತರೆ . (ಇದ್ದರೆ)

ಹೌದು / ಇಲ್ಲ

35. ಯೋಜನೆ ಸೌಲಭ್ಯ ಪಡೆದಿದ್ದಾರೆಯೆ ? ಹೌದು ಇಲ್ಲ

36. ಭಾಗ್ಯಲಕ್ಷ್ಮಿ ಯೋಜನೆ ಸೌಲಭ್ಯ ಪಡೆದಿದ್ದಾರೆಯೇ ? ಹೌದು ಇಲ್ಲ

37. ಅಂಗನವಾಡಿ ಸೌಲಭ್ಯ ಪಡೆದಿದ್ದಾರೆಯೇ ? ಹೌದು ಇಲ್ಲ

38. ಪ್ರಾಥಮಿಕ ಆರೋಗ್ಯ ಕೇಂದ್ರ ಸೌಲಭ್ಯ ಪಡೆದಿದ್ದಾರೆಯೇ ? ಹೌದು ಇಲ್ಲ

39. ಸ್ವಯಂ ಸಹಾಯ ಸಂಘದಿಂದ ಸಾಲ ಪಡೆದಿದ್ದಾರೆಯೇ ? ಹೌದು ಇಲ್ಲ

40. ಕೊಳಚೆ ಪ್ರದೇಶದಲ್ಲಿ ಮಕ್ಕಳ ಸಮಸ್ಯೆಗಳೇನು

41. ನಿಮ್ಮ ಮಕ್ಕಳು ಆರೋಗ್ಯವಾಗಿ ಇದ್ದಾರೆಯೇ ? ಹೌದು ಇಲ್ಲ

42. ಇಲ್ಲ ಅಂದರೆ ಕಾರಣ ತಿಳಿಸಿ

ಎ) ಪೌಷ್ಟಿಕ ಆಹಾರ ಕೊರತೆಯೇ ?

ಬಿ) ಬೆಳವಣಿಗೆ ಕುಂಠಿತವೇ ?

ಸಿ) ಅಂಗವಿಕಲರೇ ?

43. ಮಕ್ಕಳಲ್ಲಿ ಪೌಷ್ಠಿಕ ಆಹಾರದ ಸಮಸ್ಯೆ ಇದೆ ? ಹೌದು ಇಲ್ಲ

44. ನಿಮ್ಮ ಮಕ್ಕಳು ವಿವಿಧ ನ್ಯೂನ್ಯತೆಯಿಂದ ಬಳಲುತ್ತಾರಾ ?

ಎ) ಅಂಗವಿಕಲರು

ಬಿ) ಬುದ್ಧಿಮಾಂಧತೆ

ಸಿ) ದೃಷ್ಠಿ ತೊಂದರೆ

ಡಿ) ಇತರೆ

45. ನಿಮ್ಮ ಮಕ್ಕಳು ಕೆಲಸಕ್ಕೆ ಹೋಗುತ್ತಾರೆಯೇ ? ಹೌದು ಇಲ್ಲ

46. ನಿಮ್ಮ ಮಕ್ಕಳು ಎಷ್ಟು ದಿನಕ್ಕೊಮ್ಮೆ ಸ್ನಾನ ಮಾಡಿಸುತ್ತೀರಾ ?

1, 2, 3 ಎಷ್ಟು ದಿನಕ್ಕೊಮ್ಮೆ

47. ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆಯೇ? ಎಷ್ಟನೇ ತರಗತಿ?ಹೌದು ಇಲ್ಲ

48. ಕೊಳಚೆ ಪ್ರದೇಶದ ಪರಿಸರದಿಂದ ನಿಮ್ಮ ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಸಮಸ್ಯೆ ಪ್ರಭಾವ ಬೀರಿದೆ ?

49. ನಿಮ್ಮ ಮಕ್ಕಳು ಎಷ್ಟು ಜನ

50. ನಿಮ್ಮ ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಹೋಗುತ್ತಾರೆಯೇ ? ಹೌದು ಇಲ್ಲ

51. ಕೊಳಚೆ ಪ್ರದೇಶದಲ್ಲಿ ವಸತಿ ಸಮಸ್ಯೆಗಳು ?

ಎ) ಮನುಷ್ಯವಾಸಕ್ಕೆ ಯೋಗ್ಯವಲ್ಲದ ಗುಡಿಸಲುಗಳು

ಬಿ) ಪರ ಗುಡಿಸಲುಗಳು

ಸಿ) ಹಂಚು ಹಾಗೂ ಶೀಟಿನ ಮನೆಗಳು ಹೌದು ಇಲ್ಲ

52. ಕೊಳಚೆ ಪ್ರದೇಶದ ನಿವಾಸಿಗಳು ವಾಸಿಸುವ ಮನೆಯ ವಿವರ ತಿಳಿಸಿ

ಮನೆಯ ವಿಧ

ಹೌದು ಇಲ್ಲ

1) ಗುಡಿಸಲು

2) ಹಂಚಿನ ಮನೆ

3) ಆರ್.ಸಿ.ಸಿ.

4) ಆಶ್ರಯ ಯೋಜನೆ

5) ವಾಲ್ಮೀಕಿ ಅಂಬೇಡ್ಕರ್ ಆಶ್ರಯ

6) ಇಂದಿರಾ ಆವಾಸ್ ವಸತಿ

7) ವಾಂಬ್ ಯೋಜನೆ

8) ಹೊಡಂ ಯೋಜನೆ

9) ನಮ್ಮ ಮನೆ ಯೋಜನೆ

53. ಬಾಡಿಗೆ ಮನೆಯಲ್ಲಿ ವಾಸಿಸುತ್ತಾರೆಯೇ

ನಿಮ್ಮ ಕುಟುಂಬವು ಶೌಚಾಲಯದ ವ್ಯವಸ್ಥೆಯನ್ನು ಹೊಂದಿದೆಯೇ ?ಹೌದು ಇಲ್ಲ

54. ಶೌಚಾಲಯ ಇಲ್ಲದಿದ್ದರೆ ಮಲಮೂತ್ರ ವಿಸರ್ಜನೆ ಮಾಡುವ ಸ್ಥಳ ಯಾವುದು

* ಸಾರ್ವಜನಿಕ ಶೌಚಾಲಯ

* ಬಯಲು ಪ್ರದೇಶದಲ್ಲಿ

* ಇತರೆ

55. ಶೌಚಾಲಯದ ವ್ಯವಸ್ಥೆ ಹೊಂದಿದ್ದಾರೆಯೇ ? ವಿವರ

56. ನಿಮ್ಮ ಮನೆಯ ಮುಂದೆ ಚರಂಡಿ ವ್ಯವಸ್ಥೆ ಇದೆಯೇ ? ಇದೆ ಇಲ್ಲ

57. ಚರಂಡಿ ಸಂಪರ್ಕವಿಲ್ಲದಿದ್ದರೆ ಬಳಸಿದ ನೀರು ಎಲ್ಲಿ ಹೋಗುತ್ತದೆ

ಮನೆಯ ಮುಂದಿನ ರಸ್ತೆ

58. ಸರ್ಕಾರಿ ಸೌಲಭ್ಯದ ಶೌಚಾಲಯ ಪಡೆದಿದ್ದೀರಾ ?

ನಿರ್ಮಲ್ ಭಾರತ ಅಭಿಯಾನ ಯೋಜನೆ ? ಎಷ್ಟು

ಎ) ಸ್ವಚ್ಛ ಭಾರತ ಅಭಿಯಾನ ಹೌದು ಇಲ್ಲ

59. ನೀರು ಪೂರೈಕೆ ಎಷ್ಟು ದಿನಕ್ಕೆ ಒಮ್ಮೆ ಬಿಡುತ್ತಾರೆ ?

ಎ) ಒಂದು ದಿನದಲ್ಲಿ ಎರಡು ಬಾರಿ

ಬಿ) ಒಂದು ವಾರದಲ್ಲಿ ಮೂರುದಿನಗಳು

ಸಿ) ಒಂದು ವಾರದಲ್ಲಿ ಒಂದು ದಿನ

60. ನೀರಿನ ಸಂರಕ್ಷಣೆ ಹೇಗೆ ?

* ತೊಟ್ಟಿ

* ಡ್ರಮ್ಸ್

* ಟ್ಯಾಂಕಿ

* ಬಾಟಲಿಗಳು

61. ಸರ್ಕಾರಿ ಸೌಲಭ್ಯಗಳನ್ನು ಸ್ವೀಕರಿಸಿದ್ದಾರಾ

ಎ) ವೈದ್ಯರು ಬಿ) ವಸತಿ ಸಿ) ಶಿಕ್ಷಣ ಡಿ) ಬಿ.ಪಿ.ಎಲ್.

ಡಿ) ಎಪಿಎಲ್ ಇತರೆ

62. ಆಧಾರ್ ಕಾರ್ಡ್ ಹೊಂದಿದ್ದಾರೆಯೇ ? ಹೌದು ಇಲ್ಲ

63. ನಿಮ್ಮ ಮನೆಯಲ್ಲಿ ಉಪಯೋಗಿಸುವ ನೀರು ಯಾವುದು ?

ಎ) ಸಾರ್ವಜನಿಕ ಸ್ಥಳ

ಬಿ) ಓನ್ ಟ್ಯಾಪ್

ಸಿ) ಮ್ಯೂರಲ್

ಡಿ) ಮುನಸಿಪಾಲಿಟಿ ನೀರು

64. ನೀರು ಎಷ್ಟು ದಿನಕ್ಕೆ ಬಿಡುತ್ತಾರೆ ?

ಎ) ದಿನ ಬಿ) ಎರಡು ದಿನ ಸಿ) ವಾರಕ್ಕೆ

65. ನೀರು ಶುದ್ಧೀಕರಣದಿಂದ ಹೊಂದಿರುತ್ತವೆ ಇಲ್ಲ ? ಹೌದು ಇಲ್ಲ

66. ನೀರು ಸಮಸ್ಯೆಯಿಂದ ತೊಂದರೆ ಯಾವುದು ?

67. ನಿಮ್ಮ ಮನೆಮುಂದೆ ಚರಂಡಿ ವ್ಯವಸ್ಥೆ ಇದೆ ಹೌದು ಇಲ್ಲ

❖❖❖

ಪರಾಮರ್ಶನ ಗ್ರಂಥಗಳು

ಕನ್ನಡ

* ಅಂಜನಪ್ಪ ಬಿ.ಹ., **ಮಹಿಳೆ ಮತ್ತು ದುಡಿಮೆ,** ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ೨೦೦೬
* ಇಂದಿರಾ ಎಸ್., **ಮಹಿಳೆ ಮತ್ತು ಸವಾಲುಗಳು,** ಶುತ್ರಲೋಕ ಪ್ರಕಾಶನ, ಮೈಸೂರು, ೨೦೧೦
* ಇಂದಿರಾ ಆರ್., **ಸಾಮಾಜಿಕ ಸಂಶೋಧನಾ ವಿಧಾನಗಳು,** ವಿದ್ಯಾಸಾಗರ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫.
* ಇಂದಿರಾ ಆರ್., ಭಾರತೀಯ ಸಮಾಜ ಪ್ರಕಾಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫.
* ಉಮಾದೇವಿ, **ಪ್ರಸ್ತುತ ಸಾಮಾಜಿಕ ಸಮಸ್ಯೆಗಳು,** ೧೯೯೬.
* ಕೃಷ್ಣ ಬಿ.ಆರ್., **ಆಧುನೀಕರಣ ಸಮಾಜಶಾಸ್ತ್ರ,** ಪಬ್ಲಿಷಿಂಗ್ ಹೌಸ್ ಮುದ್ರಣ, ೨೦೦೧.
* ನಾಯಕ ಹಾ.ಮಾ. (ಸಂ.), ಕನ್ನಡ ವಿಶ್ವಕೋಶ ಸಂಪುಟ ೬, ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು, ೧೯೭೩.
* ನಾಯಕ ಹಾ.ಮಾ. (ಸಂ), **ಕನ್ನಡ ವಿಶ್ವಕೋಶ ಸಂಪುಟ–೯,** ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು, ೧೯೭೩.
* ನಾಗರಾಜು ಪಿ, **ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ,** ವಿದ್ಯಾನಿಧಿ ಪ್ರಕಾಶನ
* ನಾರಾಯಣ, **ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ,** ಆರ್.ಎಂ. ಪ್ರಕಾಶನ ಜಯನಗರ ಮೈಸೂರು, ೧೯೮೬.
* ನಾರಾಯಣ, **ನಗರ ಸಮಾಜಶಾಸ್ತ್ರ,** ಚೇತನ ಬುಕ್ ಹೌಸ್ ಮೈಸೂರು, ೨೦೦೫.
* ನಂಜಮಣ್ಣಿ ಎಂ., **ಸಾಮಾಜಿಕ ಮಾನವಶಾಸ್ತ್ರ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮.
* ನಂಜಮಣ್ಣಿ ಎಂ., **ಭಾರತೀಯ ಸಾಮಾಜಿಕ ಸಂಸ್ಥೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು.

* ಭೈರಪ್ಪ ಕೆ., **ಸಾಮಾಜಿಕ ಸ್ತರ ವಿನ್ಯಾಸ ಹಾಗೂ ಸಂಚರಣ,** ಮೇ, ೧೯೯೨.
* ಭೈರಪ್ಪ ಕೆ. **ಭಾರತೀಯ ಸಮಾಜಶಾಸ್ತ್ರ,** ೨೦೧೩.
* ಮಲ್ಲಿನಾಥಯ್ಯ ಪಿ.ಎಚ್. (ಸಂ), **ಸಮಾಜಶಾಸ್ತ್ರ ಕೈಪಿಡಿ,** ಮೈಸೂರು, ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೫.
* ಮರುಳುಸಿದ್ಧಯ್ಯ ಎಚ್.ಎಂ., **ದಿಗ್ಭ್ರಾಂತ ಸಮಾಜಕ್ಕೆ ಬೆಳಕಿನ ದಾರಿ,** ಸಮಾಜಕಾರ್ಯ ಸಂಪುಟ–೧, ೨೦೦೮–೨೦೦೯.
* ಮರುಳಸಿದ್ದಯ್ಯ ಎಚ್.ಎಂ., **ಸಮಾಜಶಾಸ್ತ್ರ ಕೆಲವು ಒಳನೋಟಗಳು,** ಸಾಯಿಮಣಿ ಪ್ರಕಾಶನ, ೨೦೧೦.
* ರವೀಂದ್ರನಾಥ ಕೆ. (ಸಂ.), **ಬಳ್ಳಾರಿ ಜಿಲ್ಲೆ ದರ್ಶನ,** ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
* ರೂಪ ಹಾಸನ, **ಮಂಟಪ ಮಾಲೆ ೧೯೦–ಮಹಿಳೆ ಮತ್ತು ಸಾವಲುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.
* ವಾಸುದೇವ ಬಡಿಗೇರ, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.
* ವಿರೂಪಾಕ್ಷಿ ಪೂಜಾರಹಳ್ಳಿ, **ಬಳ್ಳಾರಿ ಜಿಲ್ಲೆಯ ಪಾಳೆಯಗಾರರು,** ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.
* ವಿರೂಪಾಕ್ಷಿ ಪೂಜಾರಹಳ್ಳಿ, **ವಸಾಹತುಕಾಲೀನ ಬಳ್ಳಾರಿ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.
* ವಿರೂಪಾಕ್ಷಿ ಪೂಜಾರಹಳ್ಳಿ, **ಕರ್ನಾಟಕದ ಏಕೀಕರಣ ಮತ್ತು ಬಳ್ಳಾರಿ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯಹಂಪಿ, ೨೦೧೪.
* ವೆಂಕಟರಾಯಪ್ಪ ಕೆ.ಎನ್., **ನಗರ ಸಮಸ್ಯೆಗಳು ಒಂದು ಅಧ್ಯಯನ ಕೊಳಚೆ ಪ್ರದೇಶಗಳು,** ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು.
* ಶಿವಪ್ಪ–ಬಸಪ್ಪ, **ಮಹಿಳಾ ಆರೋಗ್ಯ ಯೋಜನೆಗಳು: ಕಾರ್ಯತಗೊಳಿಸುವಿಕೆಯಲ್ಲಿ ಮಹಿಳೆಯರ ಅರಿಸಿನ ಪಾತ್ರ** ಅಪ್ರಕಟತ ಪಿ.ಎಚ್.ಡಿ. ಮಹಾಪ್ರಬಂಧ.
* ಶಿವಪ್ಪ ಡಿ.ಕೆ., **ಭಾರತದ ಪ್ರಚಲಿತ ಸಾಮಾಜಿಕ ಸಮಸ್ಯೆಗಳು,** ಕಲಾ ಪ್ರಕಾಶನ ರಾಜ್‌ಮಹಲ್ ಗುಟ್ಟಹಳ್ಳಿ ಬೆಂಗಳೂರು ೧೯೭೭.

* ಶಿವಾನಂದ ವಿರಕ್ತಮಠ (ಸಂ), **ಮಹಿಳಾ ಅಧ್ಯಯನ ಸಂಚಿಕೆ ಸಂಪುಟ ೧೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.
* ಶೇಷಾದ್ರಿ ಬಿ., **ಬಳ್ಳಾರಿ ಜಿಲ್ಲೆಯ ಕೈಗಾರಿಕರಣ ಆಂದೋಲನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.
* ಶಂಕರರಾವ್ ಚ.ನ. **ಸಾಮಾಜಿಕ ಸಂಶೋಧನಾ ಕೈಪಿಡಿ**, ಜೈಭಾರತ ಪ್ರಕಾಶನ, ಮಂಗಳೂರು ೧೯೯೨.
* ಸಾಮಾಜಿಕ ಮಾನವಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩.
* ಸಾವಿತ್ರಿ ಕೊಳಚೆದಲ್ಲಿ ಮಹಿಳೆಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.
* ಹಿರೇಮಠ ಎಚ್.ಜಿ., **ಕೊಳಚೆ ಪ್ರದೇಶದಲ್ಲಿ ಮಹಿಳೆಯರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.
* ಹಿರೇಮಠ ಎಸ್.ಜಿ., **ಸಾಮಾಜಿಕ ನೀತಿ ಮತ್ತು ಸಮಾಜ ಕಲ್ಯಾಣ**, ವಿದ್ಯಾನಿಧಿ ಪ್ರಕಾಶನ, ಗದಗ, ೧೯೭೯.

ವರದಿಗಳು/ವಿಶ್ವಕೋಶ ಇತ್ಯಾದಿ

* ಕೊಳಚೆ ನಿರ್ಮೂಲನೆ ಮಂಡಳಿ ನೀಡಿದ ಮಾಹಿತಿ ಪ್ರಕಾರ, ೨೦೧೩.
* ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳು ನೋಟ ೨೦೧೫-೧೬.
* ಸೋಷಿಯಲ್ ವರ್ಕ್ ಇನ್ ಎನ್ ಸೈಕ್ಲೋಪೀಡಿಯಾ.
* Gazatter of India Mysore Sate, Bellary
* WHO Report, Make Every mother and child counit h t t p : w w w - 2005.en PDF accrrs Januray 2013.

ಇಂಗ್ಲೀಷ್

* Achutha Rao T.N Urban Studies and AID to Research Karanataka University Dharwad, 1978.
* Arangawal Rana, Social-Economics Survery of Madrass Slums, Tamil Nadu Slum Clearances Board Madars, 1971.
* Abdul Kareem P. Education and Social Economic Development Ashish publication house Delhi, 1988.
* Aangawai-Social Economic Survery of madras slums, Tamil Nadu, Slum clearnaceboard, 1971.
* Bharadaj R.K., Urban Development in India, National Book Trust, Delhi, 1974.
* Bhatt B.D. Sharma S.R. Sociology of Education, Palletizig Huser 1993.
* Bhargava Gopal, Slum Urban India : Planning and Policy Framework, Bhevrqem Gopal, 1981.
* Chandramouli C, Slum in chenni : A Profile Processding of the third International conference on Environment and health Dept, of Geography University of Madras and Faculty of Environmental Studies, New york University Chennai, 2003.
* Clinard Marshall, Slum and community Development the free press New York, 1966.
* Desai A.R. and Pillai S.D. A Profile of India slums university of Bombay publications, 1972.
* Souze D. (Alfered) women in Contemproray India Bombay manohar Publication New Delhi, 1975
* Das Bishwaroop, Social Economic Study of in Surat center for social study surat, 1994
* Desai A.R. Trends of urban Development in India proliferation of slum and squalting" C.G. memorial Trust Bombay, 1985

* Das Bishwroop, Social Economics study of slums in surat city center for social study, 1994.

* Devendra B. Gupat urban Hussin im India world Bank, 1985.

* Gopal Bhargava, urban problems and policy perspective Abhinav Publication New Delhi 1981.

* Gore, M.S. Urbanization and Family change, Populare Prakasha pvt. Ltd., 1968.

* Gosh Zachrnaih : Education and process of change of sage publication, New Delhi 1987.

* Hester smith wo : Education in Britain Oxfored University Press, New york 1949.

* Katu S.A. Slum Clearnce and Improvement Programme Municipal Corporaation 1974.

* Madam G.R. (1967) The Indian Social Problems, Bombay Allied Pubilshers.

* Nirmal singh : Education undersinge, A Sociological Study of Private Colleges Concepet Publishing company, Newyork, 1983.

* The Karnataka Local Laws, Edited by Sathpla Puliant, Karanataka Law Journeal Vo. No. 40, 2002.

* Rao Rathan "Social Organazation in India slum mittal publication, New Delhi, 1990.


* Sahoo B.K. "marriage and Fertitiy behaviour of slum devellers of Jabalpur City" India Journal of populcation Edcuation, New Delhi-Vol 25-3-9, 2004.

* Shrinivas Mukul, Cultural Approach to HIV/AIDS preven tion, Social science Gazetteer, Journal at the of India social Science Association V/-41, 2009.

Research Articles / working papers

* Ali S.M., Education childern in urban slum (Electronic version) Daily times, 2006.
* Chandramourt C IAS slum in chennia a profile Direcote of censes Tamilndu, 2004.
* Government of India Ministery of Health and Family welfare child helath Division New Delhi, 2000.
* Housing Department Government of Karnataka, 30, 2011.
* United Nations, united Nation Development programme Report, 2005.
* Macionis : Tohm-J, "Social problems zind edi perason Education Prentice hall New Jersurcy, 2005.
* The Urban Healthy society (UHS) Ahamedabad Municipal Corporation.

ಬಳ್ಳಾರಿ ಜಿಲ್ಲೆಯ ನಕ್ಷೆ



ಛಾಯಾಚಿತ್ರಗಳು



ಬಳ್ಳಾರಿ ನಗರದ ಕೊಳಚೆ ಪ್ರದೇಶದಲ್ಲಿನ ವಸತಿಗಳ ಸ್ಥಿತಿ



ಬಳ್ಳಾರಿ ನಗರ ಕೊಳಚೆ ಪ್ರದೇಶದಲ್ಲಿನ ಶೌಚಾಲಯ



ಬಳ್ಳಾರಿ ನಗರ ಕೊಳಚೆ ಪ್ರದೇಶದಲ್ಲಿನ ರಸ್ತೆಯ ಸ್ಥಿತಿಗತಿ



ಬಳ್ಳಾರಿ ನಗರ ಕೊಳಚೆ ಪ್ರದೇಶದಲ್ಲಿನ ವಸತಿಗಳು



ಬಳ್ಳಾರಿ ನಗರ ಕೊಳಚೆ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆ



ಬಳ್ಳಾರಿ ನಗರ ಕೊಳಚೆ ಪ್ರದೇಶದಲ್ಲಿನ ಶಾಲೆಯ ಮುಂಭಾಗ



ಹೊಸಪೇಟೆ ನಗರದ ಮುದ್ಲಾಪುರ ಕೊಳಚೆ ಪ್ರದೇಶದ ನೋಟ



ಹೊಸಪೇಟೆ ನಗರದ ಮುದ್ಲಾಪುರ ಮತ್ತು ರೇಲ್ವೇ ಸ್ಟೇಷನ್ ಕೊಳಚೆ ಪ್ರದೇಶದ ವಸತಿಗಳು



ಹೊಸಪೇಟೆ ನಗರದ ರೇಲ್ವೇ ಸ್ಟೇಷನ್ ಕೊಳಚೆ ಪ್ರದೇಶದ ನೋಟ



ಹೊಸಪೇಟೆ ನಗರದ ಮುದ್ಲಾಪುರ ರಸ್ತೆ ಪಕ್ಕದಲ್ಲಿನ ಕೊಳಚೆ ಪ್ರದೇಶದ ವಸತಿಗಳು



ಕೂಡ್ಲಿಗಿ ನಗರದ ಕೊಳಚೆ ಪ್ರದೇಶದ ವಸತಿಗಳು



ಕೂಡ್ಲಿಗಿ ನಗರದ ಕೊಳಚೆ ಪ್ರದೇಶದ ವಸತಿಗಳು




ಕೂಡ್ಲಿಗಿ ನಗರದ ಕೊಳಚೆ ಪ್ರದೇಶದ ವಸತಿಗಳು



ಕೂಡ್ಲಿಗಿ ನಗರದ ಕೊಳಚೆ ಪ್ರದೇಶದ ನೋಟ





ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

[illegible] ಅಧ್ಯಯನ ವಿಭಾಗ